

ತಾಳೆಗರಿ

ಗರಗಸದಂತಹ ಅಂಚುಗಳುಳ್ಳ ತಾಳೆ ಗರಿಗೂ ನನ್ನ ಬದುಕಿಗೂ ಬಹಳಷ್ಟು ಸಾಮ್ಯತೆಯಿದೆ. ನನ್ನನ್ನು ಸೌದೆ ಒಟ್ಟುಮಾಡಿ ತರಲು ಕಳಿಸುತ್ತಿದ್ದಾಗ ಚದುರಿ ಬಿದ್ದಿರುತ್ತಿದ್ದ ತಾಳೆ ಗರಿಯನ್ನು ಹೆಕ್ಕುತ್ತಿದ್ದುದಷ್ಟೇ ಅಲ್ಲ, ಅದರೊಡನೆ ಆಟವಾಡಿದಂತೆಲ್ಲ ನನ್ನ ಚರ್ಮ ತರಚಿ, ಕೀರಿ, ಹರಿದುಹೋಗುತ್ತಿತ್ತು. ಅದು ಈ ಪುಸ್ತಕದಲ್ಲಿ ಬೀಜರೂಪಿಯಾಗಿ ಮತ್ತು ಸಂಕೇತವಾಗಿ ಬೆಳೆದಿದೆ.

ಈ ಪುಸ್ತಕ ಪುಸ್ತಕವಾಗಲು ಕಾರಣವಾದ ಸಂಗತಿಗಳು ಹಲವು. ತಾಳೆ ಗರಿಯಂತೆಯೇ ನನ್ನ ರಕ್ತ ಹರಿಸಿದ, ನನ್ನ ಬದುಕಿನ ಹಲವು ಸ್ತರಗಳಲ್ಲಿ ಸಂಭವಿಸಿದ ಘಟನೆಗಳು; ನನ್ನನ್ನು ಅಜ್ಞಾನಕ್ಕೆ ದೂಡಿ ಉಸಿರುಕಟ್ಟಿ ಸಿಕ್ಕಿಹಾಕಿಕೊಳ್ಳುವಂತೆ ಮಾಡಿದ ಅನ್ಯಾಯಯುತ ಸಾಮಾಜಿಕ ರಚನೆಗಳು; ಈ ಬಂಧನಗಳ ಒಡೆದು ಬಿಸಾಕುವ ನನ್ನ ಹತಾಶ ಪ್ರಯತ್ನ; ಕಟ್ಟಿದ ಸರಪಳಿ ತುಂಡುತುಂಡಾಗುವಾಗ ಅದರ ಜೊತೆಗೇ ಹರಿದ ರಕ್ತ ಇವೆಲ್ಲವೂ ಸೇರಿವೆ.

ನನ್ನಂತೆ ಎಷ್ಟೋ ದಲಿತ ಹೃದಯಗಳಿವೆ - ನ್ಯಾಯ, ಸಮಾನತೆ ಮತ್ತು ಪ್ರೀತಿಯ ಆಧಾರದ ಮೇಲೆ ಹೊಸ ಸಮಾಜ ಕಟ್ಟುವ ಕನಸು ಹೊತ್ತಿರುವವರು. ಇದುವರೆಗೆ ಶೋಷಿತರಾಗಿದ್ದವರೇ ಈಗ ಇಬ್ಬಾಯಿ ಖಡ್ಗದಂತಹ ತಾಳೆ ಗರಿಗಳಂತಾಗಿ ತಮ್ಮ ಶೋಷಕರಿಗೆ ಸವಾಲು ಹಾಕುತ್ತಿದ್ದಾರೆ.

- ಬಾಮಾ



ತಾಳೆ ಗರಿ ತಮಿಳು ಕ್ರೈಸ್ತ ದಲಿತ ಆತ್ಮಕಥನ ಕನ್ನಡಕ್ಕೆ ಡಾ. ಎಚ್.ಎಸ್. ಅನುಪಮಾ



ಬಾಮಾ

# ತಾಳೆಗರಿ

ತಮಿಳು ಕ್ರೈಸ್ತ ದಲಿತ ಆತ್ಮಕಥನ



ತಮಿಳಿನಿಂದ ಇಂಗ್ಲಿಷ್‌ಗೆ
**ಲಕ್ಷ್ಮೀ ಹೋಲ್‌ಸ್ಟ್ರಾಮ್**

ಕನ್ನಡಕ್ಕೆ
**ಡಾ. ಎಚ್.ಎಸ್. ಅನುಪಮಾ**

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೨೪೦
ಸಾಹಿತ್ಯಮಾಲೆ – ೧೦೪

# ತಾಳೆ ಗರಿ

## ತಮಿಳು ಕ್ರೈಸ್ತ ದಲಿತ ಆತ್ಮಕಥನ

# ತಾಳೆ ಗರಿ

## ತಮಿಳು ಕ್ರೈಸ್ತ ದಲಿತ ಆತ್ಮಕಥನ

**ಬಾಮಾ**

**ತಮಿಳಿನಿಂದ ಇಂಗ್ಲಿಷ್‌ಗೆ: ಲಕ್ಷ್ಮೀ ಹೋಲ್‌ಸ್ಟ್ರಾಮ್**
**ಕನ್ನಡಕ್ಕೆ: ಡಾ. ಎಚ್. ಎಸ್. ಅನುಪಮಾ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**'Thaale Gari' - Kannada Translation of Bama`s *Karukku* in Tamil; Translated from English by Dr. H. S. Anupama and Published by Sri P. Narayana Swamy, Registrar, Kuvempu Bhasha Bharathi Pradhikara,** Kalagrama, Jnanabharati, Behind Bangalore University Campus, Mallattahalli, Bangalore-560056; Ph: 080 23183311, 23183312; 2016; Pp ; xxviii + 120, Price Rs 125/-

**Original -Tamil: Bama**
**English Translation: Lakshmi Holmstrom**
**Kannada Translation: Dr . H. S. Anupama**

Acknowledgement: Published in arrangement with Oxford University Press India, New Delhi - Translated from the English Language, Copyright notice: Oxford University Press, 2011

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

| | | |
|---|---|---|
| ಮುದ್ರಣ | : | 2016 |
| ಪುಟಗಳು | : | xxviii + 120 |
| ಅಳತೆ | : | ಡೆಮಿ 1/8 |
| ಬೆಲೆ | : | 125/– |
| ಪ್ರತಿಗಳು | : | 1000 |

ಪ್ರಕಾಶಕರು
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – 560 056
ದೂರವಾಣಿ: 080–23183311, 23183312

ಮುಖಪುಟ ವಿನ್ಯಾಸ : ಅರುಣ ಕುಮಾರ್ ಜಿ.
ಮುದ್ರಕರು :
**ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಅಡ್ಡರಸ್ತೆ,
ಲಾಲ್‌ಬಾಗ್ ರೋಡ್, ಕೆ.ಎಸ್.ಗಾರ್ಡನ್,
ಬೆಂಗಳೂರು – ೫೬೦೦೨೭. ದೂ : ೨೨೨೩೪೦೬೬

## ಅಧ್ಯಕ್ಷರ ಮಾತು

ಇದು ತಮಿಳು ಕಥನ 'ಕರುಕ್ಕು'ವಿನ ಕನ್ನಡ ಅನುವಾದ. ಬಾಮಾ ತಮಿಳಿನಲ್ಲಿ ಈ ಕಥನವನ್ನು ರೂಪಿಸಿದ್ದಾರೆ. ಇದು ಅವರ ಜೀವನಗಾಥೆಯೂ ಹೌದು. ಹಲವು ಹೋರಾಟಗಳಲ್ಲಿ ಭಾಗಿಯಾಗಿರುವ ಬಾಮಾ ಅವರ ಈ ಕಥನ ಈಗಾಗಲೇ ಹಲವು ಭಾಷೆಗಳಿಗೆ ಅನುವಾದಗೊಂಡಿದೆ. ಈಗ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನವರು ಪ್ರಕಟಿಸಿರುವ ಕರುಕ್ಕುವಿನ ಇಂಗ್ಲಿಶ್ ಅನುವಾದದ ಮೂಲಕ ಕನ್ನಡಕ್ಕೆ ಬರುತ್ತಿದೆ. ಇಂಗ್ಲಿಶಿಗೆ ಅನುವಾದಿಸಿದವರು ಹೆಸರಾಂತ ತಮಿಳು ಬರಹಗಾರ್ತಿ ಲಕ್ಷ್ಮೀ ಹೋಲ್‌ಸ್ಟ್ರಾಮ್ ಅವರು. ಡಾ. ಅನುಪಮಾ ಈಗ ಕನ್ನಡ ಓದುಗರಿಗಾಗಿ ಇದನ್ನು ಸಿದ್ಧಪಡಿಸಿದ್ದಾರೆ.

ಈ ಕಥನಕ್ಕೆ ಡಾ. ಅನುಪಮಾ ಬರೆದಿರುವ ಪ್ರಾಸ್ತಾವಿಕ ಮಾತುಗಳಲ್ಲಿ ಇದರ ಹೆಚ್ಚಳವನ್ನು ವಿವರಿಸಿದ್ದಾರೆ.

ಇಂತದೊಂದು ಕಥನ ಕನ್ನಡದಲ್ಲಿ ಮೈದಳೆಯುವುದು ಅಗತ್ಯವಾಗಿತ್ತು. ಇದು ಹೊಸ ಕೃತಿಯೊಂದರ ಪರಿಚಯವಾಗುವ ನಿಟ್ಟಿನಲ್ಲಿ ಮಾತ್ರ ದಿಟವಲ್ಲ. ಕನ್ನಡ ಬರವಣಿಗೆಗೆ ಇದರಿಂದ ಹೊಸ ದಾರಿಗಳು ಗೋಚರವಾಗಲೂಬಹುದು. ಈ ಕೃತಿಯನ್ನು ಹೊರತರುವಲ್ಲಿ ಈ ಗುರಿಯೂ ನಮ್ಮ ಪ್ರಾಧಿಕಾರಕ್ಕೆ ಇದೆ.

ಡಾ. ಅನುಪಮಾ ತಮ್ಮ ಎಂದಿನ ಕಥನ ಭಾಷೆಯನ್ನು ಬಿಟ್ಟುಕೊಟ್ಟು ಈ ಕೃತಿಗಾಗಿಯೇ ಬೇರೆಯ ನಿರೂಪಣಾ ಭಾಷೆಯನ್ನು ಕಟ್ಟಿಕೊಳ್ಳಲು ಶ್ರಮವಹಿಸಿರುವುದನ್ನು ನಾನು ಬಲ್ಲೆ. ಈ ಅನುವಾದ ಸಿದ್ಧಪಡಿಸಿಕೊಟ್ಟುದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಇಂಗ್ಲಿಶ್ ಆವೃತ್ತಿಯ ಪ್ರಕಾಶಕರು ಈ ಅನುವಾದವನ್ನು ಪ್ರಾಧಿಕಾರವು ಪ್ರಕಟಿಸಲು ಅನುಮತಿ ನೀಡಿ ಸಹಕರಿಸಿದ್ದಾರೆ. ಬಾಮಾ ಮೊದಲಿನಿಂದಲೂ ಈ ಅನುವಾದ ಪ್ರಕಟಣೆಗೆ ಒತ್ತಾಸೆಯಾಗಿದ್ದಾರೆ. ಈ ಎಲ್ಲರಿಗೂ ವಂದನೆಗಳು.

**– ಡಾ. ಕೆ. ವಿ. ನಾರಾಯಣ**

## ಬಾಮಾ ಮತ್ತು ಕರುಕ್ಕು –
## ಅಸ್ಪೃಶ್ಯತೆಯಿಂದ ದಲಿತ ಪ್ರಜ್ಞೆಯ ಕಡೆಗೆ

ಬಾಮಾ ಎಂಬ ಬರಹನಾಮದಿಂದ ತಮಿಳಿನಲ್ಲಿ ಬರೆಯುತ್ತಿರುವವರು ಫಾಸ್ಟಿನಾ ಸೂಸೈರಾಜ್ ಅಥವಾ ಫಾಸ್ಟಿನಾ ಮೇರಿ ಫಾತಿಮಾ ರಾಣಿ. ತಮಿಳಿನಲ್ಲಿ ಫಾತಿಮಾ ಪದ ಬಾತಿಮಾ ಎಂದು ಉಚ್ಚರಿಸಲ್ಪಡುತ್ತದೆ. ಹೀಗೆ ಬಾಮಾ ಹೆಸರು ಮೂಡಿ ಬಂದಿದೆ. 1958ರಲ್ಲಿ ತಮಿಳುನಾಡಿನ ವಿರುದು ನಗರ್ ಜಿಲ್ಲೆಯ ಪುತುಪಾಟ್ಟಿ ಎಂಬ ಹಳ್ಳಿಯ ರೋಮನ್ ಕ್ಯಾಥೊಲಿಕ್ ಕುಟುಂಬದಲ್ಲಿ ಹುಟ್ಟಿದ ಬಾಮಾ ಪದವಿ ಪಡೆದು ಗಣಿತ ಶಿಕ್ಷಕಿಯಾದರು. ಅವರ ಅಜ್ಜಿಅಜ್ಜನ ತಲೆಮಾರಿನಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ದಲಿತ ಪರಯ್ಯಾ ಸಮುದಾಯದ ಕುಟುಂಬ ಅವರದ್ದು. ಗಣಿತ ಶಿಕ್ಷಕಿಯಾಗಿ ಶಾಲೆಯಲ್ಲಿ ಕೆಲಸ ಮಾಡುತ್ತಿರುವಾಗಲೇ ಸಮುದಾಯದ ಸೇವೆಯತ್ತ ಸೆಳೆಯಲ್ಪಟ್ಟು ಕ್ರೈಸ್ತ ಸನ್ಯಾಸಿನಿಯಾದರು. ಏಳು ವರ್ಷ ಬೇರೆಬೇರೆ ಶಾಲೆಗಳಲ್ಲಿ ಬೋಧಿಸಿದರೂ ಉಸಿರುಗಟ್ಟಿಸುವ ವಾತಾವರಣದಲ್ಲಿರಲಾರದೆ ಅನಿವಾರ್ಯವಾಗಿ ತಮ್ಮ ಪಂಥದಿಂದ ಹಾಗೂ ಸನ್ಯಾಸದಿಂದ ಹೊರಬಂದು ಪ್ರಸ್ತುತ ದಲಿತ ಮಕ್ಕಳಿಗೆಂದು ತಾವೇ ಶಾಲೆ ನಡೆಸುತ್ತಿದ್ದಾರೆ. ಶಿಕ್ಷಣ, ಸನ್ಯಾಸ ಸ್ವೀಕಾರ, ಕಾನ್ವೆಂಟ್ ಬದುಕು, ಸನ್ಯಾಸ ತ್ಯಜಿಸಿದ್ದು, ಏಕಾಂಗಿ ದಲಿತ ಮಹಿಳೆಯಾಗಿ ಶಾಲೆ ನಡೆಸುತ್ತಿರುವುದು ಇವೆಲ್ಲವೂ ಅವರನ್ನು ಬೇರೆಬೇರೆ ನೆಲೆಯಲ್ಲಿ ಹೋರಾಟಗಾರ್ತಿಯನ್ನಾಗಿ, ಲೇಖಕಿಯಾಗಿ ರೂಪಿಸಿವೆ.

'ಎದೆಯ ಗಾಯಗಳ ಮಾಯಿಸುವ ದಾರಿಯಾಗಿ ಬರವಣಿಗೆ'ಗೆ ಇಳಿದ ಬಾಮಾ 1992ರಲ್ಲಿ ಆತ್ಮಕಥಾನಕ 'ಕರುಕ್ಕು' ಬರೆದರು. ಅದು 'ತಾಳೆ ಗರಿ'ಯಾಗಿ ನಿಮ್ಮ ಕೈಯಲ್ಲಿದೆ. ತಮಿಳಿನಲ್ಲಿ ಕರುಕ್ಕು ಎಂದರೆ ತಾಳೆ ಮರದ ಗರಿ. ಅದರ ಎರಡು ಬದಿಗಳಲ್ಲೂ ಗರಗಸದಂತಹ ರಚನೆಯಿದ್ದು ಮುಟ್ಟಿದರೆ ತರಚಿ ಗಾಯಗೊಳ್ಳುವುದು ಅನಿವಾರ್ಯ. ಆದರೆ ಆ ಬಹೂಪಯೋಗಿ ಗರಿಯ ಸಂಗ್ರಹ ದಲಿತ ಬದುಕಿಗೆ ಅನಿವಾರ್ಯ. ಹೀಗೆ ಅನಿವಾರ್ಯವಾಗಿ ಗಾಯಗೊಳ್ಳುತ್ತ, ಮಾಯುತ್ತ, ಮತ್ತೆ ಗಾಯಗೊಳ್ಳುವ ದಲಿತ

ಬದುಕನ್ನು, ತನ್ನ ಬದುಕನ್ನು ಬಾಮಾ ತಾಳೆಯ ಗರಿಗೆ ಹೋಲಿಸುತ್ತಾರೆ. ಜಾತಿ ಮತ್ತು ಧರ್ಮಗಳೆಂಬ ಎರಡು ಅಸ್ಮಿತೆಗಳು ದಲಿತ ಬದುಕನ್ನು ಎರಡೂ ಬದಿಯಿಂದ ಸೀಳುತ್ತಿರುವುದರ ಸಂಕೇತವಾಗಿಯೂ ತಾಳೆ ಗರಿ ಹೋಲಿಕೆ ನೀಡಿದ್ದಾರೆ. ಪರಯ್ಯಾ–ಪಲ್ಲ–ಚಾಳಿಯಾರ್–ನಾಡಾರ್–ನಾಯ್ಕರ್ ಸಮುದಾಯಗಳು; ಸಮುದಾಯಗಳ ನಡುವಿನ ಅಂತರ್‌ಸಂಬಂಧಗಳು ಹಾಗೂ ಬಿಕ್ಕಟ್ಟುಗಳು; ಕೇರಿಯ ಮಕ್ಕಳ ಶಿಕ್ಷಣ–ಮನರಂಜನೆ; ದಲಿತರ ನಂಬಿಕೆ–ಜಗಳ–ಪ್ರೇಮ–ಧಾರ್ಮಿಕತೆ–ಕನಸು–ನೋವು; ಕ್ಯಾಥೊಲಿಕ್ ಚರ್ಚ್‌ನ ಪಾದ್ರಿ, ಸನ್ಯಾಸಿನಿಯರು; ಕ್ರೈಸ್ತ ಕುಟುಂಬಗಳ ಮೇಲೆ ಚರ್ಚಿಗಿರುವ ಹಿಡಿತ ಇವೆಲ್ಲವನ್ನು ಪುಸ್ತಕದಲ್ಲಿ ಚಿತ್ರಿಸಲಾಗಿದೆ.

ಕೇವಲ ಇಷ್ಟೇ ಆಗಿದ್ದರೆ ಕರುಕ್ಕು ಮುಖ್ಯವಾಗುತ್ತಿರಲಿಲ್ಲ. ಬಾಮಾ ತಮಿಳು ದಲಿತ ಕ್ರಿಶ್ಚಿಯನ್ ಮಹಿಳೆಯಾಗಿ ಬದುಕಿನ ವಿವಿಧ ಸ್ತರಗಳಲ್ಲಿ ಎದುರಿಸಿದ ತಾರತಮ್ಯ; ಅದನ್ನು ಪ್ರಶ್ನಿಸುತ್ತ ಎದುರುಗೊಂಡ ಪರಿ, ಭ್ರಮನಿರಸನಗೊಳಿಸಿದ ಕ್ರೈಸ್ತ ಸನ್ಯಾಸಿನಿಯರ ಕಾನ್ವೆಂಟ್ ಲೋಕದ ಒಳಹೊರಗು ಇವನ್ನೆಲ್ಲ ಅತ್ಯಂತ ಸರಳವಾಗಿ, ಪ್ರಾಮಾಣಿಕವಾಗಿ ಅನಾವರಣಗೊಳಿಸಿದ್ದಾರೆ. ಒಂದು ಮಗು ಕ್ರೈಸ್ತ ಧಾರ್ಮಿಕ ವ್ಯಕ್ತಿತ್ವವನ್ನು ಹೊಂದುತ್ತಲೇ ದಲಿತ ಮನಸ್ಸಾಗಿ ರೂಪುಗೊಂಡ ಜಾಗ್ರತ ಪಯಣವನ್ನು, ಎಲಿನಾರ್ ಜೆಲಿಯಟ್ ಹೇಳುವಂತೆ 'ಅಸ್ಪೃಶ್ಯತೆಯಿಂದ ದಲಿತ ಪ್ರಜ್ಞೆಯ ಕಡೆಗೆ' ಜಿಗಿತ ಪಡೆದ ಬಗೆಯನ್ನು ಪುಸ್ತಕದ ಪುಟಗರಿಗಳು ತೋರಿಸಿಕೊಡುತ್ತವೆ. ಮೊದಲ ಅಧ್ಯಾಯಗಳಲ್ಲಿ ಪುಟ್ಟ ದಲಿತ ಹುಡುಗಿಯ ಕಣ್ಣು ನಾವು ನೋಡದ ಬ್ರಹ್ಮಾಂಡವನ್ನೇ ತೋರಿಸಿದರೆ ನಂತರದ ಅಧ್ಯಾಯಗಳ ಸಾಲುಸಾಲಿನಲ್ಲು ಜಾತಿ–ವರ್ಗ ತಾರತಮ್ಯ, ಜಾತಿ–ಭಾಷಾ ತಾರತಮ್ಯ, ಲಿಂಗ ತಾರತಮ್ಯಗಳನ್ನು ಎತ್ತಿ ತೋರಿಸಬಲ್ಲ ಅನುಭವಗಳು ಗ್ರಾಮೀಣ ಮನಸ್ಥಿತಿಯನ್ನು ಪರಿಚಯಿಸುತ್ತವೆ.

ತಮಿಳು ದಲಿತ ಬರಹ, ದಲಿತ ಮಹಿಳೆಯ ಬರಹ, ದಲಿತ ಕ್ರಿಶ್ಚಿಯನ್ ಬರಹ, ಸಬಾಲ್ಟ್ರನ್ ಬರವಣಿಗೆ, ಸ್ತ್ರೀವಾದಿ ಬರಹ – ಹೀಗೆ 'ಕರುಕ್ಕು'ವನ್ನು ಭಿನ್ನ ಆಯಾಮಗಳಲ್ಲಿ ಗ್ರಹಿಸಿ ಚರ್ಚೆ ನಡೆದಿವೆ. ಆದರೆ ತಮಿಳಿನಿಂದ ಇಂಗ್ಲಿಷ್‌ಗೆ ಅನುವಾದಿಸಿರುವ ಲಕ್ಷ್ಮೀ ಹೋಲ್‌ಸ್ಟ್ರಾಮ್ ಹೇಳುವಂತೆ, 'ಬಾಮಾ ಬೈಬಲನ್ನು, ಕ್ರೈಸ್ತ ಧರ್ಮವನ್ನು ಮರುಓದಿಗೊಳಪಡಿಸಿದಾಗ ಅದರಲ್ಲಿರುವ ಕ್ರಾಂತಿಕಾರಕ ಅಂಶಗಳು ಗಮನ ಸೆಳೆದವು. ಅದರಲ್ಲೂ ಸಮಾನತೆ, ಸಾಮಾಜಿಕ ನ್ಯಾಯ, ಸರ್ವಜನ ಪ್ರೇಮದಂತಹ ಮೌಲ್ಯಗಳನ್ನು ಗುರುತಿಸಿದರು. ಸನ್ಯಾಸಿನಿಯಾಗಿ ಆ ಮೌಲ್ಯಗಳನ್ನು ಕ್ರೈಸ್ತ ಸಮಾಜದಲ್ಲಿ ನೆಲೆಗೊಳಿಸಬೇಕೆಂಬ ಹತಮಾರಿ ಆಶಯದ ಬೆನ್ನತ್ತಿ ನನ್ ಆದರು. ಅವರ ಉದ್ದೇಶ ಕಾನ್ವೆಂಟಿನ ಗುರಿಗಿಂತ ಭಿನ್ನ ಎಂದು ಮೇಲ್ನೋಟಕ್ಕೇ ತಿಳಿಯುತ್ತದೆ. ಇವೆರೆಡರ ನಡುವಿನ ಸಂಘರ್ಷವೇ ಕರುಕ್ಕುವಿನ ಮೂಲ ನೆಲೆ. ಅವರ ಬರವಣಿಗೆಯಲ್ಲಿ

ಪ್ರಸ್ತಾಪಿಸುವ ಏಕೈಕ ವಿಷಯ ಕ್ರೈಸ್ತ ಸಮುದಾಯದೊಳಗಿರುವ ಜಾತಿ ತಾರತಮ್ಯ.'

ಕರುಕ್ಕು ತಮಿಳಿನಲ್ಲಿ ಪ್ರಕಟವಾದ ಮೊತ್ತಮೊದಲ ದಲಿತ ಆತ್ಮಕತೆ. ಇತರ ಭಾರತೀಯ ಭಾಷೆಗಳಿಗೆ, ಅದರಲ್ಲೂ ದಕ್ಷಿಣ ಭಾರತದ ಭಾಷೆಗಳಿಗೆ ಹೋಲಿಸಿದರೆ ತಮಿಳಿನಲ್ಲಿ ದಲಿತ ಬರವಣಿಗೆ ತಡವಾಗಿ ಬಂದಿದೆ. ಸ್ವಾತಂತ್ರ್ಯ ಪೂರ್ವದಲ್ಲೇ ಅಯೊತಿ ದಾಸ್, ಪೆರಿಯಾರ್ ಮತ್ತಿತರರ ನೇತೃತ್ವದಲ್ಲಿ ಅಬ್ರಾಹ್ಮಣ ಚಳುವಳಿ ನಡೆದ; ದ್ರಾವಿಡ ಪಕ್ಷಗಳು ದಶಕಗಳಿಂದ ಆಡಳಿತ ನಡೆಸುತ್ತಿರುವ ತಮಿಳುನಾಡಿನಲ್ಲಿ ಪ್ರಭಾವಿ ದಲಿತ ಚಳುವಳಿ ರೂಪುಗೊಳ್ಳದಿರುವುದು ಅದಕ್ಕೆ ಕಾರಣವಿರಬಹುದು. ಬಹುಶಃ ಇದೇ ಕಾರಣಕ್ಕೆ ದಲಿತರ ಮೇಲೆ ಅತಿ ಹೆಚ್ಚು ದೌರ್ಜನ್ಯ ನಡೆಯುತ್ತಿರುವ ರಾಜ್ಯಗಳಲ್ಲಿ ಅದು ನಾಲ್ಕನೆಯ ಸ್ಥಾನದಲ್ಲಿದೆ. ಹೀಗಿರುತ್ತ ಅಂಬೇಡ್ಕರ್ ಶತಮಾನೋತ್ಸವದ ಹೊತ್ತಿನಲ್ಲಿ ಬಂದ ಮೊತ್ತಮೊದಲ ತಮಿಳು ದಲಿತ ಆತ್ಮಕತೆ (ಅಷ್ಟೇ ಅಲ್ಲ ಮೊತ್ತಮೊದಲ ತಮಿಳು ದಲಿತ ಕ್ರೈಸ್ತ ಆತ್ಮಕತೆ, ತಮಿಳು ದಲಿತ ಮಹಿಳಾ ಆತ್ಮಕತೆ) ಹಲವು ಕಾರಣಗಳಿಗಾಗಿ ಸಾಹಿತ್ಯಾಸಕ್ತರ ಗಮನ ಸೆಳೆದಿದೆ.

ಕರುಕ್ಕು ಬಾಮಾರ ಬದುಕಿಗೆ ಸಂಬಂಧಿಸಿದ ವೈಯಕ್ತಿಕ ವಿವರಗಳ ಜೊತೆಗೆ ಒಂಭತ್ತು ಅಧ್ಯಾಯಗಳಲ್ಲಿ ದಮನಿತ ಸಮುದಾಯಗಳ ಬದುಕಿನ ವಿವಿಧ ಸ್ತರಗಳ ಚಿತ್ರಣವನ್ನು ಕಟ್ಟಿಕೊಡುತ್ತದೆ. ಬಾಮಾರ ಊರಿನವರ ಕಣ್ಣಲ್ಲಿ ಪೊಲೀಸಿನವರು ರಕ್ಷಕರು, ಆಪದ್ಬಾಂಧವರಂತೂ ಖಂಡಿತ ಅಲ್ಲ. ಅವರು ಭಯೋತ್ಪಾದಕರು! ಹೆಂಗಸರಿಗೆ ಸಂಸ್ಕಾರದ ಜಾಗಕ್ಕೆ ಕರೆದೊಯ್ಯುವ ಪದ್ಧತಿ ಇಲ್ಲ. ಆದರೆ ಅನಿವಾರ್ಯವಾದಾಗ ತಾವು ಪ್ರವೇಶಿಸದ ಸ್ಮಶಾನಕ್ಕೂ ಕಾಲಿಟ್ಟು ಹೆಣ ಹೂಳಿ ಬಂದಾರು; ಗಂಡಸರಷ್ಟೇ ಜೋರಿನಿಂದ ಜಾತಿ ಜಗಳ ನಿಭಾಯಿಸಿಯಾರು. ಹೀಗೆ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ವಸ್ತುವಾಗಬಲ್ಲ ಹಲವು ಅಂಶಗಳು ಅವರ ಬರವಣಿಗೆಯಲ್ಲಿವೆ. ಅವರು 'ನಾನು' ಎಂದರೆ ಅದು ಬಾಮಾ ಮಾತ್ರ ಅಲ್ಲ, ತಮಿಳುನಾಡಿನ ಯಾವುದೇ ಹಳ್ಳಿಯ ಪರಯ್ಯಾ ಸಮುದಾಯದ ದಲಿತ ಕ್ರೈಸ್ತ ವ್ಯಕ್ತಿತ್ವದ ಪ್ರತಿನಿಧಿ ಮಾತನಾಡಿದಂತೆ ಕೇಳುತ್ತದೆ. ಇಡೀ ಸಮುದಾಯದ ಪರವಾಗಿ ಮಾತನಾಡುವ ಎಚ್ಚರ ಹಾಗೂ ಅದರ ನೋವುನಲಿವಿನೊಂದಿಗೆ ತನ್ನದನ್ನು ಹೇಳಿಕೊಳ್ಳುವ ತಾದಾತ್ಮ್ಯ ಅವರ ಬರಹದಲ್ಲಿದೆ.

ಇಂಗ್ಲಿಷ್ ಅನುವಾದಕಿ ಲಕ್ಷ್ಮಿ ಹೇಳುವಂತೆ ಕರುಕ್ಕು ಅದುವರೆಗೆ ತಮಿಳು ಸಾಹಿತ್ಯಕ್ಕೆ ಗೊತ್ತೇ ಇರದಿದ್ದ ಅಥವಾ ವಿಮರ್ಶಕರು ನಗಣ್ಯವಾಗಿ ಪರಿಗಣಿಸಿದ್ದ ಗ್ರಾಮೀಣ ದಲಿತ ತಮಿಳು ಭಾಷೆ, ಶೈಲಿ, ನುಡಿಗಟ್ಟುಗಳ ಬಳಕೆಯಿಂದ ಬರಹಗಾರ–ವಿಮರ್ಶಕ–ಓದುಗ ವಲಯವನ್ನು ಬಡಿದೆಬ್ಬಿಸಿತು. ದಕ್ಷಿಣ ತಮಿಳುನಾಡಿನ ದಲಿತ ಸಮುದಾಯದ ಆಡುನುಡಿಯಲ್ಲೇ ಬಾಮಾ ಇಡೀ ಪುಸ್ತಕ ಬರೆದರು. ಶಿಷ್ಟ ತಮಿಳಿನ ವ್ಯಾಕರಣ, ವಾಕ್ಯರಚನೆ, ಸ್ಪೆಲಿಂಗ್ ಮುಂತಾದುವುಗಳನ್ನು ಮುರಿದು ಹೊಸದನ್ನು ಕಟ್ಟಿದರು.

ಅದರಲ್ಲಿ ಬರುವ ಎಷ್ಟೋ ಪದ, ನುಡಿಗಟ್ಟುಗಳು ತಮಿಳರಿಗೇ ತಿಳಿಯದೆ ಕಟು ಟೀಕೆಗಳೂ ಕೇಳಿಬಂದವು. ಆದರೆ ಅದಾವುದಕ್ಕೂ ತಲೆಕೆಡಿಸಿಕೊಳ್ಳದ ಬಾಮಾ, 'ನನ್ನ ಬರಹಗಳು ತಮಿಳುನಾಡಿನ ದಲಿತ ಬದುಕಿನ ನೈಜ ಘಟನೆಗಳ ಪೆನ್ ಅಂಡ್ ಇಂಕ್ ವರ್ಷನ್ ಅಷ್ಟೆ' ಎಂದು ಹೇಳಿದರು.

ಬಾಮಾ ಕೇವಲ ಈ ಆತ್ಮಕತೆಗೇ, ಅದರ ಪ್ರಸಿದ್ಧಿಗೇ ತೃಪ್ತಿಹೊಂದಿ ಸುಮ್ಮನಿರಲಿಲ್ಲ. ಬರೆಯುವಿಕೆಯೇ ಒಂದು ರಾಜಕೀಯ ಕ್ರಿಯೆ ಎಂದು ಭಾವಿಸಿ ಅಮಾನವೀಯ ಜಾತಿ ಪದ್ಧತಿಯ ವಿರುದ್ಧ ಅಸ್ತ್ರವಾಗಿ ಲೇಖನಿಯನ್ನು ಬಳಸಿದರು. 'ದಲಿತ ಸಮುದಾಯ ಸಂಪೂರ್ಣ ಬದಲಾವಣೆ ಬಯಸಿದರೆ ದಲಿತ ಅಸ್ಮಿತೆ–ಸಂಸ್ಕೃತಿಯನ್ನೇ ಕಳೆದುಕೊಳ್ಳುತ್ತದೆ; ಆದರೆ ಸಾಮುದಾಯಿಕ ಅಸ್ಮಿತೆಯನ್ನು ಹಾಗೇ ಉಳಿಸಿಕೊಳ್ಳಬಯಸಿದರೆ ದಲಿತತ್ವ ಅದರೊಡನೇ ಅಂಟಿಕೊಂಡು ಬರುತ್ತದೆ. ಹಾಗಾದರೆ ಈ ವೈರುಧ್ಯದಲ್ಲಿ ನಾವು ಬಯಸುವುದು ಏನನ್ನು?' ಎಂಬ ಪ್ರಶ್ನೆಗೆ ಬಾಮಾ ಆತ್ಮಕತೆಯ ಆಚೆಗೂ ಶೋಧ ನಡೆಸಿದರು. ತನ್ನಂತಹ ಕೋಟ್ಯಂತರ ಮನಸುಗಳ ಗೊಂದಲ, ದ್ವಂದ್ವಗಳನ್ನು ಕತೆ, ಕಾದಂಬರಿಗಳ ಮೂಲಕ ಹೇಳಿದರು. ಕರುಕ್ಕು ಬರೆದ ಎರಡೇ ವರ್ಷಗಳಲ್ಲಿ ಸಂಗತಿ (1994) ಎಂಬ ಕಾದಂಬರಿ ಬರೆದರು. ನಂತರ *ಕಿಸುಂಬುಕ್ಕಾರನ್* (ಸಣ್ಣಕತೆ – 1996), *ವಣ್ಮಂ* (ಕಾದಂಬರಿ – 2002), *ಒರು ತತ್ವಂ ಎರುಮ್ಮೈಯುಂ* (ಸಣ್ಣಕತೆ – 2003), *ಕೊಂಡಟ್ಟಂ* (ಸಣ್ಣಕತೆ – 2009), ಹಾಗೂ ಮಾನುಸಿ (ಕಾದಂಬರಿ)ಯನ್ನು ಪ್ರಕಟಿಸಿದ್ದಾರೆ. ಕರುಕ್ಕು 2000ನೇ ಇಸವಿಯಲ್ಲಿ ಇಂಗ್ಲಿಷ್‌ಗೆ, ನಂತರ ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿದೆ. ಬಾಮಾರ ಕಥಾಸಂಕಲನ, ಕಾದಂಬರಿಗಳೂ ಇಂಗ್ಲಿಷ್, ಫ್ರೆಂಚ್ ಇನ್ನಿತರ ಭಾಷೆಗಳಿಗೆ ಅನುವಾದಗೊಂಡಿವೆ. ಕರುಕ್ಕು ಅನುವಾದಕ್ಕೆ 2000ನೇ ಇಸವಿಯಲ್ಲಿ ಕ್ರಾಸ್‌ವರ್ಡ್ ಪ್ರಶಸ್ತಿ ದೊರಕಿದೆ.

**ಕೇಳಿಸಿಕೊಳ್ಳಲೇಬೇಕಾದ ಮಾತು – ದಲಿತ ಆತ್ಮಕತೆ**

ಎಲ್ಲ ಬರಹಗಳೂ ಆಡದ ಮಾತುಗಳಿಂದಲೇ ಜನ್ಮ ತಳೆಯುತ್ತವೆ. ಆತ್ಮಕತೆಗಳು ಆಡದೇ ಉಳಿದ ಮಾತುಗಳೊಡನೆ ಅನುಭವಗಳನ್ನೂ ಬಿಚ್ಚಿಡುತ್ತವೆ. ದಲಿತ ಆತ್ಮಕತೆಗಳು ಉಳಿದವರು ಇದುವರೆಗು ಕೇಳಿಸಿಕೊಳ್ಳದ ಮಾತುಗಳ ಹೊತ್ತು ತರುತ್ತವೆ. ಅಸ್ಪೃಶ್ಯತೆಯ ಅವಮಾನಕರ ಅನುಭವಗಳನ್ನು ದಾಟಿ ಬರಲು ದಲಿತ ಮನಸ್ಸು ಹಲವು ಗಾಯಗಳನ್ನು ಅನುಭವಿಸುತ್ತದೆ. ಆ ಮನಸಿನ ನೋವು, ಸೋಲು–ಗೆಲುವು, ಸ್ವೀಕಾರ–ನಿರಾಕರಣೆ ಕೇವಲ ಅವರ ಸಂಕಟವಷ್ಟೇ ಅಲ್ಲ, ಅಥವಾ ಆ ಸಮುದಾಯದ ಸಂಕಟವಷ್ಟೇ ಅಲ್ಲ; ಬೇರೆ ಆಯ್ಕೆಯೇ ಇಲ್ಲದಂತೆ ಮಾಡಿರುವ ಸಮಾಜದ್ದೂ ಆಗಿದೆ.

ಆದರೆ ದಲಿತ ಅಭಿವ್ಯಕ್ತಿಗೆ, ಅದರ ಸೃಜನಶೀಲ ಕಲಾತ್ಮಕತೆಯ ಬೆಳವಣಿಗೆಗೆ ಅವಕಾಶ ಸಿಗದೆ ಸಾವಿರಾರು ವರ್ಷ ಗತಿಸಿದವು. ಎಂದೇ ದಲಿತ ಮನಸು ವೈಯಕ್ತಿಕ ಅನುಭವದ ನೆಲೆಯನ್ನು ದಾಖಲಿಸುವುದರಲ್ಲಿಯೇ ತನ್ನ ಅಸ್ತಿತ್ವ, ಸಂವೇದನೆಯನ್ನು ಪ್ರಕಟಪಡಿಸಬಯಸುತ್ತದೆ. ತನ್ನನ್ನು ಸಮುದಾಯದ ಮುಖೇನ ಗುರುತಿಸಿಕೊಳ್ಳುತ್ತ, ನಿರೂಪಿಸಿಕೊಳ್ಳುತ್ತ ಹೋಗುವ ಬರವಣಿಗೆಯ ಕ್ರಮ ದಲಿತ ಆತ್ಮಕಥಾನಕಗಳ ಮುಖ್ಯಗುಣವಾಗಿದೆ. ದಮನಿತ ಸಮುದಾಯದ ಬಿಡುಗಡೆಯ ದಾರಿಗಳು ದಲಿತೇತರ ಚಿಂತನೆ, ತಿಳಿವುಗಳನ್ನು ವಿಸ್ತರಿಸುವುದರಿಂದ ದಲಿತ ಆತ್ಮಕತೆಗಳು ಸಾಹಿತ್ಯಿಕ ದೃಷ್ಟಿಯಿಂದ ಮಾತ್ರವಲ್ಲ, ಸಮಾಜಶಾಸ್ತ್ರೀಯವಾಗಿಯೂ ಮುಖ್ಯವಾಗಿವೆ. ಕರುಕ್ಕುವನ್ನು ಈ ಹಿನ್ನೆಲೆಯಲ್ಲಿಯೂ ಪರಿಶೀಲಿಸಬಹುದಾಗಿದೆ.

ಭಾರತದ ತಳಸಮುದಾಯಗಳು ತಮ್ಮ ಅಪರಿಹಾರ್ಯ ದಾರುಣ ಪರಿಸ್ಥಿತಿಯಿಂದ ಹೊರಬರಲು ದಾರಿಯೇ ಇಲ್ಲವೆಂದುಕೊಂಡಿದ್ದಾಗ ಮತಾಂತರ ಒಂದು ಗಮನಾರ್ಹ ಆಯ್ಕೆಯಾಗಿ ಒದಗಿಬಂತು. ಅದರಲ್ಲೂ ತಮಿಳುನಾಡಿನ ದಲಿತರು ಕ್ರೈಸ್ತ ಧರ್ಮವನ್ನು ವಿಮೋಚನೆಯ ಮಾರ್ಗವೆಂದು ನಂಬಿ ದೊಡ್ಡ ಸಂಖ್ಯೆಯಲ್ಲಿ ಮತಾಂತರವಾದರು. ತಮಿಳುನಾಡಿನ ಕ್ರೈಸ್ತರಲ್ಲಿ 80% ದಲಿತರೇ ಇದ್ದಾರೆ. ಹೀಗೆ ಮತಾಂತರವಾದವರಲ್ಲಿ ಬಾಮಾ ಕುಟುಂಬವೂ ಒಂದು. ಆದರೆ ಮಾನವ ಪ್ರೀತಿ ಬೋಧಿಸುವ ಕ್ರೈಸ್ತ ಧರ್ಮದಲ್ಲೂ ಒಳತಾರತಮ್ಯ ಆಳದಲ್ಲಿ ಬೇರುಬಿಟ್ಟಿರುವುದು ಹಲವು ಬಾರಿ ಬಾಮಾ ಅನುಭವಕ್ಕೆ ಬರುತ್ತದೆ. ಕೊನೆಗೂ ಭಾರತೀಯ ವ್ಯಕ್ತಿ ಹೊಸ ಧರ್ಮಕ್ಕೆ ಮತಾಂತರಗೊಂಡರೆ ಅವನ ಸ್ಥಾನ ನಿರ್ಧರಿಸುವ ಅಂಶ ಅವನ ಪೂರ್ವಾಶ್ರಮದ ಜಾತಿಯೇ ಆಗಿದೆ ಎಂದು ಬಾಮಾಗೆ ಅರಿವಾಗುತ್ತದೆ. ಈ ಅರಿವೇ ಧಾರ್ಮಿಕವಾಗಿ ತಾನು ಕ್ರೈಸ್ತಳೆಂದೂ, ಆದರೆ ಜಾತಿ ಕಾರಣವಾಗಿ ದಲಿತಳೆಂಬ ಪ್ರಜ್ಞೆಯನ್ನೂ ಮೂಡಿಸುತ್ತದೆ. ಸ್ವತಂತ್ರ ಭಾರತದ ಪ್ರಜೆಯಾಗಿ ಹಾಗೂ ಕ್ರೈಸ್ತ ಧರ್ಮೀಯಳಾಗಿ ಸಮಾನತೆ ಪಡೆದಿದ್ದರೂ ಪೂರ್ವಾಶ್ರಮದ ಜಾತಿ ಕಾರಣದಿಂದ ಸಮಾನತೆ, ಸಮಾನ ಗೌರವ ದೊರೆಯದಿರುವುದನ್ನು ಬೆಳೆಯುವ ಮನಸ್ಸು ಗುರುತಿಸುತ್ತದೆ. ನಂಬಿಕೆ ಮತ್ತು ವಾಸ್ತವಗಳ ನಡುವಿನ ವೈರುಧ್ಯ ವ್ಯಕ್ತಿತ್ವವನ್ನು ಜಾಗೃತಗೊಳಿಸುತ್ತದೆ.

ಕೊನೆಗೆ ತನ್ನನ್ನು ಸಮುದಾಯದ ಏಳ್ಗೆಗಾಗಿ ತೆತ್ತುಕೊಳ್ಳಲೇಬೇಕೆನಿಸಿ ಸನ್ಯಾಸಿನಿಯಾಗುತ್ತಾರೆ. ಬಡವರಿಗಾಗೇ ಬದುಕಿ ಜೀವನ ಕಳೆದ ಒಬ್ಬ ಸಂತಳ ಪಂಥವನ್ನು ಆಯ್ಕೆ ಮಾಡಿಕೊಂಡು ಕಾನ್ವೆಂಟ್ ಸೇರುತ್ತಾರೆ. ಆದರೆ ಬಡವರಲ್ಲಿ ಬಡವರಾಗಿ ಬದುಕುತ್ತೇವೆಂದು ಪ್ರತಿಜ್ಞೆ ಮಾಡಿದ್ದರೂ ಸುಖವಾಗಿ ತಿಂದುಂಡು ಬದುಕುವ ಸನ್ಯಾಸಿ ಜೀವನ ಶೈಲಿ ಬಾಮಾರನ್ನು ಆತ್ಮ ನಿರೀಕ್ಷೆಗೆ ಒಡ್ಡುತ್ತದೆ. ಎಲ್ಲರನ್ನೂ ಪ್ರಶ್ನಿಸುತ್ತಾರೆ. ಎಲ್ಲವನ್ನೂ ಪ್ರಶ್ನಿಸುತ್ತಾರೆ. ವಿಧೇಯತೆ–ನಂಬಿಕೆ–ಅನುಯಾಯಿತ್ವ ಎಂಬ ಪದಗಳನ್ನು ಬಳಸಿ ಬಾಮಾರನ್ನು ಸುಮ್ಮನಿರಿಸಲು ಯತ್ನಿಸಲಾಗುತ್ತದೆ.

ಬರಬರುತ್ತ ಚರ್ಚ್‌ನ ರಚನೆಗಳೊಳಗೆ ದಲಿತರಿಗೆ ಪ್ರವೇಶವಿದ್ದರೂ ಅವರು ಅಂಚಿಗೆ ದೂಡಲ್ಪಟ್ಟವರು ಎಂದು ತಿಳಿಯತೊಡಗುತ್ತದೆ. ಉಳಿದವರಂತೆ ತರಬೇತಿ–ವಿದ್ಯೆ ಪಡೆದರೂ ತಮಿಳು ಪರಯ್ಯಾ ನನ್‌ಗೆ ಅಲ್ಲಿ ಯಾವ ಗೌರವದ ಸ್ಥಾನವೂ ಇಲ್ಲ; ಕಾನ್ವೆಂಟಿನ ಸ್ಥಾಪಕ ಸಂತಳಿಗೂ, ಅದರ ಸದ್ಯದ ಧೋರಣೆ–ಆಶಯಗಳಿಗೂ ಯಾವ ಸಂಬಂಧವೂ ಇಲ್ಲ; ದಲಿತ ಮಹಿಳೆ ಸಿಸ್ಟರ್ ಆಗಬೇಕೆಂದರೆ ಅವರದ್ದು ಬೇರೆಯೇ ಪಂಥ ಇದ್ದು ಅದನ್ನೇ ಸೇರಬೇಕು ಎಂದು ತಿಳಿದಾಗ ಬಂಡೇಳುತ್ತಾರೆ. ಏಸುಕ್ರಿಸ್ತ ಬಡ ಕುಟುಂಬದಲ್ಲಿ ಹುಟ್ಟಿ, ಬಡವರಿಗಾಗೇ ಬದುಕಿ, ಬಡವರ ಸಲುವಾಗಿಯೇ ದೇಹ ತ್ಯಜಿಸಿದವನು. ಆದರೆ ಬೈಬಲಿನಲ್ಲಿರುವ ಕ್ರಿಸ್ತನಿಗೂ, ದಿನನಿತ್ಯ ಪೂಜಿತನಾಗುವ ಕ್ರಿಸ್ತನಿಗೂ ಅಜಗಜಾಂತರ ವ್ಯತ್ಯಾಸವಿರುವುದು ತಿಳಿಯುತ್ತದೆ. ಚರ್ಚಿನ ಸಿರಿವಂತ ಜೀಸಸ್ ಜಾಗದಲ್ಲಿ ಬಡ ದೇವಸುತನನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆನಿಸುತ್ತದೆ. ಹೀಗೆ ಚರ್ಚ್ ಎಂಬ ಸ್ಥಾಪಿತ ವ್ಯವಸ್ಥೆಯಲ್ಲಿ ತನ್ನ ಗುರಿ ಸಾಧನೆಗಿರುವ ಕಷ್ಟ ಹಾಗೂ ಅದು ತನ್ನೊಳಗಿನ ರೆಬೆಲ್ ಅನ್ನು ನಿಧಾನವಾಗಿ ಹತ್ತಿಕ್ಕುತ್ತಿರುವುದು ಅರಿವಿಗೆ ಬಂದ ಕೂಡಲೇ ಹೊರಬರಲು ಯತ್ನಿಸುತ್ತಾರೆ. ಆದರೆ ಅದೇನೂ ಸುಲಭದ ಆಯ್ಕೆಯಾಗಿರುವುದಿಲ್ಲ. ಸನ್ಯಾಸ ತೊರೆದು ಹೋಗುವವರ ಪ್ರಾಣ, ಬದುಕು ಎಲ್ಲಕ್ಕೂ ಸಂಚಕಾರ ಒದಗಬಹುದೆಂದು ಹಿತೈಷಿಯೊಬ್ಬರು ನುಡಿದಾಗ ನಿಂತ ನಿಲುವಿನಲ್ಲಿ ಚಕ್ರವ್ಯೂಹದಂಥ ವ್ಯವಸ್ಥೆಯಿಂದ ಹೊರಬೀಳುತ್ತಾರೆ. ಮದುವೆಯಾಗಲು ನಿರಾಕರಿಸಿ, ಮನೆಯವರ ಇಷ್ಟಕ್ಕೆ ವಿರುದ್ಧವಾಗಿ ಸಾಧಿಸುವ ಛಲ ಹೊತ್ತು ಸನ್ಯಾಸಿನಿಯಾಗಿರುತ್ತಾರೆ. ಈಗ ಸನ್ಯಾಸ ತ್ಯಜಿಸಿದೆನೆಂದು ಮನೆಯವರಿಗೆ ತಿಳಿದರೆ ಅದರಲ್ಲೂ ಅಪ್ಪಯ್ಯನಿಗೆ ತಿಳಿದರೆ ಏನೆನ್ನುವರೋ ಎಂಬ ಆತಂಕವಿದ್ದರೂ ಏಕಾಂಗಿಯಾಗಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ಕಾನ್ವೆಂಟಿನ ಬಟ್ಟೆ ಅಲ್ಲೇ ಬಿಟ್ಟು ಬರುತ್ತಾರೆ. ಹೀಯಾಳಿಕೆ, ವಕ್ರನೋಟಗಳ ನಡುವೆಯೇ ಒಂಗೂರು ಎಂಬ ಹಳ್ಳಿಯ ಶಾಲೆಯಲ್ಲಿ ಕೆಲಸ ಮಾಡುತ್ತಾರೆ. ಈಗ ಕಾಂಚೀಪುರಂ ಬಳಿಯ ಉತ್ತಿರ ಮೇರೂರಿನಲ್ಲಿ ದಲಿತ ಮಕ್ಕಳಿಗೆಂದು ತಮ್ಮದೇ ಶಾಲೆಯನ್ನು ನಡೆಸುತ್ತಿದ್ದಾರೆ.

ಧರ್ಮ ಒಂದು ಸ್ಥಾಪಿತ ಚೌಕಟ್ಟು. ತನ್ನ ಹಿತಾಸಕ್ತಿಯ ಹೊರತಾಗಿ ಅದು ಚಿಂತಿಸಲಾರದು. ಆದರೆ ಬಾಮಾ ಧರ್ಮಕ್ಕಿರುವ ಜೀವಪರ, ಮಾನವಪರ ಗುಣಗಳಲ್ಲಿ ಇನ್ನೂ ನಂಬಿಕೆಯಿಟ್ಟಿದ್ದಾರೆ. ಅವರಿದ್ದ ಪ್ರದೇಶ ಕಮ್ಯುನಿಸ್ಟ್ ಚಳುವಳಿಯ ಭದ್ರ ನೆಲೆಯಾಗಿದ್ದರೂ ಸಹಾ, ‘ಕಮ್ಯುನಿಸಂ ದೇವರನ್ನು ನಿರಾಕರಿಸುತ್ತದೆ, ಆದರೆ ನನ್ನ ತಾಯಿ ಮತ್ತು ಕುಟುಂಬ ದೇವರಲ್ಲಿ ಆಳವಾದ ನಂಬಿಕೆಯಿಟ್ಟವರು, ಅದಕ್ಕೇ ಕಮ್ಯುನಿಸಂ ಬಾಲ್ಯದಲ್ಲಿ ನನ್ನ ಮೇಲೆ ಪ್ರಭಾವ ಬೀರಲಿಲ್ಲ’ ಎಂದು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ. ಈ ಮನೋಭಾವ ಇರುವುದರಿಂದಲೇ ಧಾರ್ಮಿಕ ಸಾಂಸ್ಥಿಕ

ರಚನೆಗಳು ಕೊಟ್ಟ ಪೆಟ್ಟುಗಳ ಹೊರತಾಗಿಯೂ ಕ್ರೈಸ್ತ ಧರ್ಮ ಬೋಧಿಸುವ ಪ್ರೀತಿ ಮತ್ತು ಸೋದರತೆಯನ್ನು ಹರಡಬೇಕೆಂಬ ಉದ್ದೇಶದಿಂದ ಕ್ರೈಸ್ತರಾಗಿಯೇ ಉಳಿದಿದ್ದಾರೆ. ಕ್ರೈಸ್ತ ಧರ್ಮದ ಒಳಗಿರುವ ದಮನಿತರ ದಲಿತತ್ವಕ್ಕೆ, ದಲಿತ ಪ್ರಜ್ಞೆಗೆ ದನಿಯಾಗಿದ್ದಾರೆ.

***

'ಕರುಕ್ಕು'ವಿನಲ್ಲಿ ವಿಶೇಷವಾಗಿ ಗಮನ ಸೆಳೆದ ಕೆಲ ವಿಷಯಗಳಿವೆ.

- ದಲಿತ ಸಮುದಾಯವೂ ಸೇರಿದಂತೆ ಭಾರತೀಯ ಸಮಾಜದ ಪ್ರತಿಯೊಂದು ಜಾತಿಯೂ ಜಾತಿಮೋಹ–ಜಾತಿಪ್ರಜ್ಞೆಯಲ್ಲಿ ಸಿಲುಕಿರುವುದು ಅವರ ನಿರೂಪಣೆಯಿಂದ ತಿಳಿದುಬರುತ್ತದೆ. ಪ್ರತಿಜಾತಿಯೂ ಏಕಕಾಲದಲ್ಲಿ ಮತ್ತೊಂದು ಜಾತಿಗಿಂತ ತಾನು ಮೇಲು ಎಂಬ ಮೇಲರಿಮೆಯನ್ನೂ; ಬೇರೊಂದು ಜಾತಿಗಿಂತ ಕೀಳು ಎಂಬ ಕೀಳರಿಮೆಯನ್ನೂ ಪೋಷಿಸಿಕೊಂಡೇ ಬರುತ್ತಲಿವೆ. ಸ್ಥಾನ ಮತ್ತು ಅಧಿಕಾರದ ವ್ಯತ್ಯಾಸಗಳು ಜಾತಿ ಸ್ಥಾನವನ್ನು ಕೊಂಚ ಹಿಂದೆ, ಮುಂದೆ ಸರಿಸುತ್ತ ಪ್ರತಿ ಜಾತಿಯೂ ತನ್ನ ಅಸ್ಮಿತೆಯನ್ನು ಮತ್ತೆಮತ್ತೆ ಗಟ್ಟಿಗೊಳಿಸಿಕೊಳಲು ಹವಣಿಸುತ್ತಿವೆ. ಮತಾಂತರವೂ ಹೋಗಲಾಡಿಸದಷ್ಟು ಗಾಢವಾಗಿ ಭಾರತೀಯ ಮನಸಿನಾಳದ ಬೇರುಗಳಲ್ಲಿ ಜಾತಿ ಅಡಗಿ ಕುಳಿತಿರುವುದನ್ನು ಕರುಕ್ಕು ವಿಶದಪಡಿಸುತ್ತದೆ.
- ಶೋಷಣೆಯ ನೆಲೆ ಒಂದೇ ಇದ್ದರೂ, ಬಿಡುಗಡೆಯ ದಾರಿ ಅದೇ ಆದರೂ, ಪಯಣದ ಅನುಭವಗಳೂ ಒಂದೇ ಆಗಿರುವುದಿಲ್ಲ. ಯಾಕೋ ಎರಡು ಉದಾಹರಣೆಗಳಾಗಿ ಬಾಮಾ ಮತ್ತು ಪಂಡಿತಾ ರಮಾಬಾಯಿ ನೆನಪಾಗುತ್ತಿದ್ದಾರೆ. ಬಾಮಾಗಿಂತ ಒಂದು ಶತಮಾನ ಮೊದಲು ಬಾಳಿದ ಪಂಡಿತಾ ರಮಾಬಾಯಿ ಹಿಂದೂ ಧರ್ಮದ ಬ್ರಾಹ್ಮಣ ಸಮುದಾಯದಲ್ಲಿ ಹುಟ್ಟಿದ ಮಹಿಳೆ. ಬಾಲ್ಯದಲ್ಲೇ ತಾಯ್ತಂದೆ, ಒಡಹುಟ್ಟಿದವರ ಕಳೆದುಕೊಂಡು, ಉಳಿದ ಒಬ್ಬ ತಮ್ಮನೊಂದಿಗೆ ಅನಾಥವಾಗಿ ಊರೂರು ಅಲೆಯುವಂತಾಗುತ್ತದೆ. ಸಂಸ್ಕೃತ ಮತ್ತು ವೇದವಿದ್ಯಾಪಾರಂಗತಳೆಂಬ ಕಾರಣಕ್ಕೆ ಕಾಶಿ ಕೋಲ್ಕತಾಗಳಲ್ಲಿ ಬಿರುದು ಬಾವಲಿ ಪಡೆದು, ಕೊನೆಗೆ ತಮ್ಮನೂ ಕಾಯಿಲೆಯಿಂದ ಮರಣ ಹೊಂದಿದಾಗ ಏಕಾಂಗಿ ಬದುಕಿನ ದುರ್ಭರತೆ ಎದುರಿಸಬೇಕಾಗುತ್ತದೆ. ನಂತರ ಅಬ್ರಾಹ್ಮಣ ಸಮುದಾಯದ ವ್ಯಕ್ತಿಯನ್ನು ಮದುವೆಯಾಗಿ ಕೋಲ್ಕತಾದಲ್ಲಿರುವಾಗ ಒಬ್ಬ ಮಗಳು ಹುಟ್ಟುತ್ತಾಳೆ. ಆದರೆ ವರ್ಷ ಕಳೆಯುವುದರಲ್ಲಿ ಪತಿ ಕಾಯಿಲೆಯಿಂದ ಮರಣ ಹೊಂದುತ್ತಾರೆ. ಪದೇಪದೇ ತನ್ನವರೆನ್ನುವವರನ್ನು ಕಳೆದುಕೊಳ್ಳುತ್ತಲೇ

ಹೋದ ಒಬ್ಬಂಟಿ ವಿಧವೆ ರಮಾಬಾಯಿಗೆ ಕ್ರೈಸ್ತ ಧರ್ಮ ಸಾಂತ್ವನ ನೀಡುವ ಮದ್ದಿನಂತೆ ಭಾಸವಾಗುತ್ತದೆ. ಕ್ರೈಸ್ತಾನುಯಾಯಿಯಾಗಿ, ಮಿಷನರಿಯಾಗಿ ಮರಣಕಾಲದವರೆಗೂ ಕೆಲಸ ಮುಂದುವರೆಸುತ್ತಾರೆ. ಬರೆಯುತ್ತಾರೆ. ಭಾರತವಷ್ಟೇ ಅಲ್ಲ, ಅಮೆರಿಕ, ಇಂಗ್ಲೆಂಡುಗಳಿಂದಲೂ ಅವರ ಕೆಲಸ ಕಾರ್ಯ, ಬರವಣಿಗೆಗೆ ಪ್ರೋತ್ಸಾಹ, ಧನಸಹಾಯ ಹರಿದುಬರುತ್ತದೆ. 'ಸ್ವಧರ್ಮೇ ನಿಧನಂ ಶ್ರೇಯಃ' ಎಂದು ಬಲವಾಗಿ ನಂಬುವ ಬ್ರಾಹ್ಮಣ ಮನಸ್ಸು ಕ್ರೈಸ್ತಳಾಗಿ ಮತಾಂತರಗೊಂಡರೂ ಅಲ್ಲಿ ಉನ್ನತ ವಿದ್ಯಾಭ್ಯಾಸ, ಬರವಣಿಗೆಗೆ ಇನ್ನಿಲ್ಲದ ಬೆಂಬಲ ಸಿಗುತ್ತದೆ. ಶಾರದಾ ಸದನ, ಮುಕ್ತಿ ಸದನವಲ್ಲದೆ ಹಲವು ಶಾಲೆಗಳ ತೆರೆಯಲು ಅವರಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಅವರ 'ಹೈ ಕ್ಯಾಸ್ಟ್ ಹಿಂದೂ ವುಮನ್' ಪುಸ್ತಕವೊಂದೇ ಅಮೆರಿಕದಲ್ಲಿ 10 ಸಾವಿರ ಪ್ರತಿ ಮಾರಾಟವಾಗಿ ರಮಾಬಾಯಿಯವರ ಧಾರ್ಮಿಕ ಕೆಲಸಗಳಿಗಾಗಿ 30,000 ಡಾಲರ್ ಹಣ ಸಂಗ್ರಹವಾಗುತ್ತದೆ.

ಆದರೆ ಇದೇ ಮಾತನ್ನು ಕ್ರೈಸ್ತ ಮಹಿಳೆ ಬಾಮಾ ವಿಷಯದಲ್ಲಿ ಹೇಳಬಹುದೆ? ಎರಡು ತಲೆಮಾರುಗಳ ಕೆಳಗೇ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದ್ದರೂ ದಲಿತ, ಪರಯ್ಯಾ ಪಟ್ಟ ಅವರ ಕುಟುಂಬವನ್ನು ಬಿಡಲಿಲ್ಲ. ಅಸ್ಪೃಶ್ಯತೆಯ ಅನುಭವಗಳು ತಪ್ಪಲಿಲ್ಲ. ಕಾನ್ವೆಂಟಿನಲ್ಲಿ ನಾಡಾರ್, ನಾಯ್ಕರರಂತಹ 'ಮೇಲ್ಜಾತಿ' ನನ್‌ಗಳು ದಲಿತ ಕ್ರೈಸ್ತರ ಕುರಿತು ತಿರಸ್ಕಾರಭರಿತ ಮಾತನಾಡುವುದನ್ನು ಕೇಳುವುದು ನಿಲ್ಲಲಿಲ್ಲ. ಪಂಡಿತಾ ರಮಾಬಾಯಿ ಗೌರವಾರ್ಥ ಏಪ್ರಿಲ್ 5ನ್ನು ಅವರ ಫೀಸ್ಟ್ ಡೇ ಆಗಿ ಆಚರಿಸಲಾಗುತ್ತದೆ. ಅದೇ ಬಾಮಾ ಮತ್ತವರಂತಹ ಟೀಕಾಕಾರರಿಗೆ ಉಸಿರುಗಟ್ಟುವ ವಾತಾವರಣ ಸೃಷ್ಟಿಸಿ ಹೊರದಬ್ಬಲಾಗುತ್ತದೆ.

ಇದು ಧರ್ಮದ ಕೆಡುಕೊ ಅಥವಾ ಸಾಂಸ್ಥೀಕರಿಸಲ್ಪಟ್ಟ ಧಾರ್ಮಿಕ ರಚನೆಗಳ ಕೆಡುಕೊ? ಗುರುತಿಸಲಾರದಷ್ಟು ಅವು ಒಂದರೊಳಗೊಂದು ಹೆಣೆದುಕೊಂಡಿವೆ.

- ಗಮನ ಸೆಳೆದ ಮತ್ತೊಂದು ವಿಷಯ ಇಡೀ ಪುಸ್ತಕದಲ್ಲಿ ಬಾಮಾ ಒಮ್ಮೆಯೂ ಅಂಬೇಡ್ಕರ್ ಹೆಸರನ್ನು ಉಲ್ಲೇಖಿಸದಿರುವುದು. ಶಾಲಾ ಕಾಲೇಜು ದಿನಗಳಲ್ಲಿ ಅವರಿಗೆ ಅಂಬೇಡ್ಕರ್ ಪರಿಚಯ ಉಂಟಾಗಿರಲು ಸಾಕು. ಆದರೆ ಅಂಬೇಡ್ಕರ್ ಬಾಮಾ ಬರವಣಿಗೆಯ ಕ್ಯಾನ್ವಾಸಿನಲ್ಲಿ ಎಲ್ಲೂ ಕಾಣಿಸುವುದಿಲ್ಲ. ಅಂಬೇಡ್ಕರರಷ್ಟೇ ಅಲ್ಲ, ಶೋಷಿತ ಸಮುದಾಯದವರ ಹಕ್ಕುಗಳಿಗಾಗಿ ಅಂಬೇಡ್ಕರರಿಗಿಂತ ಮೊದಲೇ ಹೋರಾಡಿದ ತಮಿಳು ನಾಡಿನ ಅಯೊತಿ ದಾಸ್ ಅಥವಾ ಪೆರಿಯಾರ್ ಅಂಥವರ ಉಲ್ಲೇಖವೂ

ಕಾಣಿಸುವುದಿಲ್ಲ. ಬಾಮಾ ತನ್ನ ಸುತ್ತಮುತ್ತಲ ಅಸಮಾನತೆ ಗುರುತಿಸಿ ಕುದಿಯುತ್ತಿದ್ದರೂ ತನಗಿಂತ ಆರೇಳು ದಶಕ ಮೊದಲೇ ಅದರ ವಿರುದ್ಧ ಕಾನೂನುಬದ್ಧವಾಗಿ, ಸಂಘಟನಾತ್ಮಕವಾಗಿ ಹೋರಾಡಿ ದಂತಕತೆಯೇ ಆದ ಅಂಬೇಡ್ಕರ್ ವಿಚಾರಗಳು ಇಂಬಾಗಲಿಲ್ಲವೆ ಎಂದು ಅಚ್ಚರಿಯಾಗುತ್ತದೆ. ಎಲ್ಲರೂ ಅಂಬೇಡ್ಕರ್ ಚಿಂತನೆಗಳಿಂದಲೇ ಪ್ರಭಾವಿತರಾಗಬೇಕೆಂದೇನೂ ಇಲ್ಲ. ಅಂಬೇಡ್ಕರ್‌ಪೂರ್ವ ದಿನಗಳಲ್ಲೂ ವ್ಯಕ್ತಿಗತ ಹೋರಾಟಗಳು ಬಹಳಷ್ಟು ಬಂದದ್ದಿರಬಹುದು. ಆದರೆ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಜಾಗೃತ ದಲಿತ ಮನಸುಗಳ ಪ್ರತಿರೋಧ, ಕಲೆ, ಕ್ರಿಯೆಗಳಲ್ಲಿ ಅಂಬೇಡ್ಕರ್ ಚಿಂತನೆ–ಕಾರ್ಯಗಳು ಅಂತರಗಂಗೆಯಂತೆ ಹರಿಯುವುದನ್ನು ಕಾಣುವಾಗ, ಅಂಬೇಡ್ಕರ್ ಹೊರತಾದ ದಲಿತ ಪ್ರಜ್ಞೆ ಇಲ್ಲವೆನ್ನುವಷ್ಟು ಅವರು ಹಾಸು ಹೊಕ್ಕಾಗಿರುವಾಗ, ಬಾಮಾ ಈ ಪ್ರಭಾವಕ್ಕೊಳಗಾಗದಿದ್ದುದು ಅಚ್ಚರಿ ಮೂಡಿಸುತ್ತದೆ. ಬಾಲ್ಯದಲ್ಲಿ ದಲಿತ ಸಂಘಟನೆ ಮತ್ತು ಹೋರಾಟಗಳಿಗೆ ಸಾಕ್ಷಿಯಾಗುವ ಅವಕಾಶ ಸಿಕ್ಕದೇ ಇರುವುದು ಹಾಗೂ ಅವರ ಕ್ರಿಶ್ಚಿಯನ್ ಅಸ್ಮಿತೆ ಇದಕ್ಕೆ ಕಾರಣವಾಗಿರಬಹುದೆ? 60–70ರ ದಶಕದಲ್ಲಿ ಮಹಾರಾಷ್ಟ್ರ ಮತ್ತು ನಂತರ ಕರ್ನಾಟಕಗಳಲ್ಲಿ ದಲಿತ ಚಳುವಳಿ ಶುರುವಾಗಿ ದಲಿತ–ದಲಿತೇತರರನ್ನು ಪ್ರಭಾವಿಸಿದ ವಿದ್ಯಮಾನ ಉಳಿದ ರಾಜ್ಯಗಳಲ್ಲಿ ಸಂಭವಿಸದಿರುವುದು ಕಾರಣವೆ? ಬುದ್ಧನ ನೆಚ್ಚಿದ ಅಯೋತಿ ದಾಸ್, ಅಂಬೇಡ್ಕರರಿಗಿಂತ ಭಿನ್ನವಾಗಿ ಕ್ರಿಶ್ಚಿಯನ್ ಧರ್ಮದೊಳಗೇ ಸಮಾನತೆಯ ಹುಡುಕಾಟ ನಡೆಸಿರುವುದು ಇದಕ್ಕೆ ಕಾರಣವೇ?

ಏನಾದರೂ ಆಗಲಿ, ಧಾರ್ಮಿಕವಾಗಿದ್ದುಕೊಂಡೇ ರ್‍ಯಾಶನಲ್ ಆಗಿ ಬಾಮಾ ಯೋಚಿಸಬಲ್ಲರು. ಭಕ್ತಿ ಕುರಿತು ಬಾಲ್ಯದ ಒಂದೆರೆಡು ಅನುಭವಗಳನ್ನು ಹೇಳಿಕೊಂಡಿರುವುದರಲ್ಲಿಯೇ ಕುರುಡು ಅನುಯಾಯಿತ್ವ ಅವರದಲ್ಲವೆಂದು ತಿಳಿಯುತ್ತದೆ. ಆಸ್ತಿಕತೆಯ ನಡುವೆಯೂ ವಿಚಾರವಾದ ಮೊಳೆತರೆ ಆರೋಗ್ಯಪೂರ್ಣ ಧಾರ್ಮಿಕತೆ–ಆಧ್ಯಾತ್ಮಿಕತೆ ಹುಟ್ಟಬಹುದು ಹಾಗೂ ಢಾಂಭಿಕತೆಯಿಂದ ಪಾರುಮಾಡುವ ಯೋಚನಾ ಕ್ರಮ ರೂಢಿಯಾಗ ಬಹುದು ಎನ್ನಲು ಬಾಮಾ ಪುರಾವೆಯಂತಿದ್ದಾರೆ.

- ಅಕ್ಯಾಡೆಮಿಕ್ ವಲಯದ ಸಭೆ–ಸೆಮಿನಾರುಗಳಿಂದ; ಪುರುಷ ಪ್ರಾಧಾನ್ಯ ತುಂಬಿದ ದಲಿತ ಸಂಘಟನೆಗಳಿಂದ; ಜಾತಿ ಪ್ರಶ್ನೆಯನ್ನೇ ಎತ್ತದೆ ವ್ಯವಹರಿಸುವ ಮಹಿಳಾ/ಕಮ್ಯುನಿಸ್ಟ್ ಚಳುವಳಿಯಿಂದ ತಾನು ದೂರ ಎಂದು ಬಾಮಾ ಹೇಳಿಕೊಂಡಿದ್ದಾರೆ. ತನ್ನ ಹೋರಾಟ ವ್ಯಾಪ್ತಿಯು ಬರೆವ

> ಪುಸ್ತಕದ ಅಂಚಿನವರೆಗೆ ಮಾತ್ರ ಎನ್ನುತ್ತಾರೆ. ಸಂಘಟನೆಗಳಿಂದ ಅವರು ಕಾಯ್ದುಕೊಂಡಿರುವ ಈ ದೂರ ಕಡಿಮೆಯಾಗಿದ್ದರೆ ಇನ್ನಷ್ಟು ವಿಶಾಲ ಜನಸಮುದಾಯವನ್ನು ವಿಭಿನ್ನ ದಾರಿಗಳಲ್ಲಿ ಅವರು ತಲುಪಬಹುದಿತ್ತೆ? ನೆಲ ಮೂಲದ ಹೋರಾಟಗಾರ್ತಿ ರೂಪುಗೊಳ್ಳಲು ಸಾಧ್ಯವಾಗುತ್ತಿತ್ತೇ? ಅಥವಾ ಸೃಜನಶೀಲ ಕೃತಿಗಳ ಮೂಲಕ ಇದುವರೆಗೆ ತಲುಪದ ಮನಸುಗಳ ತಲುಪಿ, ಯಾರೂ ಪ್ರತಿನಿಧಿಸಿದ ಅಲಕ್ಷಿತ ದನಿಗೆ ಪ್ರತಿನಿಧಿಯಾಗಿರುವುದು ಹೋರಾಟದಷ್ಟೇ ಮುಖ್ಯವೇ?

ಕೆಲವು ಉತ್ತರ ಬಯಸಬಾರದ ಪ್ರಶ್ನೆಗಳು ಸುಮ್ಮನೆ ಸುಳಿಯುತ್ತವೆ. ಬಾಮಾರ ಮುಂದಿನ ನಡೆಗಳನ್ನು ಗಮನಿಸುವಂತೆ ಮಾಡುತ್ತವೆ.

***

ಬಾಮಾ ವಿಶೇಷತೆಯೆಂದರೆ ಅತಂತ್ರಗೊಂಡ, ಹೀಯಾಳಿಕೆಗೆ ಒಳಗಾದ ಅಭದ್ರತೆಯ ಕಾಲದಲ್ಲೂ ಅವರು ಬದುಕುವ ಛಲ ಉಳಿಸಿಕೊಂಡರು ಹಾಗೂ ಬರವಣಿಗೆಯ ಶಕ್ತಿಯಲ್ಲಿ ನಂಬಿಕೆಯಿಟ್ಟರು. ಜಮ್ಮುವಿನಿಂದ ರೈಲು ಹತ್ತಿ ತಿರುಚ್ಚಿಗೆ ಬಂದಿಳಿದ ಬಾಮಾರ ಮುಂದಿನ ದಾರಿ ಅಸ್ಪಷ್ಟವಾಗಿತ್ತು. ನೌಕರಿಯೂ ಇಲ್ಲದೆ ಸಮಾಜದಿಂದ, ಚರ್ಚಿನಿಂದ ಅವಹೇಳನಕಾರಿ ಮಾತು ಕೇಳಬೇಕಾಗಿ ಬಂತು. ಆಗ 'ಸಾಯುವುದರಿಂದ ತಪ್ಪಿಸಿಕೊಳ್ಳಲು' ಅವರು ಬರೆಯತೊಡಗಿದರು. ಕಾಲೇಜು ದಿನಗಳಲ್ಲಿ ಪ್ರಾಸಬದ್ಧ ಕವಿತೆಗಳನ್ನಷ್ಟೆ ಬರೆದ ಬಾಮಾ ಬರಹಗಾರ್ತಿಯಾಗುತ್ತೇನೆಂದು ಕನಸಿನಲ್ಲೂ ಎಣಿಸಿರಲಿಲ್ಲ. ಬರಹಗಾರ ಅಣ್ಣ ರಾಜ್ ಗೌತಮನ್ ಒತ್ತಾಸೆಯಿಂದ ಒಂದಷ್ಟು ಪುಸ್ತಕ ಓದಿದ್ದರು. ರವೀಂದ್ರನಾಥ ಟ್ಯಾಗೋರರ ಗೀತಾಂಜಲಿ ಅವರಿಗೆ ಇಷ್ಟವಾಗಿತ್ತು. ಖಲೀಲ್ ಗಿಬ್ರಾನನನ್ನು ಮತ್ತೆಮತ್ತೆ ಓದುತ್ತಿದ್ದರು. ಬದುಕಿನ ತಲ್ಲಣಗಳು ಅವರು ಪೆನ್ನು ಹಿಡಿಯುವಂತೆ ಮಾಡಿದಾಗ ಎದೆಯ ಮಾತುಗಳನ್ನು ಎದೆಯ ಭಾಷೆಯಲ್ಲೇ ಬರೆದರು. ಹಾಗೆಂದೇ ಕರುಕ್ಕುವನ್ನು ಓದುವವರೊಂದಿಗೆ ಸಂಭಾಷಣೆ ನಡೆಸಿದ ಧಾಟಿಯಲ್ಲಿ ಬರೆಯಲಾಗಿದೆ. ಹೇಳಿಕೊಳ್ಳಬೇಕೆಂಬ ತುರ್ತು ಬರವಣಿಗೆಗೆ ಕಾರಣವಾಗಿರುವುದು ತಿಳಿಯುತ್ತದೆ. 'ನನಗೆ ನನ್ನ ಜನರಿಗಾಗಿ ಮೂರ್ತಿಗಳ ಕೆತ್ತಲಾಗಲಿಲ್ಲ, ಸ್ಮಾರಕಗಳ ನಿಲಿಸಲಾಗಲಿಲ್ಲ, ಪುಸ್ತಕ ಬರೆದೆ' ಎನ್ನುವ ಬಾಮಾ ಮಾತುಗಳಲ್ಲಿ ಅವರು ಬರಹವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆಂದು ತಿಳಿದುಬರುತ್ತದೆ. ಒಟ್ಟಾರೆಯಾಗಿ ವಿಶಿಷ್ಟ ಶೈಲಿ, ಭಾಷೆ, ಆಳ ಒಳನೋಟಗಳುಳ್ಳ ದಿಟ್ಟ ಬರವಣಿಗೆಯಿಂದ ಅವರು ಬರಹಗಾರ್ತಿಯೆಂಬ ಹೊಸ ಅಸ್ಮಿತೆ ಪಡೆದದ್ದಲ್ಲದೆ ಘನತೆಯನ್ನೂ, ಆತ್ಮವಿಶ್ವಾಸವನ್ನೂ ಮರಳಿ ಪಡೆದರು.

ಸಾಧಾರಣವಾಗಿ ಇತರ ಆತ್ಮಕತೆಗಳಂತೆ ದಲಿತ ಆತ್ಮಕತೆಗಳು, ಅದರಲ್ಲೂ ದಲಿತ ಮಹಿಳಾ ಆತ್ಮಕತೆಗಳು ತೃಪ್ತಭಾವದಿಂದ, ತನ್ನ ಇದುವರೆಗಿನ ಬದುಕು–ಸಾಧನೆಯ ಕುರಿತು ಹೆಮ್ಮೆಯನ್ನು ಪ್ರಕಟಿಸುತ್ತ ಕೊನೆಯಾಗುವುದಿಲ್ಲ. ಬದಲಾಗಿ ನಿರೂಪಣೆಯ ಪ್ರತಿ ಹಂತದಲ್ಲೂ ಅಭದ್ರತೆಯ ತೊಳಲಾಟ, ತನ್ನ ಸಮುದಾಯ ಆತ್ಮಗೌರವಯುಕ್ತ ಬಿಡುಗಡೆಯತ್ತ, ಸ್ವಯಂಪರಿಪೂರ್ಣತೆಯತ್ತ ಸಾಗುವುದು ಹೇಗೆಂಬ ಕಾಳಜಿ ಕಂಡುಬರುತ್ತದೆ. 'ಗಿಡ ನೆಟ್ಟವನು ನೀರುಣಿಸುತ್ತಾನೆ' ಎಂಬ ತನ್ನ ತಾಯಿಯ ಮಾತನ್ನು ನೆನೆಯುತ್ತ ದೇವರ ಮೇಲಿನ ಅಚಲ ವಿಶ್ವಾಸದಿಂದ ಬರಹದ ಕೊನೆ ತಲುಪುವ ಬಾಮಾ 1992ರಲ್ಲಿ ಕರುಕ್ಕು ಬರೆದ ನಂತರ ಬಹುದೂರದ ಹಾದಿ ಕ್ರಮಿಸಿದ್ದಾರೆ. ತೀವ್ರ ದೈಹಿಕ ಶ್ರಮ ಬೇಡುವ ಕೆಲಸಗಳನ್ನೇ ಮಾಡುತ್ತ ದುಡಿಯುವ ತನ್ನ ಜನರನ್ನು ಶಿಕ್ಷಣದ ಮೂಲಕ, ನೈಜ ಧರ್ಮ ಏನೆಂದು ತಿಳಿಸುವ ಮೂಲಕ ಎಚ್ಚರಿಸಬೇಕೆನ್ನುವುದು ಬಾಮಾ ಗುರಿಯಾಗಿದೆ. ಸಮುದಾಯದ ಪರ ಮಾತನಾಡುವ ದಿಟ್ಟ ದನಿಯಾಗಿ 'ದಲಿತ್ ವುಮೆನ್ ಟಾಕ್ ಡಿಫರೆಂಟ್ಲಿ' ಎನ್ನುವ ಗೋಪಾಲ ಗುರು ಮಾತಿಗೆ ಉದಾಹರಣೆಯೆಂಬಂತೆ ಬಾಮಾ ವ್ಯಕ್ತಿತ್ವ ರೂಪುಗೊಂಡಿದೆ.

***

ಬಾಮಾ ಆಡುವಾತಿನಲ್ಲಿ, ಅದರಲ್ಲೂ ದಕ್ಷಿಣ ತಮಿಳುನಾಡಿನ ದಲಿತ ಆಡುನುಡಿಯಲ್ಲಿ ಕರುಕ್ಕು ಬರೆದಿದ್ದಾರೆ. ತತ್ಸಮಾನ ಕನ್ನಡ ಪದಗಳಿರಬಹುದಾದರೂ ಆ ಪ್ರದೇಶದ ಕೆಲ ತಮಿಳು ನಾಮಪದಗಳನ್ನು (ಉದಾ:ಗೆ ಜಾತಿಯ ಹೆಸರು, ಕೊಳದ ಹೆಸರು, ಮೀನಿನ ಹೆಸರು ಇತ್ಯಾದಿ) ಹಾಗೇ ಉಳಿಸಿಕೊಳ್ಳಲಾಗಿದೆ. ತಮಿಳಿನಂತೆ ಕನ್ನಡದಲ್ಲೂ ಆರೆಂಟು ಪ್ರಾದೇಶಿಕ ಆಡುನುಡಿಗಳಿವೆ. ಅದನ್ನೂ ಬೇರೆಬೇರೆ ಸಮುದಾಯದ ಜನ ಬೇರೆಬೇರೆ ರೀತಿ ಬಳಸುತ್ತಾರೆ. ಇಷ್ಟೊಂದು ವೈವಿಧ್ಯಮಯ ಆಯ್ಕೆಯ ಅವಕಾಶವಿದ್ದರೂ ಸಾಮಾನ್ಯ ಕನ್ನಡದ ಆಡುನುಡಿಯನ್ನು ಈ ಅನುವಾದದಲ್ಲಿ ಬಳಸಲಾಗಿದೆ. ಸಂಭಾಷಣೆಗಳು ಕರಾವಳಿ ಕನ್ನಡದ ಆಡುನುಡಿ ಹಾಗೂ ಇನ್ನೊಂದೆರೆಡು ಭಿನ್ನ ಶೈಲಿಗಳಲ್ಲಿವೆ. ಇದಕ್ಕೆ ಕಾರಣ ನನ್ನ ಆಡುನುಡಿಯು ಹಲವದರ ಮಿಸಳ ಆಗಿದ್ದು ದಲಿತ ಆಡುನುಡಿಯ ಪೂರ್ಣ ಪರಿಚಯವಿಲ್ಲದೆ ಅದನ್ನು ಹಾಳುಗೆಡವಿಯೇನು ಎಂಬ ಭಯ; ಜೊತೆಗೆ ಕರ್ನಾಟಕದ ಎಲ್ಲ ಭಾಗದವರ ಓದಿಗೂ ಸುಲಭವಾಗಿ ದಕ್ಕೀತೆಂಬ ಆಶಯ. ಪೂರ್ಣ ಶಿಷ್ಟ ಭಾಷಾ ಬಳಕೆಗಿಂತ ಆಡುನುಡಿ ಓದುಗನಿಗೆ ಆಪ್ತ ಒಡನಾಟ ಹುಟ್ಟಿಸಬಹುದು ಎಂದು ಆಡುನುಡಿ ಬಳಸುತ್ತ ಹೋದಂತೆ ನನಗೆ ಅನಿಸಿದೆ.

ಕರ್ನಾಟಕದ ಕ್ರೈಸ್ತ, ದಲಿತ ಕ್ರೈಸ್ತ ಸಮುದಾಯದಲ್ಲೂ ಭಾಷಿಕ, ಧಾರ್ಮಿಕ, ಸಾಮಾಜಿಕವಾದ ಅನೇಕ ತಲ್ಲಣಗಳಿರಬಹುದು. ಅಂಥವನ್ನು ದಾಟುವ ಪ್ರಯತ್ನಗಳೂ

ಅಲ್ಲಲ್ಲಿ ನಡೆದಿರಬಹುದು. ಅಕ್ಷರವಾಗಿ ಆ ಅನುಭವಗಳು ದಾಖಲಾಗಿಲ್ಲ ಎಂದೇ ಹೇಳಬಹುದು. ತಲ್ಲಣಗೊಂಡ ಮನಸುಗಳಿಗೆ 'ತಾಳೆ ಗರಿ' ಸ್ಫೂರ್ತಿಯಾಗಲಿ; ಬರವಣಿಗೆಯೇ ಸೂಕ್ತ ಮಾರ್ಗದರ್ಶಿಯೂ ಆಗಲಿ..

ಈ ಕನ್ನಡ ಅನುವಾದಕ್ಕೆ ಅನುಮತಿ ನೀಡಿದ ಬಾಮಾ ಅವರಿಗೆ ಹಾಗೂ ಒಯುಪಿ ಮುದ್ರಣದ ಸುಮಿತಾ ರಾಯ್ ಅವರಿಗೆ, ಇಂಗ್ಲಿಷ್‌ಗೆ ಅನುವಾದಿಸಿದ ಲಕ್ಷ್ಮೀ ಹೋಲ್‌ಸ್ಟ್ರಾಮ್ ಅವರಿಗೆ ಧನ್ಯವಾದ ಹೇಳಲೇಬೇಕು. ಜೊತೆಗೆ ಧಾರ್ಮಿಕ ವಿಷಯ ಕುರಿತ ನನ್ನ ಸಂದೇಹ ಬಗೆಹರಿಸಿದ ಜೆನಿಫರ್ ಎಡ್ವಿನ್ ಡಯಾಸ್ ಹಾಗೂ ಸೋಬಿನ ರೆಮೆಂದಿ ಕರ್ವಾಲೋ ಇವರನ್ನೂ ಕೃತಜ್ಞತಾಪೂರ್ವಕ ನೆನೆಯುತ್ತೇನೆ. ಅನುವಾದಿಸುವಾಗ ಸೂಕ್ತ ಸಲಹೆ, ಸೂಚನೆ ನೀಡಿ ಅನುವಾದಕ್ಕೆ ಅನುಮತಿ ದೊರಕಿಸಿಕೊಳ್ಳಲು ಪ್ರಯತ್ನಿಸಿದ ಪ್ರಾಧಿಕಾರದ ಅಧ್ಯಕ್ಷರಾದ ಕೆವಿಎನ್ ಸರ್ ಅವರನ್ನು; ಇತರ ಸದಸ್ಯ ಬಂಧುಗಳನ್ನು; ಶೋಭಾ, ಪ್ರಭಾ, ರಮ್ಯಾ, ತ್ಯಾಗರಾಜ್ ಇನ್ನಿತರ ಸಿಬ್ಬಂದಿಗಳನ್ನು; ಮುಖಪುಟ ರಚನೆ ಹಾಗೂ ಪುಟ ವಿನ್ಯಾಸ ಮಾಡಿದ ಅರುಣಕುಮಾರ್ ಜಿ. ಅವರನ್ನು; ಒಳಪುಟದ ಚಿತ್ರಗಳನ್ನು ಒದಗಿಸಿದ ಕೃಷ್ಣ ಗಿಳಿಯಾರ್ ಅವರನ್ನು; ಮುದ್ರಣಾಲಯದ ಸಿಬ್ಬಂದಿಗಳನ್ನು; ನನ್ನೆಲ್ಲ ಪ್ರಯತ್ನಗಳ 'ಬೆನ್'ಬಲವಾಗಿರುವ ಸಂಸಾರಲೋಕ ಮತ್ತು ಲೋಕಸಂಸಾರಗಳನ್ನು ಕೃತಜ್ಞತಾಪೂರ್ವಕ ನೆನೆಯುತ್ತೇನೆ.

ಜನವರಿ 2016.

**ಡಾ. ಎಚ್. ಎಸ್. ಅನುಪಮಾ,**
ಕವಲಕ್ಕಿ.

# ಮೊದಲ ಮುದ್ರಣದ ಮಾತು (ತಮಿಳು ಆವೃತ್ತಿ)

ಗರಗಸದಂತಹ ಅಂಚುಗಳುಳ್ಳ ತಾಳೆ ಗರಿಗೂ ನನ್ನ ಬದುಕಿಗೂ ಬಹಳ ಸಾಮ್ಯಗಳಿವೆ. ನನ್ನನ್ನು ಸೌದೆ ಒಟ್ಟುಮಾಡಿ ತರಲು ಕಳಿಸುತ್ತಿದ್ದಾಗ ಚದುರಿ ಬಿದ್ದಿರುತ್ತಿದ್ದ ತಾಳೆ ಗರಿಯನ್ನು ಹೆಕ್ಕುತ್ತಿದ್ದುದಷ್ಟೇ ಅಲ್ಲ, ಅದರೊಡನೆ ಆಟವಾಡಿದಂತೆಲ್ಲ ನನ್ನ ಚರ್ಮ ತರಚಿ, ಕೀರಿ, ಹರಿದುಹೋಗುತ್ತಿತ್ತು. ಅದು ಈ ಪುಸ್ತಕದಲ್ಲಿ ಬೀಜರೂಪಿಯಾಗಿ ಮತ್ತು ಸಂಕೇತವಾಗಿ ಬೆಳೆದಿದೆ.

ಈ ಪುಸ್ತಕ ಪುಸ್ತಕವಾಗಲು ಕಾರಣವಾದ ಸಂಗತಿಗಳು ಹಲವು. ತಾಳೆ ಗರಿಯಂತೆಯೇ ನನ್ನ ರಕ್ತ ಹರಿಸಿದ, ನನ್ನ ಬದುಕಿನ ಹಲವು ಸ್ತರಗಳಲ್ಲಿ ಸಂಭವಿಸಿದ ಘಟನೆಗಳು; ನನ್ನನ್ನು ಅಜ್ಞಾನಕ್ಕೆ ದೂಡಿ ಉಸಿರುಕಟ್ಟಿ ಸಿಕ್ಕಿಹಾಕಿಕೊಳ್ಳುವಂತೆ ಮಾಡಿದ ಅನ್ಯಾಯಯುತ ಸಾಮಾಜಿಕ ರಚನೆಗಳು; ಈ ಬಂಧನಗಳ ಒಡೆದು ಬಿಸಾಕುವ ನನ್ನ ಹತಾಶ ಪ್ರಯತ್ನ; ಕಟ್ಟಿದ ಸರಪಳಿ ತುಂಡುತುಂಡಾಗುವಾಗ ಅದರ ಜೊತೆಗೇ ಹರಿದ ರಕ್ತ ಇವೆಲ್ಲ ಸೇರಿವೆ.

ನನ್ನಂತೆ ಎಷ್ಟೋ ದಲಿತ ಹೃದಯಗಳಿವೆ – ನ್ಯಾಯ, ಸಮಾನತೆ ಮತ್ತು ಪ್ರೀತಿಯ ಆಧಾರದ ಮೇಲೆ ಹೊಸ ಸಮಾಜ ಕಟ್ಟುವ ಕನಸು ಹೊತ್ತಿರುವವರು. ಇದುವರೆಗೆ ಶೋಷಿತರಾಗಿದ್ದವರೇ ಈಗ ಇಬ್ಬಾಯಿ ಖಡ್ಗದಂತಹ ತಾಳೆ ಗರಿಗಳಂತಾಗಿ ತಮ್ಮ ಶೋಷಕರಿಗೆ ಸವಾಲು ಹಾಕುತ್ತಿದ್ದಾರೆ.

ಹೊಸ ಒಡಂಬಡಿಕೆಯನ್ನು ಬರೆದವರು ದೇವರ ಮಾತುಗಳನ್ನು ಇಬ್ಬಾಯ ಖಡ್ಗಕ್ಕೆ ಹೋಲಿಸಿದ್ದಾರೆ. ಆದರೂ ಅದು ಬೇರೆಯವರನ್ನು ಗುಲಾಮರಾಗಿಸಿ, ನಿರ್ಬಲಗೊಳಿಸುವ ಕಲ್ಲು ಹೃದಯಗಳನ್ನು ಚುಚ್ಚಲು ವಿಫಲವಾಗಿದೆ.

ಇದನ್ನು ಬದಲಿಸಲು ಮೂಲಭೂತ ಹಕ್ಕುಗಳು ನಿರಾಕರಿಸಲ್ಪಟ್ಟ ಎಲ್ಲ ದಲಿತರೂ ದೇವರ ಪದಗಳಂತೆ, ಹೃದಯಕ್ಕೇ ಚುಚ್ಚುವಂತೆ ಕೆಲಸ ಮಾಡಬೇಕಿದೆ. ಮತ್ತಷ್ಟು ಹೊಡೆತ ತಿಂದು ಬಡ್ಡಾಗುವ ಬದಲು ಅವರು ಒಗ್ಗೂಡಿ, ತಮ್ಮ ಹಕ್ಕುಗಳ ಕುರಿತು ಯೋಚಿಸಿ ಅವುಗಳ ಸಲುವಾಗಿ ಹೋರಾಡಬೇಕಿದೆ.

ಫಾದರ್ ಮಾರ್ಕ್ ಈ ಪುಸ್ತಕದ ಸ್ವರೂಪ ಮತ್ತು ಆಕರಗಳನ್ನು ಅರ್ಥ ಮಾಡಿಕೊಂಡು ಬರೆಯಲು ಒತ್ತಾಯಿಸಿದರು. ಪ್ರತಿ ವಿಷಯದ ಬಗ್ಗೆಯೂ ಬೇರೆಯ ರೀತಿ ಯೋಚಿಸುವಂತೆ ಹೇಳಿದ್ದಲ್ಲದೆ, ಅದನ್ನು ಬರೆಯುವಾಗ ಬೆಂಬಲ ನೀಡಿದರು, ಪುಸ್ತಕ ರೂಪದಲ್ಲಿ ತಮಿಳಿನಲ್ಲಿ ಬರಲು ಸಹಾಯ ಮಾಡಿದರು ಹಾಗೂ ಅದಕ್ಕೊಂದು ಮುನ್ನುಡಿ ಕೂಡ ಬರೆದರು. ಅವರಿಗೆ ನಾನು ಹಲವು ವಿಧದಲ್ಲಿ ಋಣಿ. ನನ್ನನ್ನು ಪ್ರೋತ್ಸಾಹಿಸಿ, ಸ್ಫೂರ್ತಿ ನೀಡಿದ ಇನ್ನುಳಿದ ಹಲವು ಗೆಳೆಯರಲ್ಲಿ ಫಾದರ್ ಎಂ. ಜೆಯರಾಜ್ ಅವರನ್ನು ನಾನು ನೆನೆಯಲೇಬೇಕು.

1992. **– ಬಾಮಾ**

## ಹತ್ತು ವರ್ಷ ನಂತರ

1992ನೇ ಇಸವಿ ನನ್ನ ಬದುಕಿನ ಅತ್ಯಂತ ಮುಖ್ಯ ತಿರುವಿಗೆ ಕಾರಣವಾದ ವರ್ಷ. ಕಾನ್ವೆಂಟಿನಲ್ಲಿ ಏಳು ವರ್ಷ ಇದ್ದ ನಂತರ, ನವೆಂಬರ್ 8, 1992ರಂದು ನಾನು ಸನ್ಯಾಸ ತ್ಯಾಗ ಮಾಡಿ ಮತ್ತೆ ಈ ಜಗತ್ತಿಗೆ ಬಂದೆ. ಅದಾದಮೇಲೆ ಕರುಕ್ಕು ಬರೆದೆ. ಆ ಪುಸ್ತಕವನ್ನು ನನ್ನ ಅಂತರಂಗದ ಗಾಯಗಳು ಮಾಯಲೆನ್ನುವ ಸಲುವಾಗಿ ಬರೆದೆ; ಅದಲ್ಲದೆ ಬೇರೆ ಉದ್ದೇಶವಿರಲಿಲ್ಲ. ಆದರೆ ಅದು ಅನಿರೀಕ್ಷಿತ ಫಲಿತಾಂಶ ನೀಡಿತು. ಜನರನ್ನು ಅದು ಹಲವು ರೀತಿಗಳಲ್ಲಿ ಪ್ರಭಾವಿಸಿತು. ಕರುಕ್ಕು ಒಂದು ಪುಸ್ತಕ ಎಷ್ಟು ಶಕ್ತಿಶಾಲಿಯಾಗಿರ ಬಹುದು ಎಂದು ನನಗೆ ತೋರಿಸಿಕೊಟ್ಟಿತು. ನನ್ನ ತಾಯ್ತಂದೆಯರು ಅದನ್ನು ಓದಿದರು. ಅವರು ನನ್ನನ್ನು ಇನ್ನೂ ಸ್ವಲ್ಪ ಅರ್ಥಮಾಡಿಕೊಂಡರು. ನನ್ನ ಒಡಹುಟ್ಟಿದವರು ಓದಿದರು. ಅವರು ನಾನು ಬದುಕಿನಲ್ಲಿ ಅನುಭವಿಸಿದ ನೋವನ್ನು ಊಹಿಸಲು ಶಕ್ತರಾದರು. ನನ್ನ ಸ್ನೇಹಿತರು ಓದಿದರು. ಇದು ಹೊಸ ರೀತಿಯ ಬರವಣಿಗೆ ಎಂದು ಖುಷಿಪಟ್ಟು ಹೊಗಳಿದರು. ನನ್ನ ಹಳ್ಳಿಯ ಜನ ಇದನ್ನು ಓದಿದರು. ಅವರು ಮೊದಲು ಇದರ ಬಗ್ಗೆ ಹಗೆಯ ಭಾವ ತಳೆದರೂ ನಂತರ ಇದು ಆವಶ್ಯಕ ಎಂದು ಗೊತ್ತಾದ ಮೇಲೆ ಖುಷಿಪಟ್ಟು ನನ್ನ ಹುರಿದುಂಬಿಸಿದರು. ಹಲವು ದಲಿತರು ಇದನ್ನು ಓದಿದರು ಮತ್ತು ತಮಗೆ ಬಲ ನೀಡಿತೆಂದು ಹೇಳಿದರು. ಸಾಹಿತ್ಯ ವಿಮರ್ಶಕರು ಓದಿದರು, ವಿಶ್ಲೇಷಿಸಿದರು, ಇದನ್ನು ಯಾವ ವಿಭಾಗದಲ್ಲಿ ಸೇರಿಸಬಹುದೆಂದು ಪರಸ್ಪರ ಕೇಳಿಕೊಂಡರು. ಕೊನೆಗೆ ಅದು ತಮಿಳು ಸಾಹಿತ್ಯದಲ್ಲಿ ಹೊಸ ಪ್ರಕಾರವೆಂದು ನಿರ್ಧರಿಸಿದರು. ಹಲವರು ಹೊಗಳಿದರು, ಹಲವರು ತೆಗಳಿದರು. ಅಂತೂ ಕೊನೆಗೆ ಎಲ್ಲ ಸದ್ದೂ ತಣ್ಣಗಾಯಿತು..

**2000ನೇ ಇಸವಿ..**

ಮಿನಿ ಕೃಷ್ಣನ್ ಆಗ ಮ್ಯಾಕ್‌ಮಿಲನ್ ಇಂಡಿಯಾದ ಸಂಪಾದಕಿ. ಆಕೆಯ ಪ್ರಯತ್ನದಿಂದ ಕರುಕ್ಕು ಇಂಗ್ಲಿಷ್‌ಗೆ ಲಕ್ಷ್ಮೀ ಹೋಲ್‌ಸ್ಟ್ರಾಮ್ ಅವರಿಂದ ಅನುವಾದ ಗೊಂಡು ಪ್ರಕಟವಾಯಿತು. ಇದಾದಮೇಲೆ ಕರುಕ್ಕು ವಿಗೆ ರಾಷ್ಟ್ರೀಯ, ಅಂತಾರಾಷ್ಟ್ರೀಯ

ಓದುಗರು ದೊರಕಿದರು. ಮರುವರ್ಷ ಇದು ಕ್ರಾಸ್‌ವರ್ಡ್ ಪ್ರಶಸ್ತಿ ಪಡೆಯಿತು. ನಂತರ ಇದು ಮಲಯಾಳಂ, ತೆಲುಗು, ಕನ್ನಡಕ್ಕೂ ಅನುವಾದಗೊಂಡಿತು. ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ಬಂದಿತು. ಹಲವು ಜ್ಞಾನಶಿಸ್ತಿನ ವಿದ್ಯಾರ್ಥಿಗಳು ಇದನ್ನು ಇಂಗ್ಲಿಷ್, ತಮಿಳಿನಲ್ಲಿ ಓದಿದರು. ಈಗಲೂ ಓದುತ್ತಿದ್ದಾರೆ..

**ಈಗ 2011ರಲ್ಲಿ..**

ಕಳೆದ ಹತ್ತು ವರ್ಷಗಳಲ್ಲಿ ಕರುಕ್ಕು ತುಂಬ ಸಂಚಾರ ಮಾಡಿದೆ. ಹಲವು ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳು ಇದನ್ನು ಸಬಾಲ್ಟ್ರನ್ ಸಾಹಿತ್ಯ, ಅನುವಾದ ಸಾಹಿತ್ಯ, ಆತ್ಮಕತೆ, ಸ್ತ್ರೀವಾದಿ ಸಾಹಿತ್ಯ, ದಲಿತ ಸಾಹಿತ್ಯ ಮುಂತಾದ ಅನೇಕ ಶೀರ್ಷಿಕೆಗಳಡಿ ಓದಿದ್ದಾರೆ. ಬೇರೆಬೇರೆ ವಿಷಯಗಳ ಸಂಶೋಧನೆಗಾಗಿ ವಿದ್ಯಾರ್ಥಿಗಳು ಸಂಶೋಧನಾ ವಸ್ತುವನ್ನಾಗಿ ಇಟ್ಟುಕೊಂಡಿದ್ದಾರೆ. ಇದೇ ಸಮಯದಲ್ಲಿ ದಲಿತರಿಂದ ಕವಿತೆ, ಕಾದಂಬರಿ, ಸಣ್ಣಕತೆ, ಕಿರುಚಿತ್ರ, ಪ್ರಬಂಧ ಮತ್ತು ನಾಟಕದಂತಹ ಅನೇಕ ಸೂಕ್ಷ್ಮ ಸಾಹಿತ್ಯಿಕ ಹಾಗೂ ಕಲೆಯ ಬರಹ, ಸೃಷ್ಟಿಗಳು ಹೊರಬಂದವು. ಅದರಲ್ಲಿ ಎಷ್ಟೋ ಇಂಗ್ಲಿಷಿಗೂ ಅನುವಾದಗೊಂಡವು. ದಲಿತ ಬರವಣಿಗೆ ಇವತ್ತು ಹುಲುಸಾಗಿದೆ. ಹೊಸ ತಲೆಮಾರಿನ ಕಲಾವಿದರು ಮತ್ತು ಬರಹಗಾರರು ದಲಿತ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ.

ಗಾಯಗೊಂಡ ಮನಸು ಬರೆದ ಕರುಕ್ಕು ಕಾಲದ ಪ್ರವಾಹದಲ್ಲಿ ಕೊಚ್ಚಿಹೋಗಲಿಲ್ಲ. ಬದಲಾಗಿ ಗಾಯಗೊಂಡವರ ನೋವುಗಳನ್ನು ಶಮನ ಮಾಡುತ್ತಿದೆ. ಕೀಳುಗೊಳಿಸಲ್ಪಟ್ಟವರು, ಜಾತಿ ತಾರತಮ್ಯ–ಅಸ್ಪೃಶ್ಯತೆ–ಬಡತನ–ಅನಾಥತೆಗಳ ನೋವನುಭವಿಸಿದವರಿಗೆ ಧೈರ್ಯ ನೀಡಿ ಮತ್ತೊಮ್ಮೆ ಬದುಕನ್ನು ಪ್ರೀತಿಸುವಂತೆ ಮಾಡಿದೆ. ಅಸ್ಮಿತೆಗಳನ್ನು ನಿರಾಕರಿಸಲ್ಪಟ್ಟ, ನಾಶಗೊಳಿಸಲ್ಪಟ್ಟ ಹಲವರಿಗೆ ಕರುಕ್ಕು ಬಲ ನೀಡುವ ಒಂದು ಮಾರ್ಗವಾಗಿದೆ. ಈ ಹತ್ತು ವರ್ಷಗಳಲ್ಲಿ ಇದು ಸತ್ಯ ಮಾತ್ರ ಗೆಲ್ಲುತ್ತದೆ ಎಂದಷ್ಟೇ ತೋರಿಸಿಲ್ಲ, ಸತ್ಯವಷ್ಟೇ ಸತ್ಯವಾಗಿ ಉಳಿಯಬಲ್ಲದು ಎಂದೂ ತೋರಿಸಿದೆ. ಕರುಕ್ಕು ಹಲವರಿಗೆ 'ನನ್ನ ಭಾಷೆ, ನನ್ನ ಸಂಸ್ಕೃತಿ, ನನ್ನ ಬದುಕು ಮಹತ್ತರವಾದದ್ದು, ಅದ್ಭುತ' ಎಂದು ದನಿಯೆತ್ತಿ ಹೇಳಿಕೊಳ್ಳುವಂತೆ ಮಾಡಿದೆ. ಕೇವಲ ಮಾನವೀಯತೆ ಮಾತ್ರ ಎಲ್ಲ ಗಡಿಗಳ ದಾಟಬಲ್ಲದು ಎಂದು ಕರುಕ್ಕು ಹೇಳಿದೆ. ಇದು ಹೇಳುವ ಸತ್ಯ ಕೆಲವರಿಗೆ ಕಹಿ ಇರಬಹುದು. ಕೆಲವರಿಗೆ ಹಾಸ್ಯಾಸ್ಪದ ಎನಿಸಲೂಬಹುದು. ಈ ಪುಸ್ತಕ ಅಂಥ ಎಲ್ಲ ವಿಮರ್ಶೆಗಳನ್ನು ಮೀರಿ ನಿಂತು ತಾನೇ ತನ್ನ ಮಾತನಾಡುತ್ತದೆ.

ಇದಕ್ಕೆ ಬೆಂಬಲವಾಗಿ ನಿಂತು ಎರಡನೆಯ ಮುದ್ರಣ ಹೊರತರುತ್ತಿರುವ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಮಿನಿ ಕೃಷ್ಣನ್, ಲಕ್ಷ್ಮೀ ಹೋಲ್‌ಸ್ಟ್ರಾಮ್ ಅವರಿಗೆ, ಒಯುಪಿ ಮುದ್ರಣದ ಎಲ್ಲರಿಗೆ ನನ್ನ ಹೃತ್ಪೂರ್ವಕ ಧನ್ಯವಾದ ತಿಳಿಸುತ್ತೇನೆ.

ಉತ್ತಿರಮರೂರ್, 2011 **– ಬಾಮಾ**

# ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
# ಅಧ್ಯಕ್ಷರು ಮತ್ತು ಸದಸ್ಯರು


೧) **ಡಾ. ಕೆ.ವಿ. ನಾರಾಯಣ**
ಅಧ್ಯಕ್ಷರು
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ನಂ. ೩೨೯, 'ಗೌರಿ'
ಡಿಯೋ ಮಾರ್ವೆಲ್ ಲೇಔಟ್
ಅನಂತಪುರ ರಸ್ತೆ, ಯಲಹಂಕ
ಬೆಂಗಳೂರು–೫೬೦೦೬೪
narayana48@gmail.com

೨) **ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ**
೧೧೫, ೧೩ನೇ ಕ್ರಾಸ್,
ವಿಲ್ಸನ್ ಗಾರ್ಡನ್
ಬೆಂಗಳೂರು–೫೬೦೦೨೭
olnswamy@gmail.com

೩) **ಡಾ. ನಟರಾಜ್ ಹುಳಿಯಾರ್**
೫೭೩/ಎ, ೧ನೇ ಕ್ರಾಸ್,
೨ನೇ ಮುಖ್ಯರಸ್ತೆ,
ಬಿ.ಇ.ಎಂ.ಎಲ್. ಲೇಔಟ್,
ಬೆಂಗಳೂರು–೫೬೦ ೦೯೮
natarajhuliyar@gmail.com

೪) **ಶ್ರೀ ಅಬ್ಬಾಸ್ ಮೇಲಿನಮನಿ**
ಆಸ್ಮಾ ಪ್ರಕಾಶನ
ದುರ್ಗಾ ವಿಹಾರದ ಹತ್ತಿರ
ಬಾಗಲಕೋಟೆ–೫೮೭೧೦೧
ashifmelinamani@gmail.com

೫) **ಡಾ. ಎಚ್.ಎಸ್. ಅನುಪಮಾ**
ಜಲಜಾ ಜನರಲ್ ಮತ್ತು ಹೆರಿಗೆ ಆಸ್ಪತ್ರೆ
ಕವಲಕ್ಕಿ
ಕವಲಕ್ಕಿ ಅಂಚೆ–೫೮೧೩೬೧
ಹೊನ್ನಾವರ ತಾ॥
ಉತ್ತರ ಕನ್ನಡ ಜಿಲ್ಲೆ–೫೮೧೩೬೧
anukrishna93@gmail.com

೬) **ಪ್ರೊ. ಶಿವರಾಮಯ್ಯ**
೧೭೨, ಹೊಂಗೆ ಸಾಲು ಮನೆ
ನಾಗರಭಾವಿ ಗ್ರಾಮ, ಐಸೆಕ್ ರೋಡ್
ಬೆಂಗಳೂರು–೫೬೦೦೭೨

೭) **ಡಾ. ವಿನಯಾ ಒಕ್ಕುಂದ**
'ನೆಮ್ಮದಿ', ೧೨೪,
ಸಿ.ಐ.ಟಿ.ಡಿ. ಕಾಲೋನಿ
ಶ್ರೀನಗರ, ಧಾರವಾಡ–೦೩
nabhapavimd@gmail.com

೮) **ಡಾ. ಆರ್. ಪೂರ್ಣಿಮಾ**
# ೧೫೪೧, ಸಿರಿಗಂಧ
೧೬ನೇ ಮುಖ್ಯರಸ್ತೆ,
ಎಂ.ಸಿ. ಬಡಾವಣೆ, ವಿಜಯನಗರ
ಬೆಂಗಳೂರು–೫೬೦೦೪೦
poornima54@gmail.com

**೯) ಡಾ. ಎಸ್. ಸಿರಾಜ್ ಅಹಮದ್**
ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸಹ್ಯಾದ್ರಿ ಕಲಾ ಕಾಲೇಜು,
ವಿದ್ಯಾನಗರ,
ಶಿವಮೊಗ್ಗ ಜಿಲ್ಲೆ–೫೭೭೨೦೩
sirajahmeds@gmail.com

**೧೦) ಡಾ. ಪ್ರೀತಿ ಶ್ರೀಮಂಧರ್ ಕುಮಾರ್**
# ೪೯೨, ಚಿತ್ರಭಾನು,
ಎ ಮತ್ತು ಬಿ ಬ್ಲಾಕ್
ಕುವೆಂಪು ನಗರ, ಮೈಸೂರು–೨೩
priti.shubhachandra@gmail.com

**೧೧) ಶ್ರೀ. ಕೆ.ಎ. ದಯಾನಂದ, ಕ.ಆ.ಸೇ.**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ
ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨
kanbhavblr@gmail.com

**೧೨) ಶ್ರೀ ಕೆ. ಹೈದರ್ ಆಲಿಖಾನ್**
ಲೆಕ್ಕಾಧಿಕಾರಿಗಳು
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ,
ಬೆಂಗಳೂರು ವಿಶ್ವವಿದ್ಯಾಲಯ
ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು–೫೬೦೦೫೬


**೧೩) ಶ್ರೀ ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ,
ಬೆಂಗಳೂರು ವಿಶ್ವವಿದ್ಯಾಲಯ
ಆವರಣದ ಹಿಂಭಾಗ, ಮಲ್ಲತ್ತಹಳ್ಳಿ,
ಬೆಂಗಳೂರು–೫೬೦೦೫೬
ದೂ: ೦೮೦–೨೩೧೮೩೩೧೧/೧೨
kbbpbengaluru@gmail.com

# ಪರಿವಿಡಿ

| | |
|---|---|
| ಅಧ್ಯಕ್ಷರ ಮಾತು | v |
| ಬಾಮಾ ಮತ್ತು ಕರುಕ್ಕು: ಅಸ್ಪೃಶ್ಯತೆಯಿಂದ ದಲಿತ ಪ್ರಜ್ಞೆಯೆಡೆಗೆ | vii |
| ಮೊದಲ ಮುದ್ರಣದ ಮಾತು (ತಮಿಳು ಆವೃತ್ತಿ) | xix |
| ಹತ್ತು ವರ್ಷ ನಂತರ | xxi |
| ಒಂದು | 1 |
| ಎರಡು | 12 |
| ಮೂರು | 25 |
| ನಾಲ್ಕು | 40 |
| ಐದು | 47 |
| ಆರು | 60 |
| ಏಳು | 68 |
| ಎಂಟು | 93 |
| ಒಂಭತ್ತು | 100 |
| ಕೊನೆಗೂ | 104 |
| ಇಂಗ್ಲಿಷ್ ಅನುವಾದಕ್ಕೆ ಮುನ್ನ | 117 |

# ತಾಳೆ ಗರಿ

ತಮಿಳು ಕ್ರೈಸ್ತ ದಲಿತ ಆತ್ಮಕಥನ



# ಒಂದು

ನಂ ಹಳ್ಳಿ ಬಾಳಾ ಚಂದ. ಅಭಿವೃದ್ಧಿ ಮಣ್ಣುಮಸಿ ಅಂತ ಎಂಥದೂ ಕಾಣದೇ ಇದ್ದರೂ ನನಗೀ ಜಾಗ ಅದ್ರ ಚಂದಕ್ಕೇ ಭಾಳ ಇಷ್ಟ. ಅದು ಸಣ್ಣ ಹಳ್ಳಿಯಾದ್ರೂ ಬೇರೆಬೇರೆ ಕುಲದ ಜನ ಅಲ್ಲಿ ವಾಸ ಮಾಡ್ತಾರೆ. ಜಾತಿ ಕುಲಗಳ ಬಗ್ಗೆ ಹೇಳೋಕಿಂತ ಮೊದ್ಲು ನಂಗೆ ನಮ್ಮೂರಿನ ಬಗ್ಗನೇ ಹೇಳಬೇಕಾಗಿದೆ.

ಹಳ್ಳಿ ಸುತ್ತಲು ಎಲ್ಲ ಕಡೆ ಬೆಟ್ಟ ಹಬ್ಬಿದೆ. ನೋಡಕ್ಕೇ ಒಂದ್ ಚಂದ ಅವು. ಜನ ಹೇಳ್ತಾರೆ ಅವು ಪಶ್ಚಿಮ ಘಟ್ಟಗಳು ಅಂತ. ಕೆಲವಕ್ಕೆ ಹೆಸರೂ ಇದಾವೆ. ಒಂದರ ಹೆಸರು ಮರಕ್ಕ ಪೂಚ್ಚಿ ಮಲೈ. ಈ ಬೆಟ್ಟನ ಸರೀ ನೋಡಿದ್ರೆ ಭತ್ತದ ರಾಶಿ ಥರ ಕಾಣ್ಸುತ್ತೆ. ಅದರ ತುತ್ತತುದೀಗೆ ಒಂದು ಭತ್ತ ಅಳೆಯೋ ಮರಕ್ಕಾಲ್ (ಸೇರು) ಅನ್ನ ಕೌಚಿ ಹಾಕಿದಂಗೆ ಕಾಣೋ ಮೂತಿ ಇದೆ. ಅದಕ್ಕೇ ಆ ಬೆಟ್ಟಕ್ಕೆ ಆ ಹೆಸ್ರು.

ಮತ್ತೊಂದು ಬೆಟ್ಟದ ತುದೀಗೆ ಪೆರುಮಾಳ್ ಸ್ವಾಮಿ ದೇವಸ್ಥಾನ ಇದೆ. ಆ ದೇವಸ್ಥಾನದಲ್ಲಿ ನಾಯ್ಕರ್ ಜನ ಪೂಜೆ ಮಾಡ್ತಾರೆ. ಆ ಬೆಟ್ಟದ ಹೆಸ್ರು ಪೆರುಮಾರ. ಅದ್ರ ಸುತ್ತ ಇರೋ ನಾಯ್ಕರ್ ಹೊಲಗಳ್ನ ಪೆರುಮಾರ್ ಹೊಲ ಅಂತ ಕರೀತಾರೆ.

ಸುತ್ತಮುತ್ತ ಇನ್ನೂ ಕೆಲವು ಬೆಟ್ಟಬಂಡೆ ಇದಾವೆ – ನಾರೀ ಪಾರಾ, ವಣ್ಣಾಮ್ ಪಾರಾ, ವಟ್ಟಲ ವಿಥ್ಥಾಮ್ ಪಾರಾ. ಮೊದಲೆಲ್ಲ ನಾರೀ ಪಾರಾ ಬೆಟ್ಟದಲ್ಲಿ ದಟ್ಟ ಕಾಡಿತ್ತಂತೆ. ತೋಳ ಇದ್ವಂತೆ. ಅದ್ರ ತೋಳಗಳು ಬಂದು ಹೊಲಾನ ಸುತ್ತುವರ್ದು ಸಂಪೂರ್ಣ ಬೆಳೆ ನಾಶ ಮಾಡ್ತಿದ್ವಂತೆ. ಆದ್ರೆ ಇತ್ತೀಚ್ಗೆ ಹಂಗಾಗಿಲ್ಲ. ವಣ್ಣಾಮ್ ಪಾರಾದ ಮೇಲೊಂದು ಕೊಳ ಇದೇಂತ ಅಂತಾರೆ. ಮೊದಲೆಲ್ಲ ವಣ್ಣಾಮ್ ಹುಡುಗ್ರು ಅಲ್ಲಿ ಹೋಗಿ ಬಟ್ಟೆ ತೊಳದು ಬಿಳಿ ಮಾಡಿ ಇಸ್ತ್ರಿ ಮಾಡಿ ತರ್ತಿದ್ರಂತೆ. ಈಗ ಬಟ್ಟೆ ತೊಳೆಯೋಕೆ ಅವರು ಅಷ್ಟು ದೂರ

ಹೋಗ್ಬೇಕಾಗಿಲ್ಲ. ವಟ್ಟಲ ವಿಠ್ಠಾಮ್ ಪಾರಾನ ಹಂಗ್ಯಾಕೆ ಕರೀತಾರೆ ಅಂದ್ರೆ ಅದರ ಬುಡದಲ್ಲೆ ವಟ್ಟಲ ವಿಠ್ಠಾಮ್ ನಾಯ್ಕರ್ ಅವ್ರ ಹೊಲ ಇದೆ. ಈ ಬೆಟ್ಟಗಳು ನಮ್ಮ ಹಳ್ಳೀನ ಸುತ್ತುವರೆದಿವೆ. ಒಂಥರಾ ಗಡಿ ಇದ್ದಂಗೆ.

ನಂ ಜನ ಹೆಚ್ಚಾಗಿ ರೈತಾಪಿ ಕೂಲಿಗಳು. ಅವ್ರಿಗೆ ಹೊಲದ್ ಕೆಲ್ಸ ಇಲ್ಲಾಂದ್ರೆ ಸಾಕು, ಅಡವಿಗೋಗದು, ಕಟ್ಟಿಗೆ ಕಡ್ದು ಮಾರಿ ಜೀವ್ನ ಸಾಗಿಸದು ಮಾಡ್ತಾ ಇದ್ರು. ಇಂತಾ ಕಷ್ಟ ಮೇಲ್ಜಾತಿಯೋರ್ಗೆ ಯಾವಾಗ್ಲೂ ಇರಲ್ಲ. ಅವ್ರಿಗೆ ಗಡಿ, ಬೇಲಿ ಇರೋ ಹೊಲಗಳಿರ್ತಾವೆ. ಬಾವಿ ತೋಡ್ಸಿ ಪಂಪ್ ಸೆಟ್ ಹಾಕ್ಸಿರ್ತಾರೆ. ಇಡೀ ವರ್ಷ ತಂತಮ್ಮ ಹೊಲದಲ್ಲಿ ಕೆಲಸ ಮಾಡಬೋದು. ಸರೀ ತಿಂದು ಬೆಚ್ಚಗೆ ಮನೇಲಿರ್ಬೋದು. ಅದಿರ್ಲಿ, ಬಾವಿ ಅಲ್ದೆ ನಮ್ಮೂರ್ನಲ್ಲಿ ಅದೆಷ್ಟೋ ಕೊಳನೂ ಇದಾವೆ.

ಮಳೆಗಾಲ್ದಲ್ಲಿ ನೋಡ್ಬೇಕು, ನಮ್ಮೂರು ಇನ್ನಷ್ಟು ಚಂದಾಗಿ ಹಸರಾಗಿ ನಳನಳ ಅಂತಿರುತ್ತೆ. ಬೆಟ್ಟದ ಮೇಲಿಂದ ಕುಣೀತಾ ಹಾರ್ತಾ ಮಳೆನೀರು ಹರ್ದು ಬಂದು ಹಳ್ಳೀ ಸುತ್ತೂ ಹರಿಯೋ ಹಳ್ಳನ ತುಂಬ್ಸಿಬಿಡುತ್ತೆ. ಆ ಹೊತ್ತಲ್ಲಿ ಹರಿಯೋ ನೀರಲ್ಲಿ ಎಷ್ಟ್ ಬೇಕಾದ್ರೂ ಮೀನು ಹಿಡೀಬೋದು. ಕೊನೆಗೆ ಎಲ್ಲ ನೀರೂ ಕೊಳ, ಕೆರೆಗೋಗಿ ತುಂಬ್ಕಳತ್ತೆ. ಬೇಸಾಯಕ್ಕೆ ಬಾಳ ಸಹಾಯ ಆಗಿರೋ ಒಂದಂಶ ಇದೇ.

ಪಶ್ಚಿಮದ ಕಡೆ ನೋಡಿದ್ರೆ ಕೆರೆ ಮತ್ತು ಕೊಳ ಸಾಲಾಗಿ ಪಕ್ಕಪಕ್ಕ ಇರೋದು ಕಾಣುತ್ತೆ – ತಾಮರ ಕುಳಂ (ತಾವರೆ ಕೊಳ), ವಾತ್ರಾಂಗ್ ಕುಳಂ (ಹತ್ತಿರವೇ ವಾಸಿಸುವ ಪೋತರಾಜರ ಅಥವಾ ಪೂಜಾರಿಗಳಿಂದ ಆ ಹೆಸರು ಬಂದಿದೆ), ಜೀವನೇರಿ ಕುಳಂ (ಜೀವಕೆರೆ), ಐಯ್ಯರ್ ಕುಳಂ (ಐಯ್ಯರ್‌ಗಳ ಕೊಳ), ಪೆರಿಯ ಕುಳಂ (ದೊಡ್ಡ ಕೊಳ), ಪೋದರ್ ಕುಳಂ (ಬಹುಶಃ ಪೋತಗಾರರ ಕೊಳ), ವಿಳರಾಂಗ ಕುಳಂ ಇತ್ಯಾದಿ. ನಮ್ಮ ಬೀದಿ ಹತ್ರ ಇರೋ ಕೊಳಕ್ಕೆ ಎರಡು ಹೆಸರು – ನಮ್ಮ ಕೇರಿ ಹತ್ರ ಇರೋ ಭಾಗ ಅನುಪಾಂಗ ಕುಳಂ. ಮತ್ತೊಂದು ಕಡೆಯ ದಂಡೆನ ವಾತ್ರಾಂಗ್ ಕುಳಂ ಅಂತಾರೆ. ಅದರ ದಂಡೆ ಮೇಲೆ ವಾತ್ರಾಂಗ್ ಹಳ್ಳಿ ಇದೆ.

ಜೋರುಮಳೆ ಬಂದು ದೊಡ್ಡ ಕೆರೆ ತುಂಬಿದಾಗ ನಮ್ಮ ಕೊಳಾನೂ ತುಂಬಿ ತುಳುಕ್ತಾ ಇರುತ್ತೆ. ಅಂಥ ಹೊತ್ತಲ್ಲಿ ಅದ್ರ ದಂಡೆ ಮೇಲೆ ನಡೆಯದೇ ಒಂದು ಆನಂದ. ಕೋಡಿ ಬಿದ್ದಾಗ ತೂಬೆತ್ತಿ ಪುಟ್‌ಪುಟ್ಟ ಕಾಲುವೇಲೂ ನೀರು ಹರಿಯೋ ಹಂಗೆ ಮಾಡ್ತಿದ್ರು. ನೀರು ಎಲ್ಲೆಲ್ಲಿ ಹರಿಯುತ್ತೋ ಅಲ್ಲೆಲ್ಲ ಅಡ್ಡಕ್ಕೆ ಮಡಕೆ ಇಟ್ರೆ ಸಾಕು, ಮೀನು ಎಷ್ಟು ಬೇಕಾದ್ರೂ ಹಿಡಿಬೋದು. ಬೀದಿಬೀದಿನೂ ಮೀನಿಂದ ತುಂಬಿ ತುಳುಕ್ತಾ ಇತ್ತು ಅವಾಗ. ಎಲ್ಲ ತರದ ಮೀನೂ ಮಾರ್ತಾ ಇದ್ರು ಜನ – ಸಿಲಬಿ ಕೆಂಡ್ಯೆ, ಪಾರುಕು ಕೆಂಡ್ಯೆ, ಕೆಳುಟಿ, ಅಯಿರೈ, ಕೊರವಿ, ವಿರಾಳ್ ಹೀಗೇ. ನಂ ಬೀದೀಲಿ ಮಾತ್ರ ಸಿಲಬಿ ಕೆಂಡ್ಯೆ ಮತ್ತು

ಪಾಂಬು ಕೆಂಡೈ ತಗಂಡು ಮೀನ್ಸಾರು ಮಾಡ್ತಿದ್ದಿದ್ದು. ಯಾಕಂದ್ರೆ ಅದು ಎಲ್ಲಕ್ಕಿಂತ ಸೋವಿ. ಮೇಲ್ಜಾತಿಯೋರು ದುಬಾರಿ ಅಯಿರೈ ಕೆಂಡೈ, ಕೆಳುಟಿ, ವಿರಾಳ್ ಮೀನನ್ನ ತಕೊಂಡು ಹುರಿತಿದ್ರು. ಆದ್ರೆ ತಿನ್ನಕ್ಕೆ ಅಷ್ಟು ಖರ್ಚು ಮಾಡೋ ಯೋಗ್ತೆ ನಮಗಿರ್ಲಿಲ್ಲ.

ಕೊಳ ತುಂಬಿದಾಗ ಜನ ಅದ್ರ ದಂಡೇಲಿರೋ ಆಲದ ಮರದ ಕೆಳಗೆ ಕೂತು ತಮ್ಮ ಕಾಲದ ಹಳೇ ದಿನಗಳ ಬಗ್ಗೆ ಮಾತಾಡಿಕೊಳ್ತಾ ಇದ್ರು. ಗಾಳಿ ತಂಪಾಗಿ, ಜೋರಾಗಿ ಸಮುದ್ರದ ಮೇಲಿಂದ ಬರ್ತಿದೆಯೇನೋ ಅನ್ನೋ ಹಂಗೆ ಬೀಸ್ತಾ ಇತ್ತು. ಏನೋ ಒಂಥರಾ ನೆಮ್ಮದಿ. ಕೂತ್ರೆ ನಿಮ್ಮ ಕಣ್ಣು ಎಳೆದೆಳೆದು ತೂಕಡಿಕೆ ಬರೋ ಹಂಗೆ, ನೀರ ಮೇಲೆ ಸುಂಯ್ಯ್ ಅಂತ ಗಾಳಿ ಬೀಸ್ತಾ, ಸಣ್ಣಸಣ್ಣ ಅಲೆನ ಹುಟ್ಟುಸ್ತಾ, ಆಹಾ ಎಂಥ ಚಂದ.. ದಡದಲ್ಲಿ ನಿಂತ್ರೆ ಮೀನು ಪುಳಕ್ ಪುಳಕ್ ಅಂತ ಹಾರದು ಕಾಣ್ತಿತ್ತು. ಕೆಲವಂತೂ ಮೇಲೆ ಗಾಳೀಲಿ ಹಾರಿ ಫಳಫಳ ಹೊಳೆಯೋವು. ನೀರುಹಾವು ನೀರಿನ ಮೇಲೆ ಮಂಡೆ ಎತ್ತಿ ಇಣುಕೋವು. ಸಣ್ಣ ಹುಡುಗ್ರು ಅವಕ್ಕೆ ಕಲ್ಲು ಹೊಡೆಯೋಕೆ ಅಂತ ಕೈಯೆತ್ತೋದರಲ್ಲಿ ಪಡಕ್! ಒಳ್ಳೇ ಮಿಂಚಿನಂಗೆ ನೀರಲ್ಲಿ ಮಾಯ ಆಗ್ಬಿಡೋವು. ಆ ಕೊಳದ ಮೀನಿನ ಗುತ್ತಿಗೆ ಹಿಡಿದೋನು ಗಂಜಿನೋ ಮತ್ತೊಂದೋ ಉಂಡುಬರುವ ಅಂತ ಆಚೆ ಹೋದ್ದೇ ದೊಡ್ಡೋರು ಸಣ್ಣೋರು ಅಂತಿಲ್ದೆ ಎಲ್ರೂ ತಂತಮ್ಮ ಗಾಳ ಇಳಿಬಿಟ್ಕಂಡು ಕೂತುಬಿಡೋರು. ಅಲ್ಲೇ ಅತ್ತಕಡೆ ಇರೋ ತಿಪ್ಪೆಯಿಂದ ಎರೆಹುಳಾ ತಂದು ಗಾಳಕ್ಕೆ ಸಿಗಿಸಿದರೆ ಮೀನು ಭಾಳ ಸುಲಭವಾಗಿ ಸಿಕ್ತಿತ್ತು. ಜನ ಅಲ್ಲೇ ದಂಡೆ ಮೇಲೆ ಹುಲ್ಲು ಒಟ್ಟುಮಾಡಿ ಬೆಂಕಿಹಾಕಿ ಆಗ ಹಿಡಿದ ಮೀನನ್ನ ಅಲ್ಲೇ ಸುಟ್ಟು ತಿಂದುಬಿಡೋರು. ಅದಂತೂ ಎಷ್ಟ್ ರುಚಿ ಅಂತ! ಅಕಸ್ಮಾತ್ ಆ ಕೆರೆ ಕಾಯೋನು ನಮ್ಮನ್ನ ನೋಡಿದ್ನಾ, ಮುಗಿತು ಕತೆ. ನಾವು ಹಿಡಿದ ಮೀನು ಕಿತ್ಕಳದಷ್ಟೇ ಅಲ್ಲ, ಗಾಳನೂ ಜಜ್ಜಿ ಹಾಕ್ತಿದ್ದ. ಸಣ್‌ಸಣ್ಣ ಮಕ್ಕಳು ಕಪ್ಪೆಮರಿಗಳಂಗೆ ಸುಡುಬಿಸಿಲಿನ ನಡುಮಧ್ಯಾಣ ಕೊಳದಲ್ಲಿ ಮುಳುಗಿ ಈಜಾಡ್ತಾ ಇರೋವು. ಅವ್ರ ಪಕ್ಕನೇ ಎಮ್ಮೆಗಳೂ ಬಾಳಾ ಆನಂದ್ವಾಗಿ ಬಿದ್ಕಂಡಿರೋವು. ಕೆಲ ಹುಡುಗ್ರು ಧೈರ್ಯ ಮಾಡಿ ಎಮ್ಮೆ ಮೈಮೇಲೆ ಕೂತು ಕೊಳದ ಮಧ್ಯದ ತಂಕ ಹೋಗಿ ವಾಪಸ್ ಬರೋರು. ಇವತ್ ನಿನ್ನೆ ಹುಟ್ಟಿದೋರು ಸೈತ ಬಟ್ಟೆ ಬಿಚ್ಚಿ ನೀರಿಗೆ ಹಾರಿ ಈಜೋರು. ಕೊಳದ ನಡುಮಧ್ಯ ಆಲದಮರಗಳು ಸುತ್ತುವರೆದ ಒಂದು ಜಲದ ಗುಂಡಿ ಇತ್ತು. ಇಡೀ ಕೊಳ ಒಣಗೋದ್ರೂ ಆ ನಡುಗಲ ಗುಂಡೀಲಿ ನೀರು ಒಣಗ್ತಿರ್ಲಿಲ್ಲ. ಒಣಗಿದಾಗ ಅದರ ಅಂಗಳದಲ್ಲಿ ಒಂದಲ್ಲ ಒಂದನ್ನ ಬೆಳೆಯೋರು. ಹೆಚ್ಚಾಗಿ ಸೌತೆಕಾಯಿ, ಅಥವಾ ಜೋಳ, ಸಜ್ಜೆ. ಬಿಸಿಲಿದ್ದ ದಿನ ಕೊಳದ ಅಂಗಳಕ್ಕೆ ಹೋಗಿ ಒಂದು ಎಳೇ ಸೌತೆ ಮಿಡಿ ಕಿತ್ಕಂಡು ನಾಲ್ಗೆ ಮೇಲಿಟ್ರೆ ಹೆಂಗಿರುತ್ತೆ ಗೊತ್ತಾ? ಏನೇ ಆದ್ರೂ ಕದ್ದು ತಿನ್ನೋ ವಸ್ತು ರುಚೀನೇ ಬೇರೆ.

ಬೆಳಗಾತ ಮತ್ತು ಸಂಜೆ ಮೂಡು, ಪಡು ಬದಿಯ ಆಕಾಶ ನೋಡಕ್ಕೇ ಒಂದು ಚಂದ. ಬೆಳಗಾಮುಂಚೆ ನಾವು ಚಂಬು ತಗಂಡು ತಿಪ್ಪೆ ಕಡೆ ಹೋಗ್ತ ಮೂಡು ದಿಕ್ಕಲ್ಲಿ ಕೆಂ..ಪನೆ ಸೂರ್ಯ ಹುಟ್ಟಿ ಮೇಲೆದ್ದು ಬರ್ತಾ ಇರ್ತಿದ್ದ. ಗಿಡಮರದ ಮಧ್ಯ ಫಳಫಳ ಅಂತ ಹೊಳೀತಾ ಬೆಳಕು ಚೆಲ್ಲಾಡ್ತಾ ಮೇಲೇರ್ತಾ ಇದ್ದ. ಹಂಗೇ ಸಂಜೆ ಆಯ್ತೂಂದ್ರೆ ನೋಡನೋಡ್ತಿದ್ದಂಗೆ ಬೆಟ್ಟಗಳ ಮಧ್ಯ ಬಿದ್ದೋಗ್ಬಿಡ್ತಾ ಇದ್ದ. ಸುತ್ತಮುತ್ತ ಇರೋ ಹೊಲಾ ಎಲ್ಲ ಹಚ್ಚಗೆ ಹಳದಿ ಆಗಿ ಕಾಣಿಸ್ತಿದ್ವು. ತಣ್ಣನ ಗಾಳಿ ಪಶ್ಚಿಮದ ಕಡೆಯಿಂದ ಬೀಸೋದು. ಬೆಳಕಲ್ಲಿ ಹೊಳಿತಾ, ಗಾಳಿಗೆ ತೂಗ್ತಾ ಇರೋ ಬೆಳೇನ ನೋಡೋದೇ ಒಂದು ಖುಶಿ. ಪಶ್ಚಿಮ ದಿಕ್ಕಿನ ಬೆಳಕನ್ನ ನೋಡೋದು ಅಂದ್ರೆ ದೈವಜ್ಯೋತಿ ನೋಡಿದಂಗೆ ಅನಿಸ್ತಿತ್ತು. ಅದೇ ಹೊತ್ಗೆ ಕಾಗೆ, ಬೆಳ್ಳಕ್ಕಿ, ಬೇರ್ಬೇರೆ ಹಕ್ಕಿಗಳೆಲ್ಲ ರೆಕ್ಕೆ ಬೀಸ್ತಾ ತಂತಮ್ಮ ಗೂಡಿಗೆ ವಾಪಸ್ ಬರ್ತಿದ್ವು.

ನಂ ಹಳ್ಳಿ ಪಶ್ಚಿಮಕ್ಕೆ ಒಂದ್ ಜಾಗ ಇದೆ, ಅದ್ನ ನಾವು ಮಂಟಪದ ದಿನ್ನೆ ಅಂತ ಕರೀತೀವಿ. ಅಲ್ಲಿ ಕಂಬದ ಮೇಲೆ ನಿಂತಿರೋ, ಈಗ ಬಿದ್ದೋಗುವಂತೆ ಇರೋ ಒಂದು ಮಂಟಪ ಇದೆ. ಮುನಿಯಾಂಡಿ (ಮುನಿಸಾಮಿ) ಗುಡಿನೂ ಅಲ್ಲೇ ಇದೆ. ಅದು ನಂ ಕೇರಿಯಿಂದ ಸಾಕಷ್ಟು ದೂರ ಇದೆ. ದೂರ ಇದ್ರೂ ನಂ ಕೇರಿ ಜನ ಅಷ್ಟು ದೂರದ ಹೊಲಕ್ಕೋ, ಮನೆಗೋ ನಡ್ಕಂಡೇ ಕೆಲಸಕ್ಕೆ ಹೋಗೋರು, ಹೊಟ್ಟೆಹೊರೆಯಕ್ಕೆ ಏನಾರ ದುಡಿಮೆ ಮಾಡಬೇಕಲ್ಲ. ಆ ಗುಡೀಲಿ ವರ್ಷಕೊಂದ್ಸಲ ಜಾತ್ರೆ ಆಗದು. ಆಗ ಹರಕೆ ದುಡ್ಡು ಎಲ್ಲ ಕೊಡೋರು. ನಮ್ಮ ಕೇರೀಲೇ ಮೇಲೆ ಇರೋ ಮನೆಗಳಲ್ಲಿ ಒಬ್ಬ ಇದ್ದ, ಬೊಂದನ್ ಅಂತ. ಅವ್ನು ಒಂದ್ಸಲ ಆ ಗುಡಿ ದುಡ್ಡು ಕದ್ದು, ಅಲ್ಲಿನ ಗಂಟೆ ಬಿಚ್ಕಂಡು ಹೋಗ್ಬಿಟ್ಟ. ಅವ್ನು ಎಂತೋನಂದ್ರೆ ಏನ್ ಬೇಕಾರೂ ಕದಿತಿದ್ದ. ಆದ್ರೂ ಜನರಿಗೆ ಆಶ್ಚರ್ಯ, ಯಾಕಪ್ಪಾ ಅಂದ್ರೆ ಅವನು ಮುನಿಯಾಂಡಿ ಗುಡೀನೂ ಕಳ್ಳತನ ಮಾಡ್ದೆ ಬಿಡಲಿಲ್ಲಲ ಅಂತ.

ಜನ ಹೇಳ್ತಾರೆ, ಅವತ್ತಿಂದ ಸಂಜೆಯಾಗ್ತಿದ್ದ ಹಾಗೇ ಮುನಿಯಾಂಡಿ ದೈವ ನಮ್ಮ ಕೇರಿಯ ತುದೀಯಿಂದ ಕೈಲಿ ಉರಿಯೋ ಕೊಳ್ಳಿ ಹಿಡ್ದು ಸಿಟ್ಟು ಏರ್ಕಂಡು ಬರ್ತಿತ್ತಂತೆ. ಕೂಗ್ತಾ ಬರ್ತಿತ್ತಂತೆ, 'ನನ್ ಹರಕೆ ದುಡ್ಡು ನಂಗೆ ವಾಪಸ್ ಕೊಟ್ಬಿಡಿ. ನನ್ ಗಂಟೆ ತಂದು ವಾಪಸ್ ಕಟ್ಟಿ. ಇಲ್ಲಾಂದ್ರೆ ಈ ಇಡೀ ಕೇರಿ ಸುಟ್ಟು ಬೂದಿ ಆಗಂಗೆ ಮಾಡ್ಬಿಡ್ತೀನಿ, ಹುಶಾರ್!!' ಆ ದೈವ ಹೀಗೆ ಹೇಳ್ತಾ ಬರ್ತಿದ್ದಿದ್ದನ್ನು ಎಷ್ಟೋ ಜನ ನೋಡಿದಾರೆ. ಆದರೆ ಯಾರ್ಗೂ ಅದು ಯಾಕಂಗೆ ಹೇಳುತ್ತೆ ಅಂತ ಅರ್ಥ ಆಗ್ಲಿಲ್ಲ. ಕೊನೆಗೆ ಎಲ್ಲ ಒಬ್ರಿಗೊಬ್ರು ಕೇಳ್ಕಂಡು ಓಡಾಡಿದಾಗ ಬೊಂದನ್ ಅಪ್ಪ ಸವುರಿನಾಯಗಂ ತಾತಾ ನಡೆದಿದ್ದೇನು ಅಂತ ಹೇಳ್ದ. ಕೊನೆಗೆ ಎಲ್ಲ ಸೇರಿ ಬೊಂದನ್ ಕದ್ದ ಹಣನ ವಾಪಸ್ ಹಾಕ್ಬೇಕು, ಗಂಟೆ ವಾಪಸ್

ಕಟ್ಬೇಕು ಅಂತ ಒತ್ತಾಯ ಮಾಡಿದ್ರು. ಕೊನೆಗೆ ಅವನೊಪ್ಪಿ ಮಂಟಪಕ್ಕೆ ಹೋಗಿ ಅದಷ್ಟನ್ನು ಕೊಟ್ಬಂದ. ಆಮೇಲೇ ಆ ಭಯಾನಕ ದೈವ ಮುನಿಯಾಂಡಿ ಬರುವುದು ನಿಂತದ್ದು.

ಈ ಬೊಂದನ್ ಮಾಮಾ ಬಗ್ಗೆ ಹೀಗೇ ಏನೇನೋ ಕತೆ. ಅವುನ್ ಕೆಲ್ಸಾನೇ ಹೊಲಮನೆ ಇರೋರ ತೋಟ, ತೋಪಿಂದ ನಿಂಬೆಹಣ್ಣು, ತೆಂಗಿನಕಾಯಿ, ಮಾವಿನಣ್ಣು ಕದ್ದು ಮಾರೋದು. ಒಂದ್ಸಲ ನಡುರಾತ್ರಿ ಕದಿಯಕ್ಕೆ ಅಂತ ತೆಂಗಿನಮರ ಹತ್ತಿದ. ತೆಂಗಿನಮರದ ಬುಡದಿಂದ ನಿಧಾ.. .. ನ ಮರ ಏರ್ತಾ ಇದ್ದ. ನೋಡ್ತಾನೆ ಮೇಲಿಂದ ಎಂಥದೋ ಒಂದು ರೂಪ ಮರ ಇಳಿತಾ ಇದೆ! ಅದ್ಯಾರಿರಬೋದು ಅಂತ ಅವ್ನಿಗೆ ಒಂಚಣ ಗಲಿಬಿಲಿ ಆಗೋಯ್ತು. ಆದ್ರೆ ಅದೊಂದು ದೆವ್ವ ಅಂತ ಕೂಡ್ಲೆ ಅವಂಗೆ ಗೊತ್ತಾಯ್ತು. ಅದು ಅವ್ನಿಗೆ ಭಾಳ ತೊಂದ್ರೆ ಕೊಡ್ತಿತ್ತು. ಕೂಡ್ಲೇ ಸರಸರ ಮರ ಇಳ್ದಿದ್ದೇ ಬೇರೆ ತೋಟಕ್ಕೆ ಓಡಿಬಿಟ್ನಂತೆ.

ಇನ್ನೊಂದ್ಸಲ ಹಿಂಗೇ ಸಾಕಷ್ಟು ಮಾವಿನಣ್ಣು ಕದ್ದು ಚೀಲ ತುಂಬ ತುಂಬ್ಕಂಡು ಬರ್ತಾ ಇದ್ನಂತೆ. ಆಗ ಎದುರಿಗೆ ಆ ತೋಟ ಕಾಯೋನು ಬರದು ಕಾಣ್ತು. ಅವ್ನಿಗೆ ಬೇರೆ ದಾರಿನೇ ಇಲ್ಲ. ಪಕ್ಕದಲ್ಲೇ ಒಂದು ಬಾವಿ ಇತ್ತಂತೆ, ಮಾವಿನಣ್ಣಿನ ಚೀಲ ಸಮೇತ ಆ ಬಾವಿಗೆ ಹಾರ್ಬಿಟ್ಟ. ಅದೊಂತರ ಸೂರ್ಯಂಗೆ ಹೆದರಿ ಕಾದೆಣ್ಣೆ ಬಾಣಲಿಗೆ ಬಿದ್ದ ಕತೆ ಆಯ್ತು. ಬಾವೀಲಿ ಒಂದು ನಾಗರಹಾವು ಹೆಡೆಬಿಚ್ಚಿ ಅವ್ನ ಕಡೆ ನೋಡಿ ಕಚ್ಚಕ್ಕೆ ಬಂತಂತೆ. ಬುಸ್ ಅಂತ ತಲೆ ಎಗರಿಸಿ ನಿಂತು. ಕಗ್ಗತ್ತಲು ಬೇರೆ. ಹೆಂಗೆಂಗೋ ಮಾಡಿ ಆ ಹಾವು ಕಚ್ಚದಂಗೆ ನೋಡ್ಕಂಡು ಆ ಕಾವಲುಗಾರ ಅತ್ತಕಡೆ ಹೋಗಿದ್ದೇ ಬಾವಿಯಿಂದ ಮೇಲೆದ್ದು ಬಂದಿದ್ನಂತೆ.

ಇನ್ನೊಂದ್ಸಲ ಹೀಗೇ ಏನೋ ಮಾಡಿ ಬರ್ತಾ ಇರೋವಾಗ ಒಂದು ಹಾವು ಅವ್ನ ಹೆಬ್ಬೆರಳಿಗೇ ಕಚ್ಚಿಬಿಡ್ತಂತೆ. ಅದು ಅಂತಿಂಥ ಹಾವಲ್ಲ, ಕಾಳಿಂಗ ಸರ್ಪ. ಬೇರೆ ಯಾರಾದ್ರೂ ಆಗಿದ್ರೆ ಹೆದರೇ ಆಗಿಂದಾಗ ಸತ್ತೋಗ್ತಿದ್ರು. ಈ ಮನ್ಶ ಕೂಡ್ಲೆ ಒಂದು ಬೆಂಕಿಕಡ್ಡಿ ಗೀರಿ ಕಚ್ಚಿದ ಜಾಗ ಸುಟ್ಟು ತನ್ನ ಕತ್ತಿಯಿಂದ ಬೆರಳು ಕಡಿದಾಕಿ ತನ್ನ ಕಳ್ತನದ ಕೆಲ್ಸ ಮುಗ್ಸಿ ಬಂದನಂತೆ. ಅಷ್ಟು ಜೋರು.

ಒಂದ್ಸಲ ಅಂತೂ ಒಂದು ಅಯ್ಯಂಗಾಚಿ (ಕೊಳ್ಳಿದೆವ್ವ) ಹಿಂಡನ್ನ ಹಾದು ಪಾರಾಗಿ ಬಂದನಂತೆ ಅವ್ನು! ಕೊಳ್ಳಿದೆವ್ವದ್ ಹಿಂಡು ಅಂದ್ರೆ ಸಣ್ಣ, ದೊಡ್ಡ, ಮರಿಕಿರಿ ದೆವ್ವಗಳೆಲ್ಲ ಕೈಲಿ ಕೊಳ್ಳಿ ಹಿಡಿದು ಓಡಾಡೋವು ಅಂತ ಅರ್ಥ. ಜನ ಅವುಗಳ್ನ ನೋಡಿದ್ದು ತುಂಬ ಕಮ್ಮಿ. ಯಾರಾದ್ರೂ ನೋಡ್ಬಿಟ್ರಾ, ಆಯ್ತು ಅವ್ರು ಪಾರಾಗೋದು ಕಷ್ಟ ಅಂತನೇ ಲೆಕ್ಕ. ಆ ಗುಂಪನ್ನ ದೂರ್ದಿಂದ ನೋಡಿದ್ರೇ ಸಾಕು ಹೆದರಿ ಹೇತ್ಕಂಡು, ಜ್ವರ ಬಂದು, ಸತ್ತೇ ಹೋಗ್ತಿದ್ರು. ಆದ್ರೆ ಬೊಂದನ್ ಮಾತ್ರ ಏನೂ ಆಗ್ದೇ ಪಾರಾಗ್ಬಿಟ್ಟ.

ನಮ್ಮೂರಿನ ಹೆಚ್ಚುಕಡಿಮೆ ಎಲ್ಲ ಹೊಲಾನೂ ನಾಯ್ಕರ್ ಜಾತಿ ಜನರದ್ದೇ. ಒಬ್ಬೊಬ್ಬ ನಾಯ್ಕರ್ ಹೊಲಾನೂ ಎಷ್ಟೋ ಮೈಲಿ ತಂಕ ಹರಡ್ಕಂಡಿತ್ತು. ಪ್ರತಿಯೊಂದಕ್ಕೂ ಅದರದ್ದೇ ಹೆಸರಿತ್ತು. ಒಂದು ಹೊಲ ಇತ್ತು, ಒಲಿವಿಳಿಕಾಡು ಅಂತ, ಅದರರ್ಥ ಎಚ್ಚರಿಸೋ ಶಬ್ದದ ಹೊಲ ಅಂತ. ಅದೊಂದು ಎಂಥಾ ಬಯಲು ಅಂದ್ರೆ ನೀವು ಗಟ್ಟಿಯಾಗಿ ಏನು ಹೇಳಿದ್ರೂ ಅದು ಪ್ರತಿಧ್ವನಿಯಾಗ್ತಿತ್ತು. ಬೇರೆಬೇರೆ ಹೊಲಗಳೂ ಇದ್ವು, ಮಂದವಕ್ ಕಾಡು, ಒತ್ತಾಲು ಕಾಡು, ಜಡಯಾಳು ಕಾಡು ಮತ್ತು ತಾವರೆ ಕೊಳದ ಹೊಲ. ನಮ್ಮ ಜನಕ್ಕೆ ಪ್ರತಿ ಹೊಲವೂ, ಅದ್ರ ಹೆಸರೂ ಗೊತ್ತಿತ್ತು. ಇಂಥಲ್ಲಿ ಅಂದ್ರೆ ಸಾಕು, ಅಲ್ಲಿಗೆ ಕೆಲಸಕ್ ಹಾಜರಾಗ್ತಿದ್ರು. ಒತ್ತಾಲು ಹೊಲಕ್ಕೆ ಆ ಹೆಸರ್‍ಯಾಕೆ ಅಂದ್ರೆ ಅಲ್ಲಿ ಒಂದೇ ಒಂದು ಆಲದ ಮರ ಅದರ ನಡುಮಧ್ಯ ಇತ್ತು. ಜಡಯಾಳು ಕಾಡಲ್ಲಿ ಎಷ್ಟು ಆಲದ ಮರ ಇದ್ವು ಅಂದ್ರೆ ಅವುಗಳ ಇಳಿಬಿದ್ದ ಬೇರು ಹೆಣೆದ ಜಡೆ ತರ ಕಾಣಿಸ್ತಿದ್ವು.

ಊರು ಒಳ ಹೊಕ್ಕಬೇಕು ಅನ್ನೋದ್ರಲ್ಲಿ ಪುಟ್ಟ ಬಸ್ಟಾಂಡ್ ಇದೆ. ಇದು ಕೊನೇ ಸ್ಟಾಪು. ಅಲ್ಲಿಂದ ಮುಂದೆ ಬಸ್ಸು ಎಲ್ಲೂ ಹೋಗಲ್ಲ. ಅದು ಹೆಂಗಂದ್ರೆ ನಮ್ಮಿಡೀ ಲೋಕಾನೇ ಅಲ್ಲಿಗೆ ಕೊನೆಯಾದಂಗೆ. ಅದರಾಚೆ ಒಂದ್ ಹಳ್ಳ ಇತ್ತು. ಜೋರ್ ಮಳೆ ಬಿದ್ದಾಗ ಅದ್ರ ತುಂಬ ನೀರು. ಮಳೆ ಇಲ್ದಿದ್ದಾಗ ಗಬ್ಬು ನಾರೋ ಹೇಲುತಿಪ್ಪೆ. ಎಡಕ್ಕೆ ಹತ್ತಿಪ್ಪತ್ತು ಮನೆಗಳಿರೋ ಒಂದು ಕೇರಿ. ಅದಕ್ಕೆ ವಡಪಟ್ಟಿ ಅಂತ ಹೆಸರು. ಅಲ್ಲಿರೋರೆಲ್ಲ ನಾಡಾರ್ ಜನ. ಅವ್ರು ಜೀವನೋಪಾಯಕ್ಕೆ ತಾಳೆಮರ ಹತ್ತೋರು. ಬಲಕ್ಕೆ ಕೊರವರ ಮನೆ. ಅವರು ಬೀದಿ ಕಸ ತೆಗೆಯೋರು. ಆಮೇಲೆ ಚರ್ಮದ ಕೆಲಸ ಮಾಡೋ ಚಕ್ಕಿಲಿಯಾರರ ಮನೆ. ಸ್ವಲ್ಪ ದೂರ್ದಲ್ಲಿ ಕೂಸವರ ಮನೆ. ಅವರು ಮಣ್ಣಿನ ಮಡಕೆ ಮಾಡೋರು. ಅದರ ಪಕ್ಕ ಪಲ್ಲ ಜನರ ಮನೆ. ಅದರ ಪಕ್ಕ ಇರೋದೇ ನಾವಿರೋ ಜಾಗ, ಪರಯ್ಯಾ ಕೇರಿ. ಊರಿನ ಪೂರ್ವ ದಿಕ್ಕಿಗೆ ಸ್ಮಶಾನದ ಜಾಗ. ನಾವು ಅದ್ರ ಪಕ್ಕನೇ ಇರೋರು.

ನಮ್ ಬೀದಿ ಜೊತೆಗೇ ಒಂದಾದ್‌ಮೇಲೆ ಒಂದರಂಗೆ ಇನ್ನೂ ಎಷ್ಟೋ ಬೀದಿಗಳಿದಾವೆ – ತೇವಾರ್, ಚೆಟ್ಟಿಯಾರ್, ಆಸಾರಿ, ನಾಡಾರ್ ಹೀಗೇ. ಅವೆಲ್ಲ ಕಳೆದ್ಮೇಲೆ ನಾಯ್ಕರ್ ಬೀದಿ. ಉದಯಾರ್‌ಗಳದ್ದೂ ಒಂದು ಸಣ್ಣ ಕೇರಿಯಿತ್ತು. ನನಗಂತೂ ಮೇಲ್ಜಾತಿ ಕೆಳಜಾತಿ ಅಂತ ಕೇರಿ ಹಿಂಗ್ ಬೇರೆಬೇರೆ ಆಗಿದ್ದು ಯಾಕೆ ಹೆಂಗೆ ಅಂತ ಇವತ್ತೂ ಅರ್ಥ ಆಗಿಲ್ಲ. ಅವ್ರು ಅವ್ರ ಕೇರಿಲೇ ಇರೋರು, ನಾವು ನಂ ಕೇರೀಲೆ ಇರ್ಬೇಕಿತ್ತು. ಅಲ್ಲೇನಾರ ಕೆಲಸ ಇದ್ರೆ ಮಾತ್ರ ಆ ಕಡೆ ಹೋಗ್ತಿದ್ವಿ ಅಷ್ಟೆ. ಆದ್ರೆ ಅವ್ರು ಎಂದೂ ಯಾವತ್ತೂ ನಂ ಕಡೆ ಬರ್ತಿರ್ಲಿಲ್ಲ. ಪೋಸ್ಟ್ ಆಫೀಸು, ಪಂಚಾಯ್ತಿ ಬೋರ್ಡು, ಹಾಲಿನ ಡೈರಿ, ಅಂಗಡಿ, ಚರ್ಚು, ಸ್ಕೂಲು ಎಲ್ಲನೂ ಅಲ್ಲೇ ಅವ್ರ ಬೀದೀಲೇ ಇದ್ದಿದ್ದು. ಹಂಗಿದ್ದಾಗ ಅವ್ರು

ನಂ ಬೀದಿಗೆ ಯಾಕೆ ಬಂದಾರು? ಅಷ್ಟೇ ಅಲ್ಲ, ನಾಯ್ಕರ್ ಬೀದೀಲಿ ಒಂದು ದೊಡ್ಡ ಶಾಲೆ ಇತ್ತು, ಅದು ಮೇಲ್ಜಾತಿ ಮಕ್ಳಿಗೆ ಮಾತ್ರ.

ನಂ ಪೈಕಿ ಜನರಿದ್ದ ಐದು ಬೀದಿ ಇದ್ವು. ಕೆಳಗಿನ ಕೇರಿ, ಮೇಲಿನ ಕೇರಿ, ನಡುಗಲ ಕೇರಿ, ಪೂರ್ವದ ಕೇರಿ ಮತ್ತು ಒಳತರಪಟ್ಟಿ ಬೀದಿ. ಸಾಲುಸಾಲು ಮನೆ. ಮುಕ್ಕಾಲುಪಾಲು ಮನೆ ತಾಳೆಮಡ್ಲಿನ ಗುಡ್ಲು. ಅದ್ರ ನಡುವೆ ಎಲ್ಲೋ ಒಂದೊಂದು ಹಂಚು ಹೊದ್ಸಿದ ಮನೆ. ಅಲ್ಲೊಂದು ಇಲ್ಲೊಂದು ಸುಣ್ಣ ಹಚ್ಚಿದ ಸಿಮೆಂಟ್ ಕಾಂಕ್ರೀಟು ಮನೆ. ಅವು ಹೆಚ್ಚಾಗಿ ಸರ್ಕಾರಿ ನೌಕ್ರಿಯಲ್ಲಿರೋರ ಮನೆನೇ ಆಗಿದ್ವು.

ಬೀದೀಲಿ ಹುಡುಗೀರು ಹುಡುಗ್ರು ಅಂತಿಲ್ದೆ ಮಕ್ಳು ಚಡ್ಡಿ, ಚಪ್ಲಿಗಿಪ್ಲಿ ಏನೂ ಇಲ್ದೆ ಅಲೆದಾಡ್ತಾ ಇರೋವು. ಎಲ್ಲೋ ಕೆಲವು ಚಡ್ಡಿ ಹಾಕ್ಕಂಡ್ರು ಸೈತ ಆ ಚಡ್ಡಿ ಯಾವ್ದನ್ನು ಮುಚ್ಬೇಕೋ ಅದ್ನ ಮುಚ್ಚದೇ ಉದುರೋಗ್ತಾ ಇರ್ತಿತ್ತು. ಅವ್ರ ದೇಹ ಇದ್ದಷ್ಟು ದೊಡ್ಡಕ್ಕೆ ಅವ್ರ ಕುಂಡೆ ಇರ್ತಿರಲಿಲ್ಲ. ಅದಕ್ಕೇ ಅವ್ರ ಚಡ್ಡಿ ನಿಲ್ತನೇ ಇರ್ಲಿಲ್ಲ. ಹನ್ನೆರ್ಡು ಗಂಟೆ ಹೊಡೀತು ಅಂದಿದ್ದೇ ತಡ, ಎಲ್ಲ ತಂತಮ್ಮ ತಟ್ಟೆ ಕೈಲಿ ಹಿಡ್ದು ಸಣ್ಣಮುಟ್ಟ ಚಳ್ಳೆಪಿಳ್ಳೆಗಳಿಂದ ಹಿಡ್ದು ಎಲ್ರೂ ಪುಕ್ಕಟ್ ಊಟಕ್ಕೆ ಓಡ್ತಿದ್ರು. ಚರ್ಚಿನ ಗಂಟೆ ಹನ್ನೆರ್ಡು ಹೊಡೆದ್ರೆ ಅದೇ ಸೂಚನೆ.

ಸಂಜೆ ಐದು ಗಂಟೆ ಆದ್ಮೇಲೆ ಇಡೀ ಬೀದೀನೇ ಗದ್ಲ, ಗಲಾಟೇಲಿ ತುಂಬೋಗ್ತಿತ್ತು. ಗಣಸ್ರು, ಹೆಂಗಸ್ರು ಎಲ್ರೂ ಕೂಗ್ತಾ, ಕಿರುಚ್ತಾ ಹೊರಗಿರ್ತಿದ್ರು. ಅಲ್ಲಿದ್ದ ಒಂದೇಒಂದ್ ಬೋರ್‌ವೆಲ್‌ನಲ್ಲಿ ನೀರಿಗೇಂತ ಕಾಯ್ತಾ ನಿಂತೋರದ್ದೇ ಗಲಾಟೆ ಜಾಸ್ತಿ. ಎಷ್ಟ್ ಜೋರು ಬೇಕಾದ್ರೂ ಹೊಡೀರಿ, ಒಂದು ಕೊಡ ನೀರು ತುಂಬಕ್ಕೆ ಎಷ್ಟು ಹೊತ್ತು ತಗತಿತ್ತು ಗೊತ್ತಾ? ಆದ್ರೆ ಅಲ್ಲೀ ಜಗಳ ಕೇಳಿದ್ರೆ ನೀವು ನಗದೇ ಇರಕ್ಕಾಗಲ್ಲ ಹಂಗಿರ್ತಿತ್ತು.

ಒಂದ್ಸಲ ನಡುಗಲ ಬೀದಿ ಜ್ಞಾನಪ್ಪು ತನ್ನ ಬಕೆಟನ್ನು ಕ್ಯೂ ಕಾಯಲಿಕ್ ಹಚ್ಚಿ ತಾ ಏನೋ ಕೆಲ್ಸ ಇದೇಂತ ಹೋದ್ಲು. ಅವ್ಳು ವಾಪಸ್ ಬರದ್ರಲ್ಲಿ ಯಾರೋ ಅವ್ಳ ಬಕೆಟ್ ತೆಗೆದು ಸಾಲಿನ ಕೊನೇಲಿ ಇಟ್ಟುಬಿಟ್ಟಿದ್ರು. ಬಂದೋಳೆ ಗಟ್ಟಿ ನಿಂತು ಕಾಲು ಜಪ್ಪಿ ‘ನನ್ನ ಬೈಕೆಟ್ ದೂರ ಇಟ್ಟಿದಿರ, ಅದೆಷ್ಟ್ ಧೈರ್ಯ ನಿಮ್ಗೆ’ ಅಂತ ಕೂಗಾಡಕ್ ಶುರು ಮಾಡಿದ್ಲು. ಅವಳು ಬಕೆಟ್ ಅನ್ನಕ್ಕೆ ಬೈಕೆಟ್ ಅಂತಿದ್ಲು ಅಂತ ಎಲ್ಲ ನಗಾಡಲಿಕ್ಕೆ ಶುರುಮಾಡಿದ್ರು. ಅವಳಿಗೆ ಸಿಟ್ಟು ಬಂದು ಎಲ್ರನ್ನೂ ಬೈಯಕ್ಕೆ ಶುರು ಮಾಡಿದ್ಲು, ನೀವು ಚಪ್ಲಿ ಹೊಲಿಯಕ್ಕೆ ಲಾಯಕ್ ನನ್ಮಕ್ಳಾ ಅಂತ.

ನಂ ಬೀದೀಲಿ ಕಿವಿ ಮೇಲೆ ಬೀಳ್ತಿದ್ದ ಹೆಸ್ರುಗಳನ್ನ ಕೇಳಿದ್ರೆ ನೀವು ಆಶ್ಚರ್ಯಪಡ್ತಿರ. ಜನರಿಗೆ ಚರ್ಚಲ್ಲಿ ಹುಟ್ಟಿದಾಗ ಇಟ್ಟ ಹೆಸ್ರು ಒಂದಾದ್ರೆ ಅವ್ರನ್ನ ಕರೆಯೋ ಹೆಸರೆ ಒಂದು. ಒಬ್ಬನ ಹೆಸರು ಮುಂಕೋವಂ, ಅಂದ್ರೆ ಮುಂಗೋಪಿ ಅಂತ. ಮತ್ತೊಬ್ಬ ಹೆಂಗಸನ್ನ

ಮಿಡ್ಡೆ ಮಸಾಲಾ ಅಂತ ಕರಿತಿದ್ರು. ಒಂದಿನ ಮಧ್ಯಾಣ ಅವ್ಳು ಮಸಾಲಾ ಅರದು ಸಾರು ಮಾಡಿದ್ಲು. ನಂ ಕೇರೀಲಿ ಸಾಧಾರಣ ಮಧ್ಯಾಣ ಯಾರೂ ಸಾರು ಮಾಡಲ್ಲ, ಸಂಜೆ ಮಾತ್ರ ಅನ್ನ ಬೇಸಿ ಸಾರು ಮಾಡೋರು. ಉಳಿದಂಗೆ ಯಾವತ್ತೂ ಕೂಳ್ ಅಂದ್ರೆ ನವಣಕ್ಕಿ ಗಂಜಿ. ಮಧ್ಯಾಣ ಮಸಾಲೆ ಅರೆಯದು ಅಂದ್ರೆ ನಮ್ಗೆ ದೊಡ್ಡ ಆಶ್ಚರ್ಯ. ಒಬ್ಬ ಕಪ್ಪುಕೆ, ದಪ್ಪಕೆ ಇದ್ದ ಹುಡುಗನ್ನ ಮುರುಗನ್ ಹಳ್ಳದ ಹಂದಿ ಅಂತಿದ್ವಿ. ಮುರುಗನ್ ಹಳ್ಳದ ಹತ್ರ ಹಂದಿಗಳು ಚೆನಾಗಿ ತಿಂದು ಸೊಕ್ಕಿ ಬೆಳಿದಿರ್ತಿದ್ವಂತೆ, ಅದಕ್ಕೆ. ಒಬ್ಬಳು ಹೆಂಗ್ಸು ಮೂತ್ರ ಮಾಡಿ ಬಂದ್ರೆ ಕಾಲ ಮೇಲೆಲ್ಲ ಸೋರುಸ್ಕಂಡು ಬಂದಿರೋಳು. ಅವ್ಳನ್ನ ಕಾರಿಂಜಾ ಅಂತ ಕರಿತಿದ್ವಿ. ಅಂದ್ರೆ ಸೋರೋಳು ಅಂತ. ಒಂದ್ ಪುಟ್ಟ ಹುಡುಗಿ ಈಜು ಕಲಿಯಕ್ಕೆ ಅಂತ ಕೆರೆಗೆ ಹೋಗಿ ಈಜೋ ಬದ್ಲು ತೇಲದು ಕಲ್ತು ಬಂದ್ಲು. ಅವ್ಳನ್ನ ಮಾದೆಂಡ ಅಂದ್ರೆ ತೇಲುವವಳು ಅಂತ ಕರಿತಿದ್ವಿ. ಮತ್ತೊಬ್ಳು ಅವ್ಳು ಸಣ್ಣೋಳಿದ್ದಾಗ ಕಾಗೆ ಅಟ್ಟುಸ್ಕಂಡ್ ಹೋಗ್ತಿದ್ಲಂತೆ, ಅವ್ಳನ್ನ ಕಾಕ್ಕಾ ಅಂದ್ರೆ ಕಾಗೆ ಅಂತ ಕರಿತಿದ್ವಿ. ಹಿಂಗೇ ನಾನು ಹೇಳ್ತಾ ಹೋಗ್ಬೋದು. ಕೊಣ್ಣವಾಚಿ (ನಕ್ಷತ್ರದಾಕಿ), ಕೆಪ್ಪ, ಮೂಕ, ಹುಚ್ಚ, ಸೆವೆಯಿಯಾ (ಕ್ಲೇವಿಯರ್), ಕಪ್ಪಿರುವೆ, ಮನ್ನಾಚಿ (ಅಪ್ಪಚ್ಚಿ ಮೂಗಿನವ), ಉಳಮುಖಿ (ಸೋರೊ ಮೂಗಿನೋನು), ಹಸ್ರು ಮೂಗು, ಸೂಜಿ ಕುಂಡೆ. ಹೀಗೇ ಏನೇನೋ ತರದ ಹೆಸ್ರುಗಳು.

ಹುಡುಗ್ರಿಗೆ ಇಡಕ್ಕೂ ಹೆಸ್ರು ಕಡಿಮೆ ಇರ್ಲಿಲ್ಲ. ಅಂತೋವು ತುಂಬ ಇದ್ವು. ಒಬ್ಬ ಹುಡುಗನ್ನ ದಾಲ್ ಬಂ ಅಂತ ಕರಿತಿದ್ರು. ಯಾಕಂತ ಯಾರಿಗೂ ಗೊತ್ತಿರ್ಲಿಲ್ಲ. ಮತ್ತೊಬ್ಬನ್ನ ಕಾಲ್ಕುಂದಾನ್ ಅಂತಿದ್ರು. ಅಂದ್ರೆ ಕರಿಬಂಡೆ ಅಂತ. ಮತ್ತೊಬ್ಬ ಸಣ್ಣೋನಿದ್ದಾಗ ಎಂಡ್ರಯ್ಯ ಅನ್ನಕ್ಕೆ ಎಂದ್ರಯ್ಯ ಅಂತಿದ್ದ, ಅದಕ್ಕೆ ಅವ್ನಿಗೆ ಎಂದ್ರಯ್ಯ ಅನ್ನೋ ಹೆಸರು. ಮತ್ತೊಬ್ಬ ಕೆಪ್ಪ ಕೂಳು ಅನ್ನಕ್ಕೆ ತೆಪ್ಪ ತೂಳು ಅಂತಿದ್ದ, ಅವನ್ನ ತೆಪ್ಪ ತೂಳು ಅಂತನೇ ಕರೀತಿದ್ವಿ, ದೊಡ್ಡೋನಾದ ಮೇಲೂ. ಹಿಂಗೇ ಕರಿಮೂತಿ, ಡೊಳ್ಳುಹೊಟ್ಟೆ, ಕಾವುಣ್ಣ, ಬೊಂದನ್, ಐದ್ವಿ (ಈಡಿಯಟ್), ನಾಡೋಡಿ (ತಿರುಕಾಲುತಿಪ್ಪ), ಈಡಿಯಟ್, ಅರೆಗಿವಿ..

ಕಾಮನ್ ಅನ್ನೋನು ನಮ್ಮನೆ ಹತ್ರನೇ ಇದ್ದ. ಅವ್ನ ನಿಜವಾದ ಹೆಸ್ರು ಮಾರಿಯಾ ಲೂರ್ದ್. ಅವನಿಗೆ ಆ ಹೆಸ್ರು ಯಾರು ಕೊಟ್ರು? ಯಾಕೆ ಕೊಟ್ರು ಅಂತ ಯಾರ್ಗೂ ಗೊತ್ತಿಲ್ಲ. ಆದ್ರೂ ಅವ್ನು ಸಣ್ಣ ಹುಡುಗಾಗಿದ್ದಾಗಿಂದ ಹಿಂಗೇ ಕರಿತಿದ್ದಿದ್ದು. ಈಗವನಿಗೆ ಇಪ್ಪತ್ತ ಇಪ್ಪತ್ತೈದ್ ವರ್ಷ ಆಗಿರ್ಬೋದು. ಒಂದ್ ವರ್ಷದ ಕೆಳಗಿನವರ್ಗು ಅವ್ನು ಏನೂ ಕೆಲಸ ಮಾಡ್ತಿರಲಿಲ್ಲ, ಸುಮ್ನೆ ಬೀದೀಲಿ ಅಲಿತಾ ಇರ್ತಿದ್ದ. ಯಾರಾದ್ರೂ ಅಂಗಡಿಗೆ ಹೋಗ್ಬಾ ಅಂದ್ರೆ ಹೋಗ್ಬರತಿದ್ದ. ಅಥವಾ ಪೋಸ್ಟಾಫೀಸಿಗೆ ಹೋಗಿ ಪತ್ರ ಪೋಸ್ಟ್ ಮಾಡಿ ಬಾ ಅಂದ್ರೆ ಸಾಕು, ಹೋಗ್ಬರ್ತಿದ್ದ. ಇಷ್ಟು ಮಾಡಿದ್ದಕ್ಕೆ ಜನ ಅವನಿಗೆ ಐದೋ

ಹತ್ತೋ ಪೈಸ ಕೊಡೋರು. ಅದ್ರಿಂದ ಏನಾರ ತಗಂಡು, ಗಂಜಿ ತಿಂದು, ನಮ್ಮನೆಗಳ ಜಗಲಿ ಮೇಲೆ ಮಲಗ್ಬಿಡೋನು. ಸಂಜೆ ಹಾಲು ಕರೆಯೋ ಹೊತ್ತಾಗೋವರ್ಗೂ ಏಳ್ತಿರ್ಲಿಲ್ಲ. ಕೆಲವ್ರು ಅವ್ನು ಬಾಳ ಸರಳ ಮನ್ಸ ಅಂತಿದ್ರು, ಮತ್ತೆ ಕೆಲವರು ಹುಚ್ಚ ಅಂತಿದ್ರು. ಎಂಥದೋ, ಅಂತೂ ಒಂಥರಾ ವಿಚಿತ್ರ ದುಃಖದ ಹುಡುಗ ಅವ್ನು.

ಒಂದ್ಸಲ ಎಲ್ಲ ಬದಲಾಗೋಯ್ತು. ಅವ್ನು ಇದ್ದಕ್ಕಿದ್ದಂತೆ ನಿಯತ್ತಾಗಿ ದಿನಾ ಕೆಲ್ಸಕ್ಕೆ ಹೋಗಕ್ಕೆ ಶುರು ಮಾಡ್ದ. ಅವನು ಏನು ಮಾಡ್ತಿದಾನೆ ಅಂತ ಯಾರ್ಗೂ ಗೊತ್ತಿರ್ಲಿಲ್ಲ ಅಷ್ಟೆ. ಅವ್ನಿಗೆ ಕೆಲ್ಸದ ಸಲುವಾಗಿ ಒಂದು ಖಾಕಿ ಯೂನಿಫಾರಂ ಕೊಟ್ಟಿದ್ರು. ಭಾನುವಾರ ದಿನ ಅದೇ ಯೂನಿಫಾರಮ್ನಲ್ಲಿ ಚರ್ಚ್ ಒಳಹೊಕ್ಕು ಬರ್ತಿದ್ದ. ಅವನ ಖಾಕಿ ಪ್ಯಾಂಟು, ಶರ್ಟು ನೋಡಿ ನಗದೇ ಇದ್ದೋರೇ ಇಲ್ಲ ನಮ್ಮೂರಲ್ಲಿ. ಸ್ವಲ್ಪ ದಿನ ಆದ್ಮೇಲೆ ಅದೆಲ್ಲ ಮಾಯ ಆಗಿ ಅವನು ಮತ್ತೆ ಹಳೇ ತರನೇ ಇರಕ್ ಸುರು ಮಾಡ್ದ. ನಮ್ಮೋರ ಮನೆ ಜಗಲಿ ಮೇಲೆ ಕಾವು ಕೊಡಕ್ ಕೂತ ಕೋಳಿ ಹಂಗೆ ಸುಮ್ನೆ ಕೂತು ಕಟ್ಟೆ ಬಿಸಿ ಮಾಡ್ತಿದ್ದ. ಆಮೇಲೆ ಇದ್ದಕ್ಕಿದ್ದಂಗೆ ಎಲ್ಲರಂಗೆ ಕೂಲಿ ಮಾಡಕ್ ಸುರು ಮಾಡ್ದ. ಈಗವನು ದಿನಾ ಕೆಲಸಕ್ಕೆ ಹೋಗ್ತಾನೆ. ಅಷ್ಟೆ ಅಲ್ಲ, ಕಳೆದ ಐದಾರ್ ತಿಂಗ್ಳಿಂದ ಅವನಿಗೆ ಮದುವೆ ಆಗ್ಬೇಕು ಅಂತ ಬೇರೆ ಅನಿಸಿದೆ. ಅವ್ನನ್ನ ಯಾರಾದ್ರೂ ನಿಂಗ್ಯಾರು ಹೆಣ್ಣು ಕೊಡ್ತಾರೋ ಅಂತ ಕೇಳಿದ್ರೆ ಅವ್ನು ವಾಪಸ್, 'ಕೊಡದೆ? ನಂಗೇನಾಗಿದೆ? ಯಾಕ್ ನಂಗೆ ತಂ ಮಗಳನ್ನ ಕೊಡಲ್ಲ?' ಅಂತ ಪ್ರಶ್ನೆ ಕೇಳ್ತಾನೆ. ಜನ ಹೇಳೋ ಪ್ರಕಾರ ನಂ ಹಳ್ಳಿಯ ಯಾರೂ ಅವ್ನಿಗೆ ಮಗಳನ್ನಾಗಲೀ, ದುಡ್ಡನ್ನಾಗಲೀ ಕೊಡಲ್ಲ. ಇನ್ನೆಲ್ಲಾದ್ರು ಹುಡುಗಿ ಹುಡುಕಿ ಅದು ಸಿಕ್ರೆ ಅವ್ನ ಪುಣ್ಯ.

ಕೆಲವ್ರ ಪ್ರಕಾರ ಅಕಸ್ಮಾತ್ ಅವ ಮದುವೆ ಆದ್ರೂ ಒಳ್ಳೇ ಅಡಿಗೆ ಕೆಲ್ಸ ಮಾಡ್ಬಹುದು. ಯಾವ ಹೆಂಗ್ಸು ಮಾಡೋವಷ್ಟೆ ಚೆನ್ನಾಗಿ ಅಕ್ಕಿಗಂಜಿ ಬೇಸ್ತಾನೆ. ಆದ್ರೆ ಬಹುಶ ಅನ್ನ ಮಾಡಿ, ಎಲ್ಲ ತಾನೇ ತಿಂದು ಹೆಂಡ್ತಿಗೆ ಬರಿ ಪಾತ್ರೆ ಮಾತ್ರ ಉಳಿಸಾನು. ಅವನಮ್ಮನೇ ಹಂಗಂತಾಳೆ! ಅವನೊಬ್ನೇ ಅರ್ಧ ಸೇರಕ್ಕಿ ಅನ್ನ ಉಣತಾನಂತೆ!

ಇರ್ಲಿ. ಹಿಂಗೇ ತರಾವರಿ ಜನ ನಮ್ಮೂರಲ್ಲಿ ಇದಾರೆ. ಅವರು ಒಬ್ಬೊಬ್ರ ಬಗ್ಗೆನೂ ನೀವು ಬೇಕಾರೆ ಒಂದೊಂದು ಬುಕ್ ಬರೀಬೋದು.

* * *

ನಮ್ಮೂರ ಉತ್ತರಕ್ಕೆ ಒಂದು ಹಳ್ಳಿ ಇದೆ. ಅದನ್ನ ಅರ್ಚನಾವರಂ ಅಂತ ಕರೀತಾರೆ. ಅಲ್ಲೇ ನಲ್ಲ ತಂಗಳ್ ಗುಡಿ ಇರೋದು. ನಮ್ಮ ಕಡೆ ನಲ್ಲತಂಗಳ್ ಭಾಳ ಫೇಮಸ್ಸು. ಯಾರಾದ್ರೂ ಮುದುಕ್ರ ಹತ್ರ ಅವಳ ಬಗ್ಗೆ ಕೇಳ್ಬಿಟ್ರೆ ಸಾಕು, ವಿವರವಾಗಿ ದೊಡ್ಡ ಕತೆನೇ ಹೇಳಕ್ಕೆ ಶುರು ಮಾಡ್ತಾರೆ.

ಆ ಹಳ್ಳೀಲಿ ಒಂದಾನೊಂದು ಕಾಲ್ದಲ್ಲಿ ಅಣ್ಣತಂಗಿ ಇದ್ರು. ಅಮ್ಮ, ಅಪ್ಪ ಇಬ್ರೂ ಸತ್ತೋಗಿದ್ದಕ್ಕೆ ಅಣ್ಣನೇ ತನ್ನ ಪುಟ್ಟ ತಂಗಿನ ಸಾಕ್ತಾ ಇದ್ದ. ಅವ್ಳು ದೊಡ್ಡೋಳಾದ್ಲು. ಮಾನಾಮರುತ್ಯೆ ಅತವಾ ಅಲ್ಲೇ ಹತ್ರದ ಒಂದೂರ್ಗೆ ಅವಳನ್ನ ಮದುವೆ ಮಾಡ್ಕೊಟ್ರು. ಅವಳ ಮದುವೆ ಆದ್ಮೇಲೆ ಅಣ್ಣ ತಾನೂ ಮದ್ವೆ ಆದ. ಆದ್ರೆ ಅವ್ನ ಹೆಂಡತಿ ಅಳಂಗಾರಿ ಒಂಥರಾ ಏನೂ ಉಪಯೋಗಿಲ್ಲದ ಕೆಟ್ಟ ಹೆಂಗ್ಸು. ಯಾರೂ ತನ್ನ ಗಂಡನ ಹತ್ರ ಸುಳೀಬಾರ್ದು ಹಂಗೆ ನೋಡ್ಕತಿದ್ಲು.

ಒಂದಷ್ಟು ಕಾಲ ಸರೀತು. ಮಾನಾಮರುತ್ಯೆಗೆ ಭೀಕರ ಬರಗಾಲ ಬಂತು. ಅಲ್ಲೇ ನಮ್ಮ ನಲ್ಲ ತಂಗಳ್ ಕೂಡ ಇದ್ಲು. ಅಷ್ಟೊತ್ತಿಗೆ ಅವಳಿಗೆ ಏಳು ಮಕ್ಳು. ಪ್ರತಿ ಸಲ ಮಗು ಹುಟ್ಟಿದಾಗ್ಲೂ ಅಣ್ಣಂಗೆ ಪತ್ರ ಬರೆದಿದ್ಲು. ಆದ್ರೆ ಆ ದುಷ್ಟ ಅತ್ಗೆ ಪ್ರತಿ ಕಾಗ್ದನೂ ಹರ್ದು ಚೂರುಚೂರು ಮಾಡಿ ಬೆಂಕಿಗೆ ಬಿಸಾಡಿದ್ಲು. ಅದಕೇ ಅಣ್ಣಂಗೆ ತಂಗಿಯ ಯಾವ ಸುದ್ದೀನೂ ಗೊತ್ತೇ ಆಗ್ಲಿಲ್ಲ. ಅವ್ನಿಗೋ ಯಾವಾಗ್ಲೂ ಅವಳದೇ ಚಿಂತೆ. ಅವಳಿಗೇನಾಯ್ತು, ಹೆಂಗಿದಾಳೆ ಅಂತನೇ ವಿಚಾರ ಮಾಡ್ತಿದ್ದ. ಮಾನಾಮರುತ್ಯೆ ಬರಗಾಲ್ದಲ್ಲಿ ತತ್ತರಿಸ್ತಾ ಇದ್ದಾಗ ನಲ್ಲತಂಗಳ್ ಅಣ್ಣನಿಗೆ ಮತ್ತೊಂದು ಪತ್ರ ಬರೆದಿದ್ಲು. ಅದ್ರಲ್ಲಿ ತನ್ನ ಗೋಳಿನ ಪರಿಸ್ಥಿತಿ ಬಗ್ಗೆ ಹೇಳಿದ್ಲು. ಅದ್ಯಾವ ದೇವ್ರು ಕಣ್ಣುಬಿಟ್ನೋ ಪತ್ರ ಬರೋ ಹೊತ್ಗೆ ಅಣ್ಣ ಮನೆಲೇ ಇದ್ದ. ಅವ್ನು ಪತ್ರ ಓದಿ ಹೆಣ್ಮಕ್ಕಳ ತರ ಬಿಕ್ಕಿಬಿಕ್ಕಿ ಅತ್ತ. ತನ್ನ ಹೆಣ್ತಿ ಹತ್ರ ಮೊದಲಿದ್ದ ಪತ್ರ ಎಲ್ಲೋದ್ವು ಅಂತ ಕೇಳ್ದಾಗ ಏನೇನೋ ಸಬೂಬು ಹೇಳಿ, ಸುಳ್ಳು ಹೇಳಿ ಅಂತೂ ಅವನಿಂದ ಪಾರಾದ್ಲು. ತಕ್ಷಣ ಅಣ್ಣ ಮಾನಾಮರುತ್ಯೆಗೆ ಹೊರಟ. ತನ್ನ ತಂಗಿನೂ, ಏಳು ಜನ ಮಕ್ಳನ್ನೂ ಕರಕಂಡು ವಾಪಾಸ್ ಹೊರಟ. ಹಳ್ಳಿ ಹತ್ರ ಬಂದಕೂಡ್ಲೆ ತಂಗಿಗೆ ಮನೆ ಹತ್ರ ಹೋಗಕ್ಕೆ ಹೇಳಿ ತಾನು ಕೆಲವು ಸಾಮಾನು ತಗಳಕ್ಕೆ ಅಂತ ಅಂಗ್ಡಿ ಬೀದಿಗೆ ಹೋದ. ಮೂಳಿ ಅಳಂಗಾರಿ ನೋಡ್ತಾಳೆ, ನಲ್ಲತಂಗಳ್ ಏಳು ಮಕ್ಳ ಜೊತೆ ಬರ್ತಿದಾಳೆ. ಕೂಡ್ಲೆ ಅವ್ಳು ತನ ಮನೆ ಬಾಗ್ಲು, ಕಿಟಕಿ ಎಲ್ಲ ಮುಚ್ಚೇಬಿಟ್ಳು. ತಂಗಿ ಬಂದು ಎಷ್ಟು ಬಾಗ್ಲು ತಟ್ಟಿದ್ರೂ ತೆಗಿತಾನೇ ಇಲ್ಲ. ಕೊನೆಗೆ ತಂಗಿ ಬಾಗ್ಲ ಎದುರು ನಿಂತು ತಾನು ಸತ್ಯವಾದ ನಡತೆಯ ಹೆಣ್ತಿನೇ ಆಗಿದ್ರೆ ಈಗಿಂದೀಗ ಬಾಗ್ಲು ತೆಗೀಲಿ ಅಂದ್ಲಂತೆ. ಓಹೋ, ಬಾಗ್ಲು ತೆಕ್ಕಂಡೇ ಬಿಡ್ತು!

ತನ ಮಕ್ಳ ಕರುದ್ಲು. ಅವ್ರ ಜೊತೆ ಒಳಗೋಗಿ ಉಸ್ಸಪ್ಪ ಅಂತ ಕೂತ್ಲು. ಬಿಸ್ಲಲ್ಲಿ ನಡನಡದು ಸುಸ್ತಾಗಿದ್ದ ಮಕ್ಳು ಎಷ್ಟ್ ಹಸಿದಿದ್ವು ಅಂದ್ರೆ ಕಣ್ಣಿಗೆ ಕಂಡ ವಸ್ತುಗೆಲ್ಲ ಬಾಯಿ ಹಾಕಿ ತಿನ್ನಕ್ ಶುರುಮಾಡಿದ್ವು. ಇದ್ನ ನೋಡ್ತ ಅಡಕ್ಕಂಡ್ ಕೂತ ಅತ್ಗೆ ಸಿಟ್ಟಿಂದ ಕುದ್ದು ಹೋದ್ಲು. ಅವು ತಿಂತಾ ಇದ್ದಿದ್ನ ಕಸಕಂಡು ಮನೆಯಿಂದ ಹೊರ್ಗೆ ದಬ್ಬಿದ್ಲು. ಏನ್ ಮಾಡದು, ಎಲ್ಲಿ ಹೋಗದು ಅಂತ ಗೊತ್ತಾಗ್ದೆ ಬೇಜಾರಾದ ನಲ್ಲ ತಂಗಳ್ ತನ್ನ ಮಕ್ಳನ್ನೆಲ್ಲ

ಒಟ್ ಮಾಡ್ಕಂಡು ಎಲ್ಲರನ್ನೂ ಅಲ್ಲೇ ಪಕ್ಕ ಇರೋ ಬಾವಿಗೆ ದೂಡಿದ್ಲು. ಅದೆಂಗೆಂಗೋ ಕೊನೇ ಮಗು ಒಂದ್ ತಪ್ಪುಸ್ಕಂಡ್ ಕುರಿ ಕಾಯೋ ಹುಡುಗ್ನ ಹತ್ರ ಅಡಕ್ಕಂತು. ನಲ್ಲತಂಗಳ್ ಅವುನ್ನ ಹುಡುಕ್ಕಂಡ್ ಹೋಗಿ ಎಳ್ಕಂಡ್ ಬಂದು ಬಾವಿಗೆ ದೂಡಿ ತಾನೂ ಬಾವಿಗೆ ಹಾರಿದ್ಲು.

ಸಾಮಾನೆಲ್ಲ ತಂದ ಅಣ್ಣ ಮನೆಗ್ ಬಂದು ನೋಡ್ತಾನೆ, ಹೆಣ್ತಿ ಒಬ್ಳೇ ಮನೇಲಿದಾಳೆ. ತಂಗ್ಯಮ್ಮ ಎಲ್ಲಿ ಅಂತ ಕೇಳಿದ್ರೆ ಅಳಂಗಾರಿ ತನಗೆ ಗೊತ್ತೇ ಇಲ್ಲ ಅಂದ್ಲು. ಕೂಡ್ಲೆ ಮನೆಯಿಂದ ಹೊರಗೋಗಿ ಹುಡುಕಕ್ ಶುರು ಮಾಡ್ದ. ಕೊನೆಗೆ ಕುರಿ ಕಾಯೋ ಹುಡುಗ ಎಲ್ಲ ಹೇಳ್ತು. ಅಣ್ಣಂಗೆ ಎಲ್ಲ ಅರ್ಥ ಆಗೋಯ್ತು. ತನ ಹೆಣ್ತಿ, ಅವಳ ದುಷ್ಟತನ, ತನ್ನ ತಂಗಿನ ಏನ್ ಮಾಡಿದ್ಲು ಅಂತೆಲ್ಲ ಗೊತ್ತಾಗೋಯ್ತು. ಮೂಳಿ ಅಳಂಗಾರೀನ ಎತ್ಕಂಡು ಹೋದೋನೇ ನಿಗಿನಿಗಿ ಅಂತಿದ್ದ ಕುಲುಮೆ ಒಳಗೆ ಹಾಕ್ದ. ನಲ್ಲತಂಗಳ್ ಮತ್ತು ಏಳು ಮಕ್ಳ ಮೂರ್ತಿ ಮಾಡಿ ಬಾವಿ ಪಕ್ಕನೇ ಒಂದ್ ಗುಡಿ ಕಟ್ದ. ಕುರಿ ಕಾಯೋ ಹುಡುಗಂದೂ ಒಂದ್ ಮೂರ್ತಿ ಮಾಡ್ದ. ಆಮೇಲೆ ತಾನೂ ಸತ್ತ.

ಇವೆಲ್ಲ ನಿಜಕ್ಕೂ ಆಗಿದ್ದೋ, ಇಲ್ವೋ ನಂಗೊತ್ತಿಲ್ಲ, ಆದ್ರೆ ಇವತ್ತೂ ಆ ಗುಂಡಿ, ಬಾವಿ, ಮೂರ್ತಿ ಎಲ್ಲ ಇದಾವೆ.

❐



# ಎರಡು

ಮೂರನೇ ಕ್ಲಾಸು ಓದ್ತಿದ್ರೂ ಜನ ಅಸ್ಪೃಶ್ಯತೆ ಬಗ್ಗೆ ಮಾತಾಡಿದ್ದು ಕೇಳಿರ್ಲಿಲ್ಲ. ಆದ್ರೆ ಅದೇನು ಅಂತ ನೋಡಿ, ಕೇಳಿ, ಅನುಭವಿಸಿ, ಅವಮಾನ ಆಗಿ ಗೊತ್ತಾಗಿತ್ತು.

ಒಂದಿನ ಶಾಲೆಯಿಂದ ನಡಕಂಡ್ ಬರ್ತಿದ್ದೆ, ಹಳೇ ಚೀಲ ನನ್ನ ಹೆಗಲ ಮೇಲೆ ನೇತಾಡ್ತಿತ್ತು. ಶಾಲೆಯಿಂದ ಮನೆಗೆ ಹತ್ತೇ ನಿಮ್ಷಕ್ಕೆ ಹೋಗಬೋದು. ಆದ್ರೆ ನಂಗೆ ಏನಿಲ್ಲ ಅಂದ್ರೂ ಅರ್ಧ ಗಂಟೆ ಬೇಕಾಗ್ತಿತ್ತು. ಅರ್ಧ ಗಂಟೆಯಿಂದ ಒಂದ್ ಗಂಟೆ ತನಕ ವಾಲಾಡ್ತಾ ಬಂದು, ಆಚೀಚೆ ನಡೆಯೋ ತಮಾಷೇನೆಲ್ಲ ನೋಡ್ತಾ, ಬೀದೀಲಿರೋ ಹೊಸ್ತು, ವಿಚಿತ್ರವಾದ್ದನ್ನೆಲ್ಲ ಗಮನಿಸ್ತಾ, ಅಂಗಡಿ ಬಜಾರು ನೋಡ್ತಾ..

ಮಂಗ ಆಡ್ಸೋನ ಮಂಗ, ಬುಟ್ಟೀಲಿರೋ, ಮುಚ್ಳ ತೆಗೆದ್ ಕೂಡ್ಲೇ ಬುಸ್ ಅನ್ನೋ ಹಾವು, ಮೂರು ದಿನದಿಂದ ಸೈಕಲ್ಲಿಂದ ಕೆಳಗೇ ಇಳಿದೇ ಬೆಳಗಿಂದ ಒಂದೇ ಸಮ ಪೆಡಲ್ ತುಳೀತಾ ಇರೋ ಮನ್ಶ; ಪ್ರೋತ್ಸಾಹ ಕೊಡ್ಬೇಕು ಅಂತ ಅವ್ನ ಅಂಗಿಗೆ ಚುಚ್ಚಿರೋ ರೂಪಾಯಿ ನೋಟು; ಜೋಕಾಲಿ, ಜೈಂಟ್ ವೀಲ್; ಮಾರಿಯಾತ ಗುಡಿ; ಅದ್ರ ದೊಡ್ಡ ಗಂಟೆ ಆಮೇಲೆ ಅದರತ್ರ ತಯಾರ್ ಮಾಡೋ ಪೊಂಗಲ್ ನೈವೇದ್ಯ; ಗಾಂಧಿ ಮೂರ್ತಿ ಪಕ್ಕ ಇರೋ ಮೀನಿನ ಅಂಗಡಿ; ಸೀತಿಂಡಿ, ಕರಿದ ತಿಂಡಿ ಅಂಗಡಿ, ಮತ್ತಿನ್ನೇನೇನೋ ತಿಂಡಿ ಮಾರೋ ಅಂಗಡಿ; ನೀಲಿ ಇದ್ದಿದ್ದು ಬರಬರ್ತಾ ನೇರಳೆ ಕಲರ್ ಆಗೋ ಬೀದಿ ದೀಪ; ನರಿಕುರವನ್ ಆದಿವಾಸಿ ಬೇಟೆಗಾರ; ಪಂಜರದಲ್ಲಿ ಅವನು ಹಿಡಿದಿಟ್ಟಿರೋ ಮಂಗ, ಸೂಜಿ, ಮಣಿ, ಕಿವಿಗೆ ಹಾಕ್ಕಳೋ ಕಡ್ಡಿ – ಹೀಗೇ ಹೇಳ್ತಾ ಹೋಗ್ಬೋದು. ಪ್ರತಿಯೊಂದೂ ನನ್ನ ಎಳದು ಮುಂದೆ ಹೋಗದಂಗೆ ನಿಲಿಸ್ ಬಿಡೋವು.

ಕೆಲವು ಸಲ ಬೇರೆಬೇರೆ ಪಕ್ಷದೋರು ಬರ್ತಿದ್ರು. ಬಂದಬಂದಂಗೆ ಒಂದು ಸ್ಟೇಜ್ ಕಟ್ಟತಿದ್ರು. ಮೈಕ್ ಮುಂದೆ ನಿಂತು ಭಾಷಣ ಕುಟ್ಟಿ ನಂ ಕಿವಿ ವಟ್ಟೆ ಮಾಡ್ತಿದ್ರು. ಕೆಲವು ಸಲ ಬೀದಿ ನಾಟಕ, ಗೊಂಬೆಯಾಟ, ಪವಾಡ ಬಯಲು, ಇಂಥ ಏನೇನೋ ಇರ್ತಿದ್ವು. ಕಾಲದಿಂದ ಕಾಲಕ್ಕೆ ಇವು ಆಗ್ತಾ ಇದ್ವು. ಒಟ್ ಹಿಂಗೇ ಏನಾರ ಒಂದ್ ತಮಾಷೆ ನಡದೇ ಇರದು.

ಅದಲ್ಲದಿದ್ರೆ ಬಜಾರಲ್ಲಿ ಕಾಫಿ ಕ್ಲಬ್ ಇತ್ತು. ಅದ್ರ ವೇಟರ್ ಒಂದೊಂದ್ ಕೈಲಿ ಒಂದೊಂದ್ ಲೋಟ ಹಿಡ್ದು ಊ..ದ್ದಕ್ಕೆ ಎತ್ತಿ ಹುಯ್ಯತಿದ್ದ. ಕೆಲವ್ರು ಈರುಳ್ಳಿ ಹೆಚ್ತಾ ಮತ್ತಿನ್ನೆಲ್ಲೋ ನೋಡ್ತಾ ಕೂತಿರೋರು. ಅಥವಾ ಬಾದಾಮಿ ಗಿಡದಲ್ಲಿ ಜೋರಾಗಿ ಗಾಳಿ ಬೀಸಿದ್ರೆ ಅಕಸ್ಮಾತ್ ಒಂದೊಂದು ಬಾದಾಮಿ ಬಿದ್ದಿರೋದು. ಇವೆಲ್ಲ ನನ್ ಕಾಲು ಕಟ್ಟಿಹಾಕಿ ಮುಂದೆ ಹೋಗ್ದಂಗೆ ಮಾಡವು. ಆಮೇಲೆ ಕಾಲಕ್ಕೆ ತಕ್ಕಂತೆ ಮಾವಿನ ಹಣ್ಣು, ಸೌತೆಕಾಯಿ, ಕಬ್ಬು, ಗೆಣಸು, ಕಳಲೆ, ಬೇಳೆಕಾಳು, ತಾಳೆನೀರು, ತಾಳೆ ಬೊಂಡ, ಬಾಳೆ ಹಣ್ಣು, ಹಲಸು ಇರ್ತಿತ್ತು. ದಿನಾ ಸೀತಿಂಡಿ, ಕರಿದ ತಿಂಡಿ ಮಾರದು ನೋಡ್ತಿದ್ದೆ. ಪನಿಯಾರ, ಪಾಯಸ, ಹಲ್ವ, ಬೇಸಿದ ಹುಣಿಸೆಬೀಜ, ಐಸಿನ ಲಾಲಿಪಪ್ಪು..

ಇದನೆಲ್ಲ ನೋಡ್ತಾ ಒಂದಿನ ನಾನು ಪಲ್ಲ ಜನರ ಬೀದಿ ದಾಟಿ ನಂ ಪರಯ್ಯಾ ಬೀದಿಗ್ ಬಂದೆ. ದೂರದಲ್ಲಿ ಭತ್ತ ಬಡಿಯೋ ಹೊಡೆಮಂಚದ ಹತ್ರ ಕೆಲ್ಸ ನಡಿತಿತ್ತು. ಕಲ್ಲಮೇಲೊಂದ್ ಚೀಲ ಹಾಸ್ಕಂಡು ನಾಯ್ಕರ್ ಕುಂತಿದ್ದ. ನಂ ಜನ ಜೋರು ಕೆಲ್ಸದಲ್ಲಿ ಮುಳುಗಿದ್ರು. ಜೋಡೆತ್ತಿಗೆ ರೌಂಡುಗಲ್ಲು ಕಟ್ಟಿ ಜೋರುಜೋರು ತಿರುಗಿಸ್ತಾ ಹುಲ್ಲು ಭತ್ತ ಬೇರೆ ಮಾಡ್ತಿದ್ರು. ಎತ್ತು ಹುಲ್ಲಿಗೆ ಬಾಯಿ ಹಾಕ್ಬಾರ್ದ ಹಂಗೆ ಅದ್ರ ಬಾಯಿಗೆ ಚೀಲ.

ಆಗ ನಂ ಕೇರಿಯೋನೇ ಒಬ್ಬ ಹಿರಿಯ ಬಜಾರ್ ಕಡೆಯಿಂದ ಬಂದ. ಅವನು ಹೆಂಗ್ ನಡಕಂಡ್ ಬರ್ತಿದ್ದ ಅಂದ್ರೆ ಅದ ನೋಡಿ ನಂಗೆ ಬಿದ್ದುಬಿದ್ದು ನಗಬೇಕನಿಸ್ತಿತ್ತು. ಅಷ್ಟು ದೋ..ಡ್ಡ ದೇಹದ ಮನ್ಶಾ ಅಷ್ಟು ಸಣ್ಣ ಪೊಟ್ಲನ ಹೆಂಗ್ ಹಿಡ್ಕಂಡು ಬರ್ತಿದ್ದ ಅಂದ್ರೆ ನೋಡಿದ್ರೆ ನಗು ಬರ್ತಿತ್ತು. ಆ ಪೊಟ್ಲದಲ್ಲಿ ವಡೆನೋ, ಬಾಳೆಕಾಯಿ ಬೋಂಡನೋ ಇತ್ತು ಅನ್ಸುತ್ತೆ. ಯಾಕಂದ್ರೆ ಅದ್ನ ಸುತ್ತಿದ ಕಾಗ್ದ ಎಣ್ಣೆಣ್ಣೆ ಆಗಿತ್ತು. ಅವ್ನು ಆ ಪೊಟ್ಲನ ಅದು ಸುತ್ತಿರೋ ದಾರದ ಮೇಲೆ ನೇಲಿಸ್ತ ಮುಟ್ಟದಂಗೆ ಹುಶಾರಾಗಿ ಹಿಡಕಂಡ್ ಬಂದ. ಅವ್ನು ಬರದು ನೋಡ್ತಾ ಆ ಪೊಟ್ಲ ಬಿಚ್ಚಿ ವಡೆ ಎಲ್ಲಾರಾ ಕೆಳಗ್ ಬಿದ್ರೆ ಅಂತ ನಾನು ಯೋಚ್ನೆ ಮಾಡ್ತಾ ಇದ್ದೆ.

ಆ ಹಿರಿಯ ಸೀದ ನಾಯ್ಕರ್ ಹತ್ರ ಹೋದ. ಅವ್ನಿಗೆ ಸಲಾಂ ಮಾಡಿ ಪೊಟ್ಲ ಕೊಟ್ಟು ಕೈ ಬೊಗ್ಸೆ ಮಾಡಿ ನಡ ಬಗ್ಗಿಸಿ ನಿಂತ. ನಾಯ್ಕರ್ ಅದ್ನ ಬಿಚ್ಚಿ ವಡೆ ತಿನ್ನಕ್ಕೆ ಶುರು ಮಾಡ್ದ.

ಇದನೆಲ್ಲ ನೋಡಿ ಮನೆಗೋದೆ. ನಂ ದೊಡ್ಡಣ್ಣ ಅಲ್ಲೇ ಇದ್ದ. ಅವನಿಗೆ ಏನೋ ತಮಾಷೆ ನೋಡಿ ಹೇಳಿದಂಗೆ ಎಲ್ಲ ಹೇಳ್ದೆ. ನಂಗಂತೂ ಆ ದೊಡ್ಡ ಮನ್ಶ, ಮುದುಕ, ಅವ್ನು ಪೊಟ್ಲ ಹಿಡ್ಕಂಡ್ ಬಂದ ರೀತಿ, ಎಲ್ಲ ಒಂತರ ತಮಾಷೆಯಾಗಿ ಕಾಣದು. ಆದ್ರೆ ಅಣ್ಣಂಗೆ ಹಂಗನಿಸಲಿಲ್ಲ. ಅಣ್ಣ ಅವ್ನು ಪೊಟ್ಲನ್ನ ಹಂಗೆ ಹಿಡ್ಕಂಡ್ ಬಂದಿದ್ರಲ್ಲಿ ಏನ್ ತಮಾಷೆ ಇದೆ ಅಂತ ಕೇಳ್ದ. ಅವ್ರು ನಾಯ್ಕರ್‌ಗಳು ಮೇಲ್ಜಾತಿಗಳು, ಪರಯ್ಯಾಗಳ್ನ ಮುಟ್ಟಬಾರ್ದು, ಮುಟ್ಟಿದ್ರೆ ಮೈಲಿಗೆಯಾಗೋಗತ್ತೆ ಅಂತ ಅಂದ್ಕಂಡಿದಾರೆ ಅಂದ. ಅದಕ್ಕೆ ಅವ್ನು ಆ ಪೊಟ್ಲನ ದಾರ ಹಿಡಕಂಡು ಹಾಗೆ ತರ್ತಿದ್ನಂತೆ.

ಇದ್ನ ಕೇಳಿದ ಮೇಲೆ ನಂಗೆ ನಗಬೇಕನಿಸ್ಲಿಲ್ಲ. ತುಂಬ ಬೇಜಾರಾಯ್ತು. ಆ ವಡೆನ ಮೊದ್ಲು ಬಾಳೆಲೇಲಿ ಸುತ್ತಿ ಆಮೇಲೆ ಪೇಪರಲ್ಲಿ ಸುತ್ತಿದ್ರೂ ಪ್ಯಾಕೆಟ್ಟನ್ನ ಪರಯ್ಯಾ ಮುಟ್ಟಿದ್ರೆ ಅದು ಹೆಂಗೆ ಮೈಲಿಗೆಯಾಗುತ್ತೆ? ನಂಗೆಷ್ಟು ಸಿಟ್ಟು ಬಂತು ಅಂದ್ರೆ ಕೂಡ್ಲೆ ಹೋಗಿ ಆ ಎಲ್ಲ ವಡೆಗಳ್ನ ಮುಟ್‌ಮುಟ್ಟಿ ಹಾಳುಮಾಡಿ ಬರಬೇಕನಿಸ್ತು. ಇವರಿಗೋಸ್ಕರ ನಾವಾದ್ರೂ ಯಾಕೆ ಹೊತ್ಕಂಡು ತಗಂಡು ಬರ್ಬೇಕು ಅಂತ್ಲೂ ಅನಿಸ್ತು. ನಂ ಕೇರಿಯ ಅಂತಾ ಹಿರೀ ಮನ್ಶ ಅವ್ರಿಗೆ ತಿಂಡಿ ತಗಂಡ್ ಬಂದು ಭಕ್ತಿಯಿಂದ ಕೈ ಮುಗದು ದೂರ ನಿಂತಿರುವಾಗ್ಲು ಧಡಿಯ ನಾಯ್ಕರ್ ತಾನೊಬ್ನೆ ಆ ತರ ಗುಳುಂ ಮಾಡ್ತಾನಲ್ಲ?! ಆ ಯೋಚ್ನೆ ಬಂದ್ರೆ ಸಾಕು ಸಿಟ್ ಬರದು. ತಾವು ಅಷ್ಟು ದೊಡ್ಡೋರು ಅಂತ ಇವ್ರು ಅದೆಂಗೆ ತಿಳಕಂಡಿದಾರೆ. ಅವರತ್ರ ನಾಕು ಕಾಸಿದೆ ಅಂತ ಮನುಶತ್ವ ಕಳಕಬೇಕಾ? ನಾವ್ ಪರಯ್ಯಾ ಅಂತೆ, ಅಂದ್ರೆ ಅದರರ್ಥ ಏನು? ಆ ಹೆಸರೇ ಅಷ್ಟು ಕೊಳಕಾ? ಆದ್ರೆ ನಾವೂ ಮನುಷ್ರೇ ಅಲ್ವ? ಅವ್ರಿಗೇಂತ ನಂ ಜನ ಇಂಥ ಸಣ್ಣಪುಟ್ಟ ಕೆಲ್ಸ ಖಂಡಿತ ಮಾಡ್ಬಾರ್ದು. ಅವ್ರ ಹೊಲದಲ್ಲಿ ಕೆಲ್ಸ ಮಾಡ್ಬೇಕು, ಅದಕ್ ಸಂಬಳ ತಗೋಬೇಕು, ಮನೆಗೆ ಬರ್ಬೇಕು ಅಷ್ಟೆ.

ನನ್ನ ಇಬ್ರೂ ಅಜ್ಜೀರು ನಾಯ್ಕರ್ ಮನೆಗಳಲ್ಲಿ ಕೆಲಸದೋರಾಗಿದ್ರು. ಅವರಲ್ಲಿ ಒಬ್ಳು ಹೊಲದಲ್ಲಿ ಕೆಲ್ಸ ಮಾಡ್ತಾ, ನಾಯ್ಕರ್ ಕುಟುಂಬದಲ್ಲಿ ಇವತ್ ನಿನ್ನೆ ಹುಟ್ಟಿದ ಕೂಸಿಂದನೂ ಏಕವಚನದಲ್ಲಿ ಕರೆಸಿಕೊಳ್ತಾ, ಅವರ ಆರ್ಡರ್‌ಗಳ್ನ ಪಾಲಿಸಬೇಕಾಗಿತ್ತು. ನಮ್ಮಜ್ಜಿ ಉಳಿದೋರೆಲ್ಲರ ತರಾನೇ ಆ ಪುಟ್ ಹುಡುಗ್ರನ್ನ 'ಅಯ್ಯಾ, ಸ್ವಾಮೀ, ಒಡೆಯಾ' ಅನಬೇಕಾಗ್ತಿತ್ತು. ಅವ್ರು ಅವಳನ್ನ ಕರೆಯೋದ್ ಕೇಳಿದ್ರೆ ಅವಮಾನದಲ್ಲಿ ಕುದ್ದೋಗೋ ಹಂಗಾಗ್ತಿತ್ತು. ಅವ್ರಿಗೆ ನೀರು ಕೊಡ್ತಿದ್ದಿದ್ದನ್ನ ನೋಡ್ಬೇಕು. ನಾಯ್ಕರ್ ಹೆಂಗಸ್ರು ನಾಕಡಿ ಮೇಲಿಂದ ನೀರು ಸುರೀತಿದ್ರು, ಅಜ್ಜಿ ಮತ್ತು ಉಳಿದ ಕೆಲ್ಸದವ್ರು ಕೈನ ಬೊಗಸೆ ಮಾಡಿ ಮುಖದ ಹತ್ರ ಹಿಡದು ಕುಡಿತಿದ್ರು. ಇದನ್ನ ನೋಡ್ಲಿಕ್ಕೆ ಭಯಂಕರ ಅನಸದು. ನನ್ನ ಮತ್ತೊಬ್ಬ ಅಜ್ಜಿದೂ ಇದೇ ಕತೆ. ಬೆಳಕು ಹರಿಯೋದ್ರಲ್ಲಿ ನಾಯ್ಕರ್ ಮನೆಗೆ ಹೋಗಿ, ಕೊಟ್ಟಿಗೆ ಗುಡಿಸಿ, ತೊಳದು ಚೊಕ್ಕ ಮಾಡಿ ರಾತ್ರಿ ಉಳಿದಿದ್ದು ಬಳಿದಿದ್ದೇನಾರ ಕೊಟ್ರೆ ಹಿಡ್ಕಂಡ್ ಬರ್ತಿದ್ಲು. ಅಷ್ಟಕ್ಕೇ ಅಮೃತ ಕೊಟ್ಬಿಟ್ಟಿದಾರೇನೋ ಅನ್ನೋ ಹಂಗೆ.

ನಾಯ್ಕರ್‌ಗಳು ತಮಗೆ ಬೇಡಾಗಿ ಬಿಸಾಡಕ್ ಇಟ್ಕಂಡ ಅನ್ನನ ನಮ್ಗೆ ಕೊಡ್ತಾರೆ ಅಂತ ಗೊತ್ತಾಗಕ್ಕೆ ಭಾಳ ದಿನ ಹಿಡಿತು. ಒಂದಿನ ಅಜ್ಜಿ ಜೊತೆ ನಾನೂ ನಾಯ್ಕರ್ ಮನೆಗೆ ಹೋಗಿದ್ದೆ. ತನ್ನ ಕಸ ಬಳಿಯೋ ಕೆಲ್ಸ ಎಲ್ಲ ಮುಗುದ್ಮೇಲೆ ಅಜ್ಜಿ ಅಲ್ಲೇ ಆಚೆ ಚರಂಡಿ ಪಕ್ಕ ತಾನ್ ತಂದ ಪಾತ್ರೆ ಇಟ್ಟಳು. ನಾಯ್ಕರ್ ಹೆಂಗ್ಸು ಬಂದು ಅಷ್ಟು ದೂರ್ದಿಂದ ರಾತ್ರಿ ಮಾಡಿದ್ದ ಉಳದ ಅನ್ನ ತಂದು ಮೇಲಿಂದ ಎತ್ತಿ ಪಾತ್ರೆಗೆ ಹೊಯ್ದು ಹೋದಳು. ಅವಳ ಪಾತ್ರೆ ಅಜ್ಜಿ ಪಾತ್ರೆನ ಮುಟ್ಬಾರ್ದು ಅಂತ ಹಂಗಂತೆ. ಸ್ವಲ್ಪ ದಿನ ಆದ್ಮೇಲೆ ಅಜ್ಜಿ ಹತ್ರ ಇನ್ಮೇಲೆ ಹಂಗೆಲ್ಲ

ಇಸ್ಕಬೇಡ ಅಂದೆ. ಅದನ್ನ ನೋಡಕ್ಕೇ ಆಗ್ತಿರಲಿಲ್ಲ. ಅದಕ್ಕೆ ಅಜ್ಜಿ, 'ಈ ಜನ ಮಾರಾಜ್ರು. ನಮಗೆ ಅನ್ನ ಕೊಟ್ಟು ಸಾಕ್ತಾರೆ. ಅದಿಲ್ದೆ ನಾವು ಹೆಂಗ್ ಬದುಕದು? ಅವ್ರು ಯಾವ ಕಾಲ್ದಿಂದ ತಲೆತಲಾಂತರದಿಂದ ಮೇಲ್ಜಾತಿಯೋರು, ನಾವು ಕೆಳ ಜಾತಿಯೋರೇ ಅಲ್ವೆನು? ಅದ್ನ ನಾವೇನಾದ್ರೂ ಬದ್ಲು ಮಾಡಕ್ಕಾಗತ್ತ?' ಅಂದ್ಲು.

ನಮ್ಮಣ್ಣ ಒಂದ್ಕಡೆ ಯೂನಿವರ್ಸಿಟೀಲಿ ಕಲಿತಿದ್ದ, ರಜಕ್ಕೆ ಅಂತ ಮನೆಗ್ ಬಂದ. ಅವ್ನು ಬಂದಾಗೆಲ್ಲ ಹಳ್ಳಿ ಹತ್ರ ಇರೋ ಊರ ಲೈಬ್ರರಿಗೆ ಪುಸ್ತಕ ಓದಕ್ಕೆ ಅಂತ ಹೋಗ್ತಿದ್ದ. ಒಂದಿನ ಅವ್ನು ಕೆರೆದಂಡೆ ಮೇಲೆ ನಡಕಂಡು ಮನೆಕಡೆ ವಾಪಸ್ ಬರ್ತಿದ್ದ. ಆಗ ಅವ್ನ ಹಿಂದಿಂದ ಒಬ್ಬ ನಾಯ್ಕರ್ ಮನ್ಶ ಬಂದ. ಅವ್ನಿಗೆ ಅಣ್ಣನ ಗುರ್ತು ಹತ್ತಲಿಲ್ಲ. 'ತಮಾ, ಯಾರ ಮನಿ ಆಯ್ತ್ ನಿಂಗೆ? ನಿನ್ ಹೆಸ್ರೆಂತದಾ?' ಅಂತ ಕೇಳಿದ್ನಂತೆ. ಅಣ್ಣ ಹೇಳಿದ. ಕೂಡ್ಲೆ ಆ ಮನ್ಶ, 'ಯಾವ್ ಬೀದೀಲದೆ ನಿಮ್ ಬಿಡಾರ?' ಅಂದ. ಇದ್ನ ಕೇಳಿದ ಉದ್ದೇಶ ಇಷ್ಟೆ, ಬೀದಿ ಯಾವ್ದೂಂತ ಕೇಳಿದ್ರೆ ಜಾತಿನೂ ತಿಳಕಂಡ ಹಾಗೆ ಆಗುತ್ತೆ ಅನ್ನೋದು. ಅಣ್ಣ ಧಡ್ ಅಂತ ಹೇಳ್ಬಿಟ್ಟನಂತೆ, 'ನಾನ್ ಪರಯ್ಯಾ ಕೇರಿಯ್ವೊಂವ, ಏನೀಗ' ಅಂತ. ಅಷ್ಟೇ ಅಲ್ಲ ಎಷ್ಟ್ ಬೇಗ ಆಗುತ್ತೋ ಅಷ್ಟ್ ಬೇಗಬೇಗ ನಡದು ನಾಯ್ಕರ್‌ನ ಹಿಂದಾಕಿದ. ಆ ನಾಯ್ಕರ್‌ಗೆ ಸಿಟ್ಟು ಬಂತು. ತನಗೆ ಅವಮಾನ ಆಯ್ತು ಅಂದ್ಕಂಡ. ಅಲ್ಲೇ ಇನ್ಯಾರದೋ ಹತ್ರ 'ಇವನ್ಯಾವನ್ ಇಂವ್ನ ದೊಣೆನಾಯ್ಕ ಈ ಪೋರ? ಸೊಕ್ಕೆಷ್ಟ್ ಕಾಣ್, ನಡೆಯುದ್ ಕಾಣ್' ಅಂದ್ನಂತೆ. ನಮಜ್ಜಿ ಹೆಸ್ರು ಹೇಳಿ ಅವ್ರ ಮೊಮ್ಮಗ ಅಂದ್ಮೇಲೆ, 'ಓ ರಾಕಮ್ಮನ ಮೊಮ್ಮಗ್ನೆ? ಹ್ಞಂ, ಹ್ಞಂ..' ಅಂದ್ನಂತೆ.

ಮರುದಿನ ಅಜ್ಜಿ ಕೆಲ್ಸಕ್ ಹೋದಾಗ ನಾಯ್ಕರ್ ಸಿಟ್ಟಾಗಿ ಬೈದನಂತೆ, 'ನಿನ ಮೊಮ್ಮಗಂಗೆ ಅದೆಷ್ಟ್ ಸೊಕ್ ಇತ್ ರಾಕಿ? ಎಷ್ಟ್ ಅಹಂಕಾರದಲ್ಲಿ ಮಾತಾಡ್ತ ಗುತ್ತಿತ್ತ?' ಅಂತ. ಅಜ್ಜಿ ಹೆಂಗೆಂಗೋ ಮಾಡಿ, 'ಒಡೆಯಾ, ಅಂವ ಕಲತವಲ್ದ? ಅವು ಹುಡುಗ್ರೆ ಹಂಗಲ್ದ?' ಅಂದ್ಲಂತೆ. ಈ ವಿಷಯ ಕೇಳಿ ಅಣ್ಣ ಜೋರು ನಗಾಡಿದ್ದ.

ಲೈಬ್ರರೀಲೂ ಇದೇ ಕತೆ. ಪರಯ್ಯಾ ಹುಡುಗ್ರನ್ನ ನೋಡೋ ರೀತೀನೇ ಬೇರೆ. ಏನೋ ಒಂದ್ ತಿರಸ್ಕಾರ. ಒಂದ್ಸಲ ಅಣ್ಣ ಪುಸ್ತಕ ತಗಂಡು ರಿಜಿಸ್ಟ್ರಲ್ಲಿ ಹೆಸ್ರು ಬರೆಯೋವಾಗ ಅದ್ರ ಮುಂದೆ ಎಂ.ಎ ಅಂತ ಬರೆದ್ನಂತೆ. ಕೂಡ್ಲೆ ಅಟೆಂಡರ್ ಆ ಕಡೆ ಹೋಗಿ ಒಂದು ಸ್ಟೂಲು ತಂದಿಟ್ಟು ಕೂರಕ್ಕೆ ಹೇಳಿ ಆಮೇಲಿಂದ ಸರ್ ಅಂತ ಮಾತಾಡ್ಸಕ್ಕೆ ಶುರು ಮಾಡಿದ್ನಂತೆ.

ಅಣ್ಣ ಇದನೆಲ್ಲ ಹೇಳಿ ಸೇರಿಸ್ದ. 'ನಾವ್ ಪರಯ್ಯಾ ಜಾತೀಲಿ ಹುಟ್ಟಿದವ್ರಲ್ಲೆ, ಅದಿಕೇ ನಮಿಗ್ ಗೌರವಿಲ್ಲ, ಘನತೆ ಇಲ್ಲ, ಮನಶ್ರೇ ಅಲ್ಲ ಅಂತ್ ಅವು ತಿಳ್ಕಂಡಂಬಂಗಿತ್. ಆದ್ರೆ ನಾವು ಓದಿ ಮುಂದ್ ಬಂದ್ರೆ ಕಾಣ್, ಇಂಥ ಅವಮಾನನೆಲ್ಲ ಕಳಚಿಕಳಲಕ್ಕು. ಅದಕೆ ನೀ

ಚೆನಾಗ್ ಓದು. ನೀ ಓದಲ್ಲಿ ಯಾವಾಗೂ ಮುಂದಿದ್ರ್ಯಾ, ಜನ ತಂತಾನೇ ನಿನ್ನತ್ರ ಬತ್ರೊ. ನಿನ್ ಪಕ್ಕ ನಿಂತ್ಕತ್ರೊ. ಕಷ್ಟಪಟ್ಟು ಓದು, ಕಲಿ.' ಅವತ್ ಅಣ್ಣ ಹೇಳಿದ್ ಮಾತು ನನ್ ತಲೇಲಿ ನೆಟ್ಟು ಆಮೇಲಿಂದ ಕಷ್ಟಪಟ್ಟು ಓದಕ್ ಶುರುಮಾಡ್ದೆ. ಒಂಥರಾ ರಾವು ಹಿಡಿದೋರಂಗೆ ಓದಿದೆ. ಅದಕೇ ಎಷ್ಟೊ ಜನ ಆಮೇಲೆ ನನ್ ಫ್ರೆಂಡ್ಸ್ ಆದ್ರು. ನಾನು ಕ್ಲಾಸಲ್ಲಿ ಫಸ್ಟ್ ಬರ್ತಿದ್ದೆ ಅಂತಲೇ ಪರಯ್ತಿ ಆದ್ರೂ ನನ್ ಜೊತೆ ಇರತಾ ಇದ್ರು.

ಸ್ಕೂಲಲ್ಲೂ ಹಿಂಗೇ. ನಂ ಜಾತಿ ಜನ್ರ ಬಗ್ಗೆ ಕೆಟ್ಟ ಮಾತು ಆಡೋರು. ಕೆಟ್ಟದ್ದೇನಾರಾ ಆಯ್ತು ಅಂದ್ರೆ ಯಾವ ಭಿಡೆ ಇಲ್ದೆ ಥಟ್ಟಂತ ಹೇಳ್ಬಿಡ್ತಿದ್ರು, 'ಥತ್ತೆರಿ, ಇದು ಆ ಕೇರಿ ನನಮಕ್ಳ ಕೆಲ್ಸನೇ ಇರ್ಕ್'. ಶಾಲೇಲಿದ್ದ ಮುಕ್ಕಾಲು ಹುಡುಗ್ರು ಪಲ್ಲ ಮತ್ತು ಪರಯ್ಯಾ ಕೇರಿ ಹುಡುಗ್ರು. ಆದ್ರೆ ಪಾದ್ರಿಗಳು ಶಾಲೆನ ನಾಡಾರ್ ಬೀದೀಲಿ ಕಟ್ಟಿದ್ರು. ಚರ್ಚೂ ಅದೇ ಬೀದೀಲಿ, ಪಾದ್ರಿ ಮನೆನೂ ಅದೇ ಬೀದೀಲಿ.

ಹರಿಜನ ಮಕ್ಳು ಅಂದ್ರೆ ನಿಯಮ ಮೀರೋರು ಅಂತ್ಲೆ ಎಲ್ಲ ತಿಳಕಂಡುಬಿಟ್ಟಿದ್ರು. ಆದ್ರೆ ನಮ್ಮನ್ನ ನಾಕ್ ಕಾಸು ಕಮ್ಮಿ ಕೂಲಿ ಕೆಲಸಕ್ಕೆ ಕರಿಲಿಕ್ಕೆ ಅವ್ರಿಗೇನೂ ಬೇಜಾರಿರಲಿಲ್ಲ. ನಾವು ಟೀಚರ್ ಮನೆಗೆ ನೀರು ಹೊರತಿದ್ವಿ; ಗಿಡಕ್ ನೀರು ಹಾಕ್ತಿದ್ವಿ. ಶಾಲೆಯ ಎಲ್ಲ ಕೆಲ್ಸ ನಾವೇ ಮಾಡ್ತಿದ್ವಿ.

ನಾನಾಗ ಏಳನೇ ಕ್ಲಾಸಲ್ಲಿದ್ದೆ. ಪ್ರತಿದಿನ ಶಾಲೆ ಮುಗುದ್ಮೇಲೆ ಸಂಜೆ ಬೇರೆ ಬೀದಿ ಹುಡುಗ್ರ ಜೊತೆ ಆಡ್ತಿದ್ದೆ. ಅವ್ರಲ್ಲಿ ಇಬ್ರು, ಮೂರು ಜನ ನನ್ನ ನೆಂಟ್ರ ಹುಡುಗ್ರೆ ಆಗಿದ್ರು. ಉಳಿದ ಮಕ್ಳು ಒಂದು ಗುಂಪು ಮಾಡ್ಕಂಡ್ ಆಡ್ತಿದ್ವಿ.

ಒಂದಿನ ಶಾಲೆ ಎದುರಿನ ದೊಡ್ಡ ಬೇವಿನ ಮರ ಹತ್ತಿಳಿದು ಆಡತಿದ್ವಿ. ಬಾವಲಿ ತರ ಅದ್ರ ರೆಂಬೆಕೊಂಬೆಗೆ ತಲೆಕೆಳಗಾಗಿ ನೇತಾಡ್ತಿದ್ವಿ. ಸ್ವಲ್ಪ ಹೊತ್ತು ಬಿಟ್ಟು ಬೇರೆ ಆಟ ಶುರು ಮಾಡಿದ್ವಿ. ಒಂದು ತೆಂಗಿನಮರದ್ ತನಕ ಓಡೋಗಿ ಅದ್ರ ತುದಿ ಮುಟ್ಟೋ ಆಟ. ಆ ತೆಂಗಿನಮರ ಡೊಂಕಾಗಿ ಬಾಗಿ ಕೆಳಗೇ ಇತ್ತು. ಒಂದಷ್ಟ್ ದೂರದಿಂದ ಜೋರಾಗಿ ಓಡಿಬಂದು ಹಾರಿದ್ರೆ ಕೈ ಬೆರಳ ತುದಿಗೆ ಕಾಯಿ ಮುಟ್ತಿತ್ತು. ಮೊದ್ಲು ಒಂದಿಬ್ರು ಹಾರಿ ಮುಟ್ಟಿದ್ದಕ್ಕೆ ಖುಷಿಯಾಗಿ ಎಲ್ಲ ಅದೇ ಆಟ ಆಡಕ್ಕೆ ಶುರು ಮಾಡಿದ್ವಿ. ಕೊನೆಕೊನೆಗೆ ಅದ್ನ ಮುಟ್ಟೋರು ಅದ್ನ ತಿರುಚಿ ಬರಲಿಕ್ಕೆ ಶುರು ಮಾಡಿದ್ರು. ನನ್ ಸರದಿ. ನಾ ಮುಟ್ಟಿದ್ನೋ ಇಲ್ಲೋ ಒಂದ್ ಕಾಯಿ ಧಡ್ಡಂತ ಕೆಳಗ್ ಬಿದ್ದೋಯ್ತು. ಅದು ಬಲಿತ ಕಾಯಿ ಅಲ್ಲ. ಇನ್ನೂ ಹಸ್ರು ಹಸ್ರಾಗಿದ್ದ, ನೀರೂ ಆಡದ ಎಳೇ ಕುರುಬು. ಕಾಯಿ ಬಿದ್ದಿದ್ದೆ ಎಲ್ಲ ಹೆದರ್ಕಂಡು ಓಡಿಬಿಟ್ರು. ಎಲ್ಲ ನಾನೇ ಕಿತ್ತಿದ್ದು ಅಂತ ಹೇಳಿದ್ರು. ಇದ್ದಿದ್ದನ್ನೆಲ್ಲ ಇದ್ದಲ್ಲೆ ಬಿಟ್ಟು ಸೀದ ಓಡಿಬಿಟ್ವಿ.

ಮರುದಿನ ಪ್ರಾರ್ಥನೆ ಆದ್ಮೇಲೆ ಹೆಡ್‌ಮಾಸ್ತರ್ ನನ್ನ ಕರದ್ರು. ಪರಯ್ಯಾ ಆಗಿ ನಿನ್ನ

ನಿಜಮುಖ ತೋರಿಸಿದಿಯಾ ಬಿಡು ಅಂದುಬಿಟ್ರು. 'ನಿನ್ನಿ ದಿನ ಶಾಲಿ ಬಿಟ್ ಎಲ್ಲ ಮನಿಗ್ ಹೋದ್ಮೇಲೆ ಯಂತ ಮಾಡದ್ ನೀನು? ತೆಂಗ್ನಮರ ಹತ್ತಿ ಒಂದು ಬೊಂಡ ಕೊಯ್ದದ್ದ? ನಿನ್ನನ್ನ ಶಾಲಿ ಒಳಗೆ ಬಿಟ್ಕಂಬುಕೆ ಆತ್ತೇ ಇಲ್ಲೆ. ಹೊರಗ್ ನಿತ್ಕ' ಅಂದ್ರು. ನನಗೆ ಒಂಥರ ಸಂಕ್ಟ ಶುರುವಾಯ್ತು. ಎಲ್ಲರೆದುರು ನನ್ನ ಮರ್ಯಾದೆ ಹೋಗಿ ಅವಮಾನ ಆಗಿತ್ತು.

ಹೆಡ್‌ಮಾಸ್ತರು ಚಾಳಿಯಾರ್ ಜಾತಿಯೋರು. ಆ ಕಾಲದಲ್ಲಿ ಚಾಳಿಯಾರ್ ಜಾತಿ ಮತ್ತು ನಂ ಜನರ ನಡುವೆ ಜಗಳ ನಡಿತಿತ್ತು. ಅದೂ ಸ್ಮಶಾನದ ಬಗ್ಗೆ. ಎಲ್ಲ ಮಕ್ಳೂ ನನ್‌ಕಡೆ ಒಂಥರಾ ನೋಡಿ ಕ್ಲಾಸಿಗೆ ಹೋದ್ರು. ನನಗಂತೂ ದುಃಖ ಒತ್ತೊತ್ತಿ ಬರ್ತಿತ್ತು. ನನಗೇನ್ಮಾಡದು ಅಂತ ತಿಳಿಲಿಲ್ಲ. ಆಗ ನಮ್ಮ ಕೇರೀಲೇ ಇದ್ದ ಒಬ್ಬ ಟೀಚರು ನನ್ನತ್ರ ಬಂದು ಪಾದ್ರಿಯೋರ್ಗೆ ಎಲ್ಲ ಹೇಳಿ ಒಂದು ಪತ್ರ ಬರೆಸ್ಕಂಡು ಬಂದು ಹೆಡ್‌ಮಾಸ್ತರಿಗೆ ಕೊಡು ಅಂದರು. ನಾನು ಪಾದ್ರಿ ಹತ್ರ ನಡೆದಿದ್ದೆಲ್ಲ ಹೇಳಿದೆ. ಶಾಲೆಗೆ ಹೋಗಕ್ಕೆ ಪರ್ಮಿಷನ್ ಕೊಡಿ ಅಂತ ಬೇಡಿದೆ. ಪಾದ್ರಿ ಹೇಳಿದ ಮೊದಲ ಮಾತು: 'ವಾಟ್ ಈಸ್ ದಿಸ್ ಬಾಮಾ? ಎಷ್ಟಂದ್ರೂ ನೀವೆಲ್ಲ ಕೇರಿಯ ಮಕ್ಕಳಲ್ವೆ? ನೀವ್ಗಳು ಹೀಗೇ. ಎಷ್ಟ್ ಸಲ ಪರಲೋಕ ಪಿತನೆ ಪ್ರೇಯರ್ ಮಾಡಿದ್ರು ಸಾ ಪ್ರಯೋಜ್ನ ಉಂಟಾ? ಕಡೆಗೆ ನೀವ್ ಮಾಡೋದೆಲ್ಲ ಇಂಥದೆ ಕೆಲಸ. ನೀನೇ ಮಾಡಿದ್ ಇರಬೇಕು...' ನನ್ನ ಕಣ್ಣು ತುಂಬಿದವು. ಅತ್ತೆ. ಎಷ್ಟೊ ಹೊತ್ತಾದ ಮೇಲೆ ಅವ್ರು ನನ್ನ ಶಾಲೆ ಒಳಕ್ಕೆ ಬಿಟ್ಕಬೇಕಂತ ಹೆಡ್‌ಮಾಸ್ತರಿಗೆ ಒಂದು ಪತ್ರ ಕೊಟ್ರು. ನಾನು ಅದ್ನ ತಗಂಡು ಹೋದಾಗ ಅವ್ರು ಏನೇನ್ ಸಾಧ್ಯ ಇದೆಯೋ ಆ ಎಲ್ಲ ಬೈಗಳ ಬೈದ್ರು. ಕೊನೆಗೆ ಕ್ಲಾಸಿಗೆ ಹೋಗು ಅಂದ್ರು. ನಾನು ಕ್ಲಾಸೊಳಗೆ ಹೋದ ಕೂಡ್ಲೆ ಇಡೀ ಕ್ಲಾಸುರೂಮು ನನ್ ಕಡೆ ತಿರುಗ್ತು. ನನ್ನ ಬೆಂಚತ್ರ ಹೋಗಿ ಕೂತ್ಕಳೋದ್ರಲ್ಲಿ ಇದ್ದಲ್ಲೆ ಮುರುಟೋಗಿ ಬಿಡಬೇಕು ಅನಿಸ್ತು. ಅಳತಾ ಹೋಗಿ ಕೂತೆ.

ಎಂಟನೇ ಕ್ಲಾಸ್ ತಂಕ ನಮ್ಮ ಹಳ್ಳೀಲೇ ಓದಿದೆ. ಆಮೇಲೆ ಹೈಸ್ಕೂಲಿಗೆ ಪಕ್ಕದೂರಿಗೆ ಹೋದೆ. ಆ ಶಾಲೆ, ಅಲ್ಲಿಗೆ ಬರತಿದ್ದ ಮಕ್ಳು, ಅವ್ರು ಹಾಕ್ಕಳತಿದ್ದ ಬಟ್ಟೆ ಅದನೆಲ್ಲ ನೋಡಿ ದಂಗಾಗಿಬಿಟ್ಟೆ. ನಂಗಂತೂ ನಾಚ್ಕೆ ಮತ್ತು ಭಯ ಒಟ್ಟೇ ಆಯ್ತು. ಅಂಥಾ ದೊಡ್ಡ ಸ್ಕೂಲಲ್ಲಿ ಮೆಟ್ಲು ಹತ್ತಿ ಮೇಲೆ ಹೋಗಿ, ಮಹಡಿ ರೂಮಲ್ಲಿ ಕೂತು ಪಾಠ ಕಲಿಯದು ಅಂದ್ರೆ ನಂಗೇನೋ ಒಂಥರಾ ಖುಷಿ. ಆದ್ರೆ ಬೇಗ ಅದಕ್ಕೆ ಹೊಂದ್ಕಂಡೆ. ಅಷ್ಟೇ ಅಲ್ಲ, ನನ್ನ ಓದಿನ ಬಗ್ಗೆ ಹೆಚ್ಚೆಚ್ಚು ಗಮನ ಕೊಟ್ಟೆ. ಹಾಸ್ಟೆಲಲ್ಲಿ ನಂದೇ ವಯಸ್ಸಿನ ಮಕ್ಕಳಿದ್ರು. ಅವರತ್ರ ಒಳ್ಳೊಳ್ಳೆ ಬಟ್ಟೆ, ಬಂಗಾರ, ವಾಚು ಎಲ್ಲ ಇತ್ತು. ನಾನು ಅವ್ರೆಲ್ಲ ಮೇಲ್ಜಾತಿಯೋರೇ ಇರಬೇಕೂಂತ ಅಂದ್ಕಂಡೆ.

ನಂ ವಾರ್ಡನ್ ಸಿಸ್ಟರ್‌ಗೆ ಕೆಳಜಾತಿ ಹುಡುಗ್ರ ಕಂಡ್ರೆ ಆಗ್ತಿರಲಿಲ್ಲ. ಏನೂ ಕಾರಣನೇ ಇಲ್ದೆ ನಮ್ಮನ್ನ ಹಿಡ್ಕಂಡು ಬೈಯೋರು. ಯಾರಾದ್ರೂ ದಪ್ಪ ಇದ್ರೆ ಅವ್ರಿಗೆ ಬೈಗುಳ ಜಾಸ್ತಿ.

'ಅಲ್ಲಿ ಮನೇಲಿ ಇವಕೆ ತಿಂಬುಕ್ ಎಂತದೂ ಇರತ್ತಿಲ್ಲೆ ಕಾಂತ್. ಇಲ್ ಬಂದದ್ದೇ ತಡ, ತಿಂದ್ ಸೊಕ್ಕಿ ಹೆಂಗಾಗ್ತು ಕಾಣಿ' ಅಂತ ಎಲ್ಲರೆದುರೇ ಅಂತಿದ್ರು. ರಜಾ ಮುಗ್ಸಿ ವಾಪಸ್ ಬಂದಾಗ ಹೇಳ್ತಿದ್ರು, 'ಈ ಕೇರಿ ಮಕ್ಳ ಕಾಣಿ. ಇಲ್ಲಿದ್ದಾಗ ಹೊಟ್ಟೆಬಿರಿ ತಿಂದು ದೊಡ್ ಕುಂಬ್ಳಕಾಯಿ ಕಣೇಗ್ ಉಬ್ಬತೊ. ಅದೇ ಮನಿಂದ ಬಪ್ಪತ್ಗೆ ಚೊಮ್ಮ, ಎಲುಗು ಕಾಣೋ ಹಂಗೆ ಆಗಿರ್ತೊ.' ಕೇಳಕ್ಕೆ ತುಂಬ ಮುಜುಗರ ಆಗದು. ಉಳಿದೋರ ಹಂಗೇ ನಾವೂ ಫೀಸು ಕೊಡ್ತಿದ್ವಿ. ಊಟಕ್ಕೆ ಅದಕ್ಕೆ ಇದಕ್ಕೆ ಎಲ್ಲಕ್ಕೂ ದುಡ್ಡು ಕೊಡತಿದ್ವಿ. ಆದ್ರೂ ಇಂಥ ಮಾತು.

ನಾ ವಾಪಸ್ ಮನೆಗೆ ಹೋಗುವಾಗ ನಾಯ್ಕರ್ ಹೆಂಗ್ಸೇನಾದ್ರೂ ಬಸ್ಸಲ್ಲಿ ನನ್ ಪಕ್ಕ ಕೂತಿದ್ರೆ ನಾನೆಲ್ಲಿ ಹೋಗ್ತಿರದು, ಯಾವ ಬೀದಿ ಅಂತ ಕೇಳ್ತಿದ್ಲು. ನಾನು ಕೇರಿಯೋಳು ಅಂತ ಗೊತ್ತಾದ ಕೂಡ್ಲೆ ಬೇರೆ ಕಡೆ ಎದ್ದೋಗಿಬಿಡೋರು. ಅಥವಾ ನಂಗೇ ಬೇರೆಕಡೆ ಹೋಗು ಅಂತಿದ್ರು. ಹೋಗ್ಬಿಟ್ಟೇನಾ ನಾನು! ಮತ್ತೂ ಗಟ್ಟಿಯಾಗಿ ಸೀಟು ಕಚ್ಕಂಡು ಕೂರ್ತಿದ್ದೆ. ಅವ್ರು ಎದ್ದೋಗಿ ಬೇರೆ ಕಡೆ ಕೂರಕ್ಕೆ ಆಗದಿದ್ರೆ ಇಡೀ ಪ್ರಯಾಣ ನಿಂತೇ ಇರ್ತಿದ್ರೆ ಹೊರತು ಕೇರಿಯೋರ ಪಕ್ಕ ಕೂರತಿರ್ಲಿಲ್ಲ. ಅಯ್ಯೋ, ಹೆಂಗ್ ಕೂರ್ತಾರೆ? ನಂ ಪಕ್ಕ ಕೂತುಬಿಟ್ರೆ ಅವ್ರು ಮೈಲಿಗೆಯಾಗೋಗ್ತಾರೆ! ಇದು ತುಂಬ ಸಲ ನಂಗೆ ಅನುಭವಕ್ಕೆ ಬಂದಿದೆ. ಮನೆಗೆ ಬಂದು ಅಮ್ಮನತ್ರ ಹೇಳಿದ್ರೆ ಅವಳು 'ಅವು ಕೇಂಡ್ರೆ ನೀನು ಬೇರೆ ಇನ್ಯಾವ್ದೋ ಜಾತಿಯೋಳ್ ಅಂತ ಹೇಳ್. ನಂ ಜಾತಿ ಹೆಸರ್ಯಾಕೆ ಹೇಳುದು?' ಅಂದ್ಲು. ಆದರೆ ನನಗನಿಸೋದು ನಾ ಯಾಕೆ ಯಾವ್ದೋ ಜಾತಿಯೋಳು ಅಂತ ಅವ್ರಿಗೆ ಸುಳ್ಳು ಹೇಳ್ಬೇಕು? ಅಂತ. ಆ ನೋವು, ಅವಮಾನ ಸಣ್ಣದಲ್ಲ.

ನಂ ಸ್ಕೂಲಿನ ಭಾಳ ಹುಡುಗ್ರು ಪಾಠದಲ್ಲಿ ಹಿಂದೆ ಬಿದ್ದಿದ್ರು. ನಾನು ಕಷ್ಟಪಟ್ಟು ಓದಿ ಎಲ್ರಿಗಿಂತ ಹೆಚ್ಚು ಮಾರ್ಕ್ಸ್ ತೆಗೆದೆ. ಹಂಗಾಗೇ ಎಲ್ಲ ಹುಡುಗ್ರು ನಂಗೆ ತುಂಬ ಒಳ್ಳೇದಾಗಿ ಮಾತಾಡೋರು. ಮನೇಲಿದ್ದಾಗ ಅಣ್ಣ ಹೇಳ್ತಿದ್ದಿದ್ದು ನೆನಪಾಗೋದು. ನಂಗೆ ಪಾಠ ಹೇಳಿಕೊಡ್ತಿದ್ದ ಟೀಚರು ಮತ್ತು ಸಿಸ್ಟರ್‌ಗಳು ನನ್ನತ್ರ ಚೆನಾಗಿ ಮಾತಾಡ್ತಾ ಫ್ರೆಂಡ್ಲಿಯಾಗಿದ್ರು. ನನ್ನ ಪಾಠದ ಬಗ್ಗೆ ಇನ್ನೂ ಗಮನ ವಹಿಸೋ ಹಂಗೆ ಮಾಡಿದ್ದು ಇದೇ. ಓದಲ್ಲಿ ಹಿಂದಿದ್ದ ಹುಡುಗ್ರಿಗೆ ಪಾಠ ಹೇಳ್ಕೊಡು ಅಂತಿದ್ರು. ನಂಗಂತೂ ಅಷ್ಟ್ ಖುಷಿಯಾಗೋದು.

ಆವಾಗೀವಾಗ ನಂ ಶಾಲೆ ಹೆಡ್ ಮಾಸ್ತರು ಮತ್ತೆ ಪಿಟಿ ಮಾಸ್ತರು ಕ್ಲಾಸಲ್ಲೋ ಅಥವಾ ಪ್ರಾರ್ಥನೆಗೆ ನಿಂತಾಗ್ಲೋ ಹರಿಜನ ಮಕ್ಕಳು ಯಾರು ಎದ್ದು ನಿಲ್ರಿ ಅಂತ ಅಂತಿದ್ರು. ನಾವು ನಿಲ್ತಿದ್ವಿ. ನಂ ಹೆಸ್ರು ಬರಕಂಡು ಕೂರಿ ಅಂತಿದ್ರು. ಆಗಂತೂ ಭಾಳ ಬೇಜಾರನುಸ್ತಿತ್ತು. ಎರಡು ಸಾವ್ರ ಮಕ್ಳ ಎದುರು ನಿಲ್ಬೇಕು. ತಲೆತಗ್ಗಿಸಿ ನಿಂತ್ಕೋತಿದ್ವಿ. ಏನೋ ತಪ್ಪು ಮಾಡಿದವರಂಗೆ, ಹೌದು, ಅದೊಂಥರಾ ಅವಮಾನ.

ಆ ಸಲ ಸರ್ಕಾರಿ ಶಾಲೇಲಿ ಎಸ್ಸೆಲ್ಸಿ ಬರೆದ ಹರಿಜನ ಹುಡುಗ್ರಲ್ಲಿ ನಾನೇ ಜಿಲ್ಲೆಗೆ ಫಸ್ಟ್ ಬಂದಿದ್ದೆ. ನನ್ ಹೆಸ್ರನ್ನ ಅಸೆಂಬ್ಲಿಲಿ ಕರೆದ್ರು. ಎಲ್ಲ ಚಪ್ಪಾಳೆ ತಟ್ಟಿದ್ರು. ನಾನೂ ಅಮ್ಮನೂ ಪಕ್ಕಪಕ್ಕ ಖುಷಿಯಾಗಿ ನಿಂತಿದ್ವಿ. ಅವತ್ತು ಹರಿಜನ ಅಂತ ಹೇಳ್ಕಳಲಿಕ್ಕೆ ಅಥವಾ ಹರಿಜನ ಹುಡುಗ್ರಲ್ಲೆ ಅತಿ ಹೆಚ್ಚು ಮಾರ್ಕು ತಗಂಡೋಳು ಅನಿಸ್ಕಳಲಿಕ್ಕೆ ನನಗೇನೂ ಮುಜುಗರ ಅನಿಸಲಿಲ್ಲ. ನನಗಂತೂ ಹೆಮ್ಮೆನೇ ಆಗಿತ್ತು. ಅಷ್ಟು ಮಾರ್ಕು ತೆಗೆದಿದ್ದಕ್ಕೆ ಉಳಿದ ಮಕ್ಳೆಲ್ಲ ನನ್ನ ಬಗ್ಗೆ ಮಾತಾಡಿಕೊಂಡ್ರು. ನಾನಂದ್ಕಂಡೆ, ಯಾಕೆ? ಹರಿಜನ ಮಕ್ಳಿಗೆ ಜಾಸ್ತಿ ಮಾರ್ಕು ತೆಗೆಯಕ್ಕೆ ಆಗಲ್ವಾ? ಆಗ ನಂಗೆ ಒಂಥರ ಹೆಮ್ಮೆ ಅನಿಸಿ ಹರಿಜನ ಮಕ್ಳು ಹಿಂಗೇ ಹೆಚ್ಚೆಚ್ಚು ಮಾರ್ಕು ತೆಗೆದು ಉಳಿದೋರಂಗೇ ನಾವೂ ಅಂತ ತೋರಿಸ್ಬೇಕು ಅನಿಸಿತ್ತು.

ನನ್ನ ಸ್ಕೂಲೆಲ್ಲ ಇಲ್ಲಿ ಮುಗಿಸಿ ಆಮೇಲೆ ಕಾಲೇಜು ಕಲಿಯಕ್ಕೆ ಬೇರೆ ಕಡೆಗ್ ಹೋದೆ. ನನಗೇನನಿಸಿತ್ತು ಅಂದ್ರೆ ಅಷ್ಟು ದೂರದ ಕಾಲೇಜು, ಅಷ್ಟು ಜನ ಹುಡುಗ್ರು, ಅಲ್ಲಿ ಜಾತಿ ಬಗ್ಗೆ ಯಾರೂ ಕೇರ್ ಮಾಡಲ್ಲ ಅಂತ. ಆದ್ರೆ ಅಲ್ಲೂ ಕೂಡಾ ಜಾತಿ ಅನ್ನೋದು ಇದ್ದೇ ಇತ್ತು. ಒಂದಿನ ಒಬ್ರು ಲೆಕ್ಚರರ್ ಬಂದು 'ಹರಿಜನ ವಿದ್ಯಾರ್ಥಿಗಳು ಯಾರ್‍ಯಾರು ಎದ್ದು ನಿಲ್ಲಿ. ಆ ವಿದ್ಯಾರ್ಥಿಗಳಿಗೆ ಸಂಜೆ ವಿಶೇಷ ಕೋಚಿಂಗ್ ಕೊಡಬೇಕಂತ ಸರ್ಕಾರದಿಂದ ಆರ್ಡರ್ ಬಂದಿದೆ' ಅಂತಂದ್ರು. ಇಬ್ರೇ ಇಬ್ರು ಎದ್ದು ನಿಂತ್ವಿ: ನಾನು, ಮತ್ತೊಬ್ಳು ಹುಡುಗಿ. ಇದ್ದಕ್ಕಿದ್ದಂತೆ ಹುಡುಗ್ರ ಮಧ್ಯ ಗೊಣಗೊಣ ಶುರುವಾಯ್ತು. ನಂಗೆ ಒಂಥರಾ ರೋಷ ಬಂದಂಗೆ ಆಯ್ತು. ನಂಗೆ ಯಾವ ಸ್ಪೆಷಲ್ ಟ್ಯೂಷನ್ನೂ ಬೇಕಾಗಿಲ್ಲ ಅಂತ ಹೇಳಿದೋಳೇ ಸರ್‍ರಂತ ಕೂತುಬಿಟ್ಟೆ. ಈ ಜಾತಿ ಅನ್ನೋದು ನಾನು ಎಲ್ಲೋದ್ರೂ, ಏನು ಕಲಿತ್ರೂ ನನ್ನ ಬಿಡಲ್ಲ ಅಂತ ಅವತ್ತು ಅನಿಸೋಯ್ತು ನಂಗೆ.

ಇನ್ನೊಂದ್ಸಲ ಮನೆಗೆ ಹೋಗ್ಬೇಕು ಅಂತ ಪರ್ಮಿಷನ್ ಕೇಳ್ದೆ – ನನ್ನ ತಮ್ಮ ಮತ್ತು ತಂಗಿಯ ಮೊದಲ್ನೆ ಶಾಸ್ತ್ರ, ಫಸ್ಟ್ ಕಮ್ಯುನಿಯನ್, ಇತ್ತು. ಅದೂ ಶನಿವಾರ, ಭಾನುವಾರ ಇದ್ದಿದ್ದು. ಅವು ಹೆಂಗಿದ್ರೂ ರಜಾ ದಿನನೇ. ಆದ್ರೆ ನಂ ವಾರ್ಡನ್ ಮತ್ತು ಪ್ರಿನ್ಸಿಪಾಲ್ ಇಬ್ರೂ ಸೇರ್ಕಂಡು ಏನ್ಮಾಡಿದ್ರೂ ನಾ ಹೋಗಲಿಕ್ಕೇ ಒಪ್ತಿಲ್ಲ. ನಾನು ಸಿಟ್ಟಲ್ಲಿ ಕುದ್ದುಹೋದೆ. ನನ್ನ ಕಣ್ಣೆದುರೇ ಅವ್ರು ಶ್ರೀಮಂತ್ರ ಮನೆ ಹುಡುಗ್ರಿಗೆ ಹೋಗಕ್ಕೆ ಪರ್ಮಿಷನ್ ಕೊಡ್ತಾ ಇದ್ರು. ಸಿಟ್ಟೇರಿ, 'ನನ್ ಜೊತೆ ಇರೋ ಅವ್ರಿಗೆ ಹೋಗಕ್ಕೆ ಬಿಡ್ತಿದಿರ. ನನ್ನನ್ಯಾಕೆ ಬೇಡ ಅಂತಿರ?' ಅಂತ ಘಟ್ಟಿಸಿ ಕೇಳ್ದೆ. ಅದಕ್ಕೆ ಅವರೇನನ್ನಬೇಕು? 'ನಿಂ ಜಾತಿ ಕೇರಿಲಿ ಮೊದಲ್ನೆ ಶಾಸ್ತ್ರಕ್ಕೆಲ್ಲ ಏನ್ ಅಂಥಾ ಹಬ್ಬ ಇರುತ್ತೆ?' ಅಂತ. ಇಂಥ ಸಣ್ಣಪುಟ್ಟದಕ್ಕೆಲ್ಲ ಮನೆಗೆ ಹೋಗಕ್ಕೆ ಬಿಡಲ್ಲ ಅಂದ್ಬಿಟ್ರು. ಅವ್ರು ಬೇಡ ಅಂತ ಹೇಳ್ತಾ ಹೋದಹಾಗೂ ನನ್ನೊಳಗೊಂದು ಹಠ ಹೋಗ್ಲೇಬೇಕು ಅಂತ ಹೇಳಕ್ಕೆ ಶುರುಮಾಡ್ತು. ಮತ್ತೆಮತ್ತೆ ಕೇಳಕ್ ಶುರುಮಾಡ್ದೆ. ಒಬ್ಬೊಬ್ರಿಗೆ ಒಂಥರ, ಒಂದೊಂದು ಜಾತಿಗೆ ಒಂದೊಂದು ನಿಯಮ ಇರಲ್ಲ; ಎಲ್ರಿಗೂ ಒಂದೇ ಇರುತ್ತೆ ಅಂತ ವಾದ ಮಾಡಿ ಕೊನೆಗೂ ಹೊರಟೇಬಿಟ್ಟೆ.

ಅಂತೂ ಇಂತೂ ಆ ಕಾಲೇಜಲ್ಲಿ ಮುಗ್ಸಿ ಕೊನೆಗೆ ಬಿ.ಎಡ್ ಮಾಡಕ್ಕೆ ಅಂತ ಬೇರೆ ಕಾಲೇಜಿಗೆ ಹೋದ್ವಿ. ಅಲ್ಲೂ ಅದೇ ಕತೆನೇ. ಆದ್ರೂ ನನಗೆ ವಿದ್ಯೆ ಇತ್ತು, ಸಾಮರ್ಥ್ಯ ಇತ್ತು, ನಾನು ಎದ್ದು ಕೇಳಬಲ್ಲವಳಾಗಿದ್ದೆ. ಜಾತಿ ಬಗ್ಗೆ ಒಂಚೂರೂ ನಾನು ಕೇರ್ ಮಾಡ್ಲಿಲ್ಲ. ಎಂಥ ಪರಿಸ್ಥಿತಿ ಬಂದ್ರೂ ತಲೆಯೆತ್ತಿ ನಡಿತಿದ್ದೆ. ಆಮೇಲೆ ನಾನೇನು ಮಾಡಕ್ಕೋದ್ರೂ ಯಶಸ್ವಿಯಾಗಿ ಮಾಡಿ ಮುಗುಸ್ತಿದ್ದೆ. ಹಿಂಗಾಗಿ ಮೇಷ್ಟ್ರು, ಹುಡುಗ್ರೂ ನನ್ ಮೇಲೆ ಏನೋ ಆದರ ತೋರಿಸ್ತಿದ್ರು. ಹೀಗೆ ಕೇವಲ ನನ್ನ ವಿದ್ಯೆ ಬಲದ ಮೇಲೆ ಜಾತಿ ವ್ಯತ್ಯಾಸ, ಭೇದದ ಬಗ್ಗೆ ಮಾತಾಡೋ ಜನ್ರ ಮಧ್ಯ ನಾನು ಬದುಕುಳಿದು ಬಂದೆ.

ನನ್ ವಿದ್ಯಾಭ್ಯಾಸ ಮುಗ್ಸಿ ಕೆಲಸಕ್ಕೆ ಸೇರ್ದೆ. ನನ್ನ ಮೊದಲ ಕೆಲಸದ ಜಾಗ್ದಲ್ಲೆ ಒಬ್ರು ನನ್ ಕೇಳಿದ್ರು, 'ನೀನು ನಾಡಾರಾ?' ಅಂತ. 'ಅಲ್ಲ, ಪರಯ್ಯಾ' ಅಂದೆ. ಆಗ ಅವ್ರ ಮುಖದ ಮೇಲೆ ಬಂದ ಭಾವನೆಗಳ್ನ ನೆನೆಸಿಕೊಂಡ್ರೇ, ಈಗಲೂ, ನಗು ಬರುತ್ತೆ. ಹೆಚ್ಚಿನ ನನ್‌ಗಳು ತೆಲುಗರು. ಅವ್ರು ನಮ್ಮಂಥ ದಲಿತರ ಬಗ್ಗೆ ಒಂಚೂರೂ ಕೇರ್ ಮಾಡ್ತಿರ್ಲಿಲ್ಲ. ಆಮೇಲಿನ್ನೇನು? ನಾ ಕೆಲಸ ಮಾಡಿದ ಮುಂದಿನ ಐದು ವರ್ಷಗಳದ್ದೂ ಒಂದು ಹೋರಾಟದ ಕತೆ. ಆ ಹೊತ್ತಲ್ಲಿ ನನ್ನತ್ರ ಸಿಕ್ಕಾಪಟ್ಟೆ ಉತ್ಸಾಹ ಮತ್ತು ಶಕ್ತಿ ಎರಡೂ ಇತ್ತು. ನಂ ಶಾಲೆ ಮಕ್ಕಳು, ಬೇರೆ ಮಕ್ಕಳು ಎಲ್ಲ ನನ್ನ ಇಷ್ಟಪಡ್ತಿದ್ರು. ಅಲ್ಲಿನ ಎಷ್ಟೋ ಮಕ್ಕಳು ದಲಿತರೇ ಆಗಿದ್ವು. ಅಲ್ಲಿ ಮಕ್ಕಳಿಗೆ ಪಾಠ ಮಾಡ್ತಾ, ನನ್‌ಗಳ ಜೊತೆ ವಾದ ಮಾಡ್ತಾ ಆರಾಮಿದ್ದೆ. ಆಡಳಿತ ವರ್ಗದೆದುರು ನಿಂತು ಮಾತಾಡೋವಷ್ಟು, ಒಳ್ಳೇ ಚೆನ್ನಾಗಿ ಪಾಠ ಮಾಡೋವಷ್ಟು ಯಶಸ್ಸು ಗಳಿಸಿದ್ದೆ.

ಹಂಗೇ ಮುಂದುವರೆಸಬೋದಿತ್ತು. ಆದ್ರೆ ಅದೆಲ್ಲಿಂದ್ಲೋ ಒಂದು ಆಸೆ ಹುಟ್ಕಂತು. ಯಾಕೋ ನಂಗೆ ಈ ನನ್‌ಗಳು ದಲಿತ ಮತ್ತು ಬಡ ಮಕ್ಕಳನ್ನ ತುಂಬ ದಮನ ಮಾಡ್ತಾರೆ; ನಾನೂ ಯಾಕೆ ಒಬ್ಬ ನನ್ ಆಗಿ ನಿಜವಾಗೂ ಸಹಾಯ ಬೇಕಾದ ಬಡಮಕ್ಕಳಿಗೆ ಸಹಾಯ ಮಾಡ್ಬಾರ್ದು ಅಂತ ಬಲವಾಗಿ ಅನ್ಸಕ್ಕೆ ಶುರುವಾಯ್ತು. ಇವ್ರು ಅಂತ ಮಕ್ಕಳನ್ನ ಭಾಳಾ ನಿರ್ಲಕ್ಷ್ಯ, ಅವಮಾನ ಮಾಡ್ತಿದ್ರು. ಎಷ್ಟು ದೂರ ಸರಿಸಿದ್ರು ಆ ಯೋಚನೆ ನಂಗೆ ಮತ್ತೆಮತ್ತೆ ಬರಕ್ಕೆ ಶುರು ಆಯ್ತು. ಕೊನೆಗೆ ನಾನು ಕಲಿಸೋ ಕೆಲಸಕ್ಕೆ ರಾಜೀನಾಮೆ ಕೊಟ್ಟು ಒಂದು ಧಾರ್ಮಿಕ ಪಂಥನ ನನ್ ಆಗ್ಲಿಕ್ಕೆ ಅಂತ ಸೇರಿಕೊಂಡೆ.

ನನಗೆ ಗೊತ್ತಿರೋರು, ಕುಟುಂಬದ ಒಳಗಿನೋರು, ಹೊರಗಿನೋರು ಎಲ್ಲರೂ ಕೆಲಸ ಮಾತ್ರ ಬಿಡಬೇಡ ಅಂತಂದ್ರು. ನನ್ ಆಗಿ ಮಾಡದಕ್ಕಿಂತ ಹಂಗೇ ಎಷ್ಟೋ ಒಳ್ಳೇ ಕೆಲಸ ಬೇಕಾದಷ್ಟು ಮಾಡ್ಬೋದು ಅಂತಂದ್ರು. ಕಾನ್ವೆಂಟಿನ ಒಳಗೂ ಜಾತಿ ಭೇದ ಬೇಕಾದಷ್ಟು ಕೆಲ್ಸ ಮಾಡುತ್ತೆ ಅಂದ್ರು. ಆದ್ರೆ ನಾನು ಮಾತು ಕೇಳಿದ್ನಾ? ಅವ್ರು ಅಷ್ಟೆಲ್ಲ ಹೇಳಿದ್ರೂ ನಾನು ನನ್ ಆಗ್ಲಿಕ್ಕೆ ಹೊರಟೇಬಿಟ್ಟೆ. ನನ್ನ ನಿರ್ಧಾರಕ್ಕೆ ಮುಂಚೆ ಆ ಪಂಥದ

ಮದರ್ ನನ್ ಬಗ್ಗೆ ಚೆನ್ನಾಗಿ ಓದಿ ತಿಳ್ಕಂಡಿದ್ದೆ. ಬಡವ್ರಿಗೆ ಅಂತ ಅವ್ರು ಕೆಲಸ ಮಾಡಿದ್ರು, ಕಷ್ಟದಲ್ಲಿರೋರಿಗೆ ಅಂತ ಬದುಕಿ ಪ್ರಾಣ ತೆತ್ತಿದ್ರು. ನನಗೂ ಅವ್ರ ತರಾನೇ ಆಗ್ಬೇಕಾಗಿತ್ತು. ಬರೀ ಬಡವ್ರಿಗೆ ಮತ್ತು ಕಷ್ಟದಲ್ಲಿರೋರ ಸಲುವಾಗಿನೆ ಬದುಕಬೇಕು ಅನಿಸ್ತಿತ್ತು. ಆದ್ರೆ ಕಾನ್ವೆಂಟ್‌ಗೆ ಹೋದಮೇಲೆ ಅದೊಂಥರಾ ಹಳ್ಳಿಮನೆ ಹಿತ್ತಲದಿಂದ ಮಹಾನಗರಕ್ಕೆ ಹೋದ ಅನುಭವ ಆಯ್ತು. ಅಲ್ಲಿ ಹೋದ ಕೂಡ್ಲೇ ನಂಗೆ ಯಾವ ಸಂಬಂಧನೇ ಇಲ್ದೇ ಇರೋ ಅಂಥ ಕಡೆ ಬಂದಿದಿನಿ ಅಂತ ಅನಿಸ್ತು. ಇರಲಿ, ಕಾದು ನೋಡಣ ಅಂತ ತೀರ್ಮಾನ ಮಾಡಿದೆ. ತುಂಬ ಗೊಂದಲ ಆಯ್ತು, ಆದರೂ ಗಟ್ಟಿಯಾಗಿರಕ್ಕೆ ಪ್ರಯತ್ನಪಟ್ಟೆ.

ಒಂದಿನ ನಮಗೆ ತರಬೇತಿ ಕೊಡೊ, ಮೇಲ್ವಿಚಾರಣೆ ಮಾಡೊ ಸಿಸ್ಟರು ನನ್ ಡಿಗ್ರಿ ಸರ್ಟಿಫಿಕೇಟ್ ಮೇಲೆ, ಚರ್ಚಿನ ಕ್ರೈಸ್ಟನಿಂಗ್ ಸರ್ಟಿಫಿಕೇಟ್ ಮೇಲೆ ಹುಟ್ಟಿದ ದಿನ ಯಾಕೆ ಬೇರೆಬೇರೆ ಇದೆ ಅಂತ ಕೇಳಿದರು. 'ನಂ ಕಡೆ ಹೀಗೇ. ಶಾಲೇಲಿ ಅವರಿಗೆ ಯಾವ ದಿನ ಬೇಕೋ ಅದನ್ನ ಬರಕೊಳ್ತಾ ಇದ್ರು, ಅದಕ್ಕಿಂತ ಹೆಚ್ಚೇನೂ ಮಾಡಲಿಕ್ಕೆ ಸಾಧ್ಯವಿರಲಿಲ್ಲ ಆಗ' ಅಂತ ಹೇಳಿದೆ. ಅವರು ನಾ ಹೇಳಿದ್ದು ನಂಬ್ತನೇ ಇಲ್ಲ. 'ನೀವು ತಮಿಳರೇ ಹೀಗೆ. ಶಾಲೆಗೆ ಸುಳ್ಳುಸುಳ್ಳು ಹೇಳಿ, ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಬರಕ್ಕೆ ನೋಡ್ತಿರ' ಅಂತ ಏನೇನೋ ಹೇಳಿದ್ರು. ನಾನು ಇದೆಂಥ ರಗಳೆ ಇದು ಅಂತ ಅನಕೊಂಡೆ. ಇಲ್ಲೀ ತಂಕ ಈ ಜನ ನಂ ಜಾತಿ ಸಲುವಾಗಿ ತಲೆ ತಗ್ಗಿಸಿ ಓಡಾಡೋ ಹಾಗೆ ಮಾಡ್ತಿದ್ರು; ಈಗ ನೋಡಿದ್ರೆ ತಮಿಳರಾಗಿರೋದು, ಪರಯ್ಯಾ ಆಗಿರೋದೂ ಎರಡೂ ಒಂದೇ ಅನ್ನೋ ತರ ಮಾತಾಡ್ತಾ ಇದ್ದಾರೆ.

ಕೊನೆಗೆ ಅಂದ್ಕಂಡೆ: ಇರಲಿ, ಈ ಹೆಂಗ್ಸಿಗೆ ಹಳ್ಳಿ ಬದುಕು ಅಂದ್ರೆ ಏನಂತ ಗೊತ್ತಿಲ್ಲ. ಅದಕ್ಕೆ ಹಿಂಗೆ ಹೇಳ್ತಾ ಇದಾರೆ ಅಂತ. ಸ್ವಲ್ಪ ದಿನ ಬಿಟ್ಟು ಅವರಿಗೆ ವಿವರವಾಗಿ, ನಮ್ಮ ಶಾಲೇಲಿ ಅಡ್ಮಿಷನ್ ಮಾಡಿಸೋದು ಅಂಥ ಕಷ್ಟವೇನಿರಲಿಲ್ಲ. ಬದಲಾಗಿ ಟೀಚರ್‌ಗಳೇ ಮನೆಮನೆಗೆ ಹೋಗಿ ಹುಡುಗರನ್ನ ಎಳಕಂಡು ಹೋಗತಿದ್ರು. ಶಾಲೆ ಅಡ್ಮಿಷನ್ ಮಾಡಿಸಕ್ಕೆ ಅಂತ ಸುಳ್ಳು ಡೇಟ್ ಆಫ್ ಬರ್ತ್ ಕೊಡೋ ಅವಶ್ಯಕತೆನೇ ಇರಲಿಲ್ಲ ಅಂತ ವಿವರಿಸಿ ಹೇಳಬೇಕಾಯ್ತು. ಇಷ್ಟು ಹೇಳಿದ್ಮೇಲೂ ಆಕೆ ನಾನು ಸುಳ್ಳು ಹೇಳ್ತಿದೀನಿ ಅಂತನೇ ಹೇಳಿದ್ರು. ನಾನದನ್ನು ಅಲ್ಲಿಗೆ ಬಿಟ್ಟುಬಿಟ್ಟೆ. ಅವರತ್ರ ಇನ್ನು ಮಾತಾಡಿ ಉಪಯೋಗವಿಲ್ಲ ಅನಿಸ್ತು.

ಇದಾದ ನಂತರನೇ ನನಗೆ ಸ್ವಲ್ಪಸ್ವಲ್ಪನೇ ಅರ್ಥ ಆಗಕ್ಕೆ ಶುರುವಾಗಿದ್ದು – ಆ ಪಂಥದಲ್ಲಿ ತಮಿಳು ಜನರನ್ನು ಕೆಳಜಾತಿಯೋರ ತರ ನಡೆಸಿಕೊಳ್ಳತಿದ್ರು ಅಂತ. ಆಮೇಲೆ ತಮಿಳರಲ್ಲೇ ಪರಯ್ಯಾಗಳದ್ದು ಇನ್ನೊಂದು ವಿಭಾಗ. ಆದ್ರೂ ಅಲ್ಲೇ ಉಳಿದೆ. ನನ್ನ

ಜೊತೆ ನನ್ ಆಗಲಿಕ್ಕೆ ಅಂತ ಯಾರ್‍ಯಾರು ಟ್ರೇನಿಂಗಿಗೆ ಬಂದಿದ್ರೋ ಎಲ್ಲರಿಗೂ ನನ್ನ ಜಾತಿ ಯಾವ್ದು ಅಂತ ತಿಳಕಳ್ಳೋ ಕುತೂಹಲ. ನಾನು ಪ್ರಾಮಾಣಿಕವಾಗಿ ಹೇಳಿದರೆ ಅವರು ನಂಬ್ತನೇ ಇರಲಿಲ್ಲ. ನಾನದನ್ನ ಬಿಟ್ಟುಬಿಟ್ಟೆ, 'ಇನ್ನೇನು ಹೇಳಲಿ, ಆಯ್ತು ಬಿಡಿ. ನಿಮಗೆ ನನ್ನ ಮಾತು ನಂಬಬೇಕೆನಿಸಿದ್ರೆ ನಂಬಿ. ಇಲ್ಲಾಂದ್ರೆ ನಾನೇನು ಮಾಡಕ್ಕೆ ಸಾಧ್ಯ?' ಅಂತಿದ್ದೆ.

ನಮ್ಮ ಟ್ರೇನಿಂಗ್ ಮುಗಸಿ ಪೂರ್ಣ ಪ್ರಮಾಣದ ನನ್ ಅನಿಸಿಕೊಳ್ಳಕ್ಕೆ ಕೆಲವೇ ದಿನ ಬಾಕಿ. ಒಂದಿನ ಒಂದು ಕ್ಲಾಸಲ್ಲಿ ಪಾಠ ಮಾಡುವಾಗ ಒಬ್ಬ ಸಿಸ್ಟರು ಹೇಳಿದ್ರು, 'ಈ ಪಂಥದಲ್ಲಿ ಹರಿಜನ ನನ್‌ಗಳಿಗೆ ಅಂಥ ಒಳ್ಳೆ ಭವಿಷ್ಯ ಇಲ್ಲ. ಅಂಥೋರಿಗಂತನೇ ಬೇರೆ ಒಂದು ಪಂಥ ಇದೆ' ಅಂತ. ನನಗೆ ಭಯಂಕರ ಶಾಕ್ ಆಗೋಯ್ತು. ನನ್ನೆದೆ ತುಂಬ ನಿರಾಶೆ ತುಂಬೋಯ್ತು: 'ಈಗ ಕೊನೇ ಗಳಿಗೇಲಿ ಹಿಂಗೆ ಹೇಳ್ತಿದಾರಲ್ಲ ಇವರು?!' ಅಂತ. ಆ ಕ್ಲಾಸ್ ಮುಗಿದ ಕೂಡ್ಲೆ ಆ ಸಿಸ್ಟರ್‌ನ ಹಿಂಬಾಲಿಸಿ ಕೇಳಿದೆ: ನಾನು ಹರಿಜನ ಮಹಿಳೆ. ಈ ಪಂಥ ನನ್ನನ್ನ ನನ್ ಅಂತ ಪರಿಗಣಿಸುತ್ತೋ ಇಲ್ಲವೋ ಅಂತ. ಆಗ 'ಯಾವ್ದಾದ್ರೂ ಪಂಥದೋರು ನನ್ ಆಗು ಬಾ ಅಂತ ನಿನ್ ಕರೆದಿದ್ರಾ?' ಅಂತ ಕೇಳಿದ್ರು. ನಾನು, 'ಹೌದು. ನಾನು ಕಾನ್ವೆಂಟ್ ಶಾಲೇಲಿ ಕೆಲಸ ಮಾಡ್ತಿದ್ದಾಗ ಅಲ್ಲಿನ ನನ್‌ಗಳು ನನ್ನ ಕರೆದಿದ್ರು' ಅಂತಂದೆ. 'ಓಹೋ, ಅವ್ರು ನಿನ್ನೂ ಕೇಳಿದ್ರು, ಅಲ್ವಾ? ಪರವಾಗಿಲ್ಲ ಬಿಡು, ನೀನು ನಮ್ಮ ಪಂಥದ ನನ್ನೇ ಆಗಿರು' ಅಂದ್ರು. ನನಗಂತೂ ನಿಂತ ಜಾಗದಲ್ಲೇ ಮಾಯವಾಗಿ ಹೋಗಿಬಿಟ್ರೆ ಒಳ್ಳೇದು ಅಂತ ಅನಿಸಿತ್ತು. 'ಅಯ್ಯೋ ದೇವರೇ, ಈ ಭೂಮಿ ಮೇಲೆ ಜಾತಿ ಅನ್ನೋದು ಇಲ್ದ ಜಾಗ ಯಾವ್ದೂ ಇಲ್ಲವಾ?' ಅಂತ ಮನಸ್ಸನ್ನ ಕೇಳಿಕೊಳ್ಳಕ್ಕೆ ಶುರು ಮಾಡ್ದೆ. ನನ್ನ ಬಾಯಿಗೆ ಬಂದ ಒಂದು ಮಾತನ್ನೂ ಆಡಲಿಲ್ಲ. ಒಳಗೊಳಗೇ ಯುದ್ಧ ಮಾಡಿ ಸುಮ್ಮನಾಗಿಬಿಟ್ಟೆ.

ಅವ್ರ ಪ್ರಕಾರ ಕೆಳಜಾತಿ ಜನ ಎಲ್ಲ ತರದಿಂದ್ಲೂ ಕೀಳೇ. ನಮಗೆ ನೈತಿಕ ಶಿಸ್ತು, ಸ್ವಚ್ಛತೆ, ಸಂಸ್ಕೃತಿ ಏನೂ ಇಲ್ಲ. ಅದು ಯಾವತ್ತೂ ಬದಲಾಗಲ್ಲ ಅಂತನೇ ಅವರು ತಿಳಕಂಡಿದಾರೆ. ನಮಗೆ ಸಹಾಯ ಮಾಡೋದು ಅಂದ್ರೆ ನಾಗರಹಾವಿಗೆ ಸಹಾಯ ಮಾಡಿದಂಗೆ. ಒಂಚೂರೂ ಯೋಚನೆನೇ ಮಾಡದೇ ಇಂಥ ಮಾತನ್ನೇ ಯಾವಾಗ್ಲೂ ಅವರು ಆಡತಾ ಇದ್ರು. ಈ ಮಾತನ್ನ ಹುಣಿಸೇರಾಶಿ ಹಂಗೆ ಸುಮ್ಮನೆ ತೆಪ್ಪಗೆ ಕೇಳಿಸಿಕೊಳ್ತಾ ಒಳಗೊಳಗೇ ಎಷ್ಟೋ ಸಲ ಸತ್ತು ಹುಟ್ಟತಾ ಇದ್ದೆ. ಅವರಿಗೆ ನಾನೇನಾದರೂ ದಲಿತ ಅಂತ ತಿಳಿದ್ರೆ ಅವರ ಪ್ರತಿಕ್ರಿಯೆ ಹೇಗಿರಬೋದು ಅಂತ ನಡುಗ್ತ ಯೋಚನೆ ಮಾಡ್ತಿದ್ದೆ. ಹೇಡಿಯಾಗಿದ್ದೆ. ಅದ್ಕೆ ಉಳ್ಕಂಡೆ.

ತಮಿಳು ಮಹಿಳೆ ಆಗಿದ್ರೂ ನಂಗೆ ಸ್ವಲ್ಪ ಜಾಸ್ತಿ ಗೌರವ ಇತ್ತು, ಯಾಕಂದ್ರೆ ನಾನು ಹೇಳಿದ ಕೆಲಸ ಎಲ್ಲ ನೀಟಾಗಿ ಚೆನ್ನಾಗಿ ಮಾಡ್ತಿದ್ದೆ. ಆದರೆ ಬೇರೆ ದಲಿತರ ಹತ್ತಿರ ಚಿಲ್ಲರೆ

ಕೆಲಸ ಮಾಡಿಸಿ, ಆದ್ರೂ ಯಾವಾಗಲೂ ಅವ್ರನ್ನ ಬೈತಾ, ಮರ್ಯಾದೆ ತೆಗೀತಾ ಇರೋದು ನೋಡಿದರೆ ಕುದ್ದು ಹೋಗೋ ಹಂಗೆ ಆಗ್ತಿತ್ತು. ಎಷ್ಟು ವಯಸ್ಸಾಗಿರೋ ಮುದುಕರು ಕೂಡಾ ನಡುಗ್ತ, ಸಣ್ಣ ಮಕ್ಕಳ ತರ ಹೆದರ್ತಾ, ಆ ಸಿಸ್ಟರುಗಳ ಹತ್ರ ದುಡ್ಡು, ಅಧಿಕಾರ ಇದೆ ಅಂತ ತಮ್ಮ ಹೆಮ್ಮೆ, ಆತ್ಮಗೌರವನೆಲ್ಲ ಬದಿಗಿಟ್ಟು ಯಾರೂ ಮಾಡದೇ ಇದ್ದ ಚೊತ್ತೆ ಕೆಲಸ ಮಾಡಕ್ಕೆ ಹೊರಡತಾ ಇದ್ರು. ನೀವು ಹಾಗೆ ತರತರ ನಡುಗ್ತಾ ಇರಬೇಕಾದ ಅವಶ್ಯಕತೆ ಇಲ್ಲ, ನಿಮ್ಮ ಕೆಲಸ ಮಾಡಿ, ಗೌರವದಿಂದ ದುಡ್ಡು ತಗೊಂಡು ಹೋಗಿ ಅಂತ ನಾನೇನಾದ್ರೂ ಅವರಿಗೆ ಹೇಳಿದ್ರೆ, 'ನಿಮಗೆ ಮಾತ್ರ ಹಾಗಿರಕ್ಕೆ ಸಾಧ್ಯ' ಅನ್ನೋರು. ಇವತ್ತು ನಾನಿಲ್ಲಿ ಇದೀನಿ, ನಾಳೆ ಮತ್ತೊಂದು ಕಡೆ ಹೋಗ್ತೀನಿ. ಆದ್ರೆ ಅವರು? ಅವರು ಇಲ್ಲೆ ಇರಬೇಕು, ಅನುಭವಿಸ್ತ ಇರಬೇಕು. ಅವರು ಹೇಳಿದ್ದೂ ನಿಜವೇ..

* * *

ಈ ಸಮಾಜದಲ್ಲಿ ಒಂದು ಸಲ ನೀವು ಕೆಳ ಜಾತೀಲಿ ಹುಟ್ಟಿದ್ರೋ, ಸಾಯೋತಂಕ ಅವಮಾನದಲ್ಲಿ, ಕೀಳುತನದಲ್ಲಿ ಬದುಕಬೇಕು. ಸತ್ತಮೇಲೂ ಜಾತಿ ಗುರುತು, ಭೇದ ಅಳಿಯಲ್ಲ. ಯಾವ ಕಡೆ ತಿರುಗು, ಏನು ಬೇಕಾದ್ರೂ ಓದಿರು, ಏನು ಉದ್ಯೋಗಾನಾದ್ರೂ ಮಾಡ್ತಿರು, ಜಾತಿ ಭೇದ ಮೂಲೆಮೂಲೆಯಿಂದ ಎದ್ದುಬಂದು ತಿವಿತಾ, ರೊಚ್ಚಿಗೇಳಿಸ್ತಾ ಇರುತ್ತೆ. ಅದಕ್ಕೇ ನಮಗೆ ಎಲ್ಲರಂತೆ ಚೆನ್ನಾಗಿ ಓದಕ್ಕಾಗಲ್ಲ, ಮುಂದೆ ಬರಕ್ಕಾಗಲ್ಲ, ಅದಕ್ಕೇ ಹತಾಶ ಜೀವನಶೈಲಿ ನಮಗೆ ಉಳಕಂಡುಬಿಟ್ಟಿದೆ.

ಕೆಳಜಾತೀಲಿ ಹುಟ್ಟಿದರೆ ನಿಮ್ಮ ಬದುಕು ಪ್ರತಿ ಕ್ಷಣನೂ ಹೋರಾಟನೇ. ನಿಮ್ಮ ಜಾತಿ ಯಾವುದು ಅಂತ ಗೊತ್ತಾದ ಕೂಡ್ಲೇ ಜನ ಮುಖ ತಿರುವಿ ಅಸಹ್ಯವಾಗಿ ನೋಡ್ತಾರೆ. ಆ ಒಂದು ತಿರಸ್ಕಾರದ ನೋಟ ಹುಟ್ಟಿಸೋ ಸಿಟ್ಟನ್ನ ವರ್ಣನೆ ಮಾಡೋಕೆ ಸಾಧ್ಯವೇ ಇಲ್ಲ. ಆದ್ರೆ ನಮ್ಮ ಸಿಟ್ಟಿಂದ ಅವರಿಗೇನಾದ್ರೂ ಆಗುತ್ತಾ? ಅದಕ್ಕೇ ಸಿಟ್ಟು ನುಂಗಬೇಕಂತೆ, ಕಷ್ಟದ ಬದುಕನ್ನ ಹಲ್ಲುಕಚ್ಚಿ ಸವೆಸಬೇಕಂತೆ.

ಮೇಲುಜಾತಿಯೋರು ಅದೆಂಗೆ ಅಷ್ಟು ಮೇಲೆ ಬಂದ್ರು? ನಾವು ಇಷ್ಟು ಕೆಳಕ್ಕೆ ಹೇಗೆ ಬಂದ್ವಿ? ಅವರತ್ರ ದುಡ್ಡಿದೆ, ನಮ್ಮತ್ರ ಇಲ್ಲ. ನಮ್ಮತ್ರನೂ ದುಡ್ಡಿದ್ರೆ ನಾವೂ ಹೆಚ್ಚೆಚ್ಚು ವಿದ್ಯೆ ಕಲಿತಿದ್ವೋ ಏನೋ, ಅವರಿಗಿಂತ ಹೆಚ್ಚು ಮುಂದೆ ಬರ್ತಿದ್ವೋ ಏನೋ, ಆದ್ರೆ ದುಡ್ಡಿರಲಿ, ವಿದ್ಯೆ ಇರಲಿ, ಈ ಜಾತಿ ಅನ್ನೋದೊಂದು ಇರಕ್ಕೆ ಹೋಗಿ ನೋವು, ಅವಮಾನ ಅನುಭವಿಸೋ ಹಾಗಾಗಿದೆ.

ಪ್ರಯಾಣ ಮಾಡುವಾಗ ಪಕ್ಕ ಕೂರಕ್ಕೂ ಇವ್ರು ಲಾಯಕ್ಕಲ್ಲ ಅಂತ ಜನ ಹೇಗೆ ನಮ್ಮ ಬಗ್ಗೆ ತೀರ್ಮಾನ ಮಾಡಿಬಿಟ್ರು? ಯಾವುದೋ ದುರ್ನಾತದ ಕಾಯಿಲೆನ ನೋಡೋ ಹಾಗೆ ಜಿಗುಪ್ಸೆ, ಅಸಹ್ಯದ ಭಾವನೆಯಿಂದ್ಲೇ ಅವರು ನಮ್ಮನ್ನ ನೋಡ್ತಾರೆ. ಎಲ್ಲಿ

ಹೋದ್ರೂ ಪೆಟ್ಟು ತಿನಬೇಕು. ಮತ್ತೆ ನೋವು. ಇದಕ್ಕೆ ಪರಿಹಾರನೇ ಇಲ್ವಾ? ವಿದ್ಯೆ ಇದೆ, ಇಲ್ಲ ಅನ್ನೋದನ್ನ ಯಾರೂ ಪರಿಗಣಿಸೋದೇ ಇಲ್ಲ. ಎಲ್ಲರೂ ಜಾತಿದ್ವೇಷ ತುಂಬ್ಕೊಂಡೇ ಇರ್ತಾರೆ. ಉಳಿದೋರು ಹೋಗ್ಲಿ, ಪಾದ್ರಿ ಮತ್ತು ಸಿಸ್ಟರು, ತಮ್ಮ ಹೃದಯವನ್ನೇ ದೇವರ ಸೇವೆಗೆ ಇಟ್ಟುಬಿಟ್ಟಿದೀವಿ ಅಂತ ಹೇಳ್ಕಳೋರು ಕೂಡಾ ಜಾತಿ ತಾರತಮ್ಯ ತೋರಿಸ್ತಾರೆ. ನಂಗಂತೂ ನಾನು ಏನಾಗಿ ಹುಟ್ಟಿದ್ನೋ ಅದರ ಬಗ್ಗೆನೇ ತುಂಬ ಬೇಜಾರಾಗಿ ಹೋಗಿದೆ.

ದಲಿತರು ಮನುಷ್ರಲ್ವೆ? ಅವರಿಗೆ ಸಾಮಾನ್ಯ ಜ್ಞಾನ ಇಲ್ವೆ? ಅವರಿಗೆ ಆತ್ಮಗೌರವ, ಘನತೆ ಇಲ್ವೆ? ನಮ್ಮತ್ರ ಇಲ್ದಿರೋದು ಏನು? ಅವರು ತಮಗಿಷ್ಟ ಬಂದಂತೆ ನಮ್ಮನ್ನ ನಡಸ್ಕೋತಾರಲ್ಲ? ಮನುಷ್ಯ ಘನತೆ ಇಲ್ದಿರೋ ಗುಲಾಮರ ತರ ನಡಸ್ಕೋತಾರಲ್ಲ? ಏನಾದ್ರೂ ಒಬ್ಬ ದಲಿತ ಕಲಿತು, ಮುಂದೆ ಬಂದು ಒಳ್ಳೇದಾಗಿ ಬದುಕಕ್ಕೆ ಶುರು ಮಾಡಿದ್ರೆ ಏನೋ ಆಗೋಯ್ತು ಅನ್ನೋ ತರ ಮೇಲೆ ಕೆಳಗೆ ಕುಣಿದು ಹಾರ್ತಾರಲ್ಲ? ನಾವೆಲ್ಲಿದೀವೋ ಅಲ್ಲೇ, ಹಾಗೇ ಇರಬೇಕು ಅನ್ನೋದು ಅವರ ಸಂಚು. ಚರಿತ್ರೆ ಉದ್ದಕ್ಕೂ ಪ್ರಾಣಿಗಳ ತರ ಕೆಲಸ ಮಾಡಿದೀವಿ, ಈಗಲೂ ಹಂಗೇ ಬದುಕಿ ಸಾಯಲಿ ಅಂತ. ತಲೆತಲಾಂತರದಿಂದ ಜೀತಕ್ಕೆ ಬಿದ್ದು, ಪದೇಪದೇ ಕೀಳುತನದ ಬಗ್ಗೆ ಹೇಳಿಹೇಳಿ ತಲೆ ತುಂಬಿಸಿದ್ರಿಂದ್ಲೆ ನಂ ಜನ ತಮ್ಮನ್ನು ತಾವು ಕೀಳು ಅನ್ಕೊಂಡುಬಿಟ್ಟಿದಾರೆ. ಯೋಗ್ಯತೆ, ಗೌರವ ಇಲ್ಲದ ಮುಟ್ಟಿಸಿಕೊಳ್ಳಬಾರದೋರು ಅಂತ ತಿಳಕಂಡುಬಿಟ್ಟಿದಾರೆ. ಈಗ ಯಾವ ಪರಿಸ್ಥಿತಿಗೆ ದಲಿತರು ಮುಟ್ಟಿದಾರೆ ಅಂದ್ರೆ ಅವರನ್ನ ಅವರೇ ದೂರ ನಿಲಿಸಿಕೊಂಡು ಬಿಡ್ತಾರೆ. ಇದು ಅತಿ ಕ್ರೂರ ಅನ್ಯಾಯ. ಸಣ್ಣಮಕ್ಕಳಿಗೂ ಸೈತ ಇದನ್ನೇ ಹೇಳಿಕೊಡ್ತಾರೆ. ಇದನ್ನೇ ಕಲಿಸಿರ್ತಾರೆ. ಇದೆಲ್ಲಾವುದರ ಪರಿಣಾಮ ಏನಪ್ಪಾ ಅಂದ್ರೆ ದಲಿತರಿಗೆ ಸ್ವಾತಂತ್ರ್ಯ ಮತ್ತು ಬಿಡುಗಡೆಗೆ ದಾರಿನೇ ಇಲ್ಲದಂಗೆ ಆಗಿರದು.

ಕಣ್ಮುಚ್ಚಿ ನಿದ್ದೆ ಮಾಡ್ತಾ ಇರೋ ನಾವು ಕಣ್ಣುಬಿಟ್ಟು ಸುತ್ತ ನೋಡಬೇಕು. ಇದು ನಮ್ಮ ಹಣೆಬರ ಅಂದ್ಕಂಡು ಅನ್ಯಾಯ, ಗುಲಾಮಗಿರಿ ಸಹಿಸ್ಕೋಬಾರ್ದು. ಬದಲಾವಣೆಗಾಗಿ ಎದ್ದು ನಿಲ್ಬೇಕು. ಜಾತಿ ಅನ್ನೋ ಪದ ಬಳಸಿ ನಮ್ಮನ್ನು ತುಳಿಯಕ್ಕೆ ನೋಡೋ ಎಲ್ಲದರ ವಿರುದ್ಧ ಧ್ವನಿ ಎತ್ತಬೇಕು. ಮನುಷ್ಯರಲ್ಲಿ ಮೇಲುಕೀಳು ಅಂತ ಇಲ್ಲ, ಎಲ್ಲ ಒಂದೇ ಅಂತ ಪ್ರತಿಪಾದನೆ ಮಾಡ್ಬೇಕು. ನಮ್ಮನ್ನ ತುಳಿದು ತಾವು ಸುಖವಾಗಿರೋರನ್ನ ಸುಮ್ಮನೆ ಬಿಡಬಾರ್ದು. ಅವರು ಎಲ್ಲಿರಬೇಕೋ ಅಲ್ಲಿಗೇ ಸೇರೋಹಾಗೆ ಮಾಡಿ, ಎಲ್ರು ಸಮಾನರು ಅನ್ನುವಂತ ಒಂದು ಸಮಾಜ ಹುಟ್ಟುಹಾಕಬೇಕು.

❒



# ಮೂರು

ನನಗಾಗ ಹನ್ನೊಂದ್ ವರ್ಷ. ಅಮ್ಮ ಅವಳಿ ಮಕ್ಕಳನ್ನ ಹೆತ್ಲು. ನಂಗದು ಚೆನ್ನಾಗಿ ನೆನಪಿದೆ. ಒಬ್ಬ ತಮ್ಮ, ತಂಗಿ ಒಟ್ಟಿಗೇ ಹುಟ್ಟಿದ್ರು ಅಂತ ನಮಗೆಲ್ಲ ಖುಷಿಯಾಗಿದ್ರೆ ದೊಡ್ಡೋರಿಗೆಲ್ಲ ಭಾಳ ಕಷ್ಟ ಆಗಿತ್ತು. ಇಬ್ಬರನ್ನ ಒಟ್ಟೊಟ್ಗೆ ಬೆಳೆಸಬೇಕಲ್ಲ, ಕಷ್ಟ ಅಂತ ಹೇಳ್ತಿದ್ರು. ಅದೆಲ್ಲ ಅರ್ಥ ಆಗೋ ಅಷ್ಟು ದೊಡ್ಡೋಳಾಗಿರಲಿಲ್ಲ ನಾನು. ಆ ಕಾಲದಲ್ಲೇ ನಂ ಜಾತಿ ಮತ್ತು ಚಾಳಿಯಾರ್ ಜಾತಿ ನಡುವೆ ಜಗಳ ಆಗ್ತಿದ್ದವು. ಕೆಲವು ಸಲ ದೊಡ್ಡ ಹೋರಾಟನೇ ನಡೀತಿತ್ತು.

ಕ್ರಿಶ್ಚಿಯನ್ನರು ಸತ್ತವರನ್ನು ಹೂಳುವ ಜಾಗದ ಪಕ್ಕವೇ ಚಾಳಿಯಾರ್ ಜಾತಿಯೋರ ಶಾಲೆಯಿತ್ತು. ಆ ಸ್ಮಶಾನದಲ್ಲಿ ನಾವು ದಲಿತ ಕ್ರಿಶ್ಚಿಯನ್ನರಷ್ಟೆ ಹೆಣ ಹೂಳ್ತಾ ಇದ್ವಿ. ಮೇಲ್ಜಾತಿ ಕ್ರಿಶ್ಚಿಯನ್ನರ ಸ್ಮಶಾನ ಬೇರೆ ಕಡೆಗಿತ್ತು. ಅದು ಬಸ್‌ಸ್ಟಾಂಡ್ ಪಕ್ಕವೇ ಇತ್ತು. ನಮ್ಮ ಸ್ಮಶಾನ ತಮ್ದು ಅನ್ನೋ ಜಗಳನ ಚಾಳಿಯಾರರು ಮೊದ್ಲಿಂದ ನಂ ಜೊತೆ ಮಾಡ್ಕಂಡ್ ಬಂದಿದ್ರು. ನಮ್ಮನ್ನ ಕೆರಳಿಸಿ ಜಗಳ ಹಚ್ಚಿ ಆ ಸ್ಮಶಾನನ ತಮದು ಮಾಡ್ಕಂಡು ಅವರ ಶಾಲೆ ಆಟದ ಬಯಲು ದೊಡ್ಡ ಮಾಡ್ಕಬೇಕು ಅನ್ನೋ ಉದ್ದೇಶ ಅವರದ್ದು. ಹಿಂಗಾಗಿ ಈ ಎರಡು ಜಾತಿ ನಡುವೆ ಸದಾ ಗುದ್ದಾಟ.

ಜನ ಆಡಿಕೊಳ್ಳೋ ಪ್ರಕಾರ ಚಾಳಿಯಾರ್ ಹುಡುಗ್ರಿಗೆ ಬುದ್ಧಿ ಕಮ್ಮಿ. ಅವ್ರ ವಿರುದ್ಧ ಯಾರು ಧ್ವನಿ ಏರಿಸಿದ್ರೂ ಸಾಕು, ಮೈಮೇಲೇ ಹೋಗ್ತಿದ್ರು, ಅಷ್ಟು ಧೈರ್ಯ ಅವ್ರಿಗೆ. ಆದರೆ ಅವರ ಹತ್ರ ನಮಗಿಂತ ಹೆಚ್ಚು ದುಡ್ಡು, ಭೂಮಿ, ಆಸ್ತಿ ಎಲ್ಲ ಇತ್ತು. ಅವರತ್ರ ಆಸ್ತಿ ಇತ್ತು ಅಂತನೇ ಅವರ ಕೈ ಮೇಲಾಗ್ತಿತ್ತು. ಜೊತೆಗೆ ಉಳಿದ ಜಾತಿಯೋರು ನೀವು ಪರಯ್ಯಾಗಳಿಗೆ ಹೆದರ್ತೀರಿ, ಪುಕ್ಕರು ಅಂತ ಹೇಳಿಹೇಳಿ ಅವ್ರನ್ನು ರೊಚ್ಚಿಗೆಬ್ಬಿಸ್ತಾ ಇದ್ರು. ಅದಕ್ಕೇ ಅವರು ನಂ ಹುಡುಗ್ರ ಧೈರ್ಯ, ಶಕ್ತಿ ಏನಂತ ಗೊತ್ತಿದ್ರೂ ಜಗಳ ಆಡ್ಕಂಡು ಬರ್ತಿದ್ರು.

ಶಾಲೆಗೆ ಹೋಗುವಾಗ ನಮ್ಮ ಹುಡುಗ್ರು ಚಾಳಿಯಾರ್ ಕೇರಿ ಮೇಲಿಂದ ಹೋಗ್ದೇ ಇರೋ ಹಾಗೆ ನೋಡ್ಕತಾ ಇದ್ರು. ಹೊಲಕ್ಕೋ, ಬಸ್ಟಾಂಡಿಗೋ ಹೋಗ್ತಾ ಆ

ದಾರೀಲೇ ಹೋಗೋರು. ಹೆಂಗಸ್ರು, ಮಕ್ಳು ನೀವು ನೀವೇ ಓಡಾಡ್ಬೇಡಿ, ಹುಶಾರಾಗಿರಿ ಅಂತ ಹೇಳ್ತಿದ್ರು. ಅವರ ಕೇರಿ ಸುತ್ತಮುತ್ತ ಸುಳಿದಾಡೋವಾಗ ಗಂಡಸ್ರು ಆಯುಧ ಹಿಡ್ಕೊಳ್ಳಿ ಅಂತನೂ ಹೇಳ್ತಿದ್ರು. ಇಷ್ಟಿದ್ರೂ ಒಂದಿನ ಸಂಜೆ ಇಳವನ ಗಂಡನಿಗೆ ಚಾಳಿಯಾರ್‌ಗಳು ಚೂರಿ ಹಾಕಿದ್ರು ಅಂತ ಸುದ್ದಿ ಬಂತು. ಅವಳು ಮೇಲಿನ ಬೀದಿಯೋಳು. ನಮ್ಮ ಇಡೀ ಕೇರಿನೆ ದಂಗಾಗೋಯ್ತು. ಜನ ಅಲ್ಲಲ್ಲಿ ತಿರುಗ್ತಾ, ದುಃಖಪಡ್ತಾ ಕಿರುಚ್ತಾ ಓಡಾಡ್ತಾ ಇದ್ರು.

ಅಷ್ಟೊತ್ತಿಗೆ ನಾನು ಶಾಲೆಯಿಂದ ಬರ್ತಾ ಇದ್ದೆ. ಬೀದೀಲಿ ಎಲ್ರೂ ಹಾಗೆ ಓಡೋದನ್ನ ನೋಡಿದ ಕೂಡ್ಲೆ ನಂಗೆ ಎದೆ ಢವಢವ ಅಂತ ಹೊಡ್ಕಳಕ್ಕೆ ಶುರು ಮಾಡ್ತು. ಹೆಂಗಸರು ತಮ್ಮ ತಲೆ ಜಪ್ಪಿಕೊಳ್ತ ಹೊಡಕೊಳ್ತಿದ್ರು. ಏನು ಅಂತನೇ ಗೊತ್ತಾಗ್ಲಿಲ್ಲ ನಂಗೆ. ನಮ್ಮಮ್ಮ ಮತ್ತು ಅಜ್ಜಿ ಮನೆ ಬಿಟ್ಟು ಹೊರಗೆ ಹೋಗ್ಬಾರ್ದು ಅಂತ ಅಷ್ಟೇ ಹೇಳಿದ್ರು. ನಮ್ಮನೆ ಬಾಗ್ಲಿಂದ ಏನೂ ಕಾಣ್ತಿರಲಿಲ್ಲ. ಕೊನೆಗೆ ಏನು ನಡಿತಾ ಇದೆ ಅಂತ ಅಜ್ಜಿ ಹೋಗಿ ನೋಡಿ ಬಂದ್ಲು.

'ಇಳವನ ಗಂಡ ಮರಾತಿಯಾ, ಅಷ್ಟ್ ಗಟ್ಟಿಮುಟ್ ಇದಿದ್ದ. ಆ ಚಾಳಿಯಾರ್ ಹುಡುಗ್ರು ಯಂತ ತಿಂತ್ವೇರ್ನೋ ಹೊಟ್ಟಿಗ್, ಅವನನ್ನ ನೆಲಕ್ ಕೆಡವಿ ಬಾಕು ತಕ ಹೆಟ್ಟಿ ಹೆಟ್ಟಿ ಕೊಂದ್ವಂತಲೆ..'

'ಅಂವನ ತೊಡಿಗ್ ಇಲ್ ಹೆಟ್ಟಿದ ಬಾಕು ಆಚಿ ಕಡಿಂದ ಹೊರಗ್ಬಂದಿತ್ತಂಬ್ರ್..'

'ನೆತ್ರು ಕೋಡಿ ಹರ್ದಿತ್ ಅಂಬ್ರ್. ಮುದುಕ ಮಕಾಡೆ ಬಿದ್ದೇ ಬಿಟ್ಟ ಅಂತ್ರ್. ಪನಿಯಾರ ಮುತ್ತು ಮಾಮ ಕಂಡದ್ದೇ ಓಡ್ಬಂದು ಎಬುಸ್ಕಂಡ್ ಕರ್ಕ ಹೋದ ಅಂದೆಳಿ ಅಂವ್ನ ಜೀಂವಾ ಉಳಿತ್. ಇಲ್ಲಂದ್ರೆ ಪಡ್ಚ, ಹಿಡ್ಕಂಡಿದ್ ಕುಟುಕು ಜೀಂವ್ನೂ ಒಂದ್ ಗಳಿಗೇಲಿ ಹಾರೋಗಿರ್ತಿದ್ದಿತ್.'

'ಮೊದ್ಲು ಅವುನ್ನ ಧರ್ಮಾಸ್ಪತ್ರಿಗೇ ಕರ್ಕ ಹ್ವಾದ್ದು ಪನಿಯಾರನೆಯಾ. ಅಂವೇನಾರಾ ಬದುಕ್ದ ಅಂದ್ರೆ ಸತ್‌ಸತ್ ಹುಟ್ಟಿ ಬಂದಂಗ್ ಲೆಕ್ಕ.'

ಹಿಂಗೇ ಜನ ಬೀದೀಲಿ ಏನೇನೋ ಮಾತಾಡ್ಕತಾ ಇದ್ರು. ಬೀದೀಲಿ ನಿಂತಿರೋ ಜನನೂ ಸಿಟ್ಟಲ್ಲೇ ಇದ್ರು. ಪರಲೋಕ ಮಾಮಾ ಏನೇನೋ ಸನ್ನೆ ಮಾಡಿಮಾಡಿ ಹೇಳ್ತಿದ್ದ. 'ಎಂಥ ಕೀಳ್ ಜನ ಮಾರಾಯ ಅವು. ನಮ್ಮಂಥೋರ ಮ್ಯಾಲೆ ಅವು ಬೀಳದು ಅಂದ್ರೆಂತದಾ ಅದು? ಥೀಥೀಥೀಥೀ! ಹೇಳುಕ್ ಮರ್ಯಾದಿ ಆತ್. ಏಗಳಿಗೂ ಒಬ್ಬ ಪರಯ್ಯಾ ಒಬ್ಬ ಚಾಳಿಯಾರ್ ಕೈಲಿ ಜೀಂವ ಬಿಟ್ಟದ್ ಇರ್ಲಿಲ್ಲೆ ಕಾಣ್..' ತನ್ನ ಬಾಯ ಕವಳದ ರಸನ ಪಿಚಕ್ಕಂತ ಉಗದು ಮುಂದುವರೆಸಿದ.

'ಅವುಕ್ ಮಾನ ಮರ್ಯಾದಿ ಗಂಡಸ್ತನ ಅಂಬುದೇನಾರಾ ಇದಿದ್ರೆ ನಮ್ ಎದುರಾ ಎದುರೇ ಬಂದ್ ಹೊಯ್ಕೈ ಮಾಡ್ತಾ ಇದ್ದೊ. ಇವ್ ನೋಡಿರೆ ಹೆಂಗಸ್ರ ಕಣೇಗೆ,

ಹೇಡಿ ಜನ. ಎಲ್ಲೋ ಹೋಗಾಂವನ್ನ ಹಿಡದು ಹೊಡದ್ವು.'

'ಎಲ್ಲ ಸುಮ್ನಾಯ್ಕಣಿ, ಇಲ್ ಕೇಣಿ, ನೀವು ನಿಜಕೂ ನಂ ಜಾತಿ ಮಕ್ಕೇ ಆಗಿದ್ದಿದ್ರೆ ಒಬ್ಬೊಬ್ಬು ಹತ್ತತ್ತು ಜನ್ರ ಬಲಿ ತಕಣಿ. ಹಾಂಗೆ ಮಾಡ್ಡವ ಯಾರರು ಇರ್ಲಿ, ಅಂವಂಗೆ ಹಾರ ಹಾಕಿ ಸನ್ಮಾನ ಮಾಡಿ. ಆ ಬಡ್ಡಿಮಕ್ಳಿಗ್ ಬುದ್ಧಿ ಕಲ್ಸಿ, ಮಟ್ಟ ಹಾಕಕಾರೆ ಇಪ್ಪುದ್ ಇದೊಂದೇ ಉಪಾಯ.'

ತವಸಿ ಅನ್ನೋ ಮುದುಕಿ ಈ ಮಾತು ಹೇಳೋದ್ರಲ್ಲಿ ನಮ್ಮ ಜನ ಚಾಕುಚೂರಿ ಎಲ್ಲ ಹಿಡ್ಕಂಡ್ ಸ್ಮಶಾನದ ಕಡೆ ಓಡಕ್ಕೆ ಶುರು ಮಾಡಿದ್ರು. ಅವ್ರ ಹಿಂದೆನೇ ಹೆದರಿ ಅಳ್ತಾ ಮಕ್ಳೂ ಓಡಕ್ಕೆ ಶುರು ಮಾಡಿದ್ವು. ಅವರ ಹಿಂದೇ ನಾಯಿನೂ ಕೂಗ್ತ ಓಡಿದ್ವು. ಇಡೀ ಬೀದೀನೇ ಖಾಲಿ ಆಗೋಯ್ತು. ಇಬ್ರು ಮೂರು ಜನ ಹಳೇಯೋರು ನಂ ಜಾತಿ ಚಾವಡಿ ಕಟ್ಟೇಲಿ ಇದ್ದಿದ್ದು ಬಿಟ್ರೆ ಇಡೀ ಕೇರಿ ಖಾಲಿ ಆಗೋಯ್ತು.

ಸ್ಮಶಾನದ ಹತ್ರ ಇರೋ ಪಾರ್ಕಲ್ಲಿ ನಿಧಾನ ಹೊಡದಾಟ ಶುರು ಆಯ್ತು. ಚಾಳಿಯಾರ್ ಹೆಣ್ಮಕ್ಳೆಲ್ಲ ಮರದ ಹಿಂದೆ ಅಡಗಿದ್ರು. ತಮಗೆಷ್ಟು ಸಾಧ್ಯನೋ ಅಷ್ಟು ಕಲ್ಲು ಕವಣೆ ತಗೊಂಡು ಗಂಡಸರಷ್ಟೇ ಜೋರುಜೋರಾಗಿ ಬೀಸಕ್ಕೆ ಶುರು ಮಾಡಿದ್ರು. ನಂ ಗಂಡಸ್ರು ಬರೋಕೆ ಸ್ವಲ್ಪ ಮುಂಚೆ ಚಾಳಿಯಾರ್ ಹುಡುಗ್ರು ಶಾಲೆಯೊಳಗೆ ಹೋಗಿ ಬಾಗ್ಲು ಹಾಕ್ಕಂಡು ಅಡಕ್ಕಂಡುಬಿಟ್ರು.

'ನನ್ ಕೈಗೆ ಅವನೇನಾರು ಸಿಕ್ಕಿರ್ ಕಾಣ್, ಚಟ್ನಿ ಚಟ್ನಿ ಮಾಡಾಕ್ತೆ.'

'ಮಖ ಕಂಡದ್ದೇ ಓಡಿಹೋತೋ, ಹೇಡಿ ಸೂಳೆಮಕ್ಳು. ಅದೆಂಗೆ ಹಿಂಗಿಪ್ಪುಕ್ ಆತ್ತೋ ಅವ್ಕೆ?'

ಹೀಗೇ ಪರಸ್ಪರ ಬೈದಾಡಿ ಕೊನೆಗಂತೂ ಬದುಕು ನಿಧಾನ ಮೊದ್ಲಿನ ಹದಕ್ಕೆ ಬಂತು.

ಸ್ವಲ್ಪ ದಿನ ಎರಡೂ ಕಡೆಯೋರು ಸುಮ್ಮನಿದ್ರು. ಆಮೇಲೆ ಮತ್ತೆ ಜಗಳ ಶುರು. ನಂ ಬೀದೀಲಿ ಯಾರೋ ಒಬ್ಬ ಚಾಳಿಯಾರ್‌ನ ಹೊಡೆದ್ರಂತೆ. ಕೂಡ್ಲೆ ಅವರು ಪೊಲೀಸ್ ಸ್ಟೇಷನ್ನಿಗೆ ಹೋಗಿ ನಂ ಮೇಲೆ ಕಂಪ್ಲೇಂಟು ಕೊಟ್ ಬಂದ್ರು. ಒಂದು ದೊಡ್ಡ ಕೇಸು ಮಾಡಬೇಕು ಅಂತ ನಡೆದಿದ್ರ ಜೊತೆ ಸುಳ್ಳೇಪಳ್ಳೆ ಕತೆ ಕಟ್ಟಿದ್ರು.

ವರ್ಗೀಸ್ ಬೈತಾ ಹೋದ, 'ಆಗಳಿಗೆ ಚಿನ್ನಪ್ಪಣ್ಣಂಗೆ ಅವು ಹೊಡದ್ವಲೆ, ಅವತ್ ನಾವೂ ಪೊಲೀಸ್ ಟೇಷನ್ನಿಗೆ ಹೋಯಿ ಕಂಪ್ಲೇಂಟು ಕೊಡ್ಕಿದ್ದಿತ್. ಅವತ್ ನಂ ಬುದ್ಧಿ ಸಾಯುಕ್ ಎಲ್ ಕರ ಹಾಕ್ಕಂಡಿತ್ತೋ ಏನ, ಸುಮ್ನಾಯ್ಕಂಡ್ವಿ. ಈಗ ಕಾಣ್, ಬರಿ ಅವುದ್ ಮೈ ಮುಟ್ಟಿದ್ ಅಷ್ಟೆ, ನಂ ಮ್ಯಾನೆ ದೋ..ಡ್ ಕೇಸ್ ಹಾಕಿ ಕೂಕಂಡಿದ್ದೊ.'

'ಏನ್ ಗುತಿತ್ತಾ ಅಣ? ಈ ಕೇಸು ಬರೀ ಹೊಡ್ಕಂಡ್ರಲೆ ಅವ್ರ ಮೇಲಷ್ಟೆ ಅಲ್ಲ, ಇಡೀ ಪರಯ್ಯಾ ಜಾತಿ ಮೇಲ್ ಹಾಕಿದ್ದೊ.'

‘ಎಲ್ರ ಮೇಲ್ ಕೇಸ್ ಹಾಕುದೆಂತಕಂತೆ, ಮಂಡೆ ಸಮ ಇಲ್ಯ ಅವ್ಕೆ? ಅವ್ರನ್ನ ಯಾರ್ ಹೊಡ್ದಿದ್ರೊ ಅವರ್ಮೆಲೆ ಕೇಸ್ ಹಾಕಕಲ್ದ ಅವು?’

‘ಅವು ತಂ ಕಂಪ್ಲೇಂಟಲ್ಲಿ ನಂ ಜಾತಿ ಜನ ಎಲ್ಲ ಒಟ್ ಸೇರಿ ಚಾಳಿಯಾರ್ ಕೇರಿ ಮೇಲೆ ಬಿದ್ವಿ, ಶಾಲಿ ಒಡ್ಡ್ ಮನಿನೆಲ್ಲ ಕೆಡದು ಹಾಕಿದ್ವಿ ಅಂತ ಬರ್ದಿದ್ದುವಂಬ್ರ್. ಅವ್ ಪ್ರಕಾರ ನಾವ್ ಕಲ್ಲು ಬಿಸಾಡಿ ಮನಿ ಮಾಡ್ನ ಹಂಚೆಲ್ಲ ಒಡೆದಿದೀವಿ. ಅವ್ ಮನಿ ಹೆಂಗಸ್ರ ಸೀರಿ ಎಳ್ದು ಮರ್ಯಾದೆ ತೆಗ್ದಿದೀವಿ. ಅವ್ ಮನಿಗೋಗಿ ಆಸ್ತಿ ಲೂಟಿ ಹೊಡ್ದಿದೀವಿ...’

‘ಸುಂ ಕೂಕಣುಕೆ ಆತ್ತಿಲ್ಯಲ ಅವ್ಕೆ, ಅವಕ್ ಮಂಡಿ ಸಮ ಇಲ್ದೆ ಹೇಳ್ತೊ ಎಂತೆಂತದೊ. ಆದ್ರೆ ಈ ಪೊಲೀಸ್ನವುಕ್ ತಲಿ ಒಳಗ್ ಎಂತ ತೌಡ್ ತುಂಬಿತ್ತಾ? ಅವ್ ಸರಿ ವಿಚಾರಣಿ ನಡೆಸ್ಬೇಕಿತ್..’

‘ಅದಾಯ್ತಲೆ, ಮಂಡಿ ಸಮ ಇಲ್ದವ ಆಡದ್ ಮಾತ್ನೆಲ್ಲ ಪೋಲೀಸ್ನವು ನಂಬುದ್ ಯೆಂತಕೆ? ಯಾವನೋ ಒಬ್ಬ ನಾಲ್ಗಿಗೆ ಬಂದುದ್ನೆಲ್ಲ ಆಡ್ತ ಅಂದ್ರೆ ಉಳಿದೋವ್ಕೆ ಗುತ್ತಾತಿಲ್ಯ? ಹಾಳಾದ್ ಪೊಲೀಸ್ನವು ಅಲ್ಲೋಗಿ ಬದ್ದಕೂ ಆಗಿದ್ ಯೆಂತ ಅಂತ ಕಂಡ್ಕಂಡ್ ಬರ್ಬೇಕ್ ತಾನೆ?’

‘ಪೋಲೀಸ್ನೋವ್ ಕೇಳ್ತೊ ಅಂದ್ವೆಳಿ ಅವು ಮೊದ್ಲೆ ತಮ್ಮನಿ ಹಂಚ್ನ ತಾವೇ ಒಡದು ಹಾಕ್ಕಂಡ್ವು ಅಂಬ್ರಪ. ಮನಿ ಒಳ್ಗೆಲ್ಲ ಕಲ್ಲು ಮಣ್ಣುಹೆಂಟೆ ರಾಶಿ ಹಾಕಿ ಕಂಡ್ರೆ ಎಂತದೋ ಆಗಿದೆ ಅನ್ನಂಗೆ ಮಾಡಿದ್ವಂತೆ.’

‘ಹಂಗಾರೆ ಈಗ ನಾವೇನ್ ಮಾಡುದು?’

‘ಮತ್ತೆಂತ ಮಾಡುದು, ಹಿರಿಯನ ಹತ್ರ ಮನಿಗೊಬ್ರಂಗೆ ಜನ ಒಟ್ಟು ಮಾಡುಕ್ ಹೇಳಿ, ಕತ್ತಿ ಚಾಕು ಬಾಕು ಎಲ್ಲ ಒಟ್ ಮಾಡ್ಕಬೇಕು. ಆ ಕತ್ತಿರುಂಬನ ಮಗಂಗೆ ಕಂಟ್ರಿ ಬಾಂಬು ಮಾಡಕ್ಕೆ ಬತ್ತು ಅಂತೊ. ಅದು ರೆಡಿ ಇರ್ಕ್, ಒಟ್ ಅವನ್ನ ಹಂಗೇ ಬಿಡಬಾರ್ದು. ತೋರ್ಸಿಬಿಡಬೇಕು ನಾವಂದ್ರೆ ಯಮನ ಬೊಜ್ಜ ತಿಂದವ್ರು ಅಂತ.’

ಇಂಥ ಈ ಮಾತು ಕೇಳ್ತಾ ಹೋದಂಗೆ ಆ ದಿನ, ಕೊನೇ ಹೋರಾಟದ ದಿನ ಯಾವತ್ತು ಬರಬೋದು ಅಂತ ಕಾಯಕ್ ಶುರುಮಾಡ್ದೆ. ಆದ್ರೆ ನಮ್ಮನೆಯೋರು ಅಲ್ಲಿಗೆ ನನ್ನ ಹೋಗಕ್ಕೆ ಬಿಡಲ್ಲ ಅಂತ ಗೊತ್ತಿತ್ತು. ಅಂಥದೇನಾದ್ರೂ ನಡೆದ್ರೆ ಮನೇಲಿ ಹೊಸಲೂ ದಾಟದಂಗೆ ಕೂಡಿಹಾಕ್ತಾರೆ.

ಅವತ್ತು ಶಾಲೆಗೆ ರಜ ಕೊಟ್ಟಿದ್ರು. ನನ್ನ ಪುಟ್ಟ ತಮ್ಮ, ತಂಗಿ ಇಬ್ರಿಗೂ ಹುಶಾರಿರ್ಲಿಲ್ಲ. ಅದು ಯಾವಾಗ್ಲೂ ಹಂಗೇ ಅಂತೆ ಅವಳಿಜವಳಿ ಮಕ್ಕಳಲ್ಲಿ. ಅಮ್ಮ ಒಬ್ರನ್ನ, ಅಜ್ಜಿ ಮತ್ತೊಬ್ರನ್ನ ಹೆಗಲ ಮೇಲೆ ಹೊತ್ಕಂಡು ಆಸ್ಪತ್ರೆಗೆ ತಗೊಂಡು ಹೊರಟ್ರು. ನನ್ನ ಬೆನ್ನ

ಮೇಲೆ ಒಬ್ಬ ತಂಗಿ ಇದ್ಲು, ಏಳು ವರ್ಷದೋಳು. ಅವಳನ್ನ ನೋಡ್ಕ ಅಂತಂದು ನಮ್ಮನ್ ಮನೇಲಿ ಬಿಟ್ಟು ಹೋದ್ರು.

ಸ್ವಲ್ಪ ಹೊತ್ತಲ್ಲೆ ಬೀದೀಲಿ ಜೋರು ಗಲಾಟೆ. ಬಾಗ್ಲಿಂದ ಹೊರಗೆ ಇಣುಕಿದ್ರೆ ಗಣಸ್ರು, ಹೆಂಗಸ್ರು ಎಲ್ಲ ಸ್ಮಶಾನದಲ್ಲಿ ಶುರುವಾಗಿರೋ ಜಗಳದ ಬಗ್ಗೆ ಮಾತಾಡ್ತಾ ಓಡ್ತಾಓಡ್ತಾ ಹೋಗ್ತಿದ್ರು. ನಂಗೂ ಅವರ ಜೊತೆ ಹೋಗ್ಬೇಕು ಅಂತ ತುಂಬ ಆಸೆ. ನಮ್ಮನೆಯಿಂದ ಸ್ಮಶಾನಕ್ಕೆ ಹೋಗ್ಬೇಕಾದ್ರೆ ನಾಕ್ಕೈದು ಬೀದಿ ದಾಟಿ ಊರ ತುದಿಗೆ ಹೋಗ್ಬೇಕಿತ್ತು. ಸ್ಮಶಾನದಲ್ಲಿ ಒಂದು ದೊಡ್ಡ ಅತ್ತಿಮರ ಇತ್ತು. ಅದರ ಹಣ್ಣು ಕೊಯ್ಯಕ್ಕೆ ಅಂತ ಮೊದ್ಲು ಅಲ್ಲಿಗೆ ಹೋಗಿದ್ದೆ ನಾನು. ಅದಕೂ ಮುಂಚೆ ಭತ್ತ ಬಡಿಯೋ ಹೊಡೆಮಂಚ ಹಾಕ್ದಾಗ ಉಳಿದ ಹುಡುಗ್ರ ಜೊತೆ ಹೋಗಿದ್ದೆ.

ನಂಗೆ ಅಲ್ಲಿ ಹೋಗಿ ಜಗಳ ನೋಡ್ಲೇಬೇಕು ಅನಿಸ್ತಿತ್ತು, ಆದರೆ ಅದೇ ಹೊತ್ಗೆ ಬೇಡ ಅಂತಲೂ. ಅಮ್ಮಂಗೇನಾದ್ರೂ ಬಂದ್ಮೇಲೆ ನಾ ಹೋದೆ ಅಂತ ತಿಳೀತಾ, ಸರೀ ಲತ್ತೆ ಬೀಳ್ತಿತ್ತು. ಹಿಂಗೇ ಸ್ವಲ್ಪ ಹೊತ್ತು ತಡಕಂಡು ಆಮೇಲೆ ಇದ್ದಕ್ಕಿದ್ದಂಗೆ ಧೈರ್ಯ ಬಂದಂಗಾಗಿ ತಂಗಿ ಹತ್ರ ಮನೇಲಿರು, ಎಲ್ಲೂ ಹೋಗ್ಬೇಡ ಅಂತಂದು ನಾನು ಸ್ಮಶಾನದ ಕಡೆ ಹೊರಟೇ ಬಿಟ್ಟೆ.

ನಂ ಜನ ಬೀದಿ ಈ ಕಡೆ ನಿಂತು ಕಲ್ಲು ತೂರ್ತಾ ಇದ್ರು. ನಂಗೊತ್ತಿದ್ದ ಒಬ್ರು ಮಾಮಾ ಉಳಿದೋರ ಜೊತೆ ನಿಂತು ಕಲ್ಲು ತೂರ್ತ ಇದ್ರು. ಗಣಸ್ರು ಕೈಲಿ ಕೋಲು, ಕವಣೆ ಹಿಡ್ದು ಮುಂದೆಮುಂದೆ ಹೋದ್ರೆ ಅವರ ಹಿಂದೆ ಹೆಂಗಸ್ರು ಹೆದರ್ಕಂಡು ನಿಧಾನ ನಡಿತಾ ಹೋದ್ರು. ಚಾಳಿಯಾರ್ ಕೇರಿ ಕಡೆಯಿಂದ ಒಂದೇ ಒಂದ್ ಪಿಳ್ಳೆನೂ, ಗಂಡಸೂ ಹೊರಗೆ ಕಾಣ್ಲಿಲ್ಲ. ಅವರು ಕಲ್ಲೂ ಬಿಸಾಡಲಿಲ್ಲ. ಅವರು ಸೋತು ಹೋದ್ರು ಅಂತ ನಾ ತಿಳಿದಿದ್ದೆ. ನಮ್ಜೊತೆ ಇದ್ದ ಹುಡುಗ್ರೂ ಹಾಗೇ ಮಾತಾಡ್ಕಂಡ್ರು. ಚಾಳಿಯಾರ್ ಜನ ಎಲ್ಲ ಓಡೋಗಿ ಎಲ್ಲೋ ಅಡಕ್ಕಂಡಿರಬೇಕು ಅಂತ ಹೆಮ್ಮೆಯಿಂದ ನಾವು ಮಾತಾಡ್ಕಂಡ್ವಿ.

ನಾವು ಹಂಗೆ ಖುಷಿ ಪಡ್ತಿರೋ ಹೊತ್ಗೆ ಎಲ್ಲ ದುಃಖದಲ್ಲಿ ಮುಗದೋಯ್ತು. ಇದ್ದಕ್ಕಿದ್ದಂಗೆ ಪೊಲೀಸ್ನೋರ ದೊಡ್ಡ ಗುಂಪು ಅವ್ರ ಮನೆ ಕಡೆಯಿಂದ ಬಂದು ಲಾಠಿ ತಿರುಗುಸ್ತಾ ನಮ್ ಜನರ ಮಕಮೂತಿ ನೋಡ್ದೆ ಹೊಡೆಯಕ್ಕೆ ಶುರು ಮಾಡ್ತು. ಅವರು ಇಲ್ಲೀ ತಂಕ ಅದೆಲ್ಲಿದ್ರು ಅಂತನೇ ಗೊತ್ತಾಗ್ಲಿಲ್ಲ. ಎಲ್ರು ಬದುಕಿದ್ನೋ ಸತ್ನೋ ಅಂತ ಓಡಕ್ಕೆ ಶುರು ಮಾಡಿದ್ವಿ. ಗಣಸ್ರು ಹೊಲದ ಕಡೆ, ಕಾಡಿನ ಕಡೆ ಓಡಕ್ಕೆ ಶುರು ಮಾಡಿದ್ರು. ಪೋಲೀಸ್ನೋರು ಎಷ್ಟು ಸಾಧ್ಯನೋ ಅಷ್ಟು ಜನ್ರನ್ನ ಹಿಡಿದು ಅರೆಸ್ಟ್ ಮಾಡಿದ್ರು. ಓಡಕ್ಕಾಗದೇ ಇರೋರು ಉಸ್ರು ಬಿಗಿ ಹಿಡಿದು ಹೊಲದ ಬೆಳೆ ಮಧ್ಯ ಮಲಗಿ ತಲೆಮರೆಸಿಕೊಂಡ್ರು. ಆಮೇಲೆ ಪೋಲೀಸ್ನೋರು ನಮ್ ಕೇರಿ ಕಡೆ ಬಂದ್ರು. ಅಲ್ಲಿ ಸಿಕ್ಕ

ಗಣಸ್ರನ್ನೆಲ್ಲ ಒಟ್ಟುವಮಾಡಿ ನೀಲಿಗಟ್ಟಿ ಹೋಗೋ ಹಂಗೆ ಬಡದ್ರು. ಹೊಡಿತಾ ಹೊಡಿತಾನೇ ಅವ್ರನ್ನ ಲಾರೀಲಿ ತುಂಬಿದ್ರು. ಕೆಲವು ಗಂಡಸ್ರು ಮಾತ್ರ ಓಡ್ತಾಓಡ್ತಾ ಕೆರೆ ಏರಿ ಕಡೆ ಹೋಗಿ ತಪ್ಪಿಸಿಕೊಂಡ್ರು. ಹಂಗೆ ಓಡೋದೋರೇ ಹೊಲದಲ್ಲಿ ಇದ್ದೋರತ್ರ ಮನೆಗೆ ಹೋಗ್ಬೇಡಿ ಅಂತನೂ ಹೇಳಿದ್ರು.

ನಾವು ಹೆಂಗಸ್ರು, ಮಕ್ಕಳು ನಮಗೆ ಎಷ್ಟು ಬೇಗ ಓಡಕ್ಕಾಗುತ್ತೋ ಅಷ್ಟು ಬೇಗ ಓಡಿ ಅಂತೂಇಂತೂ ಮನೆ ಬಾಗ್ಲಿಗೆ ಬಂದು ಬಿದ್ವಿ. ಬಾಗಿಲ ಹೊರಗೆ ಪೋಲೀಸ್ನೋರ ಬೂಟಿನ ಧಡ್‌ಧಡ್ ಶಬ್ದ ಕೇಳ್ತಿತ್ತು. ಜೊತೆಗೇ ನಮ್ ಜನ 'ಅಯ್ಯೋ ಅಮ್ಮಾ' ಅಂತ ಕೂಗ್ತಿದ್ದಿದ್ದೂ, ಹೊಡೀತಿದ್ದ ಸದ್ದೂ ಕೇಳ್ತಿತ್ತು. ತಮ್ಮ ಗಂಡಂದ್ರು, ಅಪ್ಪಂದಿರು, ಅಣ್ಣತಮ್ಮದೀರನ್ನ ಹೊಡೆದು ಬಡಿಯೋದು ನೋಡಿ ಹೆಂಗಸರು, ಮಕ್ಕಳು ಗೋಳೋ ಅಂತ ಅಳಕ್ಕೆ ಶುರುಮಾಡಿದ್ರು. ಅಷ್ಟೊತ್ತಿಗೆ ನಮ್ಮನೇಲಿ ಯಾರೂ ಗಂಡಸರಿರಲಿಲ್ಲ. ನಮಪ್ಪ ಮತ್ತು ಅಣ್ಣ ಇಬ್ರೂ ಹೊರಗಿದ್ರು. ಆದ್ರು ನಂಗೆ ಅಳು ತಡಕಳಕ್ಕೆ ಆಗಲಿಲ್ಲ. ನನ್ ತಂಗಿನೂ ನನ್ ಜೊತೆನೇ ಅಳಕ್ಕೆ ಶುರು ಮಾಡಿದ್ಲು. ಅಷ್ಟೊತ್ತಿಗೆ ಅಮ್ಮ ಮತ್ತು ಅಜ್ಜಿ ಬಂದ್ರು. ಬರುವಾಗ ದಾರಿ ಮೇಲೆ ನಮ್ಮ ಗಣಸ್ರನ್ನ ಹೊಡದು ತುಂಬ್ಕಂಡ್ ಹೋಗೋದು ನೋಡಿ ಅವರೂ ಹೆದರಿ ಗಾಬರಿಯಾಗಿದ್ರು. ಅಜ್ಜಿ ಕೇಳಿದ್ಲು, 'ಏನ, ಏನಾಯ್ತು? ಮತ್ತೆ ಶುರುವಾತಾ ಕಾಂತೆ ಹೊಡ್ಕಂಬುದ್..'

ಏನಾಯ್ತು ಅಂತ ನಾನೆಲ್ಲ ಹೇಳಿದೆ. 'ನಿನ್ನ ಅಲ್ಲಿಗ್ ಹೋಗು ಅಂತ ಹೇಳಿದೋರು ಯಾರ್ ಹೆಣೆ? ಒಂದ್ಕಲ್ಲು ನಿನ್ ಮಂಡಿ ಮ್ಯಾಲ್ ಬಿದ್ದು ಬೊಂಡ ಒಡದಂಗ್ ಒಡದೋಯಿದ್ರೆ ನಾವ್ ಯಂತ ಮಾಡ್‌ಕಿತ್ತು?' ಅಂತ ಕೇಳಿ ಅಷ್ಟಕ್ಕೇ ಬಿಟ್ಟುಬಿಟ್ಟರು. ಎಲ್ಲರಿಗೂ ಎಂಥ ಗಾಬರಿ ಅಂದ್ರೆ ನಾನು ಸದ್ಯ ಪಾರಾದೆ. ಬೇರೆ ಹೊತ್ತಲ್ಲಿ ಆಗಿದ್ರೆ ಸರೀ ಆಗಿರ್ತಿತ್ತು ನಂಗೆ.

ಸಂಜೆಯಾಗೋ ತಂಕ ಅಳು, ಕೂಗು ನಿಲ್ಲಲಿಲ್ಲ. ಆದ್ರೆ ಸಂಜೆ ಇದ್ದಕ್ಕಿದ್ದಂತೆ ಬೀದಿ ನಿಶ್ಶಬ್ದಾಗಿ ಸ್ಮಶಾನದಂಗೆ ಆಯ್ತು. ಒಬ್ಬೇಒಬ್ಬ ಮನ್ಶನೂ ಕಾಣ್ತಿರಲಿಲ್ಲ. ಅಲ್ಲಿಲ್ಲಿ ಹೆಂಗಸರೇ ಗುಂಪಾಗಿ ನಿಂತು ಏನೋ ಪಿಸಿಪಿಸಿ ಮಾತಾಡ್ತಾ ಇದ್ರು. ನನಗಂತೂ ಏನೂ ಅರ್ಥಾಗ್ಲಿಲ್ಲ. ಮನೇಲಿ ಯಾರೂ ಒಬ್ರಿಗೊಬ್ರು ಒಂದು ಪದನೂ ಮಾತಾಡ್ಲಿಲ್ಲ. ಸುಮ್ಮನೆ ಕೂತಿದ್ವಿ. ಆವಾಗೀವಾಗ ನನ್ನ ಪುಟ್ಟ ತಮ್ಮನೋ, ತಂಗಿನೋ ಅತ್ತರೆ ನಾನು ಕೂಡ್ಲೆ ಹೋಗಿ ತೊಟ್ಟಿಲು ತೂಗಿಬರ್ತಿದ್ದೆ, ಯಾವ ಸದ್ದೂ ಹೊರಡಬಾರ್ದು ಅನ್ನೋ ಹೆದರಿಕೆಗೆ. ನಂ ಬೀದಿಯ ಇಂಥ ಗಾಢ ಮೌನದಲ್ಲಿ ಮಕ್ಕಳ ಅಳು ಎದೆಗೆ ಚೂರಿ ಹಾಕಿ ಇರಿದಂಗೆ ಕೇಳ್ತಿತ್ತು. ರಾತ್ರಿ ಅಜ್ಜಿ ಬಂದ್ಲು. ಅವಳು ಬಂದೋಳು ಏನಾಯ್ತು ಅಂತ ಎಲ್ಲ ವಿವರ ಹೇಳಿದ್ಲು.

‘ಚಾಳಿಯಾರ್ ಜನ ‘ರಿಸರ್ವ್ ಪೊಲೀಸ್’ ಅಂತ ಯಾವ್ರೋ ಜನ್ರನ್ನ ಕರ್ಸಿದ್ರಂಬ್ರ್. ಅವುನ್ ಕರಸೋ ಕರ್ಚೇನ್ ಕಮ್ಮಿ ಇರತ್ತಾ? ಶಿವಕಾಶಿಂದ ಅವುನ್ ಕರ್ಸಿ, ಅವುಕ್ ಅಂತ್ಲೆ ಒಂದ್ ಕುರಿ ಕಡ್ದು ಭರ್ಜರಿ ಮಟನ್ ಊಟ ಹಾಕಿದ್ವಂಬ್ರ್. ಹೆಂಗಾರೂ ಆಯಿ ನಮ್ ಹುಡುಗ್ರನೆಲ್ಲ ಸರ್ವನಾಶ ಮಾಡ್ಕಂದೇಳಿ ಅದಕ್ ಎಷ್ಟ್ ಕರ್ಚಾದ್ರು ಪರ್ವಿಲ್ಲ ಅಂತ್ ಕಿತಾಪತಿ ಮಾಡ್ತಿದ್ದೊ. ದಿನಕ್ಕೆರ್ಡೆರ್ಡು ಕುರಿ, ನಮಗದು ಆಪ್ದಾ? ಎರಡು ಹೊತ್ತು ಗಂಜಿತೆಳಿ ಕುಡಿಯುದೆ ನಮಗ್ ತತ್ವಾರ. ಹಂಗಿರ್ತ ಪೊಲೀಸ್ನವು, ಸರ್ಕಾರ ಹೆಂಗೆ ನಮ್ ಕಡಿಗಿರ್ತೊ ಹೇಳ್?’

‘ಕಣ್ಣಿಗೆ ಬೀಳೋ ಒಬೊಬ್ರುನು ಹೊಡ್ದ್, ಅರೆಸ್ಟ್ ಮಾಡಿ ಅವು ಒಳಗಾಕ್ತ ಇದ್ವು ಅಂತ್ರಲೆ?’

‘ಪೋಲೀಸ್ರು ಒಳಗಾಗ್ದವಕ್ಕೆ ಏನ್ಮಾಡ್ತ್ರು ಅಜ್ಜಿ?’

‘ಅವುನ್ ತಕ ಹೋಯಿ ದನ ಎಮ್ಮಿಗ್ ಚಾಟಿಯಿಂದ ಹೊಡಿತ್ರಲೆ ಹಂಗ್ ಹೊಡೀತ್ವು. ಕಣ್ ಕಪ್ ಕಪ್ಪಾಗಿ ಏನೂ ಕಾಣದಂಗಾಗಿ ಉಸ್ರು ಬಿಡಕ್ಕಾಗ್ದಂಗೆ ಹೊಡೀತ್ವಂಬ್ರ್. ಜೀಂವ್ ಬದ್ಕಿ ಉಳುದ್ರೆ ಜೈಲ್ಗಾಕಿ ಕೂಡಾಕ್ತೊ. ಹಂಗಂತ್ವಪ್ಪ.’

‘ಅಜ್ಜಿ, ಹೊಡ್ದ ಮೇಲೆ ಅವ್ರಿಗೆ ಉಂಬುಕ್ ಕೊಡ್ತುವ?’

‘ಎಂಥ ಊಟ? ನಿನ್ ಮಂಡಿ. ಊಟದ ಹೆಸ್ರಲ್ಲಿ ಒಂಚೂರು ರಾಗಿದೋ ಜೋಳದ್ದೋ ಗಂಜಿ ಕೊಡ್ತುವಂಬ್ರ್. ಒಳಗೋದವ್ ಏನಾದ್ರು ಮೇಲ್ಜಾತಿಯೋವಾದ್ರೆ ಅತವಾ ಸ್ರೀಮಂತ್ರಾಗಿದ್ರೆ ಅತವಾ ಪೊಲೀಸ್ನವ್ಕೆ ಹೆಂಗಾರ ಬೇಕಾದೋವಾದ್ರೆ ಒಂದೆರೆಡು ಸಣ್ಣ ಪೆಟ್ಟು ಮಾತ್ರ ಹಾಕಿ ಇಟ್ಕಂತೊ..’

‘ಅಜ್ಜಿ, ಕಡಿಗ್ ಅವ್ರನ್ನ ಮನಿಗ್ ಬಪ್ಪುಕ್ ಬಿಡುದ್ ಏಗ್ಳಿಗೆ?’

‘ಮೊದ್ಲು ಅವ್ರು ಬದುಕುಳಿಕಲೆ, ಅಷ್ಟು ಹೊಡ್ತ ತಿಂದ್, ಹಿಂಸೆ ಅನುಬೈಸಿ, ಕೇಸು ಎಷ್ಟೆಷ್ಟೊ ಸಲ ಮುಂದ್ಮುಂದ್ ಹೋಯಿ ಹೋಯೀ ಅಂತೂ ಕೊನಿಗ್ ಇಚಾರ್ಣಿ ಆಪತಿಗ್, ಆ ದೇವ್ರಿಗೇ ಗೊತ್ತು ಯಾವಾಗ ಬಿಡುಗಡೆಯಾಗಿ ವಾಪಸ್ ಬತ್ವಂತ.’

ಅವತ್ ರಾತ್ರಿ ಯಾರೂ ನಿದ್ದೆ ಮಾಡ್ಲಿಲ್ಲ. ರಾತ್ರಿಡಿ ಪೋಲೀಸ್ನೋರು ಕೇರಿ ಸುತ್ತಾಕ್ತಾ ತಿರುಗ್ತನೇ ಇದ್ರು. ಪೋಲೀಸ್ನೋರ ಬೂಟಿನ ಸದ್ದು, ನಾಯಿ ಬಗುಳೋ ಸದ್ದು ಬಿಟ್ರೆ ಬೇರೆ ಶಬ್ದನೇ ಇರ್ಲಿಲ್ಲ. ಬೂಟಿನ ಸದ್ದಿಗೆ ಒಂಥರಾ ಹೆದರಿಕೆ ಆಗ್ತಿತ್ತು. ಅವ್ರು ಪ್ರತಿ ಹೆಜ್ಜೆನೂ ನನ್ನ ಎದೆ ಮೇಲೇ ಇಟ್ಟು ಮುಂದೆ ಹೋಗ್ತಿದಾರೇನೋ ಅನಿಸ್ತಿತ್ತು. ಗಟ್ಟಿಯಾಗಿ ಅಳಬೇಕನಸ್ತಿತ್ತು. ಆದ್ರೆ ಗಂಟಲ ಒತ್ತಿಡಿದು ಹೆದರಿ ನಡುಗ್ತ ಮಲಗ್ದೆ. ಯಾವುದಾದ್ರೂ ಎಳಗೂಸು ಅಳಕ್ ಶುರುಮಾಡಿದ್ರೆ ಸಾಕು, ನಮ್ಮ ಹೆಂಗಸ್ರು ಹೆಂಗಾದ್ರು ಮಾಡಿ ಅದನ್ನು

ಸುಮ್ಮನಿರಿಸ್ತ ಇದ್ರು. ನಮ್ಮ ಮನೆಲೂ ಹಂಗೇ ಇತ್ತು. ಪೊಲೀಸ್ರಿಗೇನಾದ್ರು ಶಬ್ದ ಕೇಳಿದ್ರೆ ಮನೆಯೊಳಗೆ ಬಂದ್ಬಿಡ್ತಾರೆ ಅನ್ನೊ ಭಯ. ಸಣ್ಣ ಸದ್ದೂ ದೊಡ್ಡದಾಗಿ ಕೇಳ್ಸಿ ಒಳಗೊಳಗೇ ನಡುಗುಸ್ತಿತ್ತು.

ಮರುದಿನ ಹೆಂಗಸ್ರು ತಂ ಮಾಮೂಲಿ ಕೆಲ್ಸದ ಜೊತೆ ಗಣಸ್ರ ಕೆಲಸಾನೂ ಮುಗಿಸಿದ್ರು. ಪೊಲೀಸ್ರು ಹಿಂದೆಮುಂದೆ ತಿರುಗೋದು ಮುಂದುವರೀತು. ಅಲ್ಲಿವರ್ಗೆ ಅರೆಸ್ಟ್ ಆಗದೇ ತಪ್ಪಿಸ್ಕೊಂಡಿದ್ದೋರಲ್ಲಿ ಒಬ್ಬನ್ನೂ ಬಿಡದೇ ಹಿಡ್ಕೊಂಡು ಹೋಗಕ್ ಅವರು ಬಂದಂಗಿತ್ತು. ಅವತ್ತು ಬೆಳಿಗ್ಗೆ ಹೆದರ್ತನೇ ಜಗಲೀಲಿ ಬಂದು ಕೂತೆ. ಹೊರಗೆ ತುಂಬ ಹೆಂಗಸ್ರು ಗುಸುಗುಸು ಮಾತಾಡ್ಕತಾ ಇದ್ರು. ಏನೋ ಗುಟ್ಟು ಹೇಳೋರಂಗೆ ಮೆಲ್ಗೆ ಹಿಂದಿನ ದಿನ ಏನು ನಡೀತೂಂತ ಚರ್ಚೆ ಮಾಡ್ತಿದ್ರು.

'ಪೋಲೀಸ್ರು ಆ ಆಲ್ಫಾನ್ಸೋನ ಹಾದಿ ಮದ್ಯ ಕ್ವಾಣಕ್ ಜಪ್ಪಿದಂಗ್ ಜಪ್ಪಿದ್ರಂಬ್ರ. ರಕ್ತ ಕಾರ್ಕಳಕ್ಕೆ ಶುರುವಾದ್ದು ನಿಲ್ಸಕ್ಕಾಗ್ದೆ ಅಂವಾ ಬದ್ಕದೇ ಕಷ್ಟ ಅಂಬ್ರ..'

'ಮೇಲ್ನ ಕೇರೀಲಿ ಮರಿಯಪ್ನ ಮಗನ್ನ ಹೊಡೀವಾಗ ಐದ್ರುಪಾಯ್ ನೋಟು ಅವ್ನ ಕಿಸಿಂದ ಉದ್ರಿ ಬಿತ್ತಂಬ್ರ. ಅವನವ್ವಿ ಅದ್ನ ಹೆಕ್ಕಳಕ್ಕೆ ಅಂತ ಅಳತಾ ಬಗ್ಗತಂತಾಯ್ತ್. ತಕಾ, ಒಬ್ ಪೊಲೀಸ್ನೋನು ಅವ್ಳ ಹೊಟ್ಟೆಗೇ ಒದ್ ತಾನೇ ನೋಟ್ ತಗಂಡ ಅಂಬ್ರ.'

'ಆಚಿ ಕೇರಿ ಮಾಸ್ಟ್ರು, ಅವ್ರನ್ನ ಹಿಡ್ದ್ ಸಮಾ ಕೊಟ್ರಂಬ್ರ. ಮಾಸ್ಟ್ರು ಅವ್ರಿಗೆ ಕೈಮುಕ್ಕಂಡ್ 'ಸಾರ್, ನಾನು ಮೇಷ್ಟ್ರು ಮಾತ್ರ. ನಾ ಇಂಥದ್ರಲ್ಲೆಲ್ಲ ತಲೆ ಹಾಕಲ್ಲ' ಅಂತ ಗೋಳಾಡಿದ್ಮೇಲೆ ಮತ್ತೂ ಎರಡ್ ಬಾರ್ಸಿ ಕೊನೆಗೆ ಬಿಟ್ರಂಬ್ರ.'

ಇದನ್ನೆಲ್ಲ ಅವ್ರು ಒಬ್ರಿಗೊಬ್ರು ಹೇಳ್ಕತಾ ಇರುವಾಗ ಘಟಘಟ ಬೂಟು ಶಬ್ದ ಆಯ್ತು. ಅಷ್ಟು ಆಗಿದ್ದೇ ಎಲ್ಲ ಓಟ ಹೊಡದು ಜಾಗ ಖಾಲಿ ಮಾಡಿದ್ವಿ. ನಾನೂ ಓಡೋಗಿ ಮನೆ ಬಾಗ್ಲು ಹಾಕ್ಕಂಡೆ.

ಮಾಮೂಲಾಗಿ ಹೆಂಗಸ್ರು ಹೊಲದ ಕೂಲಿ ಕೆಲಸಕ್ಕೆ ಹೋದರು. ದಾರಿ ಮೇಲೆ ಪೊದೆ ಮೆಳೇಲಿ ಅಡಕ್ಕಂಡಿದ್ದ ತಮ್ಮ ಗಣಸ್ರಿಗೆ ಊಟ ಕೊಟ್ಟು ಏನು ನಡೀತೂಂತ ಹೇಳಿದ್ರು. ಹೀಗೇ ತಮ್ಮ ಗಣಸ್ರ ಸಂಪಾದ್ನೆ ಇಲ್ದೆ ಹೆಂಗೋ ಹೆಂಗಸ್ರು ಸರಿ ತೂಗಿಸ್ಕಂಡು ಹೋಗತಾ ಇದ್ರು. ಪ್ರತಿದಿನ ಪೊಲೀಸಿನೋರು ಬೀದಿ ಸುತ್ತಿ ಹೋಗ್ತಿದ್ರು. ಆಮೇಲೆ ಒಂದೊಂದಾಗಿ ಮನೆ ಹೊಕ್ಕು ಹುಡುಕಿ ಅಡಕ್ಕಂಡಿರೋ ಗಂಡಸ್ರನ್ನ ಎಳದು ಹಾಕಕ್ಕೆ ಶುರು ಮಾಡಿದ್ರು. ಪಲ್ಲ ಜನ ನಮ್ಮ ಕೆಲ ಗಂಡಸ್ರು ಮನೇಲಿ ಅಡಕ್ಕಂಡಿದಾರೆ ಅಂತ ಸುಳುವು ಕೊಟ್ಟಿದ್ರಂತೆ. ಅಜ್ಜಿಗೆ ಇದು ಗೊತ್ತಾಗಿದ್ದೇ ಸಿಟ್ಟಾಗಿ ಉರಿದೋದ್ಲು. 'ಈ ಪಲ್ಲ ಹುಡುಗ್ರ ಕಾಣ್, ತಮ್ಮೋರ್ಗೇ ದ್ರೋಹ ಬಗೆಯುದಾ? ಆ ಹುಡುಗ್ರು ಪೊಲೀಸ್ನೋರಿಗೆ ಹೆದರ್ಕಂಡಾಗ್ಳಿಗ್ ಜಾಗ ಕೊಟ್ಟದ್ ಪರಯ್ಯಾಗಳೇ ಅಲ್ದಾ? ನಂ ಮನೇಲಿ ಅಡಕ್ಕಂಡ್ವು,

ನಾವು ಹಾಕಿದ್ನೆ ತಿಂದು ನಂ ನೀರೇ ಕುಡುದ್ವು. ಅವನ್ನ ಒಳಗೆ ಬಿಟ್ಕಂಡು ಕಾಪಾಡಿದ್ ಯಾಕೆ? ಅವು ಸಾ ನಂ ಜನ ಅಂತ. ಈಗ ಕಾಣ್, ಅವುಕ್ ನಂ ಬಗ್ಗೆ ಹಂಗನ್ಸತ್ತ ಅಂತ?'

ಅಷ್ಟೊತ್ತಿಗೆ ಯಾರೋ ನಮ್ಮನೆ ಬಾಗ್ಲನ್ನ ಧಬಧಬ ಬಡಿಯಕ್ ಶುರು ಮಾಡಿದ್ರು. ನಾವೆಲ್ಲ ಅದು ಪೋಲೀಸ್ನೋರೇ ಅಂತ ಹೆದರಿ ಅಡಕ್ಕಂಡು ಕೂತ್ರೆ, ನಮ್ಮಜ್ಜಿ ಹೋಗಿ ಬಾಗ್ಲು ತೆಗೆದ್ಲು. ನಂ ಜಾತಿ ಹಿರಿಯ ಒಳಗೆ ಭರ್ ಅಂತ ಬಂದೋನೇ ಭತ್ತ ತುಂಬೋ ಮಣ್ಣಿನ ಪಣತದೊಳಗೆ ಹೊಕ್ಕಂಡು ಮುಚ್ಚಿಟ್ಕಂಡ್ಬಿಟ್ಟ. ಅವನಮ್ಮನೂ ಅವ್ನ ಹಿಂದೆನೇ ಬಂದು 'ಪೋಲೀಸ್ನವು ಈಗ್ಲೂ ಮನೆಮನೆ ಹುಡುಕ್ತಿದ್ವು. ಅಂವಂಗೀಗ ಬೇರೆಲ್ಲೂ ಓಡುಕಾತಿಲ್ಲ. ಪೊಲೀಸ್ನವು ಸುತ್ತಮುತ್ತೆಲ್ಲ ಇದಾವೆ. ಹೆಂಗಾರ ಅವ್ನ ಅಡಗ್ಸಿ ಕಾಪಾಡಿ..' ಅಂತ ಹೇಳಿದ್ಲು.

ಇಷ್ಟ್ ಹೇಳಿ ಅವ್ವು ಹೊರಗೆ ಹೋಗಿ ಕೂತ್ಲು. ನಮಗೆಲ್ಲ ಭಯ, ಹೆದರಿ ಸತ್ತಂಗಿದ್ವಿ. ನಾನಂತೂ 'ದೇವ್ರೇ, ಪೋಲೀಸ್ನೋವು ನಮ್ಮನೆ ಒಳ್ಗೆ ಬರದಂಗೆ ಮಾಡಪ್ಪ' ಅಂತ ಬೇಡ್ಕತಾ ಕೂತಿದ್ದೆ.

ಪೋಲೀಸ್ನೋರ ಧಪ್ ಧಪ್ ಸದ್ದು, ಢಗ್ ಢಗ್ ಅಂತ ಕಾಲು ಕುಟ್ಟೋ ಸದ್ದು, ನಂ ಗಣಸ್ರು ನೋವಿಂದ ಅರಚೋ ಸದ್ದು, ಹೆಂಗಸ್ರು ವಿರೋಧಿಸ್ತ ಕಿರುಚೋ ಸದ್ದು ಎಲ್ಲ ಕೇಳ್ತಿತ್ತು. ಎಲ್ಲ ಕೇಳ್ತಕೇಳ್ತ ಕೂತಲ್ಲೆ ನಡುಗ್ತಿದ್ವಿ. ಮನೆ ಒಳಗಿಂದ್ಲೆ ಬೆಂಚು ಹತ್ತಿ ಹೊರಗೆ ಏನಾರ ಕಾಣುತ್ತಾ ಅಂತ ಇಣುಕಿ ನೋಡ್ತಿದ್ದೆ. ಸಾಲ್ ಸಾಲು ಕಬ್ಬಿಣದ ಟೊಪ್ಪಿ ಪೋಲೀಸ್ನೋರು ನಮ್ಮನೆ ಮುಂದಿಂದ ಹೋಗಿದ್ದಷ್ಟೇ ಕಾಣ್ತಿತ್ತು. ಆಮೇಲೆ ಒಂದೆರಡೇ ನಿಮ್ಷ, ಹತ್ತನ್ನೆರೆಡು ಜನ ಸೀದ ನಮ್ಮನೆ ಒಳಗೇ ಬಂದ್ರು. ಅಮ್ಮ ಹಂದಾಡ್ದೆ ನೆಟ್ಟಗ್ ನಿಂತ್ಲು ಕಂಕ್ಳಲ್ಲಿ ಒಂದ್ ಮಗೂನ ಚಚ್ಕಂಡು. ಅವ್ರು ಕಾಲಲ್ಲಿ ಒದ್ ಒದ್ದು ಎಲ್ಲ ಬಾಗ್ಲೂ ತೆಗೆದ್ರು, ಎಲ್ಲ ರೂಮೊಳಗೂ ನೋಡಿದ್ರು. ಬಚ್ಚಲ್ಲೂ ಇಣುಕಿ ನೋಡಿದ್ರು. ಕಟ್ಗೆ ರಾಶಿನೂ ಹುಡುಕಿದ್ರು.

ನಾಟಾಮ್ಮೆ, ಆ ಮಣ್ಣಿನ ಪಣತದ ಕೋಣೆ ಹೊಕ್ಕಳೋವಾಗ ಅದ್ರ ಬಾಕ್ಲು ಮುಚ್ಚಿ ಒಳ್ಗಿಂದ ಚಿಲಕ ಹಾಕ್ಕಂಡ್ ಆ ಪಣತದಲ್ಲಿ ಹೊಕ್ಕಂಡಿದ್ದ. ಪೋಲೀಸ್ನೋರಿಗೆ ಆ ಅರೆತೆರೆದ ಬಾಕ್ಲು ತೆಗೆಯಕ್ ಆಗಲ್ಲ ಅಂತ ಗೊತ್ತಾದ್ದೇ ಅಮ್ಮನ್ನ ಕರದು ಅದ್ನ ತೆಗಿ ಅಂದ್ರು. ಅವ್ವು ಅವ್ರನ್ನ ಸಾಗಹಾಕಕ್ಕೆ ನೋಡ್ದಂಗೂ ಅವರ ಅನುಮಾನ ಹೆಚ್ಚಾಗ್ತ ಹೋಯ್ತು. ಯಾರ್ನೋ ಬಚ್ಚಿಟ್ಟು ನಾಟ್ಕ ಮಾಡ್ತ ಇದಿಯಾ ನಾಟ್ಕ ಅಂತಂದು ಬಾಗಿಲ್ನ ಧಡಾರ್ ಅಂತ ಒದ್ದು ತೆಗೆದ್ರು. ಅಡಕ್ಕಂಡಿದ್ದೋನನ್ನ ಕೂದ್ಲು ಹಿಡ್ದು ಎಳದು ಹೊರಹಾಕಿ ಹೊಡ್ತದ ಮಳೆ ಸುರಿಸಿದ್ರು. ನಂಗಂತೂ ಅಳು ಬಂದೋಯ್ತು. ಪೋಲೀಸ್ನೋರು ತಾವು ಹಿಡದೋರ್ನ ಹೆಂಗ್ ಹೊಡೀತಾರೆ ಅಂತ ಅವತ್ತೇ ನಾ

ನೋಡಿದ್ದು. ಒಬ್ಬ ಕಪಾಳಕ್ ಹೊಡದ್ರೆ ಉಳದೋರೂ ಅಲ್ಲಿಗೇ, ಅಲ್ಲಲ್ಲಿಗೇ ಹೊಡೀತಿದ್ರು. ಒಬ್ಬ ತುಳಿದ್ರೆ ಉಳದೋರೂ ತುಳಿತಿದ್ರು. ಕೊನೆಗೆ ಹೊಡಿತ ಹೊಡಿತನೇ ಬಾಕ್ಲು ತಂಕ ಎಳ್ಕಂಡ್ ಬಂದು ಒದ್ದು ಹೊರಗೆ ಹಾಕಿದ್ರು. ಹೊರಗೇ ಕೂತಿದ್ದ ಅವನಮ್ಮ ಅವ್ರ ಜೊತೆ ವಾದ ಮಾಡ್ತ, ಅಳ್ತಾ, 'ಬಿಡಿ ಒಡ್ಯಾ ಬಿಡಿ, ಅವ್ನು ಈ ಕೇರಿಗೇ ಹಿರೀಕ' ಅಂದ್ಲು. 'ಓಹೋಹೋಹೋ, ಇವ್ನೆನಾ ಹಿರೀಕ?' ಅಂತ ಅವ್ರು ಮತ್ತೆ ನಾಕು ಒದ್ರು.

ಇಷ್ಟೆಲ್ಲ ಗಲಾಟೆ ಆದ್ರು ಎರಡ್ಮೂರು ಮನೇಲಿ ಅಲ್ಲಿಯ ಹೆಂಗಸ್ರು ತಂ ಗಣಸ್ರನ್ನ ಬಚ್ಚಿಟ್ಟಿದ್ರು. ಒಂದು ಮನೇಲಿ 'ಒಡೇರೇ, ಅವಳಿಗೆ ಈಗ ಹೆರಿಗಿ ಸೀಕು ಶುರು ಆಯಿತ್. ಬಿಟ್ಬಿಡಿನಿ, ಒಳಗ್ ಬರ್ಬೇಡಿ, ಇಲ್ಲಿ ಇನ್ಯಾರೂ ಇಲ್ಲೆ' ಅಂತ ವಾಪಸ್ ಕಳಿಸಿದ್ರು. ಮನೆ ಒಳಗೆಲ್ಲ ಕತ್ಲು. ಅವರು ಹೇಳಿದ್ದು ನಂಬಿ ಪೋಲೀಸ್ನೋರೂ ಹೊರಟೋಗಿದ್ರು.

ಇನ್ನೊಂದ್ ಮನೇಲಿ ಒಂದ್ ಹೆಂಗ್ಸು ಗಂಡನ್ನ ಒಂದ್ ಚೀಲಕ್ಕೆ ತುಂಬಿ ಅದ್ರ ಮೇಲೇ ಕೂತು, 'ಒಡೆಯ, ನಂಗೆ ತಂಡಿಜರ. ನನ ಗಂಡ ಬಂದು ಆಗ್ಲೆ ನಾಕು ದಿನಾಗೋಯ್ತು. ಅವ್ನ್ ಈ ಕಡೀಗ್ ಎಲ್ಲೂ ಇಲ್ಲೇ ಇಲ್ಲ' ಎಂದು ನರಳಿದಳು. ಪೋಲೀಸ್ರು ಹೋದ್ರು.

ಆಮೇಲೆ ರಸ್ತೆ ನಡೂವೆ ಇಬ್ರನ್ನ ಅಡಗ್ಸಿಟ್ಟು ಪೋಲೀಸ್ನೋರಿಗೆ, 'ಅಯ್ಯ, ನಂ ಸಣ್ಣುಡುಗಿಗೆ ಮೈತುಂಬ ಅಮ್ಮ ಎದ್ದಿದೆ. ನಿಂ ಬೂಟ್ ಹಾಕ್ಕಂಡ್ ಒಳಗ್ ಬರ್ಬೇಡಿ, ಇಲ್ಯಾರೂ ಇಲ್ಲ' ಅಂದ್ರು. 'ಅಮ್ಮ ಎದ್ದಿದೆ' ಅಂದ ಮಾತು ಕೇಳಿದ್ದೇ ಪೋಲೀಸ್ನೋರು ಅತ್ತಕಡೆ ಕಾಲು ಹಾಕ್ಲಿಲ್ಲ. ಮನೆಯಿಂದ್ ಮನೆಗೆ ಅವ್ರು ಹಿಂಗೆ ಹುಡುಕ್ತ ಹೋಗೋವಾಗ ಹೆಂಗಸ್ರ ಜೊತೆ ಕೆಟ್ಟದಾಗ್ ನಡಕಂಡ್ರು ಅಂತ ಸುದ್ದಿ ಬಂತು. ಕೆಟ್ ಕೆಟ್ ಬೈಗುಳ ಬೈದು, ಪದ ಉಪಯೋಗ್ಸಿ, ಅವ್ರ ಗಂಡಸ್ರು ಹೊರಗಿರೋದ್ರಿಂದ ರಾತ್ರಿ ಹೊತ್ನಲ್ಲಿ ಪೋಲೀಸ್ನೋರ್ನ ಖುಶಿ ಮಾಡ್ಬೇಕು ಅಂತ ಕಣ್ಣು ಹೊಡದ್ರಂತೆ. ತಂ ಪಿಸ್ತೂಲಿಂದ ಮೈಮುಟ್ಟಿದ್ರಂತೆ.

ಸೂರ್ಯ ಮುಳುಗೋ ಹೊತ್ಗೆ ಹೆಂಗಸ್ರಿಗೆ ಹೆದರ್ಕೆ ಶುರುವಾಯ್ತು. ಇನ್ನು ಬೆಳಕಿರೋವಾಗ್ಲೆ ಗಂಜಿ ಬೇಸಿ ತಿಂದು, ಮಕ್ಳನ್ನ ಒಟ್ ಸೇರಿಸ್ಕಂಡ್ ಚರ್ಚಿನ ಆವರಣಕ್ಕೆ ಹೋದ್ರು. ಕೆಲವು ಹೆಂಗಸ್ರು ತಮ್ ದನಕರನೂ ತಂತಮ್ಮ ಜೊತೆ ಹೊಡ್ಕಂಡ್ ಹೋದ್ರು. ಏನ್ ನಡೀತಿದೆ ಇದು ಅಂತ ನೋಡ್ತ ನೋಡ್ತ ನಂಗಂತೂ ತುಂಬ ಹೆದ್ರಿಕೆ ಆಯ್ತು. ಅಮ್ಮನತ್ರ ಹೋಗಿ ನಾವೂ ಚರ್ಚಿಗೆ ಹೋಗಣ ಅಂತ ವರಾತ ತೆಗೆದೆ. ಆದ್ರೆ ಇಬ್ರು ಸಣ್ ಮಕ್ಳನ್ ಕಟ್ಕಂಡು ಅಲ್ಲಿ ಹೆಂಗ್ ಮಾಡ್ಲಿ ಅಂದ್ಲು. ಇಬ್ಬಿಬ್ರಿಗೆ ಎಲ್ಲಿ ಜೋಲಿ ಕಟ್ಟದು? ಅದ್ಕೆ ಹೋಗದು ಬೇಡ ಅಂತಾಯ್ತು. ಅವತ್ ರಾತ್ರಿ ಕೇರೀಲಿ ಉಳದೋರು ನಾವು ಮಾತ್ರ.

ಅವತ್ತು ರಾತ್ರಿನೂ ಪೋಲೀಸ್ನೋರು ಹಿಂದೆ ಮುಂದೆ ತಿರುಗ್ತಿದ್ರು. ಆದ್ರೆ ಅವ್ರು ನಮ್ಮನೆ ಒಳಗೆ ಬರ್ಲಿಲ್ಲ. ಬೆಳಗ್ಗೆ ಹೆಂಗಸ್ರು ಮಾಮೂಲಿನಂಗೆ ತಮ್ಮ ಕೆಲಸ, ಕೂಲಿಗೆ

ಹೋದ್ರು. ಗಂಡಸ್ರಿಲ್ದೆ ಹೆಂಗೆ ಈ ಹೆಂಗಸ್ರು ತಂ ಕೆಲ್ಸ, ಮನೆಮಟ ಮಕ್ಳನ್ನ ನಿಭಾಯಿಸ್ತ ಇದಾರಲ್ಲ ಅಂತ ಪೋಲೀಸ್ನೋರಿಗೆ ಸಿಟ್ಟು. ಅವರನ್ನೆಲ್ಲ ತಂ ಲಾರೀಲಿ ತುಂಬಿ ಹಳ್ಳಿ ಆಚೆಬದಿ ತಗಂಡೋಗಿ ಬಿಟ್ರು. ಅವ್ರಿಗೆ ಈ ಹೆಂಗಸ್ರು ತಂತಮ್ಮ ಗಣಸ್ರಿಗೆ ಗುಟ್ಟಾಗಿ ಊಟ ಕೊಡ್ತಿರೋ ಬಗ್ಗೆ ಅನುಮಾನ.

ಆಮೇಲೆ, ಎರಡ್ಮೂರು ದಿನ ಆದ್ಮೇಲೆ, ಯಾರೋ ಚರ್ಚಲ್ಲಿ ಗಂಟೆಗೋಪುರದ ಕೆಳಗೆ ಗಣಸ್ರು ಅಡಗಿದಾರೇಂತ ಪೋಲೀಸ್ನೋರಿಗೆ ಹೇಳಿದ್ರು. ಅಲ್ಲೋಗಿ ಸಿಕ್ಕೋರ್ನೆಲ್ಲ ಹೊರಗೆಳ್ದು, ಹೊಡದು, ಚಾಳಿಯಾರ್ ಬೀದಿ ಮೇಲಿಂದನೇ ಎಳಕಂಡ್ ಬಂದ್ರು.

ಹೆಂಗಸ್ರ ಪ್ರಕಾರ ಪಾದ್ರಿನೇ ಇದ್ನ ಪೋಲೀಸ್ನೋರಿಗೆ ಹೇಳಿದ್ದು. ಅದ್ರಲ್ಲಿ ಅಡಕ್ಕಂಡಿದ್ದ ಒಬ್ಬ ತಪ್ಪುಸ್ಕಂಡು ಪೋಲೀಸ್ನೋರು ಅವ್ನ ಹಿಂದೆ ಓಡಿದ್ರು. ಅದೇ ಹೊತ್ಗೆ ಬೇರೆ ಜಾತಿಯೋನೊಬ್ಬ ಪಾದ್ರಿಯ ಹೊಲಾ ಉಳ್ತಿದ್ದ. ತಪ್ಪಿಸ್ಕೊಂಡೋನ್ ಸೀದ ಹೋಗಿ ಅವ್ನ ಕೈನಿಂದ ನೇಗಿಲು ಕಸ್ಕಂಡು ತಾನು ಉಳಕ್ಕೆ ಶುರು ಮಾಡಿದ. ಎತ್ತುಗಳನ್ನ ತಿರುಗ್ಸಿ, ಆರು ಹೊಡೀತಾ, ಪೋಲೀಸ್ನೋರಿಗೆ ಮಕನೇ ತೋರಿಸ್ದೆ ಅಂತೂ ತಪ್ಪಿಸ್ಕಂಡ. ಆದ್ರೆ ಏನೇನು ಉಪಾಯ ಮಾಡಿದ್ರೂ, ಇಷ್ಟೆಲ್ಲ ಕಷ್ಟಪಟ್ರೂ ಮುಕ್ಕಾಲು ಪಾಲು ಜನನ್ನ ಹಿಡ್ಕಂಡ್ ಹೋಗಿದ್ರು. ಮತ್ತೆ ಕೆಲವ್ರು ಬೆಟ್ಟದ ಜಂಗಲ್‌ನಲ್ಲಿ ಅಡಕ್ಕಂಡಿದ್ರು.

ಕೋರ್ಟಲ್ಲಿ ಕೇಸು ನಡೀತು. ಎಲ್ಲ ಗಣಸ್ರನ್ನ ಮರುದ್ಯೆ ಜೈಲಿಗೆ ಹಾಕಿದಾರೆ ಅಂದ್ರು. ಲಾಯರ್ನ ಇಟ್ಟು ವಾದ ಮಾಡಕ್ಕೂ ದುಡ್ಡಿಲ್ಲ. ಹೆಂಗಸ್ರೆ ತಂತಮ್ಮಲ್ಲಿ ಪಾಲು ಮಾಡ್ಕಂಡು ದುಡ್ಡು ಒಟ್ ಮಾಡಿದ್ರು.

ಸರೀ ಅದೇ ಹೊತ್ಗೆ ಒಬ್ಬ ಸಣ್ಣುಡುಗ ಸತ್ತ. ಅವ್ನಿಗೆ ಬರೀ ಹತ್ವೊರ್ಷ ಆಗಿತ್ತು. ಮೇಲ್ನ ಕೇರೀಲಿ ಇದ್ದ. ಅವ್ರು ನಮ್ಗೆ ದೂರದ್ ನೆಂಟ್ರೂ ಹೌದು. ಆದ್ರೆ ಸ್ಮಶಾನದ ಕಡೆ ಹೋಗಕ್ಕೆ ನಮ್ಗೆ ಒಳಗೇ ದಿಗುಲು. ಚಾಳಿಯಾರ್ ಹುಡುಗ್ರು ಅಲ್ಲೇ ಅತ್ತಾಗ್ ಇತ್ತಾಗ್ ಸುಳಿಯೋರು. ಯಾವಾಗೂ ಪೋಲೀಸ್ನೋರು ತಿರುಗಾಡೊ ನಂ ಬೀದೀಲಿ ಗಣಸ್ರೆ ಇರ್ಲಿಲ್ಲ. ಇಂಥ ಹೊತ್ತಲ್ಲಿ ಆ ಹುಡುಗ್ನ ಹೆಣ ಇಟ್ಕಂಡು ಏನ್ಮಾಡದು ಅಂತ ಎಲ್ಲ ಚಿಂತೆ ಮಾಡ್ತಿದ್ರು. ಅಷ್ಟೇ ಅಲ್ಲ, ಅವ್ನನ್ನ ಹೂಳಕ್ಕೆ ಮೊದ್ಲು ಅವನಪ್ಪ ಒಂದ್ಸಲನಾದ್ರೂ ಮಕ ನೋಡ್ಬೇಕಾಗಿತ್ತು. ಕೊನೆಗೆ ನಮಜ್ಜಿ ಇನ್ನೂ ಕೆಲ ಮುದುಕೀರು ಸೇರಿ ಒಂದುಪಾಯ ಮಾಡಿದ್ರು.

ಇಬ್ರು ಹೆಂಗಸ್ರು ಆ ಹುಡುಗ್ನ ಅಪ್ಪ ಅಡಕ್ಕಂಡಿರೋ ಮಂಟಪದ ಹೊಲಕ್ಕೆ ಹೋಗದು; ಹೋಗ್ತ ಒಂದ್ ಸೀರೆನೂ ತಗಂಡೋಗದು; ಅವ್ನನ್ನ ಹುಡ್ಕಿ, ರಾತ್ರಿ ಸೀರೆ ಉಡುಸ್ಕಂಡ್ ಸೆರಗು ಹೊದ್ಸಿ ಕರ್ಕಬಂದು ಎದೆಬಡ್ಕಂಡ್ ಅಳೋ ಹೆಂಗಸ್ರ ಜೊತೆ ಇಟ್ಟುಬಿಡೋದು. ಅಷ್ಟರೊಳಗೆ ಸಂಜೆ ಸ್ಮಶಾನಕ್ಕೆ ಯಾರಾದ್ರು ಹೋಗಿ ಒಂದ್ ಗೋರಿ ತೋಡಿ ಬರದು.. ಅಂತ ಪ್ಲಾನ್ ಮಾಡಾಯ್ತು.

ಆವಾಗ ಒಂದ್ ಹೆಂಗ್ಸು ಗೋರಿ ತೋಡ್ತ ಏನಾರ ಹೆಚ್ಚುಕಮ್ಮಿ ಆದ್ರೆ ಏನ್ಮಾಡದು ಅಂತ ಕೇಳಿದ್ಲು. ಪಟ್ಟಂತ ನಮ್ಮಜ್ಜಿ ಅಂತು: 'ಸುಮ್ನಾಯ್ಕೊ ಹುಚ್ಚಿ, ಈ ಚಾಳಿಯಾರ್ ಹುಡುಗ್ರಿಗೆ ಉಚ್ಚೆ ಹೊಯ್ಯಕ್ ಹೋಗುಕ್ಕೂ ಈಗ ಪೋಲೀಸ್ನೋರು, ಬ್ಯಾಟ್ರಿ ಬೇಕು. ನಾವು ಸಂಜಿ ಆದ್ಮೇಲೆ ಹೊರಗೋಗಿ ಒಟ್ಟು ನಿಂತ್ರೆ ಅವು ಹೇಲಕ್ಕೂ ಹೊರಗ್ ಬತ್ತಿಲ್ಲೆ ಕಾಣ್ ಬೇಕಿರೆ. ಅವ ಆಟ ಎಲ್ಲ ಈ ಪೋಲಿಸ್ನೋರು ತಮ್ಮುನ್ ಕಾಯ್ತಾರೆ ಅಂತ. ಕಪ್ಪಾದ್ಮೇಲೆ ಪೋಲೀಸ್ನವ್ರೂ ಸ್ಮಶಾನದತ್ರ ಹೋತ್ತಿಲ್ಲ. ಪುಕ್ಕಟ್ ಊಟ ಹೊಡ್ದು ಮಲ್ಕಂತೊ..'

ಮಂಟಪದ ಹೊಲ ನಂ ಕೇರಿ ಉತ್ತರಕ್ಕೆ ನಾಕೈದು ಮೈಲಿ ದೂರದಲ್ಲಿತ್ತು. ಅದರತ್ರ ಒಂದ್ ಆಲದಮರ ಇತ್ತು. ಜನ ಹೇಳ್ತಿದ್ರು, ಏಳು ಕೊಪ್ಪರಿಗೆ ಹೊನ್ನು ಕಾಯ್ತ ಅದರತ್ರ ಒಂದ್ ಕೊಂಬೇಲಿ ಒಂದ್ ಕೊಳ್ಳಿದೆವ್ವ ಇದೆ ಅಂತ. ಅದಂತೂ ಎಷ್ಟ್ ಎತ್ರ ಇದೆ ಅಂದ್ರೆ ಭೂಮಿಗೂ ಆಕಾಶಕ್ಕೂ ನಡೂವೆ ನಿಂತ್ಬಿಡುತ್ತಂತೆ. ಕೊಪ್ಪರಿಗೆ ಹೊನ್ನಿನ ನಾಣ್ಯ ತೋರ್ಸಿ ಹೋಗಿ ಬರೋರ್ಗೆ ಆಸೆ ತೋರ್ಸುತ್ತಂತೆ. ಲೆಕ್ಕಿಲ್ಲದಷ್ಟು ಜನ ಅದ್ನ ನೋಡಿದಾರಂತೆ. ಅದ್ಕೆ ಉದ್ದ ಜಡೆಯಂಥಾ ಕೂದ್ಲಿದೆಯಂತೆ. ಒಂದೊಂದ್ ಉಗುರೂ ಒಂದೊಂದ್ ಚಾಕು ತರ ಬೆಳದಿದೆಯಂತೆ. ಅದ್ರ ಕಣ್ಣು ದೊಂದಿ ತರ ಉರೀತಿರುತ್ತಂತೆ. ಅದ್ರ ಬಾಯಿ, ಮೂಗ್ನ ಹೊಳ್ಳೆಯಿಂದ ಹೊಗೆ ಯಾವ ರೂಪದಲ್ಲಾದ್ರು ಕಾಣ್ಸಿಕೊಳ್ಳುತ್ತಂತೆ. ಸಣ್ಣ ಮಗು ಹಂಗೆ, ತೋಳದಂಗೆ, ಎಳೇ ಹುಡುಗಿ ಹಂಗೆ – ಒಬ್ಬೊಬ್ರು ಒಂದೊಂದ್ ರೂಪದಲ್ಲಿ ನೋಡಿದಾರೆ ಅದ್ನ. ಆ ಮಂಟಪದ ಕಡೆಗೇ ಈಗ ಹೆಂಗಸ್ರು ಸೀರೆ ಹಿಡ್ಕಂಡು ಹೊರಟಿದ್ರು.

ಅದೇ ಹೊತ್ಗೆ ಸ್ಮಶಾನದ ಕಡೆ ಕೆಲವ್ರು ಗುದ್ಲಿಪಿಕಾಸಿ ತಗಂಡು ಹೊರಟು ಗೋರಿ ತೋಡಕ್ ಶುರು ಮಾಡಿದ್ರು. ನಟ್ಟನಡೂ ರಾತ್ರಿ, ಹತ್ತರಿಂದ ಹನ್ನೆರೆಡು ಗಂಟೆ ವಳಗೆ ಆ ಹುಡುಗ್ನ ಅಪ್ಪ ಸೀರೆ ಉಟ್ಕಂಡ್ ಬಂದ. ಮಗನ ಹೆಣ ನೋಡಿ ಮೂಕನಂಗೆ ದಂಗು ಬಡಿದು ಗಟ್ಟಿ ಅಳಕ್ಕೂ ಆಗ್ದೆ ನಿಂತ. ಮನೆಗೆ ಬರ್ತ ಪೋಲೀಸ್ನೋರು ತಡದ್ರಂತೆ. ಆಗ ಜೊತೆಯಿದ್ದ ಹೆಂಗ್ಸು ಸತ್ತಾಗ ಎದೆಬಡ್ಕಂಡು ಅಳೋರ ರಾಗ ತೆಗದು, 'ನಾವ್ ಪಕ್ಕದ ಹಳ್ಳಿ ಜನ ಒಡ್ಯಾ. ಸತ್ತ ಸುದ್ದಿ ಈಗಷ್ಟೆ ಸಿಕ್ಕಿದ್ದು. ಮಣ್ಣಿಗ್ ಹೋಯ್ಕ್ ಅಂದೆಳಿ ಹೊರಟದ್ದು' ಅಂದ್ಲು. ಪೋಲೀಸ್ನೋರು ಸುಮ್ನೆ ಮುಂದೆ ಬಿಟ್ರು.

ರಾತ್ರಿಡೀ ಕಾದರು. ಬೆಳಿಗ್ಗೆ ಕೋಳಿ ಕೂಗಕ್ಮುಂಚೆನೇ ಹೆಂಗಸ್ರು ಹೆಣ ತಗಂಡ್ ಹೊರಟು ಸ್ಮಶಾನದಲ್ಲಿ ಹೂಳಿದ್ರು. ಸರೀ ಬೆಳಕು ಹರಿಯೊ ಹೊತ್ಗೆ ಅವನಪ್ಪ ಸೀರೆ ಉಟ್ಕಂಡು ಅಷ್ಟು ದೂರ್ದಲ್ಲಿ ಇಬ್ರು ಹೆಂಗಸ್ರ ಜೊತೆ ಹೋಗಿ ಅದೇ ಮಂಟಪದ ಹೊಲದ ಮಧ್ಯ ಕಾಣೆಯಾದ. ಮರುದಿನ ಎಲ್ರ ಬಾಯಲ್ಲು ಇದೇ ಮಾತು. ಎಷ್ಟು ಜಾಣತನದಲ್ಲಿ ಹೆಂಗಸ್ರು ಕೆಲ್ಸ ಮಾಡಿದ್ರು, ಹೇಗೆ ಎಲ್ಲನೂ ನಿಭಾಯಿಸಿದ್ರು ಅಂತ ಎಲ್ಲ ಹೊಗಳೋರೇ.

ಕೆಲವು ದಿನ ಆದ್ಮೇಲೆ ಜೈಲಿಗೋಗಿದ್ದ ಕೆಲವ್ರು ಬೇಲ್ ಸಿಕ್ಕು ಹೊರ ಬಂದ್ರು. ಕೆಲವ್ರಿನ್ನೂ ಜೈಲಲ್ಲೇ ಇದ್ರು. ಈ ಕೇಸಂತೂ ಎಳ್ದೂ ಎಳ್ದೂ ತುಂಬ ದಿನ ನಡೀತು. ಮತ್ತೆಮತ್ತೆ ಮುಂದಾಕ್ತ ಇದ್ರು. ಇದರ ನಡುವೆ ನಡುಗ್ಲ ಬೀದಿ ಆಲ್ಫಾನ್ಸ್, ರಕ್ತ ಕಾರೋ ತಂಕ ಪೋಲೀಸ್ನೋರತ್ರ ಹೊಡ್ತ ತಿಂದೋನು, ಮನೆಗ್ ಬಂದ ಎರಡೇ ದಿನಕ್ ತೀರ್ಕಂಡ. ಎಂತಾ ಗಟ್ಟಿಗ ಮನ್ಶ ಅವ್ನು, ಪೋಲೀಸ್ನೋರು ಸಾಯಂಗೆ ಹೊಡ್ದಿದ್ದಕ್ಕೇ ಅವ ಸತ್ತೋಗಿದ್ದು ಅಂತ ಅವ್ನ ಮಣ್ಣು ಮಾಡ್ತ, ಅಳ್ತಾ ಎಲ್ಲ ಮಾತಾಡ್ಕಂಡ್ರು.

ನಿಧನಿಧಾನ ಸ್ಮಶಾನ ಜಾಗದ ಜಗಳ ಮರೀತಾ ಬಂದ್ವಿ. ಮತ್ತೆ ಪರಯ್ಯಾಗಳು, ಚಾಳಿಯಾರ್ ಜನ ಮೊದ್ಲಿನಂಗೇ ಇರಕ್ ಶುರು ಮಾಡಿದ್ರು. ಚಾಳಿಯಾರ್ ಮುದ್ಕೀರು ನಂ ಕೇರಿಗೆ ಸಗಣಿ ಹೆಕ್ಕಕ್ಕೆ, ಹುರಿದ ಬೇಳೆ–ಹುಣಿಸೆ ಬಿಕ್ಕ ಮಾರಕ್ಕೆ ಅಂತ ಬರಕ್ ಶುರು ಮಾಡಿದ್ರು.

ಒಂದಿನ ನಾ ಶಾಲೆಯಿಂದ ಬರ್ತ ಎಲ್ಲ ಬಸ್ಟಾಂಡ್ ಕಡೆ ಓಡ್ತಿದ್ರು. ಇಷ್ಟೊತ್ಗೆ ಶಾಲೇಲಿ ನಾ ಬೇರೆ ಕ್ಲಾಸ್ ಸೇರಿದ್ದೆ. ಯಾಕೇಂತ ಕೇಳಿದ್ರೆ, 'ಸ್ಮಶಾನದ ಕೇಸು ನಮ್ಮಂಗೇ ಆಗಿತ್. ನಂ ಜನ ಎಲ್ಲ ಬಿಡುಗಡೆ ಆಯಿ ಬತ್ತೇ ಇದ್ದೊ' ಅಂತಂದು ಸಂಭ್ರಮವಾದ್ರು. ನಾ ಸೀದ ಮನೆಗೋಗಿ ಚೀಲ ಬಿಸಾಡಿ ಎಲ್ಲ ಮಕ್ಳ ಜೊತೆ ಇದೇನಿದು ನೋಡೇಬಿಡುವ ಅಂತ ಓಡೋದೆ. ಹೌದು! ನಂ ಕೇರಿ ಗಣಸ್ರೆಲ್ಲ ಬಂದ್ಬಿಟ್ಟಿದಾರೆ! ಗಂಡಂದ್ರು ಮನೆ ಒಳ್ಗೆ ಬರಕ್ ಮುಂಚೆ ತಲೆಬಾಕ್ಲಲ್ಲಿ ಒನಕೆ ಅಡ್ಡಕ್ಕಿರಿಸಿ ಮಲಗ್ಸಿ ಅದ್ನ ದಾಟಿ ಬರ್ರಿ ಅಂತಂದ್ರು. ಆಮೇಲೆ ಸ್ನಾನ ಮಾಡಿ ಅಂತಂದ್ರು. ಹೊರಗೇ ಉಡಕ್ ಹೊಸ ಪಂಚೆ, ಟವಲ್ಲು ಕೊಟ್ ಆಮೇಲೆ ಒಳ್ಗೆ ಬಿಟ್ಕಂಡ್ರು. ಗಣಸ್ರು ವಾಪಸ್ ಬಂದ ಎಲ್ಲ ಮನೇಲೂ ಹೀಗೇ. ಎಲ್ಲ ಕಡೆ ನಗುವೋ ನಗು.

'ನಂಗೆ ಬುದ್ದಿ ಬಂದಾಗ್ನಿಂದ, ಅಜ್ಜಮುತ್ತಜ್ಜರ ಕಾಲ್ದಿಂದ್ಲು ಈ ಸ್ಮಶಾನದಲ್ಲೆ ಮಣ್ ಮಾಡಿತ್ ನಾವು. ಈಗ ಇವು ನನಮಕ್ಳು ಮೈಮೇಲೇರ್ಕಂಡ್ ಬಂದ್ವು ಅಂದ್ರೆ? ದೇವ್ರೂ ಅವ್ ಕಡಿಗಿಲ್ಲ ಕಾಣ್. ಅದ್ಕೆ ಕೇಸ್ ನಮ್ಮಂಗಾದ್ದು.'

'ಸಂತ ಅಂತೋಣಿಯಿಂದ್ಲೆ ನಾವ್ ಗೆದ್ದಿದ್ದು'

'ಪರಯ್ಯಾ ಹುಡುಗ್ರು ಅಂದ್ರೆ ಭಾಳ ಸುಲಭದವು, ಸುಮಾರು ಅಂತ ತಿಳ್ಕಬಿಟ್ಟಿದ್ದೊ ಅವು. ಆದ್ರೆ ಅವರ್ ಲೇಡಿ ಮಾತೆನೇ ಅವ್ರ ತಪ್ಪು ಎಷ್ಟ್ ಅಂದೆಳಿ ಸರೀ ತೋರ್ಸಿಳು ಅಲ್ದ?'

'ನಾವು ಮುಂದಿನ ರವಿವಾರ ಒಂದು ಪ್ರಾರ್ಥನೆ ಪೂಜಿ ಮಾಡ್ಸಲಕ್ಕಿತ್, ಅಮ್ಮನೆ ಅಂತ ಅವಳ ಹೆಸರೇಳಿ..'

'ವಿಶೇಷ ಪೂಜೆನ ಚರ್ಚಲ್ಲಿ ಯಾಕ್ ಮಾಡ್ಕ್? ಈ ಪಾದ್ರಿ ತನ್ನ ಕಾಲ್ನ ಧೂಳು ಕಣದಷ್ಟಾದ್ರೂ ನಮ್ಗೆ ಸಾಯ ಮಾಡಿದ್ನ? ಚರ್ಚಲ್ಲಿದ್ ಗಣಸ್ರ ಎಳ್ಕ ಹೋಗ್ತಿದ್ರೆ ಈ ಪಾದ್ರಿ

ಆರಾಮಾಗಿ ತನ್ನ ಬಂಗ್ಲೇಲಿ ಕೂಕಂಡಿದ್ದ. ಕಾಲ್ಮೇಲೆ ಕಾಲು ಹಾಕ್ಕ ಸಿಗರೇಟು ಸೇದ್ತ, ಆರಾಮಾಗಿ ಎಲ್ಲ ಕಾಂತೇ ಇದ್ದ..'

'ಅಷ್ಟೆ ಅಲ್ಲ ಅತ್ಗಮ್ಮ, ಕೇಸ್ ನಡ್ಸಕ್ ದುಡ್ಡಿಲ್ಲೆ, ನಾಕ್ ಕಾಸು ಸಾಲ ಅಂತಲೇ ಕೊಡು ಅಂದೆಳಿ ಕೇಳಿದ್ರೆ, ಇಲ್ಲ ಅಂತ ಕಡ್ಡಿ ಮುರ್ದು ತುಂಡ್ ಮಾಡ್ದಂಗೆ ಖಡಕ್ ಹೇಳಿ ಕೈಯಾಡ್ಸಿಬಿಟ್ಟ ಅಂಬ್ರ'

ಹಿಂಗೇ ಜನ ಮಾತಾಡೋರು. ಬೇರೆಬೇರೆ ದಿಕ್ಕಿಂದ ಯೋಚ್ನೆ ಮಾಡೋರು. ಕೊನೆಗು ನಗು ಮಾತ್ರ ಉಳಿದಿತ್ತು, ಯಾಕಂದ್ರೆ ಕೇಸು ನಮ್ಕಡೆ ಆಗಿತ್ತು.

* * *

ಚಾಳಿಯಾರ್ ಪರಯ್ಯಾಗಳ ಜಗಳ ಆದಾಗೆಲ್ಲ, ಅದ್ರಲ್ಲು ಈ ಜಾತಿ ಜಗಳ ಆದ್ಮೇಲೆ, ಪಲ್ಲ ಮತ್ತು ಪರಯ್ಯಾಗಳ ನಡುವೇನೂ ಸಣ್ಣಪುಟ್ಟ ಗಲಾಟೆ ಆದ್ವು. ಏನೋ ಸಣ್ಣ ನೆಪ ಪ್ರತಿಸಲ, ಒಂದು ದೋಡ್ ವಿಷ್ಯ ಆಗಿ ಇಬ್ರ ನಡುವೆ ಘನಘೋರ ಯುದ್ಧ ಆಗದು.

ಅಂಥ ಮೊದ್ಲ ಯುದ್ಧ ಆಗಿದ್ದು ಬಾಳೆಹಣ್ಣಿಗೆ. ಪಲ್ಲರ ಕೇರಿ ಕಡೆಯಿಂದ ಒಬ್ಬ ಒಂಡಿವೀರನ್ ಅಂತ ಗಾಡಿ ತುಂಬ ಬಾಳೆಹಣ್ಣು ತುಂಬ್ಕ ಬರ್ತಿದ್ದ. ಪಾವುಲು ಅನ್ನೋ ಆ ಎಳೇ ಹುಡ್ಗ, ತವಸಿ ಪೆರಿಯ ಮಗ ಹೋಗಿ ಎರಡ್ಮೂರು ಹಣ್ಣು ಎಳಕಂಡು ತಿಂದ್ಬಿಟ್ಟ. ಅವರಿಬ್ರ ನಡುವಿನ ಮೊದಲ್ನೆ ಮಾತು ಬೈಗುಳವೇ ಆಗಿ ಬಂತು. ಬಾಯಿ ಮಾತು ಬರಬರ್ತ ಕೈಕೈ ಮಿಲಾಯ್ಸೊ ತಂಕ ಹೋಯ್ತು. ಕೂಡ್ಲೆ ನಾಕು ಪಲ್ಲ ಹುಡುಗ್ರು ಸೇರ್ಕಂಡು ಪಾವುಲುನ ಜಪ್ಪಿ ಜಪ್ಪಿ ಇಟ್ರು. ಪಾವುಲು ಮನೆಗ್ ಬಂದು ಏನಾಯ್ತು ಅಂತ ನಮ್ಮತ್ರ ಹೇಳೋದ್ರಲ್ಲಿ ಸುಮಾರು ಜನ ಪಲ್ಲ ಕೇರಿಯೋರು ದೊಣ್ಣೆ, ಮಚ್ಚು ಹಿಡ್ಕಂಡು ನಂ ಕೇರಿಗೆ ಬಂದೇಬಿಟ್ರು. ಆಗ ಪರಯ್ಯಾ ಕೇರೀಲಿ ಜಾಸ್ತಿ ಗಣಸ್ರು ಇರ್ಲಿಲ್ಲ. ಮೂರ್ನಾಕು ಮುದುಕ್ರು, ಕೆಲವು ಹುಡುಗ್ರು ಮತ್ತೆ ಸೈನ್ಯದ ಕೆಲ್ಸದಿಂದ ರಜೆ ತಗಂಡ್ ಬಂದಿದ್ದ ಸೂಸೈ ಇದ್ದರು. ಅವರೆಲ್ಲ ಸೇರಿ ಕೈ ಮುಗ್ದು ಶಾಂತಿ ಕಾಪಾಡ್ಲಿಕ್ಕೆ ನೋಡಿದ್ರು. ಅವ್ರ ಮೇಲೆ ಕಲ್ಲು ತೂರಾಡ್ತ ಇದ್ರು ಸಹ ಮುಂದೋಗಿ, 'ಇಲ್ಕಾಣಿ, ಬರೀ ಒಂದ್ ಬಾಳಿಹಣ್ಣಿಗೆ ನಾವು ಒಬ್ರಿಗೊಬ್ರು ಬಡಿದಾಡಿ ಸಾಯ್ಕ? ಒಂದು ಪಂಚಾಯ್ತಿ ಕರುಕ್ ಹೇಳಿ, ಅಲ್ಲಿ ಅದೇನಂತ ಕಾಂಬ' ಅಂದ್ರು. ಉಳಿದೋರನ್ನ ಇಷ್ಟಕ್ಕೆ ಒಪ್ಸದು ದೊಡ್ಡ ಹೋರಾಟನೇ ಆಗಿತ್ತು. ಆದ್ರೂ ಪಂಚಾಯ್ತಿ ಕರ್ದು ಪಾವುಲುಗೆ ತಕ್ಕ ಶಿಕ್ಷೆ ಆಗೋ ಹಾಗೆ ನೋಡ್ಕಂಡ್ರು.

ಇದಾದ್ಮೇಲೆ ಎರಡೂ ಕಡೆ ಹುಡುಗ್ರು ಒಬ್ರಮೇಲೊಬ್ರು ದ್ವೇಷ ಬೆಳಸ್ಕಂಡು ಗುರಾಯಿಸ್ತ ಇದ್ರು. ನಾಕೈದು ತಿಂಗ್ಳು ಬಿಟ್ಟು ರೇಶನ್ ಅಂಗ್ಡಿ ಹತ್ರ ಒಂದು ಜಗಳ ಶುರು. ಕಡ್ಡಿಕೋಲಂಗಿದ್ದ ಆ ಬೆಂಜಮಿನ್ನನ ಮೊಮ್ಮಗ ರೇಶನ್ ಅಂಗ್ಡೀಲಿ ಕಿತಾಪತಿ ಶುರು ಮಾಡ್ದ. ಪರಯ್ಯಾ ಪಲ್ಲರ ಮಧ್ಯ ಮತ್ತೊಂದ್ ಜಗಳ ಶುರುವಾಯ್ತು. ಈ ಸಲ ಯಾರೂ ಬಗ್ಗಕ್ಕೆ ತಯಾರಿಲ್ಲ. ತಮ್ಮತ್ರ ಏನೇನಿದ್ಯೋ ಅದೆಲ್ಲದರಿಂದ ಹೊಡದಾಟಕ್ಕೆ ಶುರು

ಹಚ್ಕಂಡ್ರು. ಪಲ್ಲ ಹುಡುಗ್ರು ಕೆರೆ ದಂಡೇಲಿ ನಿಂತು ಕಲ್ಲು ತೂರಕ್ಕೆ ಶುರು ಮಾಡಿದ್ರು. ಪರಯ್ಯಾಗಳು ತಿರುಗ್ಸಿ ಕಲ್ಲು ಬಿಸಾಡಿದ್ರು. ಅದು ನಿಜವಾಗಿ ಒಂದು ಭಯಂಕರ ಯುದ್ಧ ಆಗೋಯ್ತು. ಕೆಲವು ಗಟ್ಟಿಗಿತ್ತಿ ಪರಯ್ಯಾ ಹೆಂಗಸ್ರು ಇಡ್ಲಿ ಪಾತ್ರೆ ಮುಚ್ಚಾನ ಗುರಾಣಿ ತರ ಹಿಡ್ಕಂಡು ತಾವೂ ಹೊಡದಾಟದಲ್ಲಿ ಸೇರ್ಕಂಡ್ರು.

ಈ ಜಗಳ ನಡೀತಿರಬೇಕಾದ್ರೆ ಸೈನ್ಯದಲ್ಲಿದ್ದ ಸೂಸೈ, ತನ್ನ ಕಾಲಿಗೆ ಎಷ್ಟು ಬೇಗ ಓಡಕ್ಕಾಗುತ್ತೋ ಅಷ್ಟ್ ಫಾಸ್ಟಾಗಿ ಓಡೋಗಿ ಪೋಲೀಸ್ ಸ್ಟೇಷನ್ನಿಗೆ ಸುದ್ದಿ ಮುಟ್ಟುಸ್ದ. ವಾಪಸ್ ಬರ್ತ ನೋಡ್ತಾನೆ, ದಂಡೆ ಮೇಲೆ ನಾಕೈದು ಪಲ್ಲ ಹುಡುಗ್ರು ಕತ್ತಿ ಹಿಡ್ಕಂಡು ಠಳಾಯಿಸ್ತ ಇದಾರೆ. ಅದ್ಯಾವ ದೇವ್ರು ಬುದ್ಧಿ ಕೊಟ್ನೋ ತಕ್ಷಣ ತಿರುಗ್ದ, ಕೈಕಾಲು ತೊಳೆಯೋರಂಗೆ ಕಾಕನ ಬಾವೀಲಿ ಇಳ್ದು ಅಡಕ್ಕಂಡ. ಇಲ್ಲಾಂದ್ರೆ ಅವುನ್ನ ಅಲ್ಲೇ ಹಿಡಿದು ಕೊಚ್ಚಿ ತುಂಡುತುಂಡು ಮಾಡಿಹಾಕ್ತಿದ್ರು. ಅವ್ರ ತಲೆ ಕಾಣದಂಗಾದಾಗ ಬದುನಲ್ಲೇ ಮತ್ತೆ ಓಡೋಗಿ ವಾಪಸ್ ಬರ್ತ ಪೋಲೀಸ್ನೋರ್ನ ಕರ್ಕಬಂದ. ಪೋಲೀಸ್ನೋರು ಬಂದಿದ್ದೇ ಅವ್ರೆಲ್ಲ ಕಾಗೆ ಹಿಂಡಿನಂಗೆ ಚದುರೋದ್ರು.

ಒಂದ್ ಸ್ವಲ್ಪ ದಿನ, ಒಳಗೊಳಗೇ ಗುಡುಗುಡು ಇದ್ರೂ ಮೇಲ್ ಮೇಲೆ ಎಲ್ಲ ತಣ್ಣಗಿತ್ತು. ಒಂದಷ್ಟ್ ದಿನ ಬಿಟ್ಟು ಮೋನಂಗಿ ಮಗ ಎಣ್ಣೆಗಾಣದತ್ರ ಏನೋ ಯಾಪಾರ ಮಾಡ್ತಿರುವಾಗ ಪಲ್ಲ ಹುಡುಗ್ರು ಅವನ್ನ ಹೊಡ್ದು ಅರೆಜೀವ ಮಾಡಿ ಕೈಬಿಟ್ರು. ಅವ್ನು ಮನೆಗೆ ಓಡ್ಬಂದು ಹೇಳಿದಾಗ ನಿಜವಾದ ಹೊಡದಾಟ ಶುರುವಾಯ್ತು.

ಹಿಂಗೇ, ಏನೋ ಎಲ್ಲ ತಣ್ಣಗಾಯ್ತು ಅನ್ನುವಾಗ ಪಲ್ಲ ಹುಡುಗ್ರು ಅಡವಿಗೆ ಹೋಗಿದ್ದ ಪರಯ್ಯಾ ಹುಡುಗನ್ನ ಹಿಡ್ದು ಹೊಡೆದು, ಕೊಚ್ಚಿ, ಅಲ್ಲೇ ಹೂತುಹಾಕಿದ್ರು. ಪರಯ್ಯಾ ಗಂಡಸ್ರು ಕೊನೆಗೆ ನೆಲ ತೋಡಿ ಹೆಣ ತಗಂಡ್ಬಂದು ಸ್ಮಶಾನದಲ್ಲಿ ಹೂಳಿದ್ರು. ಇದಾದ್ಮೇಲೆ ಪರಯ್ಯಾ ಗಣಸ್ರು ಕುರಿ ಮೇಸ್ತ ಇದ್ದ ಒಬ್ಬ ಪಲ್ಲ ಹುಡುಗನ ಮೇಲೆ ಬಿದ್ದು ಹೊಡದು ಕೊಂದ್ರು. ಪೋಲೀಸ್ನೋರು ಬಂದಿದ್ದೇ ಎರಡೂ ಜಾತಿ ಹುಡುಗ್ರನ್ನ ಎಳ್ಕಂಡುಹೋಗಿ ಪೋಲೀಸ್ ಸ್ಟೇಷನ್ನಿನ ಲಾಕಪ್ನಲ್ಲಿ ಕೊಳಸಿದ್ರು. ಕೇಸು ಇನ್ನೂ ನಡಿತಾನೇ ಇದೆ. ಮುಂದೆಮುಂದೆ ಹಾಕ್ತನೇ ಇದಾರೆ. ಈ ಕೇಸಿನ ಕಾಲ್ದಲ್ಲಿ ಎರಡೂ ಕಡೆ ಹುಡುಗ್ರು ಬೆನ್ನು ಮುಚ್ಕಂಡು ತಿರುಗ್ತಿದಾರೆ. ಕೊನೆಗು ಏನಾಗುತ್ತೋ ದೇವ್ರಿಗೇ ಗೊತ್ತು. ಈ ಕ್ಷಣ ಜೀವ ಹೋಗೋ ತಂಕ ಗುದ್ದಾಡ್ತಾರೆ, ಮತ್ತೊಂದ್ ಕ್ಷಣ ಒಟ್ಟಾಗ್ತಾರೆ. ಇದ್ದಕ್ಕಿದ್ದಂಗೆ ಏನು ಕಾರಣನೇ ಇಲ್ದೆ ಗುದ್ದಾಡಿ ಹೊಡೆದಾಡಕ್ ಶುರು ಮಾಡ್ತಾರೆ. ನಿಮಿಷಕ್ ನೂರು ಸಲ ಅವರವರಲ್ಲೆ ಕಿತ್ತಾಟ. ನಾಚಿಗ್ಗೆಟ್ಟೋರು. ಜೊತೆಗೆ ಮೇಲ್ಜಾತಿಯೋರು ಬೇರೆ ಇವ್ರನ್ನ ನೋಡಿ ನಗಾಡದು. ಹಲವಾರು ಜಾತಿ ಇರೋ ಹಳ್ಳೀಲಿ ಒಟ್ಟಿಗಿರದು ಬಿಟ್ಟು ಹಿಂಗ್ ಒಬ್ರಿಗೊಬ್ರು ಗುದ್ದಾಡ್ತ ಇದ್ರೆ ಕೊನೆಗೆ ಇವ್ರ ಗತಿ ಏನಾಗುತ್ತೆ?

❐



# ನಾಲ್ಕು

ಸಣ್ಣೋಳಿದ್ದಾಗಿಂದ ಜನ ಕಷ್ಟದ್ ಕೆಲ್ಸ ಮಾಡದ್ ನೋಡಿದಿನಿ ನಾನು; ಅಂಥೋರ ಮಧ್ಯನೇ ಬೆಳದೋಳು ನಾನು. ಮನೇಲಿ ನಮ್ಮಮ್ಮ ಅಜ್ಜಿ ಸೂರ್ಯ ಹುಟ್ದಾಗಿಂದ ಮುಳುಗೋ ತಂಕ ಒಂದ್ ಗಳಿಗೆನೂ ಕೂರ್ದೆ ಕೆಲ್ಸ ಮಾಡ್ತಿರೋರು. ಇವತ್ತಿನವರ್ಗೂ ಸಹ ನಂ ಹಳ್ಳೀಲಿ ಮೈಮುರ್ದು ಕೆಲಸ ಮಾಡಿದ್ರಷ್ಟೇ ಹೊಟ್ಟೆಗ್ ಹಿಟ್ಟು.

ಎಷ್ಟೋ ತರದ ಕೆಲ್ಸ ಇವೆ. ಹೊಲದ ಕೆಲ್ಸ ಅಂತ ನೋಡಿದ್ರು ಅಲ್ಲಿ ಉಳುಮೆ, ನೀರು ಹಾಯ್ಸದು, ಬಿತ್ತನೆ, ಸಸಿ ಕಿತ್ತು ನೆಡೋದು, ಕಳೆ ತೆಗೆಯದು, ಗೊಬ್ರ ಹಾಕದು, ಕೊಯ್ಲು, ಹೊಡೆಮಂಚದಲ್ಲಿ ಭತ್ತ ಮೆರೆಯುದು, ಸೇಂಗಾ ಬಿತ್ತನೆ, ಬಲಿತ ತೆಂಗು ಕೀಳದು – ಇವೆಲ್ಲ ಇವೆ. ಹೊಲದ ಕೆಲ್ಸ ಅಲ್ದೆ ಕಟ್ಟೋ ಕೆಲ್ಸನೂ ಇದೆ; ಬಾವಿ ತೋಡದು, ಮಣ್ಣು–ಮರಳು–ಕಲ್ಲು ಹೊರದು ಇತ್ಯಾದಿ. ಆ ಕೆಲ್ಸನೂ ಇಲ್ದಿದ್ರೆ ಜಂಗಲ್ಲಿಗೆ ಹೋಗಿ ಸೌದೆ ಒಟ್ಟು ಮಾಡ್ತಾರೆ. ಅತವಾ ಮಡ್ಲು ನೇಯ್ತಾರೆ ಅತವಾ ಇಟ್ಟಿಗೆ ಭಟ್ಟೀಲಿ ಕೆಲ್ಸ ಮಾಡ್ತಾರೆ. ಒಟ್ನೊ ಹೊಟ್ಟೆಗ್ ಬೇಕೂಂದ್ರೆ ಒಂದಲ್ಲ ಒಂದ್ ರೀತಿ ಗೇಯ್ಲೆಬೇಕು.

ಮುಕ್ಕಾಲು ಪಾಲಿಗಿಂತ ಹೆಚ್ಚು ನೆಲ ನಾಯ್ಕರ್‌ಗಳ ಕೈಲಿದೆ. ನಂ ಜಾತಿ ಜನ ಅವ್ರಿಗೋಸ್ಕರ ಕೆಲ್ಸ ಮಾಡ್ತಾರೆ. ಪ್ರತಿ ಪರಯ್ಯಾ ಕುಟುಂಬಾನೂ ಒಂದೊಂದ್ ನಾಯ್ಕರ್ ಕುಟುಂಬಕ್ಕೆ ಜೀತದೋರಂಗೆ ಕೆಲ್ಸ ಮಾಡ್ತಾರೆ. ನನಗ್ಗೊತ್ತಿರೊ ಹಂಗೆ ಪಲ್ಲ ಪರಯ್ಯಾಗಳಷ್ಟೆ ಜೀತ ಮಾಡದು. ಉಳದೋರು ಅಷ್ಟು ಕಷ್ಟ ಪಡ್ಬೇಕಾಗಿಲ್ಲ.

ಕೊರವರು ಅತವಾ ಅಲೆಮಾರಿಗಳು, ಚರ್ಮದ ಕೆಲ್ಸ ಮಾಡೋ ಚಕ್ಕಿಲಿಯಾರ್‌ಗಳು, ಬೀದಿ ಕಸ ಗುಡ್ಸಿ ಚರಂಡಿ ಚೊಕ್ ಮಾಡಿ ದುಡ್ಕತಾರೆ. ಕೆಲವು ಸರ್ತಿ ಮೊರ, ಬುಟ್ಟಿ, ಕೋಳಿಪಿಳ್ಳೆ – ಭತ್ತ ತುಂಬೊ ಮಂಕ್ರಿ ಹೆಣದು ಮಾರಿ ನಾಕು ಕಾಸು ಮಾಡ್ಕತಾರೆ. ನಂ ಜಾತಿಯೋರು ಮಾತ್ರ ದುಡಿಯದು ಅಂದ್ರೆ ಬೆವರು ಹರಿಸ್ಲೆಬೇಕು. ಎಲ್ಲೊ ಒಂದೆರೆಡು ಮಾಸ್ತರ ಕುಟುಂಬದೋರು ಮಾತ್ರ ಇದ್ದಿದ್ರಲ್ಲಿ ಆರಾಮಾಗಿದಾರೆ.

ಎಲ್ರು ಹೇಳೋದು ನಮ್ಮಜ್ಜಿ ತುಂಬ ಒಳ್ಳೇ ಮತ್ತು ನಿಯತ್ತಿನ ಕೆಲಸಗಾತಿ ಅಂತ. ಅವಳು ಒಬ್ಬ ನಾಯ್ಕರ್ ಮನೆಯೋರ ಕೆಲಸ ಮಾಡೋಳಾಗಿದ್ಲು. ಅಷ್ಟೆ ಅಲ್ಲ, ಅವ್ರ ಮನೆಗೆ ಬೇರೆ ಕಡೆಯಿಂದ ಆಳು ಕರ್ಕಬಂದು ಅವ್ರು ಕೆಲ್ಸ ಸರಿ ಮಾಡ್ತಾರೋ ಇಲ್ಲೋ ನೋಡಿ, ಸಂಬ್ಳ ಕೊಡಸೊ ಮೇಸ್ತ್ರಿನು ಆಗಿದ್ಲು. ಭಾನುವಾರ ಒಂದಿನ ಬಿಟ್ಟು ಪ್ರತಿದಿನ ಕೆಲ್ಸಕ್ ಹೋಗ್ತಿದ್ಲು. ಕೆಲವೊಂದಿನ ನಾಯ್ಕರ್ ಹೇಳಿದ್ರೆ ಭಾನುವಾರನೂ ಚರ್ಚಲ್ಲಿ ಬೇಗಬೇಗ ಪ್ರಾರ್ಥನೆ ಮುಗ್ಸಿ ಕೆಲ್ಸಕ್ಕೆ ಓಡ್ತಿದ್ಲು. ಬೆಳಕು ಹರಿಯೋದ್ರಲ್ಲಿ ಎರಡೋ ಮೂರೋ ಗಂಟೆಗೆದ್ದು ನೀರು ತಂದು ಮನೆ ಕೆಲ್ಸ ಮಾಡಿಟ್ಟು, ತುಂಬ ದೂರ ಇದ್ದ ನಾಯ್ಕರ್ ಮನೆತಂಕ ನಡ್ದು, ಹೊತ್ತು ಮುಳುಗೋ ತಂಕ ಕೆಲ್ಸ ಮಾಡಿ ರಾತ್ರಿ ಮನೇಲಿ ತನ್ನ ಕೂಳು ತಾನೇ ಬೇಯ್ಸಿಕೊಳ್ಳೋಳು.

ನಾನೊಂಚೂರು ದೊಡ್ಡೋಳಾದ್ಮೇಲೆ ಅಜ್ಜಿ ಹೊಲಕ್ ನನ್ನ ಕರ್ಕೊಂಡೋಗೋಳು. ನಮ್ದು ಸುಖಸವಲತ್ತು ಇದ್ದ ಮನೆ ಆಗಿರ್ಲಿಲ್ಲ. ಶಾಲೆ ಇದ್ದಾಗ್ಲೂ ಪಾಠ ಎಲ್ಲ ಓದಾದ್ಮೇಲೆ ಬೇಲಿ ಕಟ್ಟೊ ಮುಳ್ಳು, ತಾಳೆಮಡ್ಲು, ತೆಂಗಿನ ಮಡ್ಲು, ಹೆಡೆಪೆಂಟೆ ತರ್ತಿದ್ದೆ. ತಾಜಾ ಸಗಣಿ ಹೆಕ್ಕಂಡ್ಬಂದು ತಟ್ಟಿ ಒಲೆ ಉರಿಸೊ ಬೆರಣಿ ಮಾಡ್ತಿದ್ದೆ. ಕೆಲವು ಸಲ ಹೊಲಕ್ಕೋಗಿ ಒಣಗಿದ ಬೆರಣಿನೂ ತರ್ತಿದ್ದೆ.

ಶಾಲೆಗ್ ರಜ ಇದ್ದಾಗ ಅಜ್ಜಿ ಜೊತೆ ಅತವಾ ಮತ್ಯಾರದೋ ಹೆಂಗಸ್ರ ಜೊತೆ ಹೊಲದ ಕೆಲ್ಸಕ್ ಹೋಗ್ತಿದ್ದೆ. ಹೆಚ್ಚಾಗಿ ಸೇಂಗಾ ಕೀಳಕ್ಕೆ ಮತ್ತೆ ಅದ್ನ ಚೊಕ್ಕ ಮಾಡಿ ಕಾಳುಜೊಳ್ಳು ಬೇರೆಬೇರೆ ಮಾಡೊ ಕೆಲ್ಸಕ್ಕೆ ಹೋಗ್ತಿದ್ದೆ. ಸಣ್ಣ ಹುಡುಗ್ರಿಗೆ ಇದ್ಕಿಂತ ಹೆಚ್ಚಿನ ಕೆಲ್ಸ ಸಿಗ್ತಿರ್ಲಿಲ್ಲ.

ಸೇಂಗಾ ಕೀಳಕ್ಕೆ, ಕಾಯಿ ಬಿಡ್ಸಕ್ಕೆ ಹೋಗುವಾಗ ಬೆಳಬೆಳಿಗ್ಗೆ ಮುಂಚೆ ಏಳ್ಬೇಕು. ಕೋಳಿ ಕೂಗಕ್ಮುಂಚೆನೇ ಗಂಜಿನ ಒಂದ್ ಡಬ್ಬಕ್ ಹಾಕ್ಕಂಡ್ ಓಡ್ಬೇಕು. ಹೊಲ್ದಲ್ಲಿ ಸೇಂಗಾ ಕಿತ್ತು ರಾಶಿ ಮಾಡಿ ಆಮೇಲೆ ಕಾಯಿ ಬಿಡಿಸ್ಬೇಕು. ಮಧ್ಯಾಣ ಊಟಕ್ ಬಿಟ್ಟಾಗ ಗಂಜಿ ಕುಡ್ದು ಸ್ವಲ್ಪ ಹಸಿ ಶೇಂಗಾ ತಿಂತಿದ್ವಿ. ಸೂರ್ಯ ಮುಳುಗೋ ತಂಕ ಕಾಯಿ ಕಿತ್ತು ರಾಶಿ ಹಾಕ್ತಿದ್ವಿ. ಆಮೇಲೆ ನಾಯ್ಕರ್ ಮನೆ ಕಣಕ್ಕೆ ಹೊತ್ಕಂಡ್ ಹೋಗಿ ರಾಶಿ ಹಾಕ್ಬೇಕು. ಅಲ್ಲಿ ನಾಯ್ಕರ್ ಮನೆ ಮೇಸ್ತ್ರಿ ಸೇರಲ್ಲಿ ಸೇಂಗಾ ಅಳದು ಸೇರಿಗೆ ಐದೋ ಹತ್ತೋ ಪೈಸೆ ದುಡ್ಡು ಕೊಡೋನು. ನಾವೆಷ್ಟ್ ಕಷ್ಟಪಟ್ರೂ ಐದ್ರುಪಾಯಿಗಿಂತ ಹೆಚ್ಚು ಆಗ್ತಿರ್ಲಿಲ್ಲ. ಕೊಟ್ಟಷ್ಟ್ ಇಸಗಂಡು ಕಪ್ಪಾಗೊ ಹೊತ್ಗೆ ಮನೆಗ್ಬಂದು ಸ್ವಲ್ಪ ಅಕ್ಕಿ ಹಾಕಿ ಗಂಜಿ ಕಾಯ್ಸಿಕೊಳ್ಳೋದು.

ಎಲ್ಲ ಕಿತ್ತಾದ ಮೇಲೆ ಹೊಲ್ದಲ್ಲಿ ಬಿದ್ದಿರೊ, ಅಲ್ಲಲ್ಲಿ ಉಳ್ದಿರೊ ಸೇಂಗಾ ಕಿತ್ತಕ್ ಹೋಗೋದಾರೆ ಸ್ವಲ್ಪ ತಡ್ದು ಹೋಗದು. ಇಡೀ ಹೊಲ ಅಲ್ಲಿಲ್ಲಿ ಓಡಾಡಿ ಸೇಂಗಾ

ಕಿತ್ತಕಡೆ ನಂ ಪಿಕಾಸೀಲಿ ನೆಲ ಬಿಡ್ಸಿ ಹರಡಿ ಉಳಿದಿದ್ ಚೂರುಪಾರು ಸೇಂಗಾ ಹೆಕ್ಕತಿದ್ವಿ. ನಾಯ್ಕರುಗಳಿಗೆ ಇದು ಇಷ್ಟ ಆಗ್ತಿರ್ಲಿಲ್ಲ. ನಮ್ಮನ್ ಅಟ್ಟುಸ್ಕಂಡ್ ಬರೋರು; ಕಲ್ಲು, ಸೌದೆ ತೂರೋರು; ಅಂತೂ ಹೋಗ್ಲಿ ಅಂತ ಏನೇನೋ. ಎಲ್ಲೊ ಒಂದೊಂದ್ಸಲ ಕೆಲವ್ರು ತಗಳಿ ಅಂತ ಬಿಡೋರು. ಆದ್ರೆ ಸಿಕ್ಕಿದ್ರಲ್ಲಿ ಮೂರ್ನೆ ಒಂದ್ ಭಾಗನೊ, ಅರ್ಧನೊ ಕೊಡಿ ಅನ್ನೋರು. ಏನಾದ್ರೂ ಸಿಕ್ರೆ ಸರಿ, ಇಲ್ದಿದ್ರೆ ಚೂರುಪಾರೆಲ್ಲ ಅವ್ರಿಗೇ ಕೊಟ್ಟು ಏನೂ ಉಳಿತಿರ್ಲಿಲ್ಲ. ಏನಾದ್ರು ಆಗ್ಲಿ, ನಾಯ್ಕರುಗಳು ಸಂಜೆ ಆಗೋ ತಂಕ, ಅವ್ರ ಪಾಲು ತಗೊಳೊ ತಂಕ ಮನೆಗ್ ಹೋಗಕ್ ಬಿಡ್ತಿರ್ಲಿಲ್ಲ. ನಾವದ್ನ ತಗಂಡ್ ಚೇಕ್ಕಡಿಗೆ ಹೋಗ್ತಿದ್ವಿ. ಅಲ್ಲಿ ಎಣ್ಣೆಗಾಣ ಇರದು. ಅಲ್ಲಿ ವ್ಯಾಪಾರಿಗಳಿಗೆ ಅದ್ನ ಮಾರಿ ಅಕ್ಕಿನೊ, ನುಚ್ಚೊ ತರ್ತಿದ್ವಿ. ನುಚ್ಚುನ್ನಂತು ಬಾಯ್ಗೆ ಹಾಕಕ್ಕೇ ಆಗ್ತಿರ್ಲಿಲ್ಲ, ಅಷ್ಟ್ ವಾಸ್ನೆ. ಆದ್ರೆ ದುಡ್ಡಿಲ್ದ ಕಾಲ್ದಲ್ಲಿ ಅದ್ನೆ ತಂದು ತಿನ್ಬೇಕಾಗಿತ್ತು. ಕೆಲವು ಸಲ ನಾನು ದುಡ್ಡು ತಂದು ಮನೇಲಿ ಅಮ್ಮನತ್ರ ಕೊಡ್ತಿದ್ದೆ. ಅತವಾ ಸೇಂಗನೇ ತರ್ತಿದ್ದೆ.

ಸೇಂಗಾ ಸುಲಿಲಿಕ್ ಹೋಗುವಾಗ್ಲು ಬೆಳಬೆಳಗ್ಗೆನೇ ಹೋಗ್ಬೇಕು. ಸುಲದ ಕಾಳನ್ನ ಸೇರಲ್ಲಿ ಅಳದು ಕೂಲಿ ಕೊಡ್ತಿದ್ರು. ಕೊಟ್ಗೇಲಿ ಕೂತು ಒಂದಾದ್ಮೇಲೊಂದು ಕೈಲಿ ಸೇಂಗಾ ಹಿಡ್ಕಂಡು ನೆಲಕ್ ಕುಟ್ಟಿಕುಟ್ಟಿ ಸರಸರ ಸುಲಿತಿದ್ವಿ. ಅವಸರ ಇದ್ರೆ ಹಲ್ಲಲ್ ಕಚ್ಚಿ ಅತವಾ ಎರಡೂ ಕೈಲಿ ನೆಲಕ್ ಕುಟ್ಟಿ ಸೇಂಗಾ ಸುಲೀತಿದ್ವಿ. ಹಲ್ಲಲ್ಲಿ ಕಚ್ಚಿದ್ರೆ ಬಾಯಲ್ಲಿ ಮಣ್ಣು ತುಂಬಿ ಗಂಟ್ಲ ತಂಕ ಧೂಳು ಹೋಗಿ ಉಸಿರು ಕಟ್ಟದು. ಆದ್ರೆ ಅದರ ಬಗ್ಗೆ ಎಲ್ಲ ಯಾರು ತಲೆ ಕೆಡಿಸ್ಕೊಳ್ಳೋರು? ಎಷ್ಟ್ ಸಾಧ್ಯನೋ ಅಷ್ಟ್ ಕಷ್ಟಪಟ್ಟು ಸೇಂಗಾ ಸುಲಿಯೋದು ನಂ ಕೆಲ್ಸ. ಅದೇ ಹೊತ್ಗೆ ಕಾಳು ಒಡದೋಗದಂಗೂ ನಾವು ನೋಡ್ಕಬೇಕು. ಕಾಳು ಒಡ್ದು ಬೇಳೆ ಆಗಿದ್ದು ಹೆಚ್ಚಾದ್ರೆ ನಾಯ್ಕರ್‌ಗೆ ಸಿಟ್ಟುಬರದು. ಯಾಕಂದ್ರೆ ಒಡದ ಬೇಳೆನ ಬೀಜದಂಗೆ ಎಲ್ಲಿ ಬಳಸಕ್ಕಾಗುತ್ತೆ ಅದ್ಕೆ. ಮದ್‌ಮಧ್ಯ ಮಾತಾಡಿದ್ರೆ, ಎಲ್ಲೊ ಒಂದೊಂದ್ ಬೀಜ ಬಾಯಿಗಾಕ್ಕಂಡ್ರೆ ಅದ್ನ ನಾಯ್ಕರ್ ನೋಡಿದ್ರೆ ಮುಗಿತು ಕತೆ. ಎಲ್ಲ ಬೈಗುಳ ನೆನಪು ಮಾಡ್ಕಂಡ್ ಬೈತಿದ್ದ. ಸೇರಿಗೆ ಐದೋ ಹತ್ತೊ ಪೈಸೆ ಕೊಡೋರು. ಇಲ್ಲು ಹೆಚ್ಚು ದುಡ್ಡು ಮಾಡಕ್ಕಾಗ್ತ ಇರ್ಲಿಲ್ಲ. ಹೆಚ್ಚಂದ್ರೆ ಐದಾರ್ರುಪಾಯಿ. ಆದ್ರು ಅಜ್ಜಿ ಜೊತೆ ಸೇಂಗಾ ಸುಲಿಯಕ್ ಹೋಗ್ತಿದ್ದೆ.

ಇದ್ಯಾವ ಕೆಲ್ಸನೂ ಇಲ್ದಿದ್ರೆ ಹೊಲಕ್ಕೋಗಿ ಉದುರಿರೋ ಈರುಳ್ಳಿ, ಮುಳ್ಳುಕಂಟಿ ಹೆಕ್ಕಂಡ್ ಬರ್ತಿದ್ದೆ. ಕೆಲವು ದಿನ ಬೆಟ್ಟದಲ್ಲಿರೊ ಜಂಗಲ್ಲಿಗೆ ಉಳಿದ ಹುಡುಗ್ರ ಜೊತೆ ಸೌದೆ ಮಾಡ್ಲಿಕ್ ಹೋಗಿದ್ದೂ ಇದೆ. ಅಂತಾ ದಿವ್ಸಗಳಲ್ಲಿ ಬೆಳಿಗ್ಗೆ ಬೇಗೆದ್ದು ಒಂದ್ ಡಬ್ಬಿಗೆ ಗಂಜಿ ಸುರ್ಕಂಡು ಗಾರ್ಡರೋ, ಫಾರೆಸ್ಟರೋ ಬಂದ್ರೆ ಕೊಡಕ್ಕೆ ಅಂತ ಅಮ್ಮನತ್ರ ಒಂದ್ರುಪಾಯ್ ಇಸ್ಕಂಡು ಹೊರಡ್ತಿದ್ದೆ. ದುಡ್ಡು ಕೊಟ್ಟಿಲ್ಲಾಂದ್ರೆ ಅವ್ರು ಸೌದೆ ಕಡ್ಕಳಕ್ಕೆ ಬಿಡ್ತನೇ ಇರ್ಲಿಲ್ಲ.

ಅವ್ನು ಅರಣ್ಯ ಇಲಾಖೆ ಬಂಗ್ಲೇಲಿ ಇರ್ತಿದ್ದ. ಅಕಸ್ಮಾತ್ ಒಂದೊಂದ್ಸಲ ತನಿಖೆ ಮಾಡೋನಂಗೆ ಸುತ್ತುಹಾಕುವಾಗ ಎದ್ರು ಬಂದ್ಬಿಡ್ತಿದ್ದ.

ಜಂಗಲ್ಲಿಗೆ ಹೋಗದೂಂದ್ರೆ ಅಷ್ಟ್ ಸುಲಭ ಅಲ್ಲ. ಒಂದಾದ್ಮೇಲೊಂದು ಗುಡ್ಡದ ತಲೆ ಹತ್ತಿ ಇಳ್ದು ಹತ್ತಿ ಇಳ್ದು ಅಲ್ಲಿ ಕೆಳಗ್ ಬಿದ್ದಿರೊ ಕಟ್ಗೆ, ಕಡ್ಡಿ ಪುಳ್ಳೆ ಹೆಕ್ಕಿ ಅದನ್ನೊಂದ್ ಹೊರೆ ಮಾಡಿ ಕಟ್ಬೇಕಿತ್ತು. ಇಷ್ಟು ಮಾಡದ್ರಲ್ಲಿ ರೆಂಬೆಕೊಂಬೆ, ಮುಳ್ಳು ಕಂಟಿ ಎಲ್ಲ ಮುಖ, ಕೂದ್ಲು ಕೈಕಾಲ್ನ ಪರಚಿ ಹಾಕಿರ್ತಾವೆ. ಕೆಲವೊಂದ್ಸಲ ಚರ್ಮ ಹರ್ದು ರಕ್ತ ಬರದೂ ಇದೆ. ಆದ್ರೆ ಇದಕ್ಕೆಲ್ಲ ಹೆದರಿದ್ರಿ ಅಂದ್ರೆ ಸೌದೆ ಮಾಡ್ಲಿಕ್ಕೇ ಆಗಲ್ಲ. ಒಂದೊಂದ್ಸಲ ಕೂದ್ಲು ರೆಂಬೆಕೊಂಬೆ ಮಧ್ಯ ಸಿಗಾಕಂಡು ತಲೆನೇ ಸಿಗ್ದಾಕಿ ಬಿಡುತ್ತೇನೋ ಅನ್ಸದು. ಮುಂದೊ ಹಿಂದೊ ಹೆಂಗೋಗದಂತ ಗೊತ್ತಾಗ್ತಿರ್ಲಿಲ್ಲ. ನಮ್ಗಿದ್ದ ರಸ್ತೆ, ದಾರಿನಾದ್ರು ಎಂತದು? ಮುಳ್ಳು ಪೊದೆನೆಲ್ಲ ಅತ್ತ ಸರ್ಸಿ ದಾರಿ ಮಾಡ್ಕಂಡ್ ಹೋಗ್ಬೇಕು ನಾವು.

ಇಷ್ಟೆಲ್ಲ ಆದ್ಮೇಲೆ ಸೌದೆನ ಹೊರೆಕಟ್ಟಿ ಹಂಗೇ ತಲೆಮೇಲೆ ಹೊತ್ಕಂಡ್ ಹೋಗಕ್ಕೂ ಆಗಲ್ಲ. ಎಂಥದೋ ಒಂದು ಮುಳ್ಳೋ ಬಳ್ಳಿಯೋ ಸಿಕ್ಕಾಕಳುತ್ತೆ, ಹಿಂದೆಳೀತ್ತೆ, ಕಾಲಿಗೆ ತೊಡರುತ್ತೆ. ಹಂಗಾಗಿ ಬೆಟ್ಟ ಇಳಿಯದು ಅಷ್ಟ್ ಸುಲಭ ಅಲ್ಲ. ಎಷ್ಟೋ ಸಲ ಹೊರೆ ಇಳ್ಸಿ, ನಿಧಾನ ಉರುಳ್ಸಿ ನಾವೂ ತೆವಳ್ತ ಬಂದದ್ದಿದೆ. ಇಷ್ಟೆಲ್ಲ ಆಗಿ ಅಂತೂ ಬೆಟ್ಟದ್ ಬುಡ ಮುಟ್ಟಿದ್ರಾ, ಆಮೇಲ್ ಕಷ್ಟ ಇಲ್ಲ, ಹೊರೆ ಹೊತ್ಗಂಡ್ ನೇರ ಮನೇಗ್ ಬರಬೋದು. ಆದ್ರೆ.. ಅಷ್ಟೊತ್ಗೆ ಚೂರುಪಾರು ಶಕ್ತಿಯೆಲ್ಲ ಖಾಲಿಯಾಗಿ ತಲೆ ಮೇಲಿನ ಹೊರೆ ಸಿಕ್ಕಾಪಟ್ಟೆ ಭಾರ ಅನ್ಸಕ್ಕೆ ಶುರುವಾಗುತ್ತೆ. ಬೆಟ್ಟದ ಜಂಗಲ್ಲು ಮತ್ತು ನಮ್ಮ ಹಳ್ಳಿ ಮಧ್ಯದ ದೂರ ಕಮ್ಮಿ ಅನ್ಕಬೇಡಿ. ಉಳದೋರು ನಾಯ್ಕರ್ ಬೀದಿಗೋಗಿ ಹೊರೆಗೆ ಏಳೆಂಟು ರೂಪಾಯಂಗೆ ಮಾರೋರು. ಆದ್ರೆ ನಾನು ಒಂದ್ ಹೊರೆನೂ ಮಾರ್ಲಿಲ್ಲ, ಮನೆಗೇ ತಗಂಡೋಗ್ತಿದ್ದೆ.

ಆ ದಿವ್ಸಗಳಲ್ಲಿ ನಮ್ಮಮ್ಮ ಕೂಡ ಸೌದೆ ತರಕ್ಕೆ ಅಂತ ಹೋಗೋಳು. ಒಂದ್ಸಲ ಒಂದ್ ಹೊರೆ ತಂದು, ಗೋಡೆಗ್ ಒರಗ್ಸಿಟ್ಟು, ರಕ್ತದ ಗಡ್ಡೆಗಡ್ಡೆನೇ ವಾಂತಿ ಮಾಡಿದ್ಲು. ಹಿಂಗೇ ತಮ್ಮ ಮೈ, ಮಾಂಸದ ಬಗ್ಗೆ ಒಂಚೂರು ಗಮನ ಕೊಡ್ದೆ ಗೇಯ್ದು ಗೇಯ್ದೆ ನಂ ಜಾತಿ ಜನ ಬದುಕಿದ್ರು. ಮಕ್ಳು ಹತ್ತನ್ನೆರೆಡು ವರ್ಷ ಆಗದ್ರಲ್ಲಿ ಹೊರಗೋಗಿ ಹೆಂಗಾರ ನಾಕು ಕಾಸು ಗಳಸಕ್ಕಾಗುತ್ತಾ ಅಂತ ನೋಡೋರು. ಅಲ್ಲೀತಂಕ ಮಕ್ಳು ತಮ್ಮ ತಂಗಿತಮ್ಮದೀರ್ನ ತಮ್ಮ ತೊಡೆ ಮೇಲಿಟ್ಕಂಡು ಸಾಕ್ತಿದ್ವು. ಕಡ್ಡಿ ಪುರ್ಲೆ ಒಟ್ ಮಾಡಿ ಬೆಂಕಿ ಮಾಡಿ ಗಂಜಿ ಬೇಸದ್ನೂ ಕಲ್ತಿರೋವು. ಇವನ್ನೆಲ್ಲ ಹೆಣ್ಮಕ್ಳು ಮಾತ್ರ ಮಾಡ್ಬೇಕಾಗ್ತಿತ್ತು. ಹೆಂಗಸ್ರು ಮನೆಗ್ ಬಂದು ಕೆಲ್ಸ ಶುರು ಹಚ್ಕಳದ್ರಲ್ಲಿ ಸಂಜೆ ಆಗೋಗಿರ್ತಿತ್ತು. ಗಂಡುಮಕ್ಳು ಮನೇಲಿದ್ರೆ ಕುರಿ ದನ ಮೇಸೋರು. ಸ್ವಲ್ಪ ದೊಡ್ಡೋರಾದ್ಮೇಲೆ ಗಂಡಸ್ರ ಜೊತೆ ಹೊಲಕ್ಕೋಗಿ ಗೇಯೋರು.

ಸುಗ್ಗಿ ಕಾಲ್ದಲ್ಲಿ ಒಂದ್ ದೊಡ್ಡ ಗೆರಸಿ (ಮೊರ) ಮತ್ತೆ ಗಟ್ಟಿ ಪರಕೆ ಹಿಡ್ಕಂಡು ಕೆರೆ ದಂಡೇಲೋ, ಆ ಗಬ್ಬು ನಾರೋ ಕಾಲುವೆ ಹತ್ರನೋ ನಿಲ್ತಿದ್ವಿ. ಹೊಡೆಮಂಚಕ್ಕೆ ಹೊಡೀತಾ ಹಾರಿಬಂದ ಕಾಳ್ನ ಗುಡಿಸಿ ಮನೆಗ್ ತಗಂಡೋಗ್ತಿದ್ವಿ. ಆದ್ರೆ ಎಳೇ ಮಕ್ಳು ಮತ್ತು ಮುದುಕೀರಷ್ಟೆ ಹಿಂಗ್ ಮಾಡ್ತಿದ್ದಿದ್ದು. ಗಟ್ಟಿ ಹೆಂಗಸ್ರು, ಹುಡುಗೀರು ಹೊಲಕ್ಕೇ ಹೋಗಿ ಗೇಯ್ತಿದ್ರು. ಅವ್ರಿಗಲ್ಲಿ ಒಕ್ಕಿ, ತೂರಿ, ಗೇರಿ ಮಾಡಿದ್ದಕ್ಕೆ ಬುಟ್ಟಿ ತುಂಬ ಕಾಳು ಕೊಡೋರು.

ಹೀಗೆ ನಾವೇನೇನ್ ಮಾಡಿದ್ರೂ, ಕೊಯ್ಲಾದ ಮೇಲೆ ಹೊಲ್ದಲ್ಲಿ ಉಳಿದಿದ್ನ ಹೆಕ್ಕಿದ್ರೂ, ಸುಗ್ಗಿ ಕಣದ ಆಚೀಚೆ ಹಾರಿ ಬಂದಿದ್ನ ಗುಡಿಸಿ ತಂದಿದ್ರೂ ಕೊನೆಗೆ ಅದನ್ನ ಅಂಗ್ಡಿಗೇ ಒಯ್ತಿದ್ವಿ. ನಂ ಬೀದೀಲಿ ನಾಡಾರ್ ಜನ ಇದಕ್ಕಂತನೇ ಅಂಗ್ಡಿ ಹಾಕಿ, ತೂಕ ಮಾಡಿ, ಅರಾರೂಟಿನಂತ ಏನಾರೂ ಸಾಮಾನನ್ನ ಬದಲಿಗೆ ಕೊಡ್ತಿದ್ರು. ಆಗ ನಮ್ಗೆ ಗೊತ್ತಾಗ್ತನೇ ಇರ್ಲಿಲ್ಲ ಈ ಕೊಡುಕೊಳೆ ಕಾರ್ಯಕ್ರಮದಲ್ಲಿ ನಮಗೆಷ್ಟು ಮೋಸ ಆಗ್ತಿತ್ತೂಂತ.

ಇದೇ ತರನೇ ಹತ್ತಿಕಾಯಿ ಒಡೆದಾಗ್ಲೂ ನಾವ್ ತಂದ ಹತ್ತಿನ ಏನೋ ಸಾಮಾನಿಗೆ ಅಂತ ಅದ್ಲುಬದ್ಲು ಮಾಡ್ಕತಿದ್ವಿ. ನಮಗೆ ಮೋಸ ಮಾಡಿ ಆ ವ್ಯಾಪಾರಿಗಳು ಚೀಲಗಟ್ಲೆ ಧಾನ್ಯ, ಮೂಟೆಗಟ್ಲೆ ಹತ್ತಿ ಒಟ್ಟು ಮಾಡ್ತಿದ್ರು. ನಂ ಕಷ್ಟದ ಕೆಲ್ಸಕ್ಕೆ ಮೋಸದ ಪ್ರತಿಫಲ ನೀಡ್ತಿದ್ದೋರು ನಂ ನಾಯ್ಕರ್ ಧಣಿಗಳೇ. ಅವ್ರ ಜೊತೆ ಈ ವ್ಯಾಪಾರಿಗಳು ಬೇರೆ. ಹಿಂಗಿದ್ದಾಗ ನಾವು ಮುಂದೆ ಬರಕ್ಕಾದ್ರೂ ಹೇಗ್ ಸಾಧ್ಯ? ಮೋಸ ಮಾಡೋರೇ ಮುಂದೆ ಹೋಗೋರು ಅಂತ ಕಾಣುತ್ತೆ. ಆದ್ರೆ ಪ್ರಾಮಾಣಿಕವಾಗಿರ್ತೀನಿ ಅನ್ನೊ ದಲಿತಂಗೆ, ಜೀವಮಾನವಿಡೀ ಕಷ್ಟಪಟ್ಟು ದುಡಿಯೋಳ್ಗೆ ಒಳ್ಳೇಕಾಲ ಅನ್ನೋದೇ ಇಲ್ಲ.

ಎಂಟನೇ ಕ್ಲಾಸಿಗೆ ಬರೋತಂಕ ನಂ ಹಳ್ಳೀಲಿ ಹಿಂಗ್ ಕೆಲ್ಸ ಮಾಡ್ತಿದ್ದೆ. ಯಾವಾಗ್ಲೂ ನಾಯ್ಕರ್‌ಗಳಿಗಾಗೇ ಕೆಲ್ಸ ಮಾಡಿದ್ದು. ಅವ್ರ ವಸ್ತು, ಆಸ್ತಿ ಏನನ್ನೂ ಮುಟ್ಬಾರ್ದು ಅಂತ ನಂಗೆ ಗೊತ್ತಿತ್ತು; ಅವ್ರಿದ್ದ ಜಾಗದತ್ರ ನಾ ಸುಳಿತನೇ ಇರ್ಲಿಲ್ಲ. ಯಾವಾಗ್ಲೂ ಸರ್ದು ಒಂದ್ ಬದಿ ನಿಂತ್ಕತಿದ್ದೆ. ಇವು ನಿಯಮಗಳು. ನಂಗೆಷ್ಟೋ ಸಲ ಬೇಜಾರಾಗ್ತಿತ್ತು. ಅವಮಾನ ಆಗ್ತಿತ್ತು. ಆದ್ರೆ ಏನೂ ಮಾಡಂಗಿರ್ಲಿಲ್ಲ. ಅವ್ರು ಮೇಲ್ಜಾತಿಗೆ ಸೇರಿದೋರು. ಅವರತ್ರ ದುಡ್ಡಿತ್ತು. ಅವ್ರು ಹೇಳಿದ್ನ ನಾವ್ ಕೇಳ್ಲೇಬೇಕು. ಅವ್ರ ಸಿಟ್ಟು, ತಿರಸ್ಕಾರ ಏನೇ ಇದ್ರೂ ನಂ ಜಾತಿಯ ಉಳ್ದ ಹೆಂಗಸ್ರ ಹೆಂಗೋ ಹಂಗೆ ಸರ್ದು ಜಾಗ ಬಿಟ್ಟು ನಿಂತಿದೀನಿ ನಾನು.

ಒಂಭತ್ನೆ ಕ್ಲಾಸಿಗೆ ಪಕ್ಕದ ಹಳ್ಳೀಲಿದ್ದ ಕಾನ್ವೆಂಟ್ ಹಾಸ್ಟೆಲಿಗೆ ಸೇರ್ಸಿದ್ರು. ಆಗ ನಾನು ಇಷ್ಟೆಲ್ಲ ಕೆಲ್ಸ ಮಾಡ್ಬೇಕಾಗಿರ್ಲಿಲ್ಲ. ಉಣ್ತಿದ್ದೆ, ಓದ್ತಿದ್ದೆ ಅಷ್ಟೆ. ರಜ ಇದ್ದಾಗ ಹಳ್ಳಿಗ್ ಬರ್ತಿದ್ದೆ. ಕಾನ್ವೆಂಟಿನ ಹಾಸ್ಟಲಲ್ಲಿ ಓದೋ ಹುಡುಗ್ರು ಅಂದ್ರೆ ನಂ ಹಳ್ಳೀಲಿ ವಿಶೇಷ ಸ್ಥಾನಮಾನ. ಅದೇನಾದ್ರೂ ಆಗ್ಲಿ, ಮನೆಗೋದಾಗ್ ಯಾವಯಾವ ಕೆಲ್ಸ ನನ್ನ ಪಾಲಿಂದು ಮಾಡಬೇಕಿತ್ತೊ ಅದನ್ನೆಲ್ಲ ಮಾಡ್ತಿದ್ದೆ.

ಹತ್ತನೆ ಕ್ಲಾಸ್ ಆದ್ಮೇಲೆ ದೊಡ್ ಪರೀಕ್ಷೆ ಮುಗ್ಸಿ ಮನೆಗೋದೆ. ನಾ ಹೋಗಕ್ಕೂ ನಮಮ್ಮ ನಾಯ್ಕರ್ ಬೀದಿ ಮೇಲಿಂದಾಗಿ ಎದ್ರುಗಡೆಯಿಂದ ಮಾವಿನ ಕಟ್ಗೆ ಹೊರೆ ಹೊತ್ತುಕಂಡು ಬರಕ್ಕು ಸರಿಹೋಯ್ತು. ಆಮೇಲೆ ಅವ್ವ ಹಿಂದೇ ನಾನು ಮೂರ್‍ನಾಕು ಸಲ ಹಿಂದೆಮುಂದೆ ಓಡಾಡಿ ನಾನೂ ಕಟ್ಗೆ ಹೊರೆ ಹೊತ್ತು ತಂದುಹಾಕ್ದೆ. ನಾಯ್ಕರ್ ಬೀದಿಯಿಂದ ನಂ ಬೀದಿಗ್ ಬರಬೇಕು ಅಂದ್ರೆ ನಾಡಾರ್ ಓಣಿ, ತೇವಾರ್ ಓಣಿ, ಎಣ್ಣೆಗಾಣ ಮತ್ತೆ ಬಜಾರನ್ನ ಹಾದೇ ಬರ್ಬೇಕು. ನಾನು ಸೌದೆ ಹೊತ್ಕಂಡು ಬರದು ನೋಡಿ ಕೆಲವರು ನಮ್ಮಮ್ಮಂಗೆ ಆಶ್ಚರ್ಯದಿಂದ ಹೇಳ್ತಿದ್ರು: 'ಕಾನ್ವೆಂಟಲ್ಲಿ ಓದ್ತೆ ಇದ್ರು ನಿನ್ ಹೆಣ್ ಸೌದೆ ಹೊತ್ಕ ತರುದ್ ಸಾಕ್ ಮರಾತಿಯ' ಅಂತ. ಅದರಲ್ಲಿ ಅಷ್ಟು ಆಶ್ಚರ್ಯಪಡದು ಏನಿದೇಂತ ನಂಗೆ ಇವತ್ತೂ ಅರ್ಥ ಆಗಿಲ್ಲ. ಆವಾಗ ಕಷ್ಟದ ಕೆಲ್ಸ ಅಂದ್ರೆ ನಂಗೆ ಭಾಳ ಇಷ್ಟವಾಗಿತ್ತು. ಇತ್ತೀಚೆಗೆ ನನಗ್ಗೊತ್ತಾಗಿದೆ, ಈಗ ನನ್ನತ್ರ ಆ ಕೆಲ್ಸ ಮಾಡಕ್ಕಾಗಲ್ಲ ಅಂತ. ಬೇರೆಬೇರೆ ಎಲ್ಲೆಲ್ಲೊ ಹೋದೆ, ಓದಿದೆ, ತಿರುಗ್ದೆ, ಈಗ ದೇಹ ಮೊದಲಿನ ಹಾಗೆ ಬಗ್ಗದು ಸ್ವಲ್ಪ ಕಷ್ಟಾಗಿದೆ.

ಹಗಲು ರಾತ್ರಿ ಅನ್ನದೆ ನಮ್ಮ ಜನ ಗೇಯುದು ನೋಡುವಾಗ ಅವ್ರಿಗೆಲ್ಲ ಇಷ್ಟು ಶಕ್ತಿ ಎಲ್ಲಿಂದ ಬರುತ್ತೆ ಅಂತ ಆಶ್ಚರ್ಯ ಆಗ್ತಿತ್ತು ನಂಗೆ. ಅವ್ರು ಗಂಡುಹೆಣ್ಣು ಅಂತಿಲ್ದೆ ಒಂದೇಸಮ ಗೇಯೋದು ನೋಡಿದ್ರೆ ಅವರು ಮುಂದೆ ಬರಲೇಬೇಕಿತ್ತು. ಆದರೆ ಅವ್ರು ಯಾವತ್ತೂ ತಮ್ಮ ಶ್ರಮಕ್ಕೆ ತಕ್ಕ ಸಂಬಳ ಪಡೀಲಿಲ್ಲ. ಆಮೇಲೆ ಒಂದೇ ಕೆಲ್ಸ ಮಾಡಿದ್ರೂ ಗಣಸ್ರಿಗೆ ಒಂದ್ ರೀತಿ ಸಂಬಳ; ಹೆಂಗಸ್ರಿಗೆ ಒಂದ್ ರೀತಿ ಸಂಬ್ಳ. ಗಣಸ್ರಿಗೆ ಯಾವಾಗ್ಲೂ ಜಾಸ್ತಿ. ನಂಗಂತೂ ಇದ್ನ ಅರ್ಥ ಮಾಡ್ಕಳಕೇ ಆಗಿಲ್ಲ.

ಇಷ್ಟು ಕಷ್ಟಪಟ್ರೂ, ದಣಿವಾದ್ರೂ ನಂ ಜನ ಯಾವಾಗ್ಲೂ ಖುಶಿಯಾಗಿರೋರು; ನಗಾಡ್ತ ಇರೋರು. ಇದು ಕೆಲಸಕ್ಕೇಂತನೇ ಹುಟ್ಟಿದ್ ಜಾತಿ. ಎಷ್ಟು ಕಷ್ಟಪಟ್ಟು ಕೆಲಸ ಮಾಡಿದ್ರೂ ದಿವಸಾನೂ ಅದೇ ಗಂಜಿನೇ. ಅದೇ ಅಕ್ಕಿನುಚ್ಚಿನ ಗಂಜಿ. ಅದೇ ಒಣಮೀನಿನ ಸಾರು. ತಮ್ಮ ಕಷ್ಟನಷ್ಟದ ಬಗ್ಗೆ ನಂ ಜನ ಯಾವಾಗ್ಲೂ ಯೋಚನೆ ಮಾಡೋಹಂಗೇ ಕಾಣಲ್ಲ. ಅವರಿಗೆ ಅದನೆಲ್ಲ ಯೋಚನೆ ಮಾಡಲಿಕ್ಕೆ ಟೈಮಾದ್ರೂ ಎಲ್ಲಿದೆ? ಈ ಜನ ಇಲ್ಲದಿದ್ರೆ ಮೇಲ್ಜಾತಿ ಜನ ಹೆಂಗ್ ಬದುಕ್ತಾರೊ ಗೊತ್ತಿಲ್ಲ. ಯಾಕಂದ್ರೆ ನಂ ಜನರ ಕೈಕಾಲು ಸುಮ್ನಿರದು ರಾತ್ರಿ ನಿದ್ದೆ ಮಾಡದಾಗ ಮಾತ್ರ. ಮತ್ತುಳಿದಂಗೆ ಸದಾ ಕೆಲಸ ಮಾಡೋದೇ, ಸಾಯೋತಂಕ ಕೆಲಸ ಮಾಡೋದೇ. ಅಷ್ಟು ಮಾಡಿದ್ರೆ ಅವರು ತಮ್ ಹೊಟ್ಟೆನ ಅರ್ಧನಾದರೂ ತುಂಬಿಸ್ಕಬೋದು.

ಆದರೆ ಪರಿಸ್ಥಿತಿ ದಿನದಿಂದ್ ದಿನಕ್ಕೆ ಕಷ್ಟ ಆಗ್ತಿದೆ. ಆ ಕಾಲ್ದಲ್ಲಿ, ನಿಜ, ಸಣ್ಣ ಮಕ್ಕಳು ಕುರಿದನ ಮೇಸೋರು; ತಮ್ಮನೆ ಸಣ್ಣ ಮಕ್ಕಳ ಆಡಸೋರು. ಈಗ ನೋಡಬೇಕು,

ಅವರೂ ಕೆಲಸಕ್ಕೆ ಹೋಗ್ತಾರೆ. ಬೆಳಕು ಹರಿಯೋದರಲ್ಲಿ ಮದುರೈ ಬಸ್ ಬರೋದರಲ್ಲಿ ಬೆಂಕಿಪಟ್ಟದ ಫ್ಯಾಕ್ಟರಿ ವ್ಯಾನು ಬರುತ್ತೆ. ಅರ್ಧ ನಿದ್ದೇಲೇ ಏಡಿ ಹಂಗೆ ಇರೊ ಈ ಮಕ್ಳು ಕ್ಯಾರಿಯರ್‌ಗೆ ಗಂಜಿ ಸುರ್ಕಂಡು ನುಗ್ಗಾಡತಾ ವ್ಯಾನ್ ಹತ್ತಿ ಕೆಲಸಕ್ಕೆ ಹೋಗ್ತಾವೆ. ಅಲ್ಲಿ ಬೆಂಕಿಪಟ್ಣಕ್ಕೆ ಲೇಬಲ್ ಅಂಟ್ಸೋದು; ಕೆಮಿಕಲ್ ಬಳಸಿ ಪಟಾಕಿ ಮಾಡೋದು; ಸಂಜೆ ಏಳು ಗಂಟೆ ಹೊತ್ಗೆ ಸಾಕಾಗಿ ಮನೇಗ್ ಬರದು. ಉಳಿದ ಹುಡುಗರ ಹಂಗೆ ಶಾಲೆಗೋಗಿ ಆಟ ಆಡಬೇಕಿದ್ದ ವಯಸ್ನಲ್ಲಿ ಆ ಹುಡುಗ್ರು ಫ್ಯಾಕ್ಟರಿಯ ನಾಕು ಗೋಡೆ ಮಧ್ಯ ಕೂಡಿಹಾಕಿದಂಗೆ ಇರಬೇಕು. ಈಗಂತೂ ಮಕ್ಳಿಗೆ ಎರಡೊ ಮೂರೊ ಶಾಲೆ ಇದಾವೆ. ಆದರೆ ಈ ಸಣ್ಣಮಕ್ಳ ಹಣೆಬರದಲ್ಲಿ ಮ್ಯಾಚ್ ಬಾಕ್ಸಿಗೆ ಬಳಿಯೊ ಕೆಮಿಕಲ್ ವಾಸ್ನೆ ಬರ್ದಿದೆಯೆ ಹೊರತು ಶಾಲೆಯಲ್ಲಿ ಕಲಿಯೊ ವಿದ್ಯೆಯ ಸುಗಂಧ ಬರೀಲಿಲ್ಲ. ಅವರ ಹೊಟ್ಟೆ ತುಂಬಿಸಿಕೊಳ್ಳೋದೇ ದೊಡ್ ಹೋರಾಟ. ಇನ್ನು ಓದೋದು ಯಾವಾಗ?

❐



# ಐದು

ನಂ ಬೀದೀಲಿ ಮನರಂಜನೆಗೆ ಅಂತನೊ, ಕಾಲ ಕಳಿಲಿಕ್ಕೆ ಅಂತನೋ ವಿಶೇಷವಾಗಿ ಏನೂ ಇರ್ಲಿಲ್ಲ. ಶಾಲೆ ಬಿಟ್ಟಕೂಡ್ಲೆ ನಾವು ಮಕ್ಕಳೆಲ್ಲ ಸೇರಿ ಆಟ ಆಡ್ತಿದ್ವಿ ಅಷ್ಟೆ. ಹುಡುಗ ಹುಡುಗಿ ಅಂತ ಏನೂ ಫರಕು ಇರ್ಲಿಲ್ಲ. ಎಲ್ಲ ಒಂದೇ ಅನ್ನೊ ತರ ಆಟ ಆಡ್ತಿದ್ವಿ.

ಕೆಲವು ಆಟನ ಮತ್‌ಮತ್ ಆಡ್ತಿದ್ವಿ. ಎರಡು ಮೂರು ಹುಡುಗ್ರು ನಾಯ್ಕರ್ ಆಗೋರು. ಉಳದೋರು ಅವ್ರನ್ನ 'ಅಯ್ಯ ಅಯ್ಯ' ಅಂತ ಕರಿಯೋದು. ಅವರ ಆಳು ನಾವೆನೊ ಅನ್ನೊ ತರ ನಟನೆ ಮಾಡ್ತಿದ್ವಿ. ಆ ಹುಡುಗ್ರೂ ಅಷ್ಟೆ, ನಂ ಮೇಲೆ ಸಿಕ್ಕಾಪಟ್ಟೆ ಅಧಿಕಾರ ಇದೆಯೇನೊ ಅನ್ನೊಹಂಗೆ ಮಾತಾಡೋರು. ಅವರು ನಮ್ಮನ್ನ ಯೆಪ್ಪ ಯೆಪ್ಪ ಅಂತ ಕರ್‍ದು ಹಂಗ್ಸಿ ಸಿಕ್ಕಾಪಟ್ಟೆ ಕೆಲಸ ಮಾಡ್ಸೋರು. ಇಡೀ ದಿನ ಹೊಲದಲ್ಲಿ ಗೇಯ್ದು ಸಂಜೆ ಅವರತ್ರ ಕೂಲಿ ತಗಂಡು ಹೋಗ್ತಿದೀವೇನೊ ಅನ್ನೋ ಹಂಗೆ ನಾಟ್ಕ.

ಅಂಗಡಿ ಇಡೊ ಆಟ ಆಡ್ತಿದ್ವಿ. ಹುಡುಗ್ರು ಅಂಗಡಿ ನಡಸೊ ನಾಡಾರ್ ಮುದಲಾಲಿ ತರ ಆಡೋರು. ಇಡೀ ದಿನ ಗೇಯ್ದದ್ದಕ್ ಬಂದ ಕೂಲಿ ದುಡ್ಡನ್ನ ಅಲ್ಲಿ ಕೊಡದು, ಅಷ್ಟು ದುಡ್ಡಿಗೆ ಏನು ಬರುತ್ತೊ ಆ ದಿನಸಿ ಸಾಮಾನನ್ನ ತಗಳದು, ಮನೆಗೆ ಹೋಗದು – ಇದು ಆಟ. ಕೂಲಿ ದುಡ್ಡು ಅಂದ್ರೆ ದುಂಡಗೆ ತೇದು ಇಟ್ಟ ಮಡಕೆ ತುಂಡು!

ಒಂದೊಂದ್ಸಲ ಕೆರೆಗ್ ಹೋಗಿ ಗೋಡಮಣ್ಣು ತಂದು ಮಡಕೆ, ತಟ್ಟೆ, ಬೊಂಬೆ ಏನೇನೋ ಮಾಡ್ತಿದ್ವಿ. ಇನ್ನೂ ಬೇರೆಬೇರೆ ಒಳ್ಳೇ ಆಟನೂ ಆಡತಿದ್ವಿ. ಸರ್ಕಸ್, ಕೋಲಾಟ, ಡ್ಯಾನ್ಸು, ನಮಗೆ ಹೊಡ್ತ ಕೊಡೊ ಫಾದರ‍್ರು ನನ್‌ಗಳ ವೇಷ ಹೀಗೇ.

ಆಮೇಲೆ ಮದ್ವೆ ಆಗಿ ಹೊಸ ಗಂಡ ಹೆಂಡ್ತಿ ಬಸ್ಸಲ್ಲಿ ಹೊರಟ ಹಾಗೆ; ಕುಡದು ಮನೆಗ್ ಬಂದ ಗಂಡ ಹೆಂಡ್ತಿಗ್ ಹೊಡೆಯೊ ಹಾಗೆ; ಪೋಲೀಸ್ನೋರು ಬಂದು ಗಂಡನ್ನ ಹೊಡೆಯೋ ಹಾಗೆ ಆಟ.

ಇವೆಲ್ಲ ತುಂಬ ಸಣ್ಣೋರಾಗಿದ್ದಾಗ. ಸ್ವಲ್ಪ ದೊಡ್ಡೋರಾದ್ಮೇಲೆ ಆಟ ಬೇರೆ. ಎಲ್ಲ ಕೆರೆ ಬಾವಿಗೆ ಒಟ್ಟು ಹೋಗಿ ಮೀನು ಹಿಡಿತಿದ್ವಿ. ಹುಡುಗರ ಜೊತೆ ಕಾಡಿಗೋಗಿ ಬಿದ್ದಿರೊ

ಹಣ್ಣು ಹೆಕ್ಕಂಡ್ ಬರ್ತಿದ್ವಿ. ಹುಡುಗ್ರು ಜೊತೆ ತಿರುಗದು, ಅವರು ಕೊಟ್ಟ ಹಣ್ಣು ತಿನ್ನದು. ಸ್ವಲ್ಪ ದೊಡ್ಡೋರಾದ ಹುಡುಗೀರು ಪಗಡೆ ಆಡೋರು. ಬಿಕ್ಕದ ಆಟ, ಹುಣಸೆ ಬೀಜ ಅತವಾ ಇನ್ನ್ಯಾವುದಾದ್ರು ಬೀಜ–ಕಲ್ಲಲ್ಲಿ ಮನೆಯೊಳಗೆ ಆಡೊ ಆಟ ಆಡ್ತಿದ್ವಿ. ಅತವಾ ಕ್ಯಾರಂನಂತ ಬೋರ್ಡ್ ಆಟ. ಹುಡುಗ್ರಿಗೆ ಅವರದೆ ಆದ ಆಟ ಇರ್ತಿತ್ತು. ಅಟ್ಟುಸ್ಕಂಡು ಓಡಿ ಕ್ಯಾಚ್ ಹಿಡಿಯದು, ಚಿನ್ನಿದಾಂಡು, ಗೋಲಿ, ಬುಗುರಿ..

ನಾವು ಕಬಡಿನೂ ಆಡ್ತಿದ್ವಿ. ಚರ್ಚಿಂದ ಬಂದ್ಮೇಲೆ ಸಂಜೆ ನಿದ್ದೆ ಹತ್ತೋವರೆಗು ಆಟ. ಸಣ್ಣ ತಮ್ಮ ತಂಗೀನ ನೋಡ್ಕಬೇಕಾದೋರು ಅವ್ರನ್ನ ತಂ ಹೆಗಲ ಮೇಲೆ ಹಾಕ್ಕಂಡು ಇನ್ನೊಂದು ಕೈಲಿ ಲಾಟೀನ್ ಹಿಡಿದು ಮೆರವಣಿಗೆಗೆ ಬರತಿದ್ರು. ದನದ ಚರ್ಮದಿಂದ ಮಾಡಿದ ತಮಟೆ ಬಡಿಯದು. ತುಂಬ ಮಜ ಬರದು. ಬೀದಿಬೀದಿ ಸುತ್ತಿ ಕೊನೆಗೆ ಸೆಂಟ್ ಸೆಬಾಸ್ಟಿಯನ್ ಚರ್ಚಿನ ಹತ್ರ ಬಂದು ಮೆರವಣಿಗೆ ನಿಲ್ಲದು. ನಂನಂ ಮನೆ ಎದುರು ಹೋಗ್ತ ನಂ ಮುಖ ನೋಡ್ಬೇಕು ನೀವು. ನಂ ಮುಖದ ಮೇಲೆ ಒಂಥರ ಸಣ್ಣಗೆ ಕಳ್ಳನಗು. ವಯಸ್ಸಾದೋರು ನಮ್ಮನ್ನ ಅಣಕಿಸೋರು. ಕೆಲವ್ರು ನಂ ಹಿಂದೇ ಬರ್ತಿದ್ರು ಏನೇನೋ ಸುಳ್ಳುಸುಳ್ಳೇ ಗಪ್ಪಾಸ್ ಹೊಡಿತ, ಹುಚ್ಚುಚ್ಚಾಗಿ ಕೂಗ್ತ, ಕಿರಿಚ್ತ. ಒಟ್ಟಾರೆ ಇಡೀ ಬೀದೀಲಿ ಕೂಗ್ತ ಗದ್ದ ಎಬ್ಬಸೊ ನಮ್ಮನ್ನ ಅವರು ಬೈಯೋಕೆ ಬರ್ತಿದಾರೆ ಅಂತ ನಂ ಲೆಕ್ಕ.

ಬೇರೆ ಜಾತಿ ಮಕ್ಳು ಕೆರೆ ಏರಿಮೇಲೆ ನಡ್ದು ಎಲ್ಲ ಒಟ್ಟಾಗಿ ಸಿನಿಮಕ್ಕೆ ಹೋಗ್ತಿದ್ರು. ನಂ ಹಳ್ಳೀಲೊಂದು ನಿಯಮ ಇತ್ತು. ಅದರಂತೆ ನಂ ಜಾತಿ ಹೆಣ್ಣುಮಕ್ಳು ಯಾರೂ ಸಿನಿಮಕ್ಕೆ ಹೋಗಬಾರ್ದು. ಯಾಕಂದ್ರೆ ಉಳಿದ ಜಾತಿಯ ಗಣಸ್ರು, ಹುಡುಗ್ರು ನಂ ಜಾತಿ ಹೆಣ್ಣುಗಳನ್ನ ಟಾಕೀಸಲ್ಲಿ ನೋಡಿದ್ರೆ ಎಳ್ಕಂಡು ಹೋಗ್ತಾರೆ ಅನ್ನೊ ಹೆದರಿಕೆ. ಆಮೇಲೆ ಅಲ್ಲಿ ಭಯಂಕರ ಜಗಳ ಆಗ್ತಿತ್ತು. ಅಂತೂ ಒಟ್ಟು ಗಣಸ್ರು ಸಿನಿಮಕ್ಕೆ ಹೋಗ್ತಿದ್ರು. ಅವರ ಹಿಂದೆ ಕೆಲವು ಹುಡುಗ್ರು.

ಹುಡುಗೀರು ದೊಡ್ಡೋರಾದ್ಮೇಲೆ ಎಂತ ಆಟನೂ ಇಲ್ಲ. ಹಗಲಲ್ಲಿ ಕೆಲಸಕ್ ಹೋಗೋದು, ಮನೆಗೆ ಬಂದು ಮನೆ ಕೆಲಸ ಮಾಡದು ಅಷ್ಟೆ. ಅದು ಬಿಟ್ಟು ಬೇರೆ ಏನೂ ಇಲ್ಲ. ಈಗಂತೂ ಸಣ್ಣೋರೂ ಆಡ್ತ ಇಲ್ಲ. ಆಗ್ಲೆ ಹೇಳ್ದಂಗೆ ಬೆಳಗಾಮುಂಚೆ ಎದ್ದು ಅವರು ಬೆಂಕಿಪಟ್ಟದ ಫ್ಯಾಕ್ಟರಿಗೆ ಹೋಗ್ತಾರೆ. ಕೆಲವು ಸಲ ಇದ್ದಕ್ಕಿದ್ದಂಗೆ ಗಣಸ್ರಿಗೆ ಏನೋ ಬುದ್ಧಿಬಂದು ಸಿಲಂಬಂನಲ್ಲಿ ಆಡಕ್ಕೆ ಶುರು ಮಾಡ್ತಿದ್ರು. ಎಂಥದೋ ಉದ್ದ ಕೋಲು ಹಿಡ್ಕಂಡು ಆಡ್ತಿದ್ರು. ನಂಗಂತು ಏನೂ ಅರ್ಥ ಆಗ್ತಿರ್ಲಿಲ್ಲ. ಆದ್ರು ನಮ್ಮ ಸಮಾಜ ಮಂದಿರದ ಎದುರು ಆಟ ನಡೆಯೋವಾಗ ಅಲ್ಲಿ ಹೋಗಿನಿಂತು ನೋಡೋದ್ರಲ್ಲಿ ನಾನೇ ಮೊದ್ಲು. ಅದೇ ತರ ಹುಡುಗ್ರು ಕಬಡ್ಡಿ ಆಡ್ತಿದ್ರು. ಅದು ಮಾತ್ರ ನಿಜಕ್ಕು ಗಮ್ಮತ್

ಅಂದ್ರೆ ಗಮ್ಮತ್. ನಂ ಬೀದಿಯಿಂದ ತುಂಬ ಜನ ನೋಡಕ್ಕೆ ಹೋಗೋರು. ಗಣಸ್ರು ಕೆಲವು ಸಲ ಮರದ ಕೆಳಗೆ ಕೂತು ಇಸ್ಪೀಟು ಆಡೋರು. ದುಡ್ಡಿಡೋರು, ಕೆಲವು ಸಲ ಹೊಡದಾಟನೂ ಆಗ್ತಿತ್ತು. ಅಕಸ್ಮಾತ್ ಪೋಲೀಸ್ನೋರು ಏನಾದ್ರೂ ಕಂಡ್ರೆ ಮಾಯ. ಪಂಚೆ ಉದುರೋಗ್ತಿದ್ರು ನಿಲ್ಲದಂಗೆ ಓಡಿ ಮಟಾಮಾಯ ಆಗೋರು.

ಸಮಾಜ ಮಂದಿರದ ಎದುರು ಒಂದು ದೊಡ್ಡ ದುಂಡನೆ ಕಲ್ಲುಬಂಡೆ ಇತ್ತು. ಎಲ್ರು ಅದನ್ನ ಪ್ರಾಯದ ಕಲ್ಲು ಅಂತನೇ ಕರೆಯೋರು. ಸಂಜೆಹೊತ್ತು ಪ್ರಾಯದ ಹುಡುಗ್ರು ಅದ್ನ ಮೇಲೆತ್ತಿ ಹಿಡ್ದು ಕೆಳಗೆ ನೆಲಕ್ಕೆ ಬಿಸಾಡೋರಂತೆ. ತಮ್ಮ ಶಕ್ತಿ ಎಂಥಾದ್ದು ಅಂತ ತೋರ್ಸಕ್ಕೆ ಅದು.

ಮೊದಲೆಲ್ಲ ಸಂಕ್ರಾಂತಿ ಹಬ್ಬದ ಹೊತ್ಗೆ ಜಲ್ಲಿ ಕಟ್ಟು – ಅಂದ್ರೆ ಹೋರಿ ಬೆದರ್ಸೊ ಆಟ ಇರ್ತಿತ್ತು. ಈಗ ಅದನ್ನ ನಿಷೇಧ ಮಾಡಿದಾರೆ. ಈಗ ಜಲ್ಲಿಕಟ್ಟು ಮಾಡಂಗಿಲ್ಲ. ಕ್ರಿಸ್ಮಸ್ ಮತ್ತು ಈಸ್ಟರ್ ಹಬ್ಬದ ಹೊತ್ತಿಗೆ ಊರಲ್ಲಿ ಕಬಡ್ಡಿ ಮ್ಯಾಚ್ ಇರದು. ಕೆಲವು ಸಲ ಮ್ಯಾಚು ನಂ ಕೇರಿ ಹುಡುಗ್ರ ಬೇರೆಬೇರೆ ತಂಡದ ಮಧ್ಯನೇ ಇರದು. ಅತವಾ ನಮ್ ಹುಡುಗ್ರು ಮತ್ತು ಪಕ್ಕದ ಹಳ್ಳಿ ಹುಡುಗ್ರ ಮಧ್ಯ ಮ್ಯಾಚ್. ಆಗಂತೂ ಸಿಕ್ಕಾಪಟ್ಟೆ ಜನ.

ಇದಲ್ಲದೆ ಕ್ರಿಸ್ಮಸ್ ಮತ್ತೆ ಈಸ್ಟರ್ ಇದ್ದಾಗ ರೇಡಿಯೊ ಮತ್ತು ಮೈಕ್ ಸೆಟ್ಟು ಹಾಕೋರು. ಎಷ್ಟೋ ದಿನ ಆದ್ಮೇಲೆ ನಂಗೆ ಗೊತ್ತಾಯ್ತು ನಾನು ರೇಡಿಯೊ ಅಂದ್ಕಂಡಿದ್ದು ಲೌಡ್ ಸ್ಪೀಕರ್ರು ಅಂತ. ಆಗ ನಮ್ಮೂರಲ್ಲಿ ಯಾರತ್ರನೂ ಇಂಥಾ ಸಾಮಾನು ಇರ್ಲಿಲ್ಲ. ಅವನ್ನೆಲ್ಲ ಪಕ್ಕದ ಹಳ್ಳಿಯಿಂದ್ಲೆ ತಗಳೋರು.

ಮೈಕ್ ಸೆಟ್ಟಿನ ಮನ್ಸ ಬಸ್ಸಾಂಡಲ್ಲಿ ಇಳ್ದ ಅಂದ್ರೆ ಮುಗೀತು. ಎಲ್ಲ ಸಣ್ಣುಡುಗ್ರೂ ಬಸ್ಸಾಂಡಿಗೆ ಓಡಿ ಅವನ ಹಿಂದೇ ಮೆರವಣಿಗೆ ತರ ಬರ್ತಿದ್ವಿ. ನಂ ಹುಡುಗ್ರು 'ರೇಡಿಯೊ' ಹೊತ್ಕಂಡು ಬರಕ್ಕೆ ಅವನಿಗೆ ಸಹಾಯ ಮಾಡೋರು. ಅದನ್ನು ಹೊತ್ಕಂಡು ತರ್ತಾ ತಮ್ಮ ಬಾಯಿ ಹತ್ರ ಇಟ್ಕಂಡು ಹಲೊ ಹಲೊ ಅಂತ್ಲೊ, ಮತ್ತೇನೋ ಕೂಗೋರು. ನಂಗೂ ಹುಡುಗ್ರಂಗೆ ಅದ್ನ ಬಾಯತ್ರ ಇಟ್ಕಂಡು ಮಾತಾಡ್ಬೇಕು ಅಂತ ತುಂಬ ಆಸೆ. ಆದ್ರೆ ಒಂದ್ಸಲನೂ ಚಾನ್ಸ್ ಸಿಗಲಿಲ್ಲ.

ಅದನ್ನ ತಂದ ಕೂಡ್ಲೆ ಮೊದಲು ಪ್ರೇಯರ್ ಹಾಡನ್ನೆ ಹಾಕ್ತಿದ್ದಿದ್ದು, 'ಶರಣು ಶರಣಯ್ಯ ಶರಣು ಕ್ರಿಸ್ತ/ನೀಡಯ್ಯ ಬಾಳನ್ನು ಬೆಳಗುವಾ ಬೆಳಕ..' ಆ ಸದ್ದು ಕೇಳಿದ್ದೇ ಹುಡುಗ್ರು ಇಲಿಮರಿ ತರ ಬುದುಬುದು ಬುದುಬುದು ಓಡಿಬಂದು ಡಯಾಸ್ ಹತ್ತಿ ಬಿಡೋವು. ಮೆಟ್ಟಲು ಹತ್ತದು, ಹಾರದು, ಹತ್ತದು, ಹಾರದ್ರಲ್ಲೆ ನಮಗೆ ಖುಶಿ. ಸಿಕ್ಕಾಪಟ್ಟೆ ಏರ್ಕಂಡಿರ್ತಿದ್ವಿ. ಒಂದೊಂದ್ಸಲ ಮೇಲೆ ಹತ್ತಿದೋರನ್ನ ಕೆಳಗೆ ದೂಡಿ ನಾವೂ ಅವರ ಮೇಲೆ ಬಿದ್ದು ಎಲ್ಲ ಒಟ್ ಸೇರಿ ಉರುಳಾಡಿ ಮತ್ತೆ ಮೇಲೆದ್ದು.. ಒಟ್ಟಾರೆ ಖುಶಿ.

ಸ್ವಲ್ಪ ತಡದು ಮನೆಗೆ ಹೊಸಾ ಬಟ್ಟೆ ಹಾಕ್ಕಳಕ್ಕೆ ಹೋಗ್ತಿದ್ವಿ. ಎಣ್ಣೆ ಹಾಕಿ, ತಲೆ ಬಾಚ್ಕಂಡು ಹೂ ಮುಡದು, ಪೊತ್ತು ಪುಡಿಗೆ ಎಂಜಲು ಹಾಕಿ ಕಲಸಿ ಹಣೆ ಮೇಲೊಂದು ಬೊಟ್ಟು ಇಟ್ಕಂಡು ಮತ್ತೆ ಸಮಾಜ ಮಂದಿರದ ಡಯಾಸ್ ಹತ್ರ ಹೋಗ್ತಿದ್ವಿ. ಅವರು ಇವರ ಬಟ್ಟೆಬರೆ ಮುಟ್ಟದು, ಇವರು ಅವರ ಬಟ್ಟೆಬರೆ ಮುಟ್ಟಿ ಖುಶಿ ಪಡದು, ಇದ್ರ ಬಗ್ಗೆನೇ ಕೊನೆನೇ ಆಗದಷ್ಟು ಮಾತಾಡದು.. ಒಟ್ಟಾರೆ ಖುಶಿ.

ಇದು ಸ್ವಲ್ಪ ಸಣ್ಣಸಣ್ಣ ಹೆಣ್ಣುಮಕ್ಕಳ ಮಾತಾದ್ರೆ ದೊಡ್ಡ ಹೆಣ್ಣುಮಕ್ಳು ತಂತಮ್ಮಲ್ಲೆ ಗುಸಗುಸ ಪಿಸಪಿಸ ಅಂತ ಕಿಸಿಕಿಸಿ ನಗ್ತ ಹೋಗ್ತಿದ್ರು. ಸಮಾಜ ಮಂದಿರದ ಎದುರಿನ ಬಾವಿಯಿಂದ ನೀರು ಎಳೆಯೊ ಫೋರ್ಸ್‌ಲ್ಲೆ ಅವರಿಗೆಷ್ಟು ಖುಶಿ ಆಗಿದೆ ಅಂತ ಗೊತ್ತಾಗದು. ಸೊಂಟದ ಮೇಲೆ ಕೊಡಪಾನ ಗಟ್ಟಿ ಚಚ್ಕಂಡು ನಡಿಯೊ ಬಿಂಕದಲ್ಲು ಅದು ಗೊತ್ತಾಗದು. ಆ ದಿವ್ಸಗಳಲ್ಲಿ ಬೀದಿಗೆ ಬೀದಿನೇ ಸಂಭ್ರಮದಿಂದ ತುಳುಕಾಡೊ ಹಂಗನಿಸ್ತಿತ್ತು.

ಹುಡುಗ್ರು ಹೊಸಾ ಪ್ಯಾಂಟು ಹಾಕ್ಕೋಳೋರು. ಕೆಲವ್ರಿಗೆ ಪ್ಯಾಂಟು ಜಳ್ಳೆ ಆಗಿ ಉದುರೋಗಂಗೆ ಕಾಣ್ತಿದ್ರೆ ಮತ್ತೆ ಕೆಲವ್ರದ್ದು ಬಿರಿದೋಗುತ್ತೆನೊ ಅನ್ನೋವಷ್ಟು ಟೈಟು. ಯಾವ್ಯಾವ್ದೊ ಸ್ಟೈಲಲ್ಲಿ ಕಟಿಂಗ್ ಮಾಡಿಸ್ಕಂಡು ಒಂಥರಾ ನಗ್ತ ಕೂದ್ಲು ಮುಟ್ಟಿ ಸರಿ ಮಾಡ್ಕತ ಓಡಾಡೋರು. ಮತ್ತೆ ಕೆಲವ್ರುದು ಕಾಲು ಮುಟ್ಟೊ ಅಷ್ಟು ಉದ್ದ ಫಳಫಳ ಹೊಳೆಯೊ ಬಿಳಿ ಪಂಚೆ. ಕೆಂಪು ಬನೀನು, ಮೇಲೆ ಜುಬ್ಬಾ. ಬಣ್ಣಾ ಬಣ್ಣಾ ಚೆಲುವಿನ ಬಣ್ಣಾ, ಎಲ್ಲೆಲ್ಲು ಬಣ್ಣಾ..

ನಂ ಚರ್ಚಿನ ಪೇಸ್ತಿನ ದಿನ ನಂ ಬೀದೀಲಿದ್ದ ಕುರೋಸು ಗುಡಿ ಮುಂದೆ ಚಪ್ರ ಹಾಕ್ತಿದ್ರು. ಎರಡೂ ಕಡೆ ಬಾಳೆಗಿಡ ಕಟ್ಟಿರ್ತಿದ್ರು. ಆ ಚಪ್ಪರದ ಕಂಬ ಹಿಡ್ದು ಸುತ್ತಾಡತಾ ಆಡ್ತಿದ್ವಿ. ಕೆಲವು ಸಲ ನಾವು ಆಡಾಡ್ತ ಸಡ್ಲ ಇರೊ ಕಂಬ ಕಿತ್ತು ಕೈಗೇ ಬರದು. ಹೆಂಗಸ್ರು ಮೇಣಬತ್ತಿ ಹಚ್ಕಂಡು ಪೂಜೆಗಂತ ಬರೋರು. ಅವು ಸಣ್ಣ ಹುಡುಗ್ರಿಗೆ ಬೀಡಿ ಹಚ್ಕಳಲಿಕ್ಕೆ ಒಳ್ಳೇ ಆಗ್ತಿದ್ವು. ದೊಡ್ಡೋರು ಸೇದಿ ಬಿಸಾಡಿ ಹೋದ ಬೀಡಿ ತುಂಡ ಹೆಕ್ಕಂಡು ಹುಡುಗ್ರು ಗುಟ್ಟಾಗಿ ಮೇಣಬತ್ತೀಲಿಂದ ಹಚ್ಕಂಡು ಹೊಗೆ ಬಿಡೋರು. ನಾವ್ ತಮಾಷೆಯಾಗಿ ಇದನ್ನೆಲ್ಲ ನೋಡ್ತ ನಿಂತಿರ್ತಿದ್ವಿ. ಏನಾದ್ರು ಜಗಳ ಆದಾಗ ಮಾತ್ರ, 'ತಡಿ ನಿನ್ನಬ್ಬಿ ಹತ್ರ ಅವತ್ ಬೀಡಿ ಸೇದಿದ್ ಹೇಳ್ತೆ' ಅಂತ ಹೆದರಿಸ್ತಿದ್ವಿ.

ಮೈಕು ಬಂದಕೂಡ್ಲೆ ಹುಡುಗ್ರು ಒಬ್ಬರಾದ ಮೇಲೊಬ್ರು ಅದಕ್ಕೆ ಬಾಯಿ ಹಚ್ಚಿ ಮಾತು ಶುರು ಮಾಡೋರು. ಏನೇನೋ ಮಾತು. ಹಾಡು. ತಮಟೆ ಬಡಿಯದು. ಮೈಕಿನೆದುರೆ ತಮ್ಮ ದೋಸ್ತರನ್ನ ಗಟ್ಟಿ ಕೂಗಿ ಕರ್ದು ಹಾಡು ಹೇಳು ಅನ್ನದು. ಒಂದೊಂದ್ಸಲ ಕೊನೆಗೆ ಜಗಳದಲ್ಲೆ ಮುಗಿಯದು.

ಮೊದ್ಲು ನಮ್ಮಲ್ಲಿ ಒಬ್ಬ ಇದ್ದ. ಊದಣ್ಣ ಅಂತ ಅವ್ನ ಹೆಸರು. ಅಂದ್ರೆ ಊದೋನು ಅಂತ. ಅವನ ನಿಜವಾದ ಹೆಸರು ಏನೊ ನಮಗೆ ಗೊತ್ತಿಲ್ಲ. ಅವನು ಗೊತ್ತಿಲ್ಲದೆ ಇರೊ ಯಾರೂ ನಮ್ಮೂರಲ್ಲಿರ್ಲಿಲ್ಲ. ಯಾಕಂದ್ರೆ ಅವ್ನು ತನ್ನ ಹೆಂಡ್ತಿ ಮಂಡೆ ಕೂದ್ಲು ಹಿಡ್ದು ದರದರ ಎಳ್ಕಂಡು ಬಂದು ಸಮಾಜ ಮಂದಿರದಲ್ಲಿ ಕೆಡದು ಬೆಲ್ಟ್ ಬಿಚ್ಕಂಡ್ ಹೊಡಿತಿದ್ದ. ಅವನು ದನಕ್ಕೆ ಹೊಡ್ದಂಗೆ ಹೊಡೆಯೋವಾಗ ಎಲ್ಲ ನಿಂತು ನೋಡ್ತಿದ್ರು, ಆದ್ರೆ ಯಾರೂ ಬಿಡಿಸಕ್ಕೆ ಹೋಗ್ತಿರ್ಲಿಲ್ಲ. ಹಿಂಗೆ ದಿನಾ ಎಂತದೊ ಒಂದ್ ನೆಪ. ಅವರ ಜಗಳ. ಕೊನೆಗದು ಅವ್ಳಿಗೆ ಜಪ್ಪುದರಲ್ಲೆ ಮುಗಿಬೇಕು.

ಅವರು ಮದ್ವೆ ಆಗ್ತ ಇನ್ನೇನ್ ತಾಳಿ ಕಟ್ಬೇಕು ಅಂಬತ್ತಿಗೆ ಪಾದ್ರಿ, 'ಈ ಮಹಿಳೆಯನ್ನು ಪತ್ನಿಯನ್ನಾಗಿ ಸ್ವೀಕರಿಸಲು ನಿನ್ನ ಒಪ್ಪಿಗೆ ಇದೆಯೆ?' ಅಂತ ಕೇಳಿದ್ರಂತೆ. ಆಗ ಊದಣ್ಣ ಗಟ್ಟಿಯಾಗಿ 'ಇಲ್ಲ, ನಂಗ್ ಒಪ್ಗಿ ಇಲ್ಲ ಈ ಮದಿ, ಈ ಸಮ್ಮಂಧ' ಅಂತಂದನಂತೆ! ಕೂಡ್ಲೆ ಹುಡ್ಗಿ ಅಪ್ಪ, ಮಾವ, ಚಿಗಪ್ ದೊಡಪ್ಪಂದ್ರು ಅವನ್ ಹಿಡದು ಸಮಾ ಬೈದು ಹೆದರ್ಸಿ ಮದುವೆಗೆ ಒಪ್ಪಿಸಿದ್ರಂತೆ. ಅವರ ಒತ್ತಾಯಕ್ಕೇ ಅವ ತಾಳಿ ಕಟ್ಟದ್ದು. ಜನ ಹೇಳೊ ಪ್ರಕಾರ ಅವನಿಗಿಷ್ಟ ಇಲ್ದಿದ್ ಹೆಣ್ಣಿನ್ ಜೊತೆ ಮದುವೆ ಮಾಡ್ಸಿದ್ರಿಂದ್ಲೆ ಅವನೀಗ ದಿನಾ ಹಿಂಗೆ ಹೊಡೆಯೋದು.

ಅದಿರ್ಲಿ. ಈ ಊದಣ್ಣಂಗೆ ತುಂಬ ಲಾಯ್ಕಾಗಿ ಕೊಳಲು ಬಾರ್ಸಕ್ಕೆ ಬರ್ತಿತ್ತು. ಒಂದು ಬಿದಿರು ಪುಳ್ಳಂಗೋವಿ ಹಿಡ್ಕಂಡು ನಿಜಕ್ಕು ತುಂಬ ಒಳ್ಳೆ ಬಾರಿಸ್ತಿದ್ದ. ಮೈಕ್ ಸೆಟ್ ಬಂದು ಎಲ್ಲ ಹಾಡು ಡ್ಯಾನ್ಸು ಅಂತ ಕುಣಿಯೋವಾಗ ಊದಣ್ಣ ಬಂದು ಪಿಳ್ಳಂಗೋವಿ ಬಾರ್ಸಕ್ಕೆ ಶುರು ಮಾಡ್ತಿದ್ದ. ನಿಜಕ್ಕು ಕೇಳುದೆ ಒಂದ್ ಆನಂದ.

ಅವನಿಗೆ ಅ ಆ ಬರೆಯಕ್ಕು ಬರ್ತಿರಲಿಲ್ಲ ಆದ್ರು ಇಷ್ಟ್ ಒಳ್ಳೆ ಬಾರ್ಸದು ಎಲ್ಲಿ ಕಲ್ತ ಅಂತ ಜನಕ್ಕೆ ಆಶ್ಚರ್ಯ. ವಯಸ್ಕರ ಶಿಕ್ಷಣ ಕ್ಲಾಸು ನಮ್ಮೂರ್ಗೆ ಬಂತು. ಆಗ ಪಾಟಿ ಬಳಕಡ್ಡಿ ತಕಂಡು ಓದಿ ಬರೆಯೋದು ಕಲ್ತ. ಆದ್ರೆ ಅವನು ಬರೆಯಕ್ ಕೂತ್ರೆ ಸಾಕು ಅವನ ಹೆಂಡ್ತಿ ಭಯಂಕರ ಕೂಗ್ತ ಓಡ್ಬಂದು ಹೇಳೋಳು: 'ಶಿ ನಾಚಿಗ್ಗೆಟ್ಟೋನೆ, ಜೀಂವ ಬಿಡು ಕಾಲ ಬಂದಿತ್, ಈಗ ಆಇ ಕಲುದ್ ಯಂತ ಕರ್ಮಕೆ? ಏನ್ ಕಲೆಟ್ರು ಆಯ್ಕು ನಿಂಗೆ?' ಈಗ ಅವ್ನು ಸತ್ತು ಏಳೆಂಟು ವರ್ಷಾಯ್ತು.

ಅವನಂಗೇ ಮತ್ತೊಬ್ಬ ಇದಾನೆ. ಅವನೆಸ್ರು ಹಂದಿ ಪಾವುಲು. ಅವ್ನ ನಿಜದ ಹೆಸರು ಬರಿ ಪಾವುಲು. ಅವ್ರುನ್ಯಾಕೆ ಹಂಗೆ ಕರೀತಾರೊ ಗೊತ್ತಿಲ್ಲ. ಅವ್ನು ಮತ್ತವ್ನ ಮಗ ಇಬ್ರು ತುಂಬ ಚೆನಾಗ್ ಡ್ಯಾನ್ಸ್ ಮಾಡ್ತಾರೆ. ಒಂದೊ ಎರಡೊ ಸಲ ಅವನು ಮದುರೆಯಿಂದ ಹಾಡೇಳೊ ಹುಡುಗೀರ ತಂಡ ಕರ್ಕಬಂದಿದ್ದ. ಅವ್ರೆಲ್ಲ ಸೇರಿ ರೆಕಾರ್ಡ್ ಹಾಕ್ಕಂಡ್ ಕುಣಿದಿದ್ರು. ನಾಟ್ಕನೂ ಮಾಡಿದ್ರು.

ಹಂದಿ ಪಾವುಲು ಮಗ ಸ್ವಲ್ಪ ತಿಕ್ಕಲ. ಒಂದ್ಸಲ ಈಸ್ಟರ್ ಹಬ್ಬದಲ್ಲಿ ಮೂರ್ತಿಗಳ ಮೆರವಣಿಗೆ ಹೋಗ್ತ ಇತ್ತು. ತಮಟೆ ಬಡಿಯೋರು ಎಷ್ಟು ಕುಡಿದಿದ್ರು ಅಂದ್ರೆ ಅವರತ್ರ ನಡೆಯಕ್ಕೆ ಆಗ್ತಿರಲಿಲ್ಲ. ಆಗ ಆ ಹುಡುಗ ಮತ್ತೆ ಇನ್ನೂ ಒಂದ್ ನಾಕೈದು ಜನ ಸೇರಿ ಅವರ ತಮಟೆ, ಕೊಳಲು, ಶಂಖ ಎಲ್ಲ ಕಿತ್ಕಂಡು ಬಾರಸಕ್ಕೆ ಶುರು ಮಾಡಿದ್ರು. ಪಲ್ಲಕ್ಕಿ ಮುಂದೆ ಮೆರವಣಿಗೇಲಿ ಹೊರಟ್ರು. ಅವನು ಆ ವಾದ್ಯದೋರಿಗಿಂತ ಚೆನಾಗಿ ತಮಟೆ ಹೊಡೆದ.

ಆಮೇಲೆ ತವಸಿ ಪೆಠಿಯ ಮಗನೂ ಒಬ್ಬ ಪಾವುಲು ಅಂತಿದ್ದ. ಅವನೂ ತುಂಬ ಚೆನಾಗಿ ಹಾಡೇಳ್ತಿದ್ದ. ಅವನದ್ದೂ ಒಂದು ಗುಂಪು ಇತ್ತು. ಕೆಲವು ಸಲ ಅವನು ಬಜಾರಲ್ಲಿ ಹಾಡುಕತೆ ಸೇರ್ಸಿ ಒಂದು ಡ್ರಾಮಾ ಮಾಡ್ತಿದ್ದ. ಹಂಗೆ ನೋಡಿದ್ರೆ ಎಷ್ಟೊಂದ್ ಜನ ಯಾರೂ ಹೇಳಿಕೊಡದೆ ಹಾಡು ಕುಣಿತ ತಮಟೆ ಎಲ್ಲದ್ರಲ್ಲು ಒಳ್ಳೆ ಕಲಾವಿದರೇ ಆಗಿದ್ರು.

ಕೆಲವರು ಹಾಡಿಗೆ ತಕ್ಕ ಲಯವಾಗಿ ಮಡಕೆನ ಹೊಟ್ಟೆಮೇಲೆ ಕೌಂಚಿ ಹಾಕ್ಕಂಡು ಬೆರಳಲ್ಲೊ ಕಲ್ಲಲ್ಲೊ ಕುಟ್ಟಿ ಸದ್ದು ಹೊರಡ್ಸೋರು. ಕೇಳಕ್ಕೆ ತುಂಬ ಚೆನ್ನಾಗಿರದು. ಇದ್ನ ಮಣ್ಣಿನ ಮಡಕೆ ಅತವಾ ಹಿತ್ತಾಳೆ ಕೊಡದಲ್ಲು ಮಾಡಬೋದು. ಅದರಲ್ಲು ನಾಕೈದು ಜನ ಒಟ್ಟು ಬಾರಿಸಿದ್ರೆ ಇನ್ನೂ ಸಖತ್ತಾಗಿರುತ್ತೆ. ಅದರ ಬಡಿತಕ್ಕೆ ತಕ್ಕಂತೆ ಅವರು ತಂ ತಲೆ ಕುಣಸೋರು. ಅವರನ್ನೆ ನೋಡಬೇಕು ಅನ್ಸದು.

ಸಣ್ಣವು ಕೂಡ ಒಳ್ಳೆ ಹಾಡಿ ಕುಣಿತಾ ಇದ್ವು. ಚಡ್ಡಿ ಹಾಕ್ಕಳದೆ ಮಿಣ್ಣಿಕಾಯಿ ಬಿಟ್ಕಂಡು ಓಡಾಡೋ ಸಣ್ಣ ಹುಡುಗ್ರು ಸೈತ ಒಡೆದ ಮಡಕೆಗೆ ದನದ ಚರ್ಮ ಕಟ್ಕಂಡು ಸಂಜನಕ್ಕ ಸಂಜನಕ್ಕ ಅಂತ ಬಾರ್ಸೋವು. ಲಯ ತಪ್ಪದಂಗೆ ಕುಣಿಯೋವು.

ಹೆಂಗಸ್ರೂ ಹಾಡೇಳೋರು. ಭತ್ತ ನೆಟ್ಟಿ ಮಾಡ್ತ, ಕಳೆ ಕೀಳ್ತ, ಕುಯ್ಲು ಮಾಡಿ ಸುಗ್ಗಿ ಕಣ ಮಾಡ್ತ ತಂತಮ್ಮ ಹಾಡಿನ ಲಯಕ್ಕೇ ತಕ್ಕಂಗೆ ಕೆಲಸ ಮಾಡೋರು. ಮಕ್ಕಳನ್ನ ತೊಟ್ಟಿಲಲ್ಲಿ ತೂಗ್ತ ಹಾಡೋರು; ಮೈನೆರೆದು ದೊಡ್ಡೋರಾದ ಹೆಣ್ಣುಮಕ್ಕಳಿಗೆ ಆರತಿ ಮಾಡ್ತ, ಸತ್ತೋರ ನೆನಪಲ್ಲಿ ಚರಮಗೀತೆ ಹಾಡ್ತ ಇದ್ದರು. ಈಸ್ಟರ್ ಪೂಜೆ ಮುಗುದಮೇಲೆ ಚರ್ಚಲ್ಲಿ ದುಂಡಗೆ ನಿಂತ್ಕಂಡು ಹಾಡು ಹೇಳೋರು:

*‘ಜ್ಯೋತಿಯಾಗಿ ಜೆಜು ಅಂದು ಬುವಿಗೆ ಬಂದರು*
*ಪ್ರೀತಿ ವಾರ್ತೆ ಸಾರಲೆಂದು ಜಗಕ್ಕೆ ತಂದರು*
*ನ್ಯಾಯನೀತಿ ಕ್ಷಮೆಯ ಶಿಖರ ಕ್ರಿಸ್ತನೆಂದು*
*ಲೋಕಕೆಲ್ಲ ಸಾರೋಣ ಬನ್ನಿ ಇಂದು’*

ಹಿಂಗೆ ಹಾಡು ಹೇಳ್ತ, ಚಪ್ಪಾಳೆ ತಟ್ತ ಕುಣಿಯೋರು. ಇದಾದ್ಮೇಲೆ ಸಪ್ಪರ್ ಮೆರವಣಿಗೆ ಹೊರಡ್ತಿತ್ತು.

ಅತ್ತೆ ಮಗ, ಮಾವನ ಮಗ, ಅತ್ತೆ ಮಗಳು ಮಾವನ ಮಗಳು ಹಿಂಗೇ ಸಮ್ಮಂದಿಕರಾಗಿದ್ದೋರು ಮದುವೆಯಾಗೋ ಹೊತ್ತಲ್ಲಿ ಚುಡಾಯ್ಸೊ ಹಾಡು ಹೇಳೋರು.

*'ಮಸಾಲಿಗ್ ಅರಿತಿದ್ದೆ ಕಣಲೆ*

*ನೀ ಗ್ವಾಡೆ ಮ್ಯಾಲಿಂದ ಹಣಕಾಕ್ದೆ*

*ಅದ್ಯಾವ ಮಂಕುಬೂದಿ ಎರಚ್ದೆ ಮಾರಾಯ್ನೆ*

*ರುಬ್ಬುಕಲ್ಲು ಎತ್ತುಕಾತಿಲ್ಲ ಅವತ್ತಿಂದ್ಲೆ'*

ರಾತ್ರಿ ತಮ್ ಬೇಟೆ ನಾಯಿ ತಗಂಡು ಪಡ್ಡೆಗಳು ಬೆಟ್ಟದ ಅಡವಿಗೆ ಹೋಗೋರು. ಅದು ಕಾಲ ಕಳೆಯಕ್ಕೆ ಅಂತ ಸುಮ್ಸುಮ್ನೆ ಅಲ್ಲ. ಕಾಡುಹಂದಿ, ನರಿ ಕೆಲವು ಸಲ ಬೆಳೆ ಎಲ್ಲ ನಾಶ ಮಾಡೋವು. ಅದ್ಕೆ ಅಂಥವನ್ನ ಹಿಡ್ದು ಹಾಕ್ತಿದ್ರು. ಆದ್ರೆ ತಮ್ಮ ನಾಯಿಗಳನ್ನ ಮೊಲ, ಹಂದಿ ಹಿಂಗ್ ಏನು ಕಾಣತ್ತೊ ಅದ್ರ ಮೇಲೆ ಚೂಬಿಟ್ಟು ಅವನ್ನೂ ಹಿಡಿಯೋರು.

ಒಂದ್ಸಲ ಒಂದು ಕಣೆಹಂದಿ ಹೊಡ್ದು ಚರ್ಚಿನ ಎದುರಿರೊ ಲೈಟು ಕಂಬಕ್ ಕಟ್ಟಿದ್ರು. ನಾನು ಅಲ್ಲೀತಂಕ ಕಣೆಹಂದಿ ನೋಡೇ ಇರ್ಲಿಲ್ಲ. ಕಾಡುಹಂದಿ ಏನಾರ ಹೊಡದ್ರು ಅಂದ್ರೆ ಸಾಕು, ಕೂಡ್ಲೆ ಅದರ ಕೂದಲು ಸುಟ್ಟು, ಅರಶಿನ ಹಚ್ಚಿ ತೊಳದು, ಹೂ ಮುಡ್ಸಿ, ಹಾರಹಾಕಿ ಸಿಂಗಾರ ಮಾಡಿ, ಎತ್ತಿನ ಗಾಡೀಲಿ ಮೇಲೆ ಕಾಣಂಗೆ ಕಟ್ಟಿ ಬೀದಿಬೀದೀಲೂ ತೋರಿಸ್ತ ಹೋಗೋರು. ನಾವು ದೊಡ್ಡೋರು ಮಕ್ಳು ಎಲ್ಲ ಎತ್ತಿನ ಗಾಡಿ ಹಿಂದೇ ಹೋಗ್ತಿದ್ವಿ. ಯಾರು ಹಂದಿ ಹೊಡದೋರೋ ಅವರಿಗೊಂದ್ ಹೊಸ ಪಂಚೆ, ಟವಲ್ಲು ಸಿಗ್ತಿತ್ತು. ಅದಾದ್ಮೇಲೆ ಮಾಂಸ ಕತ್ತರ್ಸಿ ಎಲ್ಲ ಮನೇರಿಗೂ ಹಂಚೋರು. ಅವತ್ತು ನೋಡ್ಬೇಕು, ಊರಿಗೂರಿಗೇ ಸಂಭ್ರಮ. ಒಂದ್ಸಲ ಅವ್ರು ಹಿಂಗೇ ಜಿಂಕೆ ಹೊಡದ್ರು. ಜಿಂಕೆನ, ಕಾಡುಕುರಿನ ಹೊಡೆಯೋದು ಅಪರಾಧ. ಆದ್ರೂ ಫಾರೆಸ್ಟರಿಗೂ ಮಾಂಸದಲ್ಲಿ ಒಂದ್ ಪಾಲು ಕೊಡ್ತೀವಿ ಅಂದ್ರೆ ಬಿಟ್ಬಿಡೋರು.

ಆಮೇಲೆ ಕ್ರಿಸ್ಮಸ್, ಈಸ್ಟರ್, ಹೊಸವರ್ಷ ಮತ್ತೆ ಚಿನ್ನಾಮಲ್ಲೆ ಪೇಸ್ತು ಇರ್ತಿತ್ತು. ಈಗ ಎಲ್ಲ ಬದಲಾಗಿದೆ. ಈಗ ಜನಕ್ಕೆ  ಚರ್ಚಿಗೋಗದುಕ್ಕಿಂತ ಸಿನಿಮ ಅಂದ್ರೇ ಪ್ರೀತಿ. ಎಷ್ಟೋ ವರ್ಷ ಆದ್ಮೇಲೆ ಕಳದ ವರ್ಷ ಹೊಸವರ್ಷಕ್ಕೆ ಮನೆಲ್ಲೆ ಇದ್ದೆ. ಹಿಂದಿನ ದಿನ ಸಂಜೆಯಿಂದ್ಲೆ ಊರು ಸಂಭ್ರಮದಲ್ಲಿರುತ್ತೆ. ಬೀದಿ ಉದ್ದಕೂ ದೋಸೆ, ಇಡ್ಲಿ, ಪನಿಯಾರಕ್ಕೆ ಅಂತ ಅಕ್ಕಿ ಉದ್ದು ನೆನಸಿದ ಹೆಣ್ಮಕ್ಕಳು ರುಬ್ಬತಾ ಮಾತಾಡ್ತ ಹರಟತಾ ಇರೋರು. ಸಂಭ್ರಮದಲ್ಲಿ ಒಬ್ರಿಗೊಬ್ರು ಕೂಗ್ತ ಕರಿತ ಇರೋರು.

‘ಹ್ವಾಯ್ ಅಕ್ಕ, ಬಲೀಂದ್ರನ ಹೇಂತಿಯೆ, ಇಲ್ಕೇಣ್, ನಾಳಿಗ್ ದನ ಕಡುದ್ ಹೌದಾ ಅವು?’ ಇದು ಇಕಾಳಮ್ಮ.

‘ಎಂತ ಪ್ರಶ್ನಿ ಕೇಂತಿ ಮರಾತಿ? ಹೊಸವರ್ಷಕ್ ದನ ಕಡಿದಿರೆ ಹಬ್ಬ ಆತ್ತಾ?’

‘ಆದ್ರೆ ಅತ್ತಿ, ಆ ಮಾವ್ಸದವಂಗ್ ಮದ್ಲೆ ಹೋಯಿ ಒಂದೆರೆಡ್ ಕಿಲೊ ನಮಗ್ ತೆಗ್ದಿಡು ಅಂತ ಹೇಳ್ಕ್. ಇಲ್ದಿರೆ ನಮಗ್ ಯಂತದು ಉಳಿತಿಲ್ಲೆ.’ ಹೇಳಹೇಳ್ತ ಅಂತೋಣಿಯಮ್ಮ ಅವಸರದಲ್ಲಿ ಓಡೋದ್ಲು.

ಮೈಕಲಮ್ಮ ಕಲ್ಲುಹಾರೆ ಮೇಲೆ ಕೂತಿದ್ಲು. ‘ಉಳದ್ ಜಾತಿಯವೂ ದನ ತಿಂಬುಕ್ ಸುರು ಮಾಡ್ಕಂಡ್ ಈಗ ಅದೂ ತುಟ್ಟಿಯಾಗ್ ಹೋಯಿತ್ ಕಾಣ್. ಎಲ್ಲವು ಹೊಟ್‌ಬಿರಿ ತಿಂಬುದ್ ತಿಂತೊ, ಕಡಿಗ್ ನಮ್ಮುನ್ ಮಾತ್ರ ಕೀಳ್ ಜಾತಿ ಅಂತೊ.’

ಅಷ್ಟೊತ್ತಿಗೆ ರಾತ್ರಿ ಒಂಭತ್ತು ಆಗಿರಬೋದು. ಇದ್ದಕ್ಕಿದ್ದಂತೆ ಸಮಾಜಮಂದಿರದ ಮೈಕ್ ಸೆಟ್ಟಿನಲ್ಲಿ ‘ಹೊಸೊರ್ಷದ ಆಚರಣೆಗ್ ಅಂದೆಳಿ ಈ ಸಲ ಸಿನಿಮಾ ತೋರ್ಸ್ತಾತ್’ ಅನ್ನೊ ಅನೌನ್ಸ್‌ಮೆಂಟ್ ಹೊರಬಿತ್ತು. ತಗಾ, ಸಣ್ಣಪಿಳ್ಳೆಯಿಂದ ಹಿಡದು ಮುದುಕ್ರವರೆಗೆ ಎಲ್ಲರಿಗು ಸಂಭ್ರಮ, ಉದ್ವೇಗ. ಅದು ಶುರುವಾಗಕ್ಕೆ ಇನ್ನೂ ಎಷ್ಟು ಹೊತ್ತಿದೆ, ಅಷ್ಟೊತ್ತಿನ ತನಕ ಕಾಯುದ್ ಹೆಂಗೆ ಅಂತ ಶತಪತ ತುಳಿಯೋರೇ ಎಲ್ಲ.

ಮರುಬೆಳಗಿಗೆ ಇಡೀ ಬೀದಿ ಕಲಕಲ. ಎಲ್ಲಕಡೆ ಖುಶಿ. ಯಾರೋ ರಾಗವಾಗಿ ತಾವ್ ತಂದ ಸಾಮಾನಿನ ಹೆಸ್ರು ಹೇಳಿ ಕೂಗ್ತ ಬಂದ್ರು: ‘ಸೇಬು, ಕಿತ್ಲೆ, ದ್ರಾಕ್ಷಿ.. ಒಳ್ಳಿ ಮಾಲು, ತಕಣಿ..’ ಎಲ್ಲ ಒಳ್ಳೆ ವ್ಯಾಪಾರ ಮಾಡಿದ್ರು. ಹೊರಗೋಗಿ ನೋಡಿದ್ದೇ ನಂಗೆ ಆಶ್ಚರ್ಯ ಆಗೋಯ್ತು, ಏನು ಇಷ್ಟು ತುಟ್ಟಿ ಹಣ್ಣನ್ನ ನಂ ಕೇರೀಲಿ ಮಾರ್‍ತಿದಾರೆ?

‘ಹ್ವಾಯ್, ಇಲ್ಲಿ, ಕಿತ್ಲಿಹಣ್ ಇಟ್ಕಂಡ್ ಹೆಣೇ, ಇಲ್ಬಾ..’ ಎಷ್ಟೊಂದ್ ಜನ ಹಣ್ಣು ಮಾರೋರ್‍ನ ಕರಿತಿದಾರೆ. ನೋಡಿ ತುಂಬ ಆಶ್ಚರ್ಯ ನಂಗೆ.

ಮುತ್ತಮ್ಮನ ಮಗ ಕೂಗ್ದ, ‘ಅಮಾ, ಫಾದರ್‍ರಿಗೆ ಮತ್ ಮದರ್ ಸುಪೀರಿಯರ್‌ಗೆ ತಕಣದ್ ಮರೀಬೇಡ ಮತೆ..’

ಅವಳ ಮಗಳೂ ಕೂಗಿದ್ಲು: ‘ಅಷ್ಟೆ ಅಲ್ಲ ಅಮ, ಅವರ್ ಲೇಡಿ ಸಬೆಯೋರು ಒಬ್ರಿಗೊಬ್ರು ಕೊಟ್ಕಣಕ್ ಏನಾರ ಗಿಫ್ಟ್ ತಕಣಕಿತ್ತ್. ಅದೆಷ್ಟ್ ಬೇಕಂತ್ ಕಂಡ್ ಹಣ್ಣೇ ತಕ..’

ಕೊನೆಗೆ ನಂಗೆ ಏನ್ ನಡಿತಿದೆ ಅಂತ ಗೊತ್ತಾಯ್ತು. ಹೊಸವರ್ಷದ ಶುಭಾಶಯ ಹೇಳಕ್ಕೆ ಎಲ್ಲ ಕುಟುಂಬನೂ ಫಾದರ್, ಮದರ್ ಸುಪೀರಿಯರ್ ಹತ್ರ ಹೋಗ್ಲೇಬೇಕು. ಅವ್ರಿಗೆ ಹಣ್ಣೋ, ಬಿಸ್ಕತ್ತೋ ಏನಾದ್ರು ಒಂದು ಗಿಫ್ಟ್ ಕೊಡ್ಲೆಬೇಕು. ತಮ್ಮ ಗೌರವ

ತೋರ್ಸಕ್ಕೆ ಅವ್ರಿಬ್ರಿಗು ಒಂದು ಹಾರ ಹಾಕಬೇಕು. ಇದು ಇನ್ನೂ ನಡಿತಿದೆ ಅಂತ ಗೊತ್ತಾಯ್ತು. ನಂ ಜನ ತಾವು ಹಣ್ಣಿನ ರುಚಿ ನೋಡದೆ ಇದ್ರೂ ಸಹ ಚರ್ಚಿನ ಹಿರೇರಿಗೆ ಹಣ್ಣು ಕೊಂಡು ಕೊಡ್ತ ಇದ್ರು. ಅವರ ಎದ್ರು ಮಂಡಿ ಬಗ್ಸಿ ಕೂತು, ವಿನಯ ಗೌರವದಿಂದ ಹಣ್ ಕೊಟ್ಟು, ಹಣೆಮೇಲೆ ಕ್ರಾಸಿನ ಚಿನ್ನೆ ಬರಸ್ಕಳೋರು.

ನಮ್ಮನೆಯಿಂದ್ಲು ನಾವು ಗಿಫ್ಟ್ ತಗಂಡು ಹೋದ್ವಿ. ಅವತ್ತು ಹೊಸವರ್ಷ ಅಲ್ವ, ಪಾಪ ನಿವೇದನೆ ಪೆಟ್ಟಿಗೆ ಎದುರು ದೊಡ್ಡ ಕ್ಯೂ. ಪೂಜೆ ಬೆಳಗ್ಗೆ ಎಂಟಕ್ ಶುರುವಾದ್ದು ಹೆಂಗೆಂಗೋ ಹತ್ತಕ್ ಮುಗೀತು.

ಪೂಜೆ ಹೊತ್ಗೆ ಒಬ್ನೇಒಬ್ಬ ಗಟ್ಟಿ ಹಾಡೇಳ್ತಿದ್ದ. ಉಳದೋರು ಎಲ್ಲೆಲ್ಲಿ ಸಾದ್ಯನೋ ಅಲ್ಲೆಲ್ಲ ಕುಟ್ಟಿ ಬಡಿತ ಅವನ್ಜೊತೆ ಸಣ್ಣಕ್ಕೆ ಹಾಡ್ತ ಇದ್ರು. ಇದ್ದಕಿದ್ದಂಗೆ ಹೆಂಗಸ್ರ ಕಡೆಯಿಂದ ಒಬ್ರು ಹೇಳಿದ್ರು: 'ಶ್ಲೋಕ ಹೇಳುಕ್ ಒಬ್ರೇ ಒಬ್ರಿಲ್ಲ. ಅದೇ ಸಿಕ್ ಸಿಕ್ಕಿದ್ ಹಿಡ್ಕ ಕುಟ್ಟುಕ್ ನೂರ್ಜನ ಇದ್ದೊ. ನಾಚ್ಗೆಲ್ದವು.' ಅವಳು ಹಿಂಗಂತ ಗಟ್ಟಿಯಾಗಿ ಹೇಳಿದ್ದೆ ಎಲ್ಲ ಗೊಳ್ಳಂತ ನಗಕ್ ಶುರು. ಕೆಲವ್ರು ಹಾವಿನಂಗ್ ಶ್ ಶ್, ಬುಸ್ ಬುಸ್ ಅಂದು ಸುಮ್ಮನಾಗಿಸಿದ್ರು.

ಚರ್ಚಿನ ನಡೂವೆ ಪಾದ್ರಿ ಪವಿತ್ರ ಜಲ ಚಿಮುಕ್ಸಿ ಹೋದಕಡೆ ಒಬ್ಬ ಪೋರ ನಿಂತಿದ್ದ, ಮೈಮೇಲೇನೂ ಇಲ್ಲ, ಪೂರ ದುಂಡಗೆ. ಫಾದರ್ ಹೋದ್ದೆ ಗ್ರಿಲ್ ಪಕ್ಕಪಕ್ಕನೆ ನಡೀತ ಅದೂ ಉಚ್ಚೆ ಹಾರಸ್ತ ಹೋಯ್ತು. ತಾನೂ ಪವಿತ್ರ ಜಲ ಚಿಮುಕಿಸ್ತ ಇದೀನಿ ಅನ್ನೋಹಂಗೆ. ಒಳ್ಳೆ ತುಳುಕಿ ತೊಟ್ಟಿಕ್ಕೋ ಹಿಟ್ನ ಪಾತ್ರೆ ಹಿಡದು ನಡೀತಿದ್ಯೆನೋ ಅನ್ನೊಹಂಗೆ ತುದಿಗಾಲಲ್ಲಿ ನಡಿತಿತ್ತು. ಒಬ್ರು ಸಿಸ್ಟರ್ ಅವನ್ನ ನೋಡಿದ್ದೇ ಹೋಗಿ ಕುಂಡೆ ಮೇಲೆ ನಾಕು ಬಿಟ್ರು. ಹುಡುಗ ನೋವು ತಡೆಯಕ್ಕಾಗದೆ ಕಿರುಚ್ತು. ಅದರಮ್ಮನು ಕೂಗಿದ್ಲು, 'ಇದು ಹೊಸೊರ್ಷದ ಹಬ್ಬದ್ದಿನ ಅಲ್ದ. ಅದಿನ್ನು ಸಣದು. ಏನ್ ಮಾ ತಪ್ಪು ಮಾಡ್ದ ಅಂತ್ ಹಂಗ್ ಹೊಡುದ್ ನೀವು?' ಹಿಂಗೆ ಹೇಳ್ತ ಹೇಳ್ತ ಅವ್ಳು ಮಗನ್ನ ಚಚ್ಕಂಡು ನಡೆದೇಬಿಟ್ಟಳು.

ಪೂಜೆ ಆದ್ಮೇಲೆ ಪಾದ್ರಿ ಮನೆ ಎದುರು ಸಿಕ್ಕಾಪಟ್ಟೆ ಜನ. ಬರೀ ಕುಟುಂಬ ಸದಸ್ಯರು ಅಷ್ಟೆ ಅಲ್ಲ, ಕೆಲವು ಗುಂಪುಗಳಿರ್ತವೆ – ಅವರ್ ಲೇಡಿ ಸಭೆ, ಹೋಲಿ ಚೈಲ್ಡ್‌ಹುಡ್ ಸಭೆ, ಗುಡ್ ಡೆತ್ ಸಭೆ, ಸೋಲ್ಜರ್ಸ್ ಆಫ್ ಗಾಡ್ ಹೀಗೇ. ಅವರೂ ತಂತಂ ಕಾಣಿಕೆ ಹಿಡ್ಕಂಡು ಬಂದಿದ್ರು. ನಾವೂ ಆ ಜಂಗುಳೀಲಿ ನುಗ್ಗಿ, ನಮ್ಮ ಕಾಣಿಕೆ ಕೊಟ್ಟು ಬಂದ್ಬಿಟ್ವಿ. ಎದುರು ಬಂದು ಮಂಡಿಯೂರೋರು, ಅಡ್ಡಬಿದ್ದು ನಮಸ್ಕಾರ ಮಾಡೋರು ಕೇಳಲಿ ಕೇಳ್ದೆ ಇರ್ಲಿ, ಪಾದ್ರಿ ಒಬ್ಬರಾದ ಮೇಲೆ ಒಬ್ಬರಿಗೆ ಹಣೆಮೇಲೆ ಕ್ರಾಸಿನ ಚಿನ್ನೆ ಬರೆಯೋರು.

ಒಂದ್ ಹೆಂಗ್ಸು ಗೊಣಗ್ತಿತ್ತು, 'ಮೊದಾಲಿದ್ದಿದ್ ಪಾದ್ರಿಗಳು ನಾವ್ ಹಣ್ ಕೊಟ್ ಕೂಳ್ಳೆ ತಾವೂ ಏನಾರು ಕೊಡುದ್ ಇರ್ತಿದ್ದಿತ್. ಹಣ್ಣು, ಮಿಟಾಯಿ, ದೇವ್ರದ್ ನಾಕೈದ್

ಸಣ್ ಪೋಟ, ಕ್ಯಾಲೆಂಡ್ರು ಹಿಂಗ್ ಏನಾರು ಕೊಡ್ತಿದ್ದಿರ್. ಇವ್ರ್ ಅಂತದೆಲ್ಲ ಎಂತದು ಇಲ್ಲೆ, ಕುರೋಸು ಬರ್ದು ಕಳ್ಸಿ ಬಿಡ್ತ್ರ್ ಅಷ್ಟೆಯ..' ಎಲ್ಲರು ಅವಳ ಮಾತು ಒಪ್ಪಿದ್ರು, ಪಾದ್ರಿ ಜುಗ್ಗತನದ ಬಗ್ಗೆನೆ ಗೊಣಗುಡ್ತ ಎಲ್ಲ ಹೊರಬಂದ್ರು.

'ಅಕಾ, ನಾ ನಗಾಡ್ತ ನಗಾಡ್ತ ಪಾದರತ್ರ ಒಂದ್ ಕ್ಯಾಲೆಂಡ್ರು ಕೊಡಿನಿ ಅಂದೆ. ಅದಕ್ ದುಡ್ ಕೊಡು ಅನ್ಬೇಕ ಅವ್ರ್? ಅವ್ರು ಹೇಳು ಪ್ರಕಾರ ಕ್ಯಾಲೆಂಡ್ರು ಇಪ್ಪುದ್ ಅವ್ರು ಮಾರುಕ್ ಅಷ್ಟೆ ಅಂಬ್ರ್. ಕಾಲ ಹೆಂಗ್ ಬದಲಾಯಿತ್ ಕಾಣ್.' ಅಂತೋಣಿಯಮ್ಮ ನಗ್ತ ಹೇಳಿದ್ಲು.

ಒಂದ್ಸಲ ಅವರ್ ಲೇಡಿ ಸಭೆಯ ಲೀಡರ್ರು ಎಲ್ರನ್ನು ಬೈದಾಯ್ತು. 'ಆಯ್ತ್, ಎಲ್ಲ ಹಿಂಗ್ ಹಲ್ಲು ಚಿಲಿತ ನಿಲ್ಲುದ್ ಬ್ಯಾಡ. ಕಾನ್ವೆಂಟಿಗ್ ಹೋಪ. ನಂ ಸಬಿ ಮದರ್ ಸುಪೀರಿಯರ್‌ಗೆ ಗಿಫ್ಟ್ ಕೊಡುದ್ ಬ್ಯಾಡದಾ?' ಕಡೆಗ್ ನೋಡಿದರೆ ಮದರ್ ಸೈತ ಅವರ್ನ ಕ್ರಾಸ್ ಚಿನ್ನೆ ಬರದು ಹಂಗೇ ಕಳಿಸಿದ್ರು ಅಂತಾಯ್ತು. ಯಾರೋ ಕೇಳೇಬಿಟ್ರು, 'ಪೂಜ್ಯ ಮದರ್, ನಮಗೆ ಕಡಿಪಕ್ಷ ದೇವ್ರ್ ಪೋಟನಾರು ಕೊಡಿ' ಅಂತ. ಅದಕ್ಕೆ ಮದರ್ರು 'ನೀವು ದೇವರ ಫೋಟೋಗಂತ ನನಗೆ ದುಡ್ಡು ಎತ್ತಿ ಕೊಟ್ಟದ್ದಿದೆಯೊ? ಆಯ್ತಾಯ್ತು, ಈಗ ಎಲ್ಲ ಮನೆಗೆ ಹೋಗಿ. ಗೋಡೆಗೆ ಒರಗಬೇಡಿ, ಕಲೆಯಾದೀತು. ಏನನ್ನೂ ಮುಟ್ಬೇಡಿ. ಡೋಂಟ್ ಟಚ್'

ಆದ್ರೆ ಆಮೇಲೆ ಮದರ್ರು ಸಬೆಯ ಲೀಡರ್ರನ್ನ ಕರ್ದು ಅವತ್ತು ಬೆಳಿಗ್ಗೆ ಎಷ್ಟ್ ಜನ ಅವರನ್ನ ನೋಡಕ್ ಹೋಗಿದ್ರೋ ಲೆಕ್ಕ ಮಾಡಿ ಸರೀ ಅಷ್ಟ್ ಬಟ್ಟೆ ಚೀಲನ ಕೊಟ್ ಕಳಿಸಿದ್ರು. ಆಮೇಲೆ ಅದರ ಬಗ್ಗೆನೆ ದೊಡ್ಡ ಗುದ್ದಾಟ ಆಗೋಯ್ತು.

'ಸೂಳಿಮಕ್ಳಾ, ನನಗೂ ಒಂದ್ ತಕಬರುಕ್ ಆತಿದಿಲ್ಲ ಇತ್ತ? ಅವ್ರಿಗ್ ಗಿಫ್ಟ್ ಕೊಡ್ಕ್ ಅಂದೆಳಿ ಎಲ್ರಂಗೆ ನಾನೂ ಏಳ್ರುಪಾಯಿ ಕೊಟ್ಟಿದ್ ಸುಳ್ಳಾ? ಒಂದ್ ಪೈಸ ದುಡ್ ಕೊಡ್ದಿರು ಬೆಳಿಗ್ಗೆ ಹೋಯಿ ಹಾಯ್ ಅಂದ್ ಬಂದೋರೆಲ್ಲ ಬಟ್ಟೆ ಚೀಲ ಇಸ್ಕಬಂದಿದಾರೆ, ದರಿದ್ರದೋವ್' ತಿರುಸಿಲುವಮಕ್ಕ ಇಡಿ ಬೀದಿ ಕೇಳೋ ಹಂಗೆ ಕೂಗಿದ್ಲು. ಏನಾದ್ರೂ ಆಗ್ಲಿ ಆಮೇಲೆ ಎಲ್ಲ ತಂತಮ್ಮ ಪಾಲಿನ ಮಾಂಸ ತಗಂಡೋಗಿ ಉಂಡು ಅವತ್ತು ಸಂಜೆ ತೋರಿಸೊ ಸಿನಿಮಕ್ಕೆ ಕಾಯತೊಡಗಿದರು.

ಸಂಜೆ ಏಳು ಗಂಟೆ ಹೊತ್ಗೆ ಸಮಾಜ ಮಂದಿರದ ಹತ್ರ ದೊಡ್ಡ ಜನಜಂಗುಳಿ. ಶಾಲೆ ಹುಡುಗ್ರು ಜಾಗಂಟೆ ಬಾರಿಸ್ತ ಹೊಸವರ್ಷಕ್ಕೆ ಪಾದ್ರಿ ಉಪನ್ಯಾಸ ಕೊಡ್ತಾರೆ ಬರ್ರಿ ಅಂತ ಕರದ್ರು. ಆದ್ರೆ ಒಬ್ರೇ ಒಬ್ರೂ ಹೋಗಲಿಲ್ಲ. ಸಿನಿಮ ಬಿಟ್ಟು ಉಪದೇಶ ಕೇಳುಕ್ ಯಾರು ಹೋಗೋರು?

ಈ ಸಲ ವೀಡಿಯೊ ಮತ್ತು ರೆಕಾರ್ಡರ್ ಎರಡನು ಬಾಡಿಗೆ ತಗಂಡಿದಾರೆ, ರಾತ್ರಿಡೀ

ಮೂರು ಷೋ ತೋರುಸ್ತಾರೆ ಅಂತ ಸುದ್ದಿ ಹಬ್ಬಿತ್ತು. ನಂ ಪಕ್ಕದ್ಮನೆ ಅಂತೋನಿಯಮ್ಮ ಬಂದು ಹೇಳಿದ್ಲು: 'ಪೆರಿಯಮ್ಮ, ಬೇರೆಬೇರೆ ಕಡಿಗೆ ಮೂರು ಷೋ ತೋರಸ್ತರಂತಲೆ. ಸೆಬಾಸ್ಟಿನ್ ಚರ್ಚಲ್ಲಿ ರಜನಿಕಾಂತ್ ಸಿನಿಮ ಅಂಬ್ರ್. ಅಂತೋಣಿ ಚರ್ಚಲ್ಲಿ ಕಮಲ್ ಹಾಸನ್ ಸಿನಿಮ. ಇಗ್ನೇಷಸ್ ಚರ್ಚಲ್ಲಿ ಎಂಜಿಆರ್ ಸಿನಿಮ. ನಂಗ್ ಹೆಂಗಾರೂ ಮೂರೂ ಸಿನಿಮಾ ಕಾಣ್‌ಕೇ. ಅಲ್ಲ ಮರತಿ, ಒಂದ್ ಶಿವಾಜಿ ಗಣೇಶನ್ ಸಿನಿಮ ಇಡುದಲ್ವ ಅವು?' ಹೇಳಹೇಳ್ತ ಅವ್ಳು ಸಮಾಜ ಮಂದಿರಕ್ಕೆ ಓಡಿಹೋದ್ಲು.

ಆದರೆ ರಾತ್ರಿ ಹತ್ತಾದ್ರೂ ಸಿನಿಮಾನೂ ಬರ್ಲಿಲ್ಲ, ಅದನ್ನ ತೋರ್‍ಸೊ ಸಾಮಾನೂ ಬರ್ಲಿಲ್ಲ. ಎಷ್ಟೊತ್ತಿಂದ ಕಾಯ್ತಾ ಕೂತಿದ್ದೋರಿಗೆ ಕಾದುಕಾದು ಬೇಜಾರು ಬಂದೋಯ್ತು. ಜೊತೆಗೆ ಮಳೆ ಬೇರೆ ಹನಿಯೂ ತರ ಕಾಣ್ತಿತ್ತು. ಆದ್ರೂ ನೆಲಕ್ ಮೊಳೆ ಹೊಡ್ಕಂಡೋರಂಗೆ ಎಲ್ಲ ಅಲ್ಲೆ ಕೂತಿದ್ರು. ಮದ್ಯಮದ್ಯ ಸಂತ ಸೆಬಾಸ್ಟಿನ್‌ಗೆ ಮಳೆ ನಿಲ್ಸು ಅಂತ ಪ್ರಾರ್ಥನೆ.

ಆಗ ಚಿನಪ್ಪಣ್ಣ ಹೇಳ್ದ: 'ಆಯ್ತ್, ಈಗದ್ ಬರ್ದಿರ್ ಎಂತ ಮಾಡ್ಕಾಕ್? ಚಿತ್ರಪ್ಪ ಮಾಸ್ತರ್ ಮನಿ ಟಿವಿ ತಂದ್ ಒಂದ್ ಪಿಚ್ಚರ್ ಕಾಂಬುಕಾತ್ತಾ ಕಾಣಿ.'

'ಯಾರ್‍ದೊ ಮನಿ ಟಿವಿ ತಂದ್ ಪಿಚ್ಚರ್ ಕಾಂಬುದ್ ಹ್ಯಂಗೆ? ಟಿವಿ ಅಂದ್ರೆ ಟೇಷನ್ನಲ್ಲಿ ಬಿಟ್ ಸಿನೆಮ ಕಾಂಬುದ್ ಅಲ್ದ?' ಥಾಮಸ್ ಹೇಳ್ದ. ಜನರ ಮಧ್ಯ ಕೂತಿದ್ದ ಕಲ್ಲುಂದ ತನಗೆ ತಿಳಿದಿದ್ದಂಗೆ ವಿವರವಾಗಿ ಹೇಳ್ದ: 'ಈ ಟಿವಿ ಅಂಬುದ್ ನಿನ್ ಕೈಯ ರೇಡಿ ಇದ್ದಂಗೆ. ಅದೇ ವೀಡಿ ರೇಕಾರ್ಡ್ ಹಚ್ಚಿ ನೋಡುದಂದ್ರೆ ಟೇಪ್ ಹಚ್ಚಿ ನಿಂಗ್ ಬೇಕಂದ್ ಹಾಡು ಕೇಂಬಂಗೆ. ರೇಡಿ ಗೆಂಡಿ ತಿರುವಿರ್ ಯಂತ್ ಬತತ್ತ್ ಹೇಳ್? ಟೇಶನ್ನೋವ್ ಯಂತ ಹಾಕ್ತೊ ಅದೇ ಬತ್ತ್. ಹಂಗೆ ಟಿವಿನು. ಅದ್ರ್ ಗೆಂಡಿ ತಿರಗ್ಸಿರೆ ಅವು ಏನ್ ಮಣ್ ಹಾಕ್ತೊ ಅದೇ ಬತ್ತ್. ಆದ್ರೆ ವೀಡಿಯೊ ತಂದ್ರ್ ಹಾಂಗಲ್ಲ. ನೀ ಹೆಟ್ಟಿದ್ ಕೆಸೆಟಿನ ಸಿನೆಮ ಬತ್ತು. ಅದ್ನೆ ನೋಡ್ಲಕ್'

ಹನ್ನೊಂದು ಗಂಟೆ ಆದ್ರು ಸಿನೆಮ ಪೆಟ್ಟಿಗೆ ಬರ್ಲಿಲ್ಲ. ಜನ ಕರಗ್ತ ಕರಗ್ತ ಒಂದಷ್ಟ್ ಜನ ಮನೆಗೋದ್ರು. ಆಮೇಲೆ ಇದ್ದಕ್ಕಿದ್ದಂಗೆ ಮೈಕಲ್ಲಿ ಅನೌನ್ಸ್ ಆಯ್ತು. ಪೂರ ಸರೀ ಯವಸ್ಥೆ ಆಗದಿದ್ರು ಪರದೆ ಕಟ್ಟಿ ಸಿನೆಮ ತೋರುಸ್ತಾರೆ ಅಂತ. ಜನ ಎಷ್ಟ್ ಬೇಗ ಓಡಲಿಕ್ಕಾಗುತ್ತೊ ಅಷ್ಟು ಬೇಗ ಓಡಿದ್ರು. ಸಮಾಜ ಮಂದಿರದ ಡಯಾಸ್ ಎದ್ರೆ ಎರಡು ಕಂಬ ನಿಲ್ಸಿ ಅದರ ನಡು ಬಿಳಿ ಪರದೆ ಕಟ್ಟಿದ್ರು.

'ಏ ಸೇವಂತಿ ಅಕಾ, ಪರ್ದಿ ಕಟ್ಟಿ ಎಂಜಿಆರ್ ಪಿಚ್ಚರ್ ತೋರಸ್ತ್ರಂಬ್ರ್. ಹ್ವಾಪ, ಬೇಗ್ ಬಾ' ಅಮಲೋಪಾವಂ ಕೂಗ್ತ ಓಡಿದ್ಲು.

'ಓ ವೈಕುಂಟಣ್ಣ, ಯಾ ಪಿಚ್ಚರ್ರು? ಯಾರ್ದ್ದಂತೆಳಿ ಏನಾರ ಗುತ್ತಾತನಾ?'

‘ಅದೇನೋ ಕುಡಿಯಿರುಂಡ ಕೋಯಿಲ್ ಅಂಬ್ರ್. ಎಂಜಿಆರ್ ಮತ್ ಜಯಲಲಿತ.’

ಆ ಹುಡುಗ ಇಷ್ಟು ಹೇಳಿದ್ದೇ ಎಲ್ರಿಗು ಸಂಭ್ರಮವೊ ಸಂಭ್ರಮ.

ಅಂತೂ ಹನ್ನೆಡ್ ಗಂಟೆಗೆ ಸಿನೆಮ ಶುರುವಾಯ್ತು. ಎಲ್ಲ ಬಾಯ್ಮುಚ್ಕಂಡ್ ನಿಶಬ್ದ. ಸಿನೆಮ ತೋರ್ಸಕ್ಕೆ ಮುಂಚೆ ಎಂಜಿಆರ್ ತೀರ್ಕಂಡಾಗ ಅವರ ಶವಪೆಟ್ಟಿಗೆ ಬೀದೀಲಿ ಮೆರವಣಿಗೆ ಮಾಡೊ ದೃಶ್ಯ ತೋರಿಸಿದ್ರು. ಎಲ್ಲ ಅಯ್ಯೊ, ಚ್ಚುಚ್ಚು ಅನ್ನೋರೆ. ಸಿನೆಮಕ್ಕೆ ಕಾದುಕಾದು ಕೊನೆಗ್ ಇದನ್ನ ನೋಡಿದ್ದೆ ಎಲ್ಲ ಅದ್ರಲ್ಲಿ ಮುಳುಗೋದ್ರು. ಎಲ್ಲ ಆದ್ಮೇಲೆ ಅಂತೂ ಕೊನೆಗ್ ಸಿನೆಮ ಶುರುವಾಯ್ತು.

ಮರುದಿನ ಹೆಂಗಿತ್ತು ಅಂತ ಕೆಲವ್ರನ್ನ ಕೇಳಿದೆ.

‘ನೀ ಬರ್ಲಿಲ್ಯ ಪಿಚ್ಚರಿಗೆ? ಯಂತಾ ಒಳ್ಳಿ ಪಿಚ್ಚರ್ ಗುತ್ತಿತ್ತ? ಎಂಜಿಆರ್ ಡಬಲ್ ಆಕ್ಟಿಂಗ್. ಜಯಲಲ್ತ ಸಾ ಎಷ್ಟ್ ಲಾಯ್ಕ್ ಆಗಿ ಮಾಡಿದ್ಲು ಕಾಣ್ಕೆದ್ದಿತ್ ನೀನ್. ಅವಳು ಎಷ್ಟ್ ಚಂದ ಕಂಡ್ಯ್ ಅಂದ್ ಹೇಳುಕ್ ಸಾದ್ದಿಲ್ಲೆ ಮರತಿ. ಅವರಿಬ್ರು ಒಟ್ ಹಾಡು ಹೇಳುದ್ ಕಂಡಿದ್ಯ ನೀನು? ಪೋಗದಿರೆಲೊ ಇನಿಯಾ ನೀ ಪೋಗದಿರೆಲೊ ಹಾಡಿತ್ತಲ್ಲ, ಅದ್ನ ಅವ್ರ್ ಹೇಳೇಳ್ತಿಪ್ಪಂಗೇ ಅವಳಪ್ಪ ಬಂದ್ ಇಬ್ರುನ್ನು ಬಿಡ್ಸಿ ಹೆಣ್ಣನ್ನ ಕರ್ಕಹೋಪುದು. ಅಷ್ಟೊತ್ತಿಗ್ ನಂಗೆ ಅರ್ಜೆಂಟ್ ಉಚ್ಚೆ ಬಂದ್ ಹೋಯತ್ ಮರಾಯ್ತಿ. ತಡ್ಕಣುಕೇ ಸಾದ್ದಿಲ್ಲೆ ಅಂಬಷ್ಟ್. ಅದೊಂಚೂರ್ ಕೊನೀದ್ ತಪ್ಪೋಯ್ತ್.’

ಆಮೇಲೆ ನಂಬಿಯಾರೋ ಮತ್ಯಾರೋ ಬಂದ್ರು ಅಂದ್ರು. ಅಂವ ಎಲ್ಲ ಸಿನೆಮದಲ್ಲು ಇರ್ತಾನೆ. ವಿಲನ್ನು. ಈ ಸಿನಿಮದಲ್ಲಿ ಅವ್ನಿಗೊಬ್ಬ ಮಗಳಿರ್ತಾಳೆ. ಅವ್ಳ್ ಬಟ್ಟೆ ಬಿಚ್ಚಿ ಕುಣಿಯು ಕೆಲಸ. ‘ಅವ್ಳಿಗ್ ಯಂತ ಮಾನಿಲ್ಲ, ಮರ್ಯಾದಿಲ್ಲ ಕಣಕ್ಕ. ಅಲ್ಲ ಅವ್ಳಂತ ಸೂಳಿಗ್ ನಾಚ್ಗಿ ಆಗುದಾರೂ ಯಂತಕ್ ಹೇಳು?’

ಹೀಗೆ ಮಾತಾಡ್ತ ಜನ ತಾವು ನೋಡಿದ್ ಸಿನಿಮ ಬಗ್ಗೆ ಹೇಳ್ತ ತಂತಮ್ಮ ಕೆಲಸಕ್ ಹೋದ್ರು.

ಕ್ರಿಸ್ಮಸ್, ಈಸ್ಟರ್, ಹೊಸ ವರ್ಷ ಬಂತಂದ್ರೆ ಸಾಕು, ಜನ ರಜನಿಕಾಂತ್ ಮತ್ತೆ ಕಮಲ್ ಹಾಸನ್ ಪೋಸ್ಟರನ್ನ ಅಲ್ಲಿಲ್ಲಿ ನೇತಾಡಿಸ್ತಾರೆ. ಯಾರಿಗು ನಿಜಕ್ಕು ತಾವು ಮಾಡ್ತಿರೊ ಹಬ್ಬ ಯಾವ್ದು, ಆಚರಣೆ ಅರ್ಥ ಏನು ಇದೆಂತದೂ ಗೊತ್ತೇ ಇಲ್ಲ. ಅವರವರ ಅಭಿಮಾನಿಗಳು ತಂತಮ್ಮ ಹೀರೋನ ಪೋಸ್ಟರುಗಳನ್ನ ಹಾಕ್ಕಂಡಿರ್ತಾರೆ. ನಾಕೈದು ಕಡೆ ಮೈಕ್ ಸೆಟ್ ಹಾಕಿ ತಮತಮಗೆ ಬೇಕಾದ ಹಾಡ ಕೂಗುಸ್ತ ಇರ್ತಾರೆ. ಅದೊಂತರಾ ಗೋಳಿಡ್ತ ಇರೋ ಹಂಗೇ ಕೇಳ್ತಿರುತ್ತೆ. ಈಗ ಕಾಲ ಕಳಿಯೋದು ಅಂದ್ರೆ ಹಿಂಗೆ.

ನಂ ಕಡೆ ಈಗ ನಮದೆ ಸಿನೆಮ ಬಂದಿದೆ. ಬೇಕಬೇಕಾದಾಗೆಲ್ಲ ಜನ ಅಲ್ಲಿ ಹೋಗಿ

ಸಿನೆಮ ನೋಡಿ ಬರ್ತಾರೆ. ಮೊದ್ಲೆಲ್ಲ ಕಲ್ತ ಹುಡುಗ್ರು ನಾಟಕ ಮಾಡ್ತಿದ್ರು. ಈಗ ಅದೇನೂ ಕಾಣಲ್ಲ. ಎಲ್ಲ ಅರ್ಧಮರ್ಧ ಕಲ್ತು ಅಡ್ಡಾಡ್ತ ಇರ್ತಾವೆ. ಹಳಬರು ಪುರುಸೊತ್ತು ಸಿಕ್ರೆ ಒಂತರಾ ಚೌಕಾಬಾರದಂತ ಆಡುಹುಲಿ ಆಟ ಆಡ್ತಾರೆ. ಅದ್ರಲ್ಲಿ ಮೂರು ಹುಲಿ, ಹನ್ನೆರೆಡು ಆಡು ಕಾಯಿಗಳಿರ್ತವೆ. ಇಸ್ಪೀಟೂ ಆಡ್ತಾರೆ. ಭಾಳ ಜನ ಸೇಂದಿನೋ ಅಥವಾ ಸಾರಾಯಿನೋ ಕುಡ್ದು ಜಗಳ ಕಾಯ್ತಾ ಇರ್ತಾರೆ.

❐



# ಆರು

ನಮ್ಮಪ್ಪ ಆರ್ಮಿ ಕೆಲ್ಸದಿಂದ ರಜೆ ತಗಂಡು ಮನೆಗೆ ಬರ್ತಾರೆ ಅಂದ್ರೆ ನಂಗೆ ಒಂತರ ಖುಶಿ, ಮತ್ತೊಂತರ ಹೆದರಿಕೆ. ಅಪ್ಪಯ್ಯ ಮನೆಗ್ ಬರ್ತ ತಿನ್ನಕ್ಕಂತ ಏನೇನೋ ತರ್ತಿದ್ರು: ದ್ರಾಕ್ಷಿ, ಸೇಬು, ಬಿಸ್ಕಿಟ್ ಡಬ್ಬ, ಸಿಹಿತಿಂಡಿ, ಹೊಸಬಟ್ಟೆ, ಹಾಲಿನ ಕ್ಯಾನು, ಪ್ಯಾಕ್ ಆಗಿರೊ ಮೀನು ಹಿಂಗೇ ಏನೇನೋ ಅಪರೂಪದ್ದನ್ನ ತರ್ತಿದ್ರು. ಅವನ್ನ ತಿನ್ನಕ್ಕೆ ಕಾಯ್ತ ಇರ್ತಿದ್ವಿ. ಅಪ್ಪಯ್ಯ ಮನೇಲಿದ್ದ ಎರಡು ತಿಂಗ್ಳೂ ತಿನ್ನಕ್ಕೆ ಒಳ್ಳೊಳ್ಳೆದೇನಾದ್ರೂ ಇರದು. ಆದರೆ ಉಳಿದಂಗೆ ಯಾವಾಗ್ಲೂ ಬರೀ ಗಂಜಿ.

ಸಾಧಾರಣ ನಮ್ಮನೇಲಿ ಸಂಜೆಗೆ ಮಾತ್ರ ಅನ್ನ ಸಾಂಬಾರ್ ಇರ್ತಿತ್ತು. ಬೆಳಿಗ್ಗೆ ಮದ್ಯಾನಕ್ಕೆಲ್ಲ ಒಂದಲ್ಲ ಒಂದು ತರದ ಗಂಜಿನೇ. ಅದ್ರ ಜೊತೆಗೆ ಏನಾರೂ ಇರ್ತಿತ್ತು – ಈರುಳ್ಳಿ, ಸೇಂಗಾ, ಬೆಲ್ಲದುಂಡೆ, ಹಸಿ ಮೆಣಸು ಹೀಗೇ. ಕೈಲಿ ದುಡ್ಡಿದ್ರೆ ಇದ್ರ ಜೊತೆಗೆ ಹುರಿಗಡ್ಲೆ ಅಥವಾ ನಾಡಾರ್ ಅಂಗಡಿ ಉಪ್ಪಿನಕಾಯಿ ಅಥವಾ ಕೊಳ್ಳಕ್ ಸಾಧ್ಯವಾದ ಏನೋ ಒಂದು ಇರದು. ಉಪ್ಪಿನಕಾಯಿ ಸಣ್ಣಸಣ್ಣ ಪ್ಯಾಕೆಟ್ಟಲ್ಲಿ ಬರ್ತಿತ್ತು. ಆಮೇಲೆ ಕದಿಚುಕಿರ ಅಂತ, ಅದ್ನ ಅಂಗಡಿಯೋರು ತಮ್ಮನೇಲೇ ಮಾಡಿ ತರೋರು. ಅವ್ರು ಅದನ್ನ ಗಮಗಮ ಅನ್ಬೇಕು ಹಂಗೆ ಮಾಡೋರು. ಬದನೆ, ಒಣಮೆಣಸು ಏನೇನೋ ಹಾಕೋರು. ಐದೋ ಹತ್ತೋ ಪೈಸದ್ದು ಬಾಳೆಲೇಲಿ ಸುತ್ತಿ ಕೊಡೋರು. ಇದು ಇವತ್ಗೂ ಇದೆ, ಅದು ಗಂಜಿ ಜೊತೆ ತುಂಬ ಒಳ್ಳೆ ಆಗುತ್ತೆ.

ಭಾನುವಾರ ಯಾವಾಗ್ಲು ಒಳ್ಳೆ ಊಟ ಇರದು. ಬೆಳಗ್ಗೆ ಪೂಜೆ ಮುಗ್ಸಿ ಬರೊ ಹೊತ್ಗೆ ಸರಿಯಾಗಿ ದನ ಕಡಿಯೋರು. ಮದ್ಯಾಣ ಗಂಜಿ ಜೊತೆ ದನದ ಬಾಡು. ಅದಕ್ಕೆ ಬರೀ ಉಪ್ಪು ಹಾಕಿ ಬೇಯ್ಸಿರೋರು ಅಷ್ಟೆ. ಮಸಾಲಾ ಇಲ್ಲ. ಸಂಜೆಗೆ ಅನ್ನ ಮತ್ತು ಬಾಡಿನ ಸಾರು. ಮನೇಲಿ ಬಾಡು ಇರೊ ದಿನ ಚರ್ಚಲ್ಲಿ ಪ್ರಾರ್ಥನೆ ಮುಗಿದ ಕೂಡ್ಲೆ ಮನೆಗೆ ಬಂದ್ಬಿಡದು. ಮತ್ತೆಲ್ಲು ಹೋಗ್ತಿರ್ಲಿಲ್ಲ.

ಕೆರೆ ತುಂಬ್ಕಂಡು ಇದ್ದಾಗ ಸಿಲೆಬಿ ಮೀನು ಮತ್ತೆ ತೇಯ್ ಮೀನು ತುಂಬ ಅಗ್ಗಕ್ಕೆ ಸಿಗೋವು. ಅದನ್ನೇನಾದ್ರೂ ತಂದ್ರೆ ಸಂಜೆ ಚರ್ಚಿಗೆ ಹೋಗ್ತನೇ ಇರ್ಲಿಲ್ಲ. ಅನ್ನ

ಮೀನುಸಾರು ತಿಂದ್ಮೇಲೇ ಹೋಗದು. ಆದರೆ ಅಂಥದೇನೂ ಇಲ್ದಿದ್ದ ಕಾಲನೂ ಇರ್ತಿತ್ತು. ಅಮ್ಮ ಉಳದ ಅನ್ನನೊ, ಗಂಜಿನೊ ಕೊಟ್ಟು ಹಸಿವು ತೀರಿಸ್ತಿದ್ಲು.

ದಿನಾ ಶಾಲೆಗೆ ಹೋಗುವಾಗ ಎರಡೋ ಮೂರೋ ಪೈಸ ಕೊಡು ಅಂತ ಕೇಳ್ತಿದ್ವಿ. ಇದೊಂತರ ಪದ್ಧತಿ ಹಂಗೆ. ಶಾಲೆಗ್ ರೆಡಿ ಆಗಿದ್ದೇ ನಂ ಪಾಲಿನ ದುಡ್ಡು ಕರ್ಚು ಮಾಡಕ್ಕೆ ಕೇಳ್ತಿದ್ವಿ.

ನಮ್ಮಪ್ಪ ಸೈನ್ಯದಲ್ಲಿದ್ದಾಗಲೆ ಅವೆಲ್ಲ ಯುದ್ಧ ಆದದ್ದು – ಪಾಕಿಸ್ತಾನ ಯುದ್ಧ, ಚೀನಾ ಯುದ್ಧ, ಬಾಂಗ್ಲಾದೇಶದ ಯುದ್ಧ. ಆಗೆಲ್ಲ ಅವನಿಗೆ ದುಡ್ಡು ಕಳಸಕ್ಕೇ ಆಗ್ತಿರಲಿಲ್ಲ. ಅಥವಾ ಪತ್ರನೂ ಬರ್ತಿರಲಿಲ್ಲ. ಏನಾದ್ರೂ ಕೂಲಿ ಕೆಲಸ ಮಾಡಿ ನಮ್ಮಮ್ಮ ಹೆಂಗೋ ನಿಬಾಯಿಸೋಳು. ಸಂಜೆ ಹೊತ್ಗೆ ಕೆರೆದಂಡೆ ಹತ್ರ ಹೋಗಿ ಹಸಿರು ಸೊಪ್ಪು ತಂದು ಬೇಯ್ಸಿ ರಾಗಿ ಬೋಳಿನ ಜೊತೆ ಕುಡಿತಿದ್ವಿ. ಕೆಲವು ಸಲ ನುಗ್ಗೆ ಎಲೆ ಬೇಯ್ಸಿ ತಿಂತಿದ್ವಿ. ಶಾಲೆಗೆ ರಜ ಇದ್ದಾಗ ನಾ ಏನಾರ ಕೆಲ್ಸ ಮಾಡ್ತಿದ್ದೆ, ಸೇಂಗಾ ಕೀಳದು, ಒಣಸಗಣಿ ಹೆಕ್ಕುದು, ಸೌದೆ ಕಟಿಗೆ ತರದು ಹೀಗೇ. ಕೆಲವು ಸಲ ಏನಿದೆಯೋ ಅಷ್ಟು ಗಂಜಿ, ಸರಿನ ನಾವೇ ಮುಗ್ಸಿಬಿಡ್ತಿದ್ವಿ. ಆಗ ಅಮ್ಮ ಹಸ್ತು ಹಂಗೇ ಮಲಗ್ತಿದ್ಲು. ನಾನು ಎಂಟನೆ ಕ್ಲಾಸಿಗೆ ಬರೋತಂಕ ರಥ ಹಿಂಗೇ ಹೇಗೋ ಸಾಗ್ತಾ ಇತ್ತು.

ಅದಾದ್ಮೇಲೆ ನನ್ನನ್ನ ಪಕ್ಕದ ಹಳ್ಳಿಯ ಕಾನ್ವೆಂಟಿನ ಹಾಸ್ಟೆಲಿಗೆ ಸೇರ್ಸಿದ್ರು. ಅಲ್ಲಿ ಫೀಸು ಜಾಸ್ತಿ. ಅಲ್ಲಿ ತಿನ್ನಕ್ಕೇನೋ ಚೆನಾಗಿ ಕೊಡ್ತಿದ್ರು, ಆದ್ರೂ ನಂಗೆ ಅಲ್ಲಿರಕ್ಕೆ ಕಸಿವಿಸಿ. ಅದು ನಿಜಕ್ಕು ದೊಡ್ಡ ಶಾಲೆ. ತುಂಬ ಮಕ್ಳು ಕಲಿಯೋರು ಅಲ್ಲಿ. ನಂಗೆ ಮೊದಮೊದ್ಲು ಅಲ್ಲಿರಕ್ಕೆ ಇಷ್ಟನೆ ಇಲ್ಲ. ಮನೆಗೆ ಓಡಿ ಹೋಗ್ಬೇಕು ಅಂತನೇ ನೋಡ್ತಿದ್ದೆ. ನಮ್ಮಮ್ಮ ನನ್ನ ಬಿಟ್ಟು ಹೋಗುವಾಗ ನಾನೇನಾದ್ರೂ ವಾಪಸ್ ಓಡಿಬಂದ್ರೆ ಅಣ್ಣ ಕೊಂದ್ ಹಾಕ್ತಾನೆ ಅಂತ ಹೆದರಿಸಿದ್ಲು. ಹಿಂಗೆ ಬೇರೇನೂ ಮಾಡಕ್ಕೆ ಸಾಧ್ಯ ಇಲ್ದೆ ಇದ್ರಿಂದ ಹಲ್ಲು ಕಚ್ಚಿ ಹೆಂಗೋ ಇದ್ದೆ. ಬರಬರ್ತ ಎಲ್ಲ ಸರಿಹೋಯ್ತು. ನಮ್ಮೂರಿನ ತೇವಾರ್ ಬೀದಿಯ ಒಂದ್ ಹುಡುಗಿನೂ ನಾ ಸೇರಿದಾಗ್ಲೆ ಸೇರಿದ್ಲು. ಆದ್ರೆ ಎರಡೇ ದಿನ, ಓಡೋದ್ಲು.

ಶಾಲೇಲೂ ಹಾಸ್ಟಲಲ್ಲೂ ಹುಡುಗ್ರು ಒಳ್ಳೊಳ್ಳೆ ಬಟ್ಟೆ ಹಾಕ್ಕಳೋರು. ತಿನ್ನಕ್ಕೂ ಅಷ್ಟೆ, ಏನೇನೋ ಇಟ್ಕಂಡಿರೋರು. ಅವ್ರೆಲ್ಲ ಮೇಲ್ಜಾತಿಯೋರು ಅಂತನೇ ನಾನು ತಿಳಕಂಡೆ. ಅಮ್ಮ ನಂಗೂ ಸೇಂಗಾ, ಅವಲಕ್ಕಿ ಕಟ್ಟಿ ಕೊಟ್ಟಿದ್ಲು. ಅದನ್ನ ನಂಗೇಂತ ಇಟ್ಕಂಡಿದ್ದೆ. ನಂಗೆ ಉಳದ ಜಾತಿಯೋರಿಗೆ ಒಳ್ಳೊಳ್ಳೆ ಬಟ್ಟೆ ಹಾಕ್ಕಳಕ್ಕೆ, ತಿಂಡಿ ತಿನ್ನಕ್ಕೆ ಹೆಂಗ್ ಸಾಧ್ಯ ಆಗುತ್ತೆ ಅಂತ ಆಶ್ಚರ್ಯ ಆಗೋದು. ಆಮೇಲೆ ಗೊತ್ತಾಯ್ತು ಅವರತ್ರ ದುಡ್ಡಿದೆ. ನಮ್ ಜಾತಿ ಕೀಳು, ನಮ್ಮತ್ರ ದುಡ್ಡೂ ಇಲ್ಲ. ಆದ್ರೂ ಚೆನ್ನಾಗಿ ಓದಿ ಮುಂದೆ ಬರಬೇಕು ಅಂದ್ಕೊಂಡೆ. ಅದಕ್ಕೆ ಕಷ್ಟಪಟ್ಟು ಓದಕ್ಕೆ ಶುರುಮಾಡ್ದೆ.

ನಂ ಹಳ್ಳೀಲಿದ್ದಾಗ ಅವ್ವ ತಲೆ ಹೇನು ಹೆಕ್ಕೋ ಸ್ಟೈಲ್ ನೋಡೇ ನಮಜ್ಜಿ ನಾನು ತುಂಬ ಹುಶಾರಿ ಹುಡುಗಿ ಆಗ್ತಿನಿ ಅಂತ ಹೇಳೋಳು. ನಮ್ಮಣ್ಣ ಪತ್ರ ಬರ್ದಾಗ್ಲೂ ಅಷ್ಟೆ, 'ನೀನು ತುಂಬ ಜಾಣೆ. ನಿಂಗೆ ತುಂಬ ಬುದ್ಧಿ ಇದೆ, ತಾಳೆಬೊಂಡದನ ಗುಬ್ಬಿ ತಲೆ ಒಳ್ಗೆ ತುಂಬಿಟ್ಟಂಗೆ. ಚೆನ್ನಾಗಿ ಓದು, ಒಳ್ಳೇ ಮಾರ್ಕ್ ತೆಗಿ' ಅಂತ ಬರೀತಿದ್ದ. ಹೀಗೆ ಬರಬರ್ತ ಬಟ್ಟೆ ಬಗ್ಗೆ ಗಮನ ಕಮ್ಮಿ ಆಯ್ತು. ನನ್ ಕೆಲಸದ ಬಗ್ಗೆ ಗಮನ ಕೊಟ್ಟೆ. ನನ್ನ ಗುರಿ ಇದು ಅಂತ ಮತ್ತೆಮತ್ತೆ ನನಗೆ ನಾನೆ ಹೇಳ್ಕೊಂಡೆ.

ಆರ್ಮಿಯಲ್ಲಿದ್ದ ಅಪ್ಪ ನಂಗೆ ತಿಂಗತಿಂಗ್ಳ ದುಡ್ಡು ಕಳಿಸ್ತಿದ್ದ. ನಂ ಶಾಲೆ, ಹಾಸ್ಟೆಲು ಫೀಸಿಗೆ ಎಷ್ಟು ಬೇಕೋ ಅದಕ್ಕಿಂತ ಹೆಚ್ಚೇ ಕಳಿಸ್ತಿದ್ದ. ನಂಗೆ ಬೇಕಾದ್ದನ್ನ ತಗಂಡು ತಿನ್ನಬೋದಿತ್ತು. ಖುಶಿಯಾಗೂ ಇದ್ದೆ. ಬಾನುವಾರ ಅಮ್ಮ ಬರೋಳು. ದನದ ಮಾಂಸದ ಸಾರ್ನೊ ಅತವಾ ಕೋಳಿ ತಂದು ಕುಯ್ದು ಮಾಡಿದ ಸಾರ್ನೊ ತಂದಿರೋಳು. ತಿಂಡೀನೂ ಏನೇನೊ ತರ್ತಿದ್ಲು. ಬಂದೋಳು ತಲೇಲಿ ಹೇನಿದ್ದರೆ ನೋಡಿ ಹೆಕ್ಕಿ, ಜಡೆ ಹೆಣದು, ಹೂ ಮುಡ್ಸೆ ಹೋಗ್ತಿದ್ದಿದ್ದು. ನಂಗಂತು ತುಂಬ ಖುಶಿಯಾಗದು. ಹನ್ನೊಂದನೇ ಕ್ಲಾಸಿನ ತಂಕ ಇದೇ ಸ್ಕೂಲಲ್ಲಿದ್ದೆ. ಆಮೇಲೆ ಮನೆಗೋದೆ. ಎಲ್ರು ಹನ್ನೊಂದ್ನೇ ಕ್ಲಾಸಿನ ಪಬ್ಲಿಕ್ ಪರೀಕ್ಷೇಲಿ ನಾನು ಚೆನ್ನಾಗಿ ಮಾಡಿರ್ತೀನಿ ಅಂತ ಹೇಳೇ ಹೇಳಿದ್ರು. ಒಂತರ ಖುಶಿಯಾಗದು.

ಆದ್ರೆ ಆಗ ನಮ್ಮಪ್ಪ ಅಮ್ಮ ಇನ್ನು ಮನೇಲಿರು ಸಾಕು, ಕಾಲೇಜು ಬೇಡ ಅನ್ನಕ್ಕೆ ಶುರು ಮಾಡಿದ್ರು. ದುಡ್ಡೂ ಇರಲಿಲ್ಲ. ಜಾಸ್ತಿ ಓದಿದ್ರೆ ನಂ ಜಾತೀಲಿ ನಮಗಿಂತ ಹೆಚ್ಚು ಓದಿದ ಗಂಡೂ ಸಿಗಲ್ಲ ಅನ್ನೋದು ಅವರ ವಾದ. ಅಂತೂ ಟೀಚರ್ ಟ್ರೈನಿಂಗಿಗೆ ಅಂತ ಒಂದೆರೆಡು ಕಡೆ ಬರದು ಹಾಕಿದ್ರು.

ರಜದಲ್ಲಿ ಹನ್ನೊಂದನೇ ಕ್ಲಾಸು ಕಲಿಸಿದ್ದ ನನ್ ಟೀಚರ್ ಒಬ್ರುನ್ನ ಬೇಟಿ ಮಾಡಕ್ಕೆ ಹೋದೆ. ನಾನು ಮುಂದೆ ಓದದೆ ಮನೇಲೆ ಇರ್ತೀನಿ ಅಂತ ಕೇಳಿ ತುಂಬ ಬೇಜಾರಾದ್ರು ಅವರು. ನಮ್ಮಮ್ಮನತ್ರ ಮಾತಾಡಿ ತುಂಬ ಚರ್ಚೆ ಮಾಡಿ ಅಷ್ಟು ಚೆನ್ನಾಗಿ ಓದೊ ಹುಡುಗೀನ ಮುಂದೆ ಓದ್ಸೋದು ಬಿಟ್ಟು ಮನೇಲಿ ಇಟ್ಟುಕೋಬೇಡಿ ಅಂದ್ರು. ಅಮ್ಮ ದುಡ್ಡಿಲ್ಲ ಅಂದಾಗ ತಮ್ಮ ಕಿವಿಯೋಲೆ ಅಡ ಇಟ್ಟು ಅದರ ದುಡ್ಡನ್ನ ನಂಗೆ ಕೊಟ್ಟು ಕಾಲೇಜು ಸೇರು ಅಂದ್ರು. ಮುಂದೆ ಓದಲೇಬೇಕು ಅಂದ್ಕೊಂಡಿದ್ದ ನಾನು ಉಟ್ಟಬಟ್ಟೆಯಲ್ಲೆ ಕಾಲೇಜಿಗೆ ಹೋಗೇಬಿಟ್ಟೆ, ಹಾಸ್ಟೆಲನ್ನೂ ಸೇರಿದೆ. ಒಂದುವಾರ ಅದೇ ಲಂಗ ಬ್ಲೌಸುದಾವಣೀಲೇ ಹೋದೆ. ನಾನು ಯಾವ್ದೊ ಅನ್ಯಗ್ರಹ ಜೀವಿ ಅನ್ನೊ ತರ ಜೊತೆಯಿರೋರು ನನ್ನ ನೋಡೋರು. ಕೆಲವರು ಒಂದೇ ಜೊತೆ ಬಟ್ಟೆ ಇದ್ಯಾ? ಮತ್ತಿಲ್ವ ಅಂತೆಲ್ಲ ಕೇಳೋರು. ನಂಗೊಂತರ ಅವಮಾನ ಆಗಿ ನಮ್ಮಮ್ಮ ನನ್ನ ಸಾಮಾನನ್ನೆಲ್ಲ

ತರ್ತಾರೆ ಅಂತ ಹೇಳಿ ಹಾಸ್ಟೆಲಿಗೋಗಿ ಅತ್ತುಬಿಟ್ಟೆ. ಅಪ್ಪ ಬೇರೆ ಸಿಕ್ಕಾಪಟ್ಟೆ ಬೈದು ಕಾಗದ ಬರೆದಿದ್ರು: 'ಆ ನನ್‌ಗಳ ಮಾತ್ ಕಟ್ಕಂಡು ಬೇಡ ಅಂದ್ರು ಹೋಗಿದಿ. ಈಗ ದುಡ್ ಬೇಕಿತ್ತಂದ್ರೆ ಅವುನ್ನೆ ಹೋಗಿ ಕೊಡಿಕೊಡಿ ಅಂದ್ ಕೇಣ್' ಎಂಬರ್ಥದ ಕಾಗದ. ನಂಗೆ ಮನೆಗೆ ವಾಪಸ್ ಹೋಗಲು ಇಷ್ಟವಿಲ್ಲ. ಒಳಗಿಂದ ಏನೋ ಒಂದು ಒತ್ತಡ ಒತ್ತಿಒತ್ತಿ ಓದುಓದು ಅಂತ ಹೇಳೋದು. ಅದ್ಕೆ ಎಲ್ಲ ನಾಚಿಗೆ ಅವಮಾನ ತಡ್ಕಂಡು ಅಲ್ಲಿದ್ದೆ.

ನನ್ನ ಮಾರ್ಕು ನೋಡಿದ್ಮೇಲೆ ನಾ ಎಷ್ಟು ಕಷ್ಟಪಟ್ಟು ಓದ್ತೀನಿ ಅಂತ ಗೊತ್ತಾಗಿ ಟೀಚರ್, ನನ್‌ಗಳು ಹೊಗಳಿದ್ರು. ಒಂದು ವಾರ ಬಿಟ್ಟು ಅಮ್ಮ ನನ್ನ ಬಟ್ಟೆ, ಟ್ರಂಕು, ಹಾಸಿಗೆ ಎಲ್ಲ ತಂದುಕೊಟ್ಲು. ಇದಾದ್ಮೇಲೆ ನನ್ನ ಕ್ಲಾಸ್‌ಮೇಟುಗಳೆಲ್ಲ ತುಂಬ ಸಲಿಗೆಯಿಂದ ಇರೋರು. ಎಲ್ಲ ಟೆಸ್ಟುಗಳಲ್ಲು ನಂಗೇ ಹೆಚ್ಚು ಮಾರ್ಕ್ ಬರೋದು ನೋಡಿ ಆಶ್ಚರ್ಯಪಟ್ರು. ನಂ ಟೀಚರ್‌ಗಳೂ ಸಹಾ, 'ಅವ್ಳನ್ನ ನೋಡಿ ಕಲೀರಿ. ಲೇಟಾಗಿ ಅಡ್ಮಿಷನ್ ಆದ್ರು ಎಷ್ಟ್ ಚೆನ್ನಾಗಿ ಓದ್ತಾಳೆ' ಅನ್ನೋರು. ಇದಾದ್ಮೇಲೆ ನಂಗೆ ಬಟ್ಟೆ ಬಂಗಾರದ ಆಸಕ್ತಿನೇ ಹೊರಟೋಯ್ತು. ನಾನು, ನನ್ನ ಓದು, ನನ್ನ ದಾರಿ ಅಷ್ಟೆ.

ನನ್ನ ಕೆಲವ್ರು ಕೇಳೋರು, ನೀನು ಕಿವಿಗ್ಯಾಕೆ ಏನೂ ಹಾಕ್ಕಂಡಿಲ್ಲ, ಚಪ್ಲಿನೂ ಇಲ್ಲಲ ಅಂತ. ಅವ್ರೆಲ್ಲ ಕಾಲೇಜಿಗೆ ಚಮಚಮ ಅಂತ ಎಲ್ಲ ಹಾಕ್ಕಂಡು ಬರ್ತಿದ್ರು ನಿಜ. ಆದ್ರೆ ನಾನು ಅವನ್ನ ಎಲ್ಲಿಂದ ತರಲಿ? ನನ್ನ ಕಿವೀಲಿದ್ದಿದ್ದನ್ನ ಪರೀಕ್ಷೆ ಫೀಸು ಕಟ್ಟಕ್ಕೆ ಅಂತ ಅಡ ಇಟ್ಟಿದ್ದೆ. ಬಟ್ಟೆ ಅಂತೂ ಹೆಚ್ಗೆ ಇರಲೆ ಇಲ್ಲ. ಮನೇಲಿ ವರ್ಷಕ್ಕೆ ಎರಡು ಸಲ ಹೊಸ ಬಟ್ಟೆ ತರೋರು – ಒಂದು ಕ್ರಿಸ್ಮಸ್‌ಗೆ ಇನ್ನೊಂದು ಚಿನ್ನಾಮಲ್ಳೈಯ ಅವರ್ ಲೇಡಿ ಪೇಸ್ತಿಗೆ. ಆಗಲ್ಲದೆ ಮತ್ಯಾವಾಗಲೂ ಯಾರೂ ಏನನ್ನೂ ತಗತಿರ್ಲಿಲ್ಲ. ಹಿಂಗೆ ಎರಡೇ ಜೊತೆ ಬಟ್ಟೇಲಿ ನಡಸ್ತಿದ್ವಿ. ಕೊನೆಗೆ ನಮ್ಮಕ್ಕ ಬಿಟ್ಟಿದ್ದನ್ನೂ ತಗಂಡು ಹೋಗಿ ಅಂತೂ ನಾಕು ವರ್ಷ ಕಳೆದೆ.

ನಾಕನೇ ವರ್ಷ ಕಾಲೇಜ್ ಡೇ ಬಂತು. ಅದು ಸಖತ್ ಗ್ರಾಂಡ್. ಕೊನೇ ವರ್ಷದ ಹುಡುಗ್ರನ್ನೆಲ್ಲ ಒಂದು ಪಾರ್ಟಿಗೆ ಕರೆದ್ರು. ಎಲ್ಲ ರೇಶ್ಮೆ ಸೀರೆ, ಅದೂ ಇದೂ ತೊಟ್ಟು ಹೋಗೋರಿದ್ರು. ನನ್ನತ್ರ ನಂದೇ ಅನ್ನೊ ಒಂದೇಒಂದು ಒಳ್ಳೆ ಸೀರೆನೂ ಇಲ್ಲ. ಏನು ಮಾಡದು ಗೊತ್ತಾಗ್ಲಿಲ್ಲ. ಯಾರತ್ರನಾದ್ರೂ ತಗಳಕ್ಕೂ ಇಷ್ಟವಿಲ್ಲ. ಅವತ್ತು ಎಲ್ಲಾದ್ರು ಹೋಗಿಬಿಡುವ ಅಂದ್ರೆ ಅದಕ್ಕು ಗೆಳತೀರು ಬಿಡಲಿಲ್ಲ. ಕೊನೆಗೆ ಟಾಯ್ಲೆಟ್ಟಿಗೆ ಹೋಗಿ ಕೂತುಬಿಟ್ಟೆ. ನನ್ನ ಪರಿಸ್ಥಿತಿ ನೆನೆಸಿಕೊಂಡ್ರೆ ಅತ್ತತ್ತು ಇಡಬೇಕೆನಿಸಿಬಿಡ್ತು. ಕೈಲಿ ಕಾಸಿಲ್ಲ ಅಂದ್ರೆ ಎಷ್ಟು ಅವಮಾನ ಎದುರಿಸಬೇಕಲ್ಲ ಅಂತಲೂ ಅನಿಸಿಹೋಯ್ತು.

ಒಬ್ಬ ನಾಯ್ಕರ್ ಫ್ರೆಂಡ್ 'ಮನೆಗ್ ಕಾಗ್ದ ಬರ್ದು ಒಂದ್ ಸೀರಿ ಕಳ್ಸೋ ಅಂದು ತರಸ್ಕಣಕಿತ್ತು' ಅಂದ್ಲು. ಮನೇಲಿ ಏನು ರೇಶ್ಮೆ ಸೀರೆ ಬೆಳೆಯುತ್ತಾ? ಅವಳಿಗೆ ನಮ್ಮನೇಲಿ

ಯಾರ ಹತ್ರನೂ ರೇಶ್ಮೆ ಸೀರೆ ಇರ್ಲಿಲ್ಲ ಅನ್ನೋ ಸತ್ಯ ಗೊತ್ತಿರ್ಲಿಲ್ಲ. ಅವ್ರಿಗೆ ತಗಳಿ ಅಂತ ಹೇಳಕ್ಕೂ ಆಗ್ತಿರಲಿಲ್ಲ. ಸೀರೆ ತಗಳಕ್ಕೇ ದುಡ್ಡಿಲ್ಲ, ಇನ್ನು ರೇಶ್ಮೆ ಸೀರೆ ಎಲ್ಲಿಂದ? ಅದಕ್ಕೆ ಟಾಯ್ಲೆಟ್ಟಲ್ಲಿ ಪಾರ್ಟಿ ಮುಗಿಯೋವರ್ಗೂ ಅಡಕ್ಕಂಡೆ.

ಹೀಗೇ ನಾ ಕಲಿತ ವಿದ್ಯಾಸಂಸ್ಥೆಯಲ್ಲೇ ಬಿಎಡ್‌ಗೂ ಸೇರಿದೆ. ನನಗಿಂತ ದುಸ್ಥಿತಿಯಲ್ಲಿರೋರು ಬೇಕಾಷ್ಟು ಜನ ಇದಾರೆ ಅಂತ ಸಮಾಧಾನ ಮಾಡ್ಕಂಡೆ.

ನಾನು ಬಿಎಡ್ ಮುಗಿಸಿ ಕೆಲಸಕ್ಕೆ ಸೇರಿದ್ದೇ ಬದುಕು ಬೇರೆಯಾಗಿ ಸ್ವಲ್ಪ ಸುಖದ್ದೂ ಆಯಿತು. ತಿಂಗಳ ತಿಂಗಳಾ ಸಂಬಳ ತಗೊಳೋದು, ನನ್ನಿಷ್ಟಕ್ಕೆ ನಾನು ಸ್ವತಂತ್ರವಾಗಿರೋದು ನಿಜಕ್ಕು ಎಷ್ಟು ಚೆನ್ನಾಗಿರುತ್ತೆ ಅಲ್ವ? ನನಗಿಷ್ಟದ ಸೀರೆ ಕುಬಸ ತಗೊಂಡು ಹಾಕ್ಕಬೋದು. ಎಲ್ಲಿಗೆ ಹೋಗ್ಬೇಕನಿಸುತ್ತೊ ಅಲ್ಲಿಗೆ ಹೋಗ್ಬೋದು. ನಂಗಂತನೇ ಕೆಲವು ಒಡವೆ ಕೂಡ ಮಾಡಿಸಿಕೊಂಡೆ. ಕೈಲಿ ಒಂದ್ ನಾಕು ಕಾಸು ಇದ್ರೆ ಸಾಕು ಅಧಿಕಾರ, ಗೌರವ, ಸ್ಥಾನ ಎಲ್ಲ ತಂತಾನೇ ಸಿಗುತ್ತೆ ಅಂತ ನಂಗವಾಗ ಗೊತ್ತಾಯ್ತು. ಅದಕ್ಕೇ ಅಲ್ವ ಮಾತಿರೋದು, ಸಿರಿ ಸಂಪತ್ತಿನ ಹೊಳೆ ಪಾತಾಳಕ್ಕೂ ಹರಿಯುತ್ತೆ ಅಂತ? ಖರ್ಚು ಮಾಡಕ್ಕೆ ಕೈಲಿ ಯಾರತ್ರ ದುಡ್ಡಿರತ್ತೋ ಅವರು ಮಾತ್ರ ಸುಖದಲ್ಲಿ ಬದುಕಬೋದು ಅಂತ ನಂಗೆ ಗೊತ್ತಾಯ್ತು.

ಆದರೆ ನಂ ಜನ ಮಾತ್ರ ಎಷ್ಟು ಶ್ರಮಪಟ್ಟು ದುಡಿದರೂ ಅಷ್ಟು ದುಡ್ಡನ್ನ ನೋಡಕ್ಕೇ ಆಗ್ತಿರಲಿಲ್ಲ. ಅವರು ಎಷ್ಟು ಕಷ್ಟಪಟ್ಟು ಕೆಲಸ ಮಾಡ್ತಾರಂದ್ರೆ ಕೊನೆಗೆ ಒಡೆದ ಗಡಿಗೆ ಚೂರಿನಂಗೆ ಸವೆದುಸವೆದು ಹೋಗ್ತಾರೆ. ದಿನಾ ಗಂಜಿ ಉಣ್ಣದು, ಚಿಂದಿಯಂತ ಬಟ್ಟೆ ಉಡದು, ಆಸ್ತಿಯಿಲ್ಲ ಜಮೀನಿಲ್ಲ ಒಳ್ಳೆ ಮನೆಯಿಲ್ಲ. ಹೀಗಿದ್ರೂ ಶ್ರೀಮಂತ್ರಿಗೆ ಲಾಭ ಆಗ್ಲಿ ಅಂತ ದುಡಿದೆ ದುಡೀತಾರೆ. ಹೀಗಿರ್‍ತ ಸುಖಜೀವನ ಸಿಕ್ಕೀತು ಅಂತ ಹೆಂಗಾದ್ರೂ ಕನಸಕ್ಕೆ ಸಾಧ್ಯ? ಕೊನೆಗೆ ನಾನು ಸಾಧಾರಣ ಜೀವನ ನಡೆಸಬೇಕು ಅಂತ ಅಂದುಕೊಂಡೆ. ನಂ ಕೇರಿ ಹುಡುಗ್ರೇನಾದ್ರೂ ತಾವೂ ಕಷ್ಟಪಟ್ಟು ಓದಿ ಕೆಲ್ಸಕ್ಕೆ ಸೇರಿದ್ರೆ ಅವರೂ ಚೆನಾಗಿ ಬದುಕಬಹುದು ಅಂತ ಅನಿಸಿತ್ತು. ಆದರೆ ಅವರು ಓದೋದಾದರೂ ಹೇಗೆ ಹೊಟ್ಟೆ ತುಂಬಿಸ್ಕೊಳೋದೇ ಅವರ ದೊಡ್ಡ ಹೋರಾಟ ಆಗಿರುವಾಗ?

ಈ ಯೋಚನಾ ಲಹರಿನೇ ನನ್ನನ್ನ ನನ್ ಆಗಿ, ಕಾನ್ವೆಂಟಲ್ಲಿ ನನ್ನ ತರ ಕಷ್ಟಪಡೊ ಮಕ್ಕಳಿಗೆ ಸಹಾಯ ಮಾಡಬೋದು ಅನ್ನೋ ಮೂರ್ಖ ನಿರ್ಧಾರಕ್ಕೆ ಎಳಕಂಡು ಹೋಯ್ತು. ಉಳಿದ ಮಕ್ಕಳಿಗೂ ಸಹಾಯ ಮಾಡ್ಬೇಕು ಅನ್ನೋದು ನನ್ನ ಮನಸಲ್ಲಿತ್ತು. ಹೇಗೆ ತಳ ಜಾತೀಲಿ ಹುಟ್ಟಿದ್ರೂ ಈಗ ಓದಿನಿಂದ ಹೀಗೆ ನಿಲ್ಲಕ್ಕೆ ನಂಗೆ ಸಾಧ್ಯ ಆಗಿದೆಯೋ ಹಾಗೆ ಅವರೂ ನಿಲ್ಬೇಕು ಅನಿಸ್ತು. ಆದರೆ ನಾನು ಕಾನ್ವೆಂಟಿನ ಒಳಗೆ ಹೋದಮೇಲೆ ಗೊತ್ತಾಯ್ತು, ಅವರು ಇಂಥ ಮಕ್ಕಳನ್ನ ಕಡೆಗಣ್ಣಿಂದ ನೋಡಕ್ಕೂ ಸಿದ್ಧ ಇರಲ್ಲ ಅಂತ. ಶ್ರೀಮಂತರ ಮಕ್ಳಿಗೆ ಸೇವೆ ಮಾಡಲಿಕ್ಕೆ ಅವರೆಲ್ಲ ಸಿದ್ಧ ಇದ್ರು. ನಾನಿರೋ ಕಾನ್ವೆಂಟಲ್ಲಿ

ಕಿಸೇಲಿ ದುಡ್ಡಿರೋರ್ನ ಒಂಥರ, ಇಲ್ದಿರೋರ್ನ ಒಂಥರ ನೋಡ್ತ ಇದ್ರು.

ನನ್ ಆಗುವ ಮುಂಚೆ ಈ ಹೆಣ್ಣುಮಕ್ಕಳು ನಾವು ಬಡತನದ ಬದುಕನ್ನು ಬದುಕ್ತಿವಿ ಅಂತ ಪ್ರಮಾಣ ಮಾಡಿರ್ತಿದ್ರು. ಆದ್ರೆ ಅದೊಂದು ನಾಟಕ. ಅಣಕ. ಕಾನ್ವೆಂಟಿಗೆ ಬಡತನ ಅಂದ್ರೇನು ಅಂತ್ಲೆ ಗೊತ್ತಿರ್ಲಿಲ್ಲ. ಗಂಟೆ ಹೊಡೆದಿದ್ದೇ ಊಟ ಸಿಗುತ್ತೆ. ಅದೂ ಬರೀ ಅನ್ನನಾ? ಎಲ್ಲ ತರದ ಒಳ್ಳೇ ಪದಾರ್ಥ. ಮಾಂಸ, ಮೀನು, ಮೊಟ್ಟೆ ಸರದಿ ಪ್ರಕಾರ ನಂ ತಟ್ಟೇಲಿ ಇರ್ತಿತ್ತು. ಬೇಕಾದಷ್ಟು ಹಣ್ಣು, ತರತರದ ತರಕಾರಿ. ಪ್ರತಿ ರೂಮಿಗೂ ಒಂದು ಮಂಚ, ಕುರ್ಚಿ, ಟೇಬಲ್ಲು, ಫ್ಯಾನು, ಕುಡಿಯೊ ನೀರು. ಕಾನ್ವೆಂಟ್ ಹತ್ರನೇ ಸ್ಕೂಲು. ಎರಡು ಹೆಜ್ಜೆ ಹಾಕಿದ್ರೆ ಸಿಗೋದು, ಬೇಕಾದಾಗ ರೂಮಿಗೆ ವಾಪಸ್ ಬರಬೋದು. ಬಸ್ ಹಿಡೀಬೇಕಂತಿಲ್ಲ, ಜನರ ಮಧ್ಯ ತಳ್ಳಿ, ಒತ್ತಿಸಿಕೊಂಡು ಉಸಿರು ಕಟ್ಟಿ ಓಡೋಡಿ ಬಸ್ ಹತ್ತಬೇಕಿಲ್ಲ. ಬೆಳಿಗ್ಗೆ ಹತ್ತಕ್ಕೆ ಕಾಫಿತಿಂಡಿ. ಮದ್ಯಾನ ಹನ್ನೆರಡಕ್ಕೆ ಬಿಸಿ ಊಟ. ಸಂಜೆ ನಾಕಕ್ಕೆ ಚಾ ತಿಂಡಿ. ರಾತ್ರಿ ಏಳಕ್ಕೆ ಬಿಸಿಬಿಸಿ ಊಟ.

ಅಲ್ಲಿ ಎಲ್ಲ ಸುಖ ಸವಲತ್ತೂ ಇತ್ತು. ಆರಾಮಾಗಿ ಯಾರಾದ್ರೂ ಅಲ್ಲಿರಬೋದು, ತಿನ್ನಲು ಬೇಕಾದಷ್ಟು ಸಿಗುತ್ತೆ. ಒಳ್ಳೆ ಬಟ್ಟೆ, ಬೇರೆಬೇರೆ ಜಾಗಕ್ಕೆ ಪ್ರಯಾಣ ಮಾಡೋ ಅವಕಾಶ. ಆದ್ರೆ ಕಾನ್ವೆಂಟಿಗೆ ಹೋದ ಕೂಡ್ಲೆ ನನಗನಿಸಿಬಿಡ್ತು, ಚಿ, ಸರ್ವಸಂಗ ಪರಿತ್ಯಾಗಿ ಬದುಕು ಅಂದ್ರೆ ಇದೇನಾ? ಹೀಗಾ? ಇವರಿಗೆ ಬಡತನ ಅಂದ್ರೆ ಏನೂಂತನಾದ್ರೂ ಗೊತ್ತಿದೆಯಾ?

ಆ ಶಾಲೆ ತುಂಬ ಶ್ರೀಮಂತ ಮಕ್ಕಳೇ ತುಂಬಿದ್ರು. ಅಲ್ಲಿದ್ದ ನನ್‌ಗಳೂ ಅಷ್ಟೆ. ಆ ಮಕ್ಕಳ ಕುಟುಂಬದ ಅಧಿಕಾರ, ಗೌರವಕ್ಕೆ ತಕ್ಕಂತೆ ಇದ್ರು. ಇದನ್ನೆಲ್ಲ ನೋಡ್ತನೋಡ್ತ ಹೋದಂಗೆ ನಂಗೆ ಮತ್ತಷ್ಟು ತಳಮಳ ಹೆಚ್ತ ಹೋಯ್ತು. ನನ್ನ ಮನಸು ಅಲ್ಲೋಲ ಕಲ್ಲೋಲ. ನನ್ನ ಬುದ್ಧಿ ಒಂದೇ ಸಮ ತನ್ನನ್ನೆ ನಿಂದೆ ಮಾಡ್ಕೋತ, ಅಪ್ಪಚ್ಚಿ ಆಗ್ತ ಇದೆ. ಕೊನೆಗೆ ನನ್ನನ್ನು ನಾನು ಕೇಳಿಕೊಂಡೆ: ಇದಾ ನನಗೆ ಬೇಕಾದ ಜೀವನ? ಕಾನ್ವೆಂಟ್ ಬಿಟ್ಟು ಸಿಕ್ಕಾಪಟ್ಟೆ ನಿರಾಸೆಯಿಂದ, ಆಯಾಸದಿಂದ ಮನೆಗೆ ವಾಪಸ್ ಹೋದೆ.

ಮನೆಗೆ ಹೋಗ್ತ ಸ್ವಲ್ಪ ಧೈರ್ಯ ಇದ್ರೂ ಆಮೇಲೆ ಇನ್ನೂ ಕಷ್ಟ ಆಯ್ತು. ಕೆಲಸ ಕಳಕಂಡಿದ್ದೆ. ದುಡ್ಡಿರಲಿಲ್ಲ. ಉಡಕ್ಕೆ ಬಟ್ಟೆನೂ ಸರಿ ಇರಲಿಲ್ಲ. ನನ್ನ ಮನಸ್ಸು ಆಕ್ರೋಶದಿಂದ ತುಂಬಿ ಹೋಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ನಾನು ಹೊರಬಂದಿದ್ದೇ ಎಲ್ಲವೂ ಬದಲಾದ ಹಾಗೆ ಆಗೋಯ್ತು. ಕಣ್ಣುಕಟ್ಟಿ ಕಾಡಿಗೆ ಬಿಟ್ಟ ಹಾಗೆ ಆಗಿ ನನ್ನ ದಾರಿ ಹುಡುಕ್ಕಳಕ್ಕೆ ತುಂಬ ಹೋರಾಟ ಮಾಡ್ದೆ.

ನನ್ನ ಮನೆಗೆ ಕರ್ಕಂಡು ಹೋದ್ರೂ ಒಂತರ ಗೊಂದಲ, ಅನಿಶ್ಚಿತತೆ ಕಮ್ಮಿಯಾಗಲಿಲ್ಲ. ಕಾನ್ವೆಂಟಿನ ಬದುಕು ನನ್ನ ಒಳಗೊಳಗೇ ಬದಲಾಯಿಸಿ ಹಾಕಿತ್ತು. ಒಂದು ಕಾಲ್ದಲ್ಲಿ

ಗಟ್ಟಿಗಿತ್ತಿ ಆಗಿದ್ದೋಳು ಈಗ ಮೆದುವಾಗಿ ಪಳಗಿಸಿದ ಪ್ರಾಣಿ ಹಂಗೆ ಆಗಿದ್ದೆ. ಎಲ್ಲಕ್ಕು ಭಯ. ಮಾತಾಡಿದ್ರೆ ಕಣ್ಣೀರು. ಸುಸ್ತು. ಯಾರೂ ಇಲ್ಲದ ಅನಾಥೆ ಅನಿಸಿಬಿಡ್ತು. ಜನರ ಜೊತೆ ಸಹಜವಾಗಿ ಮಾತಾಡಕ್ಕೂ ಸಂಕೋಚ ಆಯ್ತು. ಎಷ್ಟೋ ಸಲ ಹೀಗೆ ಬದುಕೋಕಿಂತ ಸತ್ತೋಗಿಬಿಡಬೇಕು ಅನ್ನೋ ಯೋಚನೆ ಬಂತು.

ಇವತ್ತು ನಾನು ದಿಕ್ಕಿಲ್ಲದವಳ ತರ ಅಲೀತಾ ಇದೀನಿ. ಕಾಯಂ ಕೆಲಸ ಇಲ್ಲ. ಉಡಲುತೊಡಲು ನಿಯಮಿತ ಆದಾಯ ಇಲ್ಲ. ಬೆಚ್ಚಗಿನ ಮನೆ ಇಲ್ಲ. ಉಳಿದ ಬಡ ದಲಿತರ ಅನುಭವ ಏನೋ ನನದೂ ಅದೇ. ಮಳೆಚಳಿ ಅನ್ನದೆ ದುಡಿದುಡಿದು ಕಷ್ಟಪಟ್ಟರೂ ಕಷ್ಟದ ಜೀವನ ನಡೆಸೊ, ಗಂಜಿನೀರು ಬಿಟ್ಟು ಮತ್ತೇನೂ ಇಲ್ಲದಿರೊ ದಲಿತರ ಬಡತನನೇ ನಾನೂ ಹಂಚಿಕೊಂಡಿದೀನಿ. ಯಾರು ಕೂಲಿ ಆಗಿ ಕೆಲಸ ಮಾಡ್ತಾರೆ? ಬಡವಾತಿಬಡ ದಲಿತರು. ಅದರ ಲಾಭ ತಗಳೋರು ಶ್ರೀಮಂತರು, ಮೇಲ್ಜಾತಿಯೋರು. ಇದೇ ಇವತ್ತಿನ ತಂಕ ನಮ್ ಹಳ್ಳೀಲಿ ಆಗ್ತ ಇರದು.

ಮೇಲ್ಜಾತೀಲಿ ಹುಟ್ಟಿದರೂ ಬಡವನಾಗಿದ್ದರೆ ಬದುಕು ಕಷ್ಟವೇ. ಅವರ ಬದುಕೇ ಹಾಗಾದ್ರೆ ಬಡವರಲ್ಲಿ ಬಡವರಾದ ಪರಯ್ಯಾಗಳಾಗಿ ಹುಟ್ಟಿ, ದಿನದಿನದ ಬದುಕೇ ಹೋರಾಟ ಆಗಿರುವಾಗ ಅವರ ಕಷ್ಟನ ಮತ್ತೆ ಹೊಸದಾಗಿ ಹೇಳ್ಬೇಕಾಗಿಲ್ಲ. ಅಂತವರು ಕೋಳಿ ಕೂಗಕ್ಕಿಂತ ತುಂಬ ಮುಂಚೆನೇ ಎದ್ರೆ ಮಾತ್ರ ಅಂಗಳ ಗುಡಿಸಿ, ನೀರು ತಂದಿಟ್ಟು, ಅಷ್ಟು ಗಂಜಿ ಕಾಸಿ ಕುಡದು ಕೆಲಸಕ್ಕೆ ಹೋಗಕ್ಕೆ ಸಾಧ್ಯ ಆಗುತ್ತೆ. ಇದರ ಮಧ್ಯ ತಮ್ಮ ಮಕ್ಕಳನ್ನ ಶಾಲೆಗೆ ಕಳಿಸೋದು, ಅವರು ಓದ್ತಾರೋ ಇಲ್ವೊ ಅಂತ ನೋಡೋದು ಹೇಗೆ ಸಾಧ್ಯ?

ಈ ಬಡತನದ ಮಧ್ಯ ಹೆಣ್ಣುಮಕ್ಕಳಿಗೆ ಶಾಲೆಗೆ ಹೋಗೋದ್ರಲ್ಲಿ ಅರ್ಥವೇ ಕಾಣಲ್ಲ. ಅವರು ಮನೇಲೆ ಇದ್ದು, ಸೌದೆ ಒಟ್ಟು ಮಾಡ್ತ, ಮನೆ ನೋಡ್ಕಂತ, ಸಣ್ಣ ಮಕ್ಳ ನೋಡ್ಕಂತ ಕಾಲ ಕಳೆದುಬಿಡ್ತಾರೆ. ಹುಡುಗ್ರು ಸ್ವಲ್ಪ ಕಲಿತ ಕೂಡ್ಲೆ ಮೇಕೆ ದನ ಮೇಯ್ಸಕ್ಕೆ ಹೊರಡ್ತಾರೆ. ನೀವು ನಂ ಕೇರೀಲಿ ನೋಡಿದ್ರೆ ಬರೀ ಸಣ್ಣ ಮಕ್ಕಳು ತುಂಬಿರ್ತಾವೆ. ಮೂಗು ಸುರಿಸ್ತ, ಮೈಮೇಲೆ ಒಂದು ತುಂಡು ಬಟ್ಟೆ ಇಲ್ದೆ, ಧೂಳು ಕೆಸರಲ್ಲಿ ಬೀಳ್ತ ಉರುಳ್ತ ಆಟ ಆಡ್ತ ನಾಯಿಮರಿ, ಹಂದಿಮರಿಗಿಂತ ಬೇರೆ ಅಂತನೇ ಗೊತ್ತಾಗದಂಗೆ ಇರ್ತಾವೆ.

ಆದರೆ ಶ್ರೀಮಂತರು ಬಡವ್ರ ಕಷ್ಟದ ಪ್ರತಿಫಲನ ಉಣ್ತಾರೆ, ಜಿಗಣೆಗಳ ಹಾಗೆ. ಅವರ ಮಕ್ಳು ಸರೀ ತಿಂದು ಊದ್ತಾವೆ. ಅವರು ಒಳ್ಳೆ ಬಟ್ಟೆ ಹಾಕ್ಕತಾರೆ. ಒಳ್ಳೇ ಶಾಲೆಗೆ ಹೋಗ್ತಾರೆ. ಒಳ್ಳೇ ಕೆಲಸ ಹುಡುಕ್ಕಂಡು ಹೆಚ್ಚೆಚ್ಚು ದುಡ್ಡು ಗಳಿಸ್ತಾರೆ. ನನಗಂತೂ ಈ ಸಮಾಜ ಕಷ್ಟಪಟ್ಟು ಕೆಲಸ ಮಾಡೋರು, ಕೂತು ಉಣ್ಣೋರು ಅಂತ ಒಡೆದು ಎರಡು ಭಾಗ ಆಗಿದೆಯೇನೋ ಅನ್ಸುತ್ತೆ. ಕಷ್ಟಪಡೋರು ಮುಟ್ಟುಸ್ಕಳಕ್ಕೂ ಯೋಗ್ಯರಲ್ಲ

ಅಂತಂದು ಬೇರೆಯಿಟ್ಟು, ಒಂದು ಬದಿಗೆ ನೂಕಿ, ಹೊರಗೇ ಇಟ್ಟಿದಾರೆ. ಅವರತ್ರ ಯಂತ್ರದಂಗೆ ಕೆಲಸ ಮಾಡಿಸ್ತಾರೆ. ಆದ್ರೂ ಅನ್ಯಾಯವಾಗಿ ಹೊಡದು, ಬಡಿದು ದೌರ್ಜನ್ಯ ಎಸಗ್ತಾರೆ. ಅವರು ಮುಂದೆ ಬರಕ್ಕೇ ಬಿಡಲ್ಲ. ಇಂತಾ ಅನ್ಯಾಯ ಯಾವತ್ತು ಕೊನೆಯಾಗುತ್ತೋ ನಂಗಂತೂ ಗೊತ್ತಿಲ್ಲ. ನಮ್ಮನ್ನ ಹೀಗೆ ಸುಲಿತಾ ನಾಶ ಮಾಡೋ ಮನುಷ್ಯರು ಮತ್ತು ವ್ಯವಸ್ಥೆ ಯಾವತ್ತಾದ್ರೂ ಬದಲಾಗುತ್ತೆ ಅನಿಸುತ್ತಾ?

ಭಾಳ ಜನ ತಾಳ್ಮೆಯಿಂದ ತಮ್ಮ ಕಷ್ಟದ ಬದುಕನ್ನ ಸ್ವೀಕರಿಸಿ, ಸಹಿಸಿ, ತಂ ಹಣೆಬರ ಅಂತ ಸಮಾಧಾನ ಮಾಡ್ಕಂಡು, ತಾವು ಹುಟ್ಟಿರೊ ಜಾತಿನಾಗ್ಲಿ ಅತವಾ ಅದರ ಜೊತೆ ಬರೋ ಬಡತನ, ಅವಮಾನನಾಗ್ಲೀ ಬದಲಾಯಿಸಕ್ಕಾಗಲ್ಲ ಅಂತ ಅಂದುಕೊಂಡಿದಾರೆ. ಇನ್ನೊಂದು ಕಡೆ ಕೆಲವ್ರಿಗೆ ಗೊತ್ತಾಗಿದೆ, ಇದು ನಮ್ಮ ಹಣೆಬರನೂ ಅಲ್ಲ, ವಿಧಿನೂ ಅಲ್ಲ ಅಂತ. ಅವರು ಈ ಅನ್ಯಾಯನ ವಿರೋಧಿಸಿ ಎದುರು ನಿಲ್ಲತ ಇದಾರೆ. ಆದರೆ ನೋಡಿ, ನಂ ಮಾನಸಿಕ ಸ್ಥೈರ್ಯ ದುಡ್ಡಿರೋರ ಪ್ರಭಾವ ಅಥವಾ ಅಧಿಕಾರದ ಎದುರು ಎಷ್ಟು ದಿನ ನಿಲ್ಲಕ್ಕೆ ಸಾಧ್ಯ? ಹಸಿದು ಬಾಯಾರಿ ಇರುವಾಗ ಯಾರಾದ್ರೂ ಎಷ್ಟು ದಿನ ನ್ಯಾಯ, ಬಲ ಅಂತ ಹೋರಾಡಕ್ಕೆ ಸಾಧ್ಯ? ದಿನದಿನದ ಊಟಕ್ಕೂ ನಾವು ಯಾರನ್ನೋ ನೆಚ್ಚಿಕೊಂಡಿರಬೇಕು. ಒಂದು ತುತ್ತು ಅನ್ನಕ್ಕೂ ಸಹಾ ಮತ್ಯಾರದೋ ತಾಳಕ್ಕೆ ತಕ್ಕಂತೆ ಕುಣೀಬೇಕು. ಇದು ಶ್ರೀಮಂತರಿಗೆ ಗೊತ್ತಾಗಿಬಿಟ್ಟಿದೆ, ಅದಕ್ಕೇ ದಲಿತರನ್ನು ಸುಲಭದಲ್ಲಿ ನಿಯಂತ್ರಿಸಿ ತುಳೀತಾರೆ.

ಸಮಾಜದ ಜನಸಾಮಾನ್ಯರಿಗಷ್ಟೆ ನಂ ಮೇಲೆ ಈ ಭಾವನೆ ಇರೋದಲ್ಲ, ನಂ ಚರ್ಚಿನೊಳಗೆ ಇದಕ್ಕಿಂತ ಕೆಟ್ಟ ಪರಿಸ್ಥಿತಿಯಿದೆ. ಮುಗ್ಧತೇಲಿ ಮುಳುಗಿ ಹೋಗಿರೋ ದಲಿತರನ್ನೇ ತಮ್ಮ ಆಸ್ತಿ ಮಾಡ್ಕೊಂಡು, ದೊಡ್ಡ ವ್ಯಾಪಾರ ಮಾಡ್ಕೊಂಡು, ತಂತಂ ಜಾತಿಗೇ ಉಪಕಾರ ಮಾಡಿದೋರಿದಾರೆ. ಚರ್ಚಲ್ಲಿ ಸಂಖ್ಯೆಯಿಂದ ದಲಿತರೇ ಅತಿ ಹೆಚ್ಚು. ಆದ್ರೆ ಉಳಿದಿದ್ದಕ್ಕೆ ಅವರು ಲೆಕ್ಕಕ್ಕೇ ಇಲ್ಲ. ಮೇಲ್ಜಾತಿ ಕ್ರಿಶ್ಚಿಯನ್ನರಷ್ಟೆ ಚರ್ಚಿನ ಎಲ್ಲ ಸವಲತ್ತು ಸೌಭಾಗ್ಯ ಪಡಕಂಡಿರೋರು. ಪಾದ್ರಿ, ನನ್‌ಗಳ ವಿಷಯಕ್ಕೆ ಬಂದ್ರೂ ಎಲ್ಲ ಮೇಲ್ಜಾತಿಯೋರೇ ಆಯಕಟ್ಟಿನ ಜಾಗದಲ್ಲಿ ಕೂತಿರೋರು. ಅವರೇ ತಂ ಅಧಿಕಾರ ತೋರ್ಸಿ ಮೆರಿತಾ ಇರ್ತಾರೆ. ದಲಿತರೇನಾದ್ರೂ ಪಾದ್ರಿನೋ ನನ್ನೋ ಆದರೆ ಮೂಲೆಗೆ ಹಾಕಿ ಬದಿಗೆ ಸರಿಸಿಬಿಡ್ತಾರೆ. ಈ ಕಾರಣಕ್ಕೇ ನನ್ನಂಥೋರು, ಸಂಸಾರ ತ್ಯಾಗ ಮಾಡಿ ಸೇವೆ ಮಾಡಬೇಕು ಅಂದುಕೊಂಡೋರು ಸಹಾ ಅಲ್ಲಿ ನಮಗೆ ಜಾಗವೇ ಇಲ್ಲ ಅನ್ನೋ ಕಟುಸತ್ಯನ ಎದುರಿಸಬೇಕಾಗುತ್ತೆ.

❐



# ಏಳು

ಕಳೆದುಹೋಗಿರೋ ವರ್ಷಗಳ ಕಡೆ ಮತ್ತೆ ಹಿಂದೆ ತಿರುಗಿ ನೋಡಿದ್ರೆ, ಈ ಎಲ್ಲ ವರ್ಷಗಳಲ್ಲಿ ನಂಗೆ ದೇವರ ಮೇಲಿನ ಭಕ್ತಿ ಮತ್ತೆ ನಂಬಿಕೆ ಎಷ್ಟು ಬದಲಾಗಿದೆಯಲ್ಲ ಅನಿಸುತ್ತೆ. ನಂಗೇ ಒಂದೊಂದ್ಸಲ ಆಶ್ಚರ್ಯ ಆಗುತ್ತೆ.

ನಾನು ಸಣ್ಣೋಳಾಗಿದ್ದಾಗ ಮನೇಲಿ ದೇವರ ಭಕ್ತಿ ಬಗ್ಗೆ ಹೇಳಿಕೊಟ್ಟಿದ್ದು ನಮ್ಮಮ್ಮ, ಅಜ್ಜಿ, ಟೀಚರ್‌ಗಳು ಮತ್ತು ನನ್‌ಗಳು. ಆಮೇಲೆ ಪಾದ್ರಿಗಳು. ಅವರು ಹೇಳಿದ್ದನ್ನ ಸಂಪೂರ್ಣವಾಗಿ ನಂಬ್ತಿದ್ದೆ. ಅವರು ಹೇಗೆ ಹೇಳಿದ್ರೋ ಹಾಗೇ ಪ್ರಾರ್ಥನೆ ಮಾಡ್ತಿದ್ದೆ.

ಪ್ರತಿ ಸಂಜೆ ಚರ್ಚಲ್ಲಿ ಧರ್ಮೋಪದೇಶ ಕ್ಲಾಸು ಇರ್ತಿತ್ತು. ಶಾಲೆ ಬಿಟ್ಟ ಕೂಡ್ಲೆ ತಲೆಮೇಲೊಂದು ಬಟ್ಟೆ ತುಂಡು ಹಾಕ್ಕಂಡು ಚರ್ಚಿನ ಕಡೆ ಓಡ್ತಿದ್ವಿ. ಕೆಲವು ಸಲ ಕಾಗೆಗಳಂಗೆ ಹಸಿದಿರ್ತಿದ್ವಿ. ದಾರಿ ಮೇಲೆ ಹೋಗ್ತ ಏನಾದ್ರೂ ಬಾಯಾಡಬೇಕು ಅಂತ ತುಂಬ ಆಸೆ ಆಗೋದು. ಕೆಲವು ಸಲ ತೋಯ್ಸಿದ ಅವಲಕ್ಕಿನ ನಂ ಬಟ್ಟೆಲೋ, ಅಂಗಿ ಕಿಸೇಲೋ ಇಟ್ಕೊಂಡು ಹೊರಡ್ತಿದ್ವಿ. ದಾರೀಲಿ ಬರ್ತಾ ಎಣ್ಣೆಗಾಣದ ಎದುರಿಗೆ ಬಜಾರಲ್ಲಿ ಏನೇನೋ ಮಾರದನ್ನ ನೋಡ್ಕೊಂಡು ಬರ್ತಿದ್ವಿ. ಆದ್ರೆ ನಮ್ಮತ್ರ ಯಾವಾಗ್ಲೂ ದುಡ್ಡಿರ್ತಿರಲಿಲ್ಲ. ಅದಕ್ಕೇ ಅಲ್ಲೆ ನಿಂತು ಸ್ವಲ್ಪ ಹೊತ್ತು ನೋಡಿ ಆಮೇಲೆ ಮುಂದೆ ಹೋಗ್ತಿದ್ವಿ.

ಚಳಿನೋ ಮಳೆನೋ ಎದ್ದು ಬೆಳಗಿನ ಪೂಜೆಗೆ ಚರ್ಚಿಗೆ ಹೋಗ್ಲೇಬೇಕು. ಅದೆಂಗೋ ಏನೋ ಕೋಳಿ ಕೂಗೋ ಹೊತ್ಗೆ ತುಂಬ ಒದ್ಕಂಡು ನಿದ್ದೆ ಬರೋದು. ಆದ್ರೆ ಅಷ್ಟೊತ್ಗೇ ಸರಿಯಾಗಿ ನಾವು ಎದ್ದು ಓಡಬೇಕು. ಏಳದೇ ಒಂದು ದೊಡ್ಡ ಕಷ್ಟ. ಹೆಂಗೆಂಗೊ ಮುಖ ತೊಳದು ಅವಸರದಲ್ಲಿ ಹೋಗದು. ಕೆರೆ ತುಂಬಿದ್ದಾಗಲಂತೂ ಹೋಗಕ್ಕೆ ಸಾಧ್ಯನೇ ಇಲ್ಲ. ಯಮ ಚಳಿ. ಎಷ್ಟು ಅಲ್ಲಾಡಿಸಿ ಬಡಿದು ಎಬ್ಬಿಸಕ್ಕೆ ನೋಡಿದ್ರೂ ನಮಗೆ ಆ ಕಡೆ ತಿರುಗಿ ಮತ್ತೆ ಮಲಕ್ಕಳೋ ಆಸೆ. ಏಳಕ್ಕೇ ಆಗ್ತಿರಲಿಲ್ಲ. ಆದರೆ ಬೇರೆ ದಾರಿನೇ ಇರಲಿಲ್ಲ, ನೀವು ಎಷ್ಟು ಕೊಸರಾಡಿದ್ರೂ ಎದ್ದು ಹೋಗ್ಲೇಬೇಕು. ಒಂದಿನ

ಹೋಗ್ಲಿಲ್ಲ ಅಂದ್ರೂ ಮರುದಿನ ಅಸೆಂಬ್ಲೀಲಿ ಪಾದ್ರಿ ಅಥವಾ ಟೀಚರ್ ಹತ್ರ ಹೊಡ್ತ ತಿನ್ನಬೇಕಾಗ್ತಿತ್ತು. ಅವು ಅಂತಿಂಥ ಹೊಡ್ತ ಅಲ್ಲ. ಬೆತ್ತ ಅಂತೂ ಒಳ್ಳೇ ಚಾಟಿ ಏಟು ಬಿದ್ದಂಗೆ ಬೀಳೋದು. ಆ ತರ ಬಾಸುಂಡೆ ಬರದು. ಆ ಹೊಡ್ತದ ನೆನಪಾದ್ರೆ ಸಾಕು ಹಾಸಿಗೆ ಮೇಲೆ ಚಂಗಂತ ಎದ್ದು ಕೂತು ಬಿಡ್ತಿದ್ವಿ.

ಸಣ್ಣೋಳಿದ್ದಾಗ ಬಾಯಿಪಾಠ ಮಾಡಿ ಕಲಿಯೋದು ನಂಗೆ ಸುಲಭ ಆಗಿತ್ತು. ನಂಗೆ ಒಳ್ಳೆ ನೆನಪಿನ ಶಕ್ತಿ ಇತ್ತು. ಅದಕ್ಕೇ ಈ ಕ್ಲಾಸುಗಳಲ್ಲಿ ಯಾವಾಗ್ಲೂ ಮುಂದಿರ್ತಿದ್ದೆ. ಬೈಬಲ್ ಸ್ಟಡಿ ಪರೀಕ್ಷೆ ಇಟ್ರೆ ನಾನೇ ಯಾವಾಗ್ಲೂ ಫಸ್ಟ್ ಬರ್ತಿದ್ದಿದ್ದು.

ಒಂದ್ಸಲ ನಾನು ಎರಡ್ನೆ ಕ್ಲಾಸಲ್ಲಿದ್ದಾಗ ಒಬ್ಬ ಬಿಳೀ ಪಾದ್ರಿ ನಮ್ಮ ಶಾಲೆಗೆ ಬಂದ್ರು. ತುಂಬ ಎತ್ತರ ಇದ್ರು. ಉದ್ದನೆಯ ಫಳಫಳ ಹೊಳೆಯೋ ಗಡ್ಡ. ಅವರನ್ನ ಮುಟ್ಟಬೇಕು ಅಂತ ನಮಗೆಲ್ಲ ಕಾತರ. ಸಿಸ್ಟರ್ ನಮಗೆಲ್ಲ ಯಾವ್ಯಾವ್ದೋ ಪ್ರೇಯರ್‌ಗಳನ್ನ ಹೇಳಲಿಕ್ಕೆ ಹೇಳಿದ್ರು. ಅದರಲ್ಲು ಧರ್ಮಸಭೆಯ ಆರು ಕಟ್ಟಳೆಗಳು, ದೇವಸ್ತುತಿ, ನಮೋ ಮರಿಯಾ ಪ್ರಸಾದ ಪೂರ್ಣೇ, ಮತ್ತೆ ವಿಶ್ವಾಸ ಪ್ರಮಾಣ. ಇವೆಲ್ಲವನ್ನೂ ಸರಿಯಾಗಿ ಹೇಳಿದ್ದು ಅಲ್ಲಿ ನಾನೊಬ್ಬೆ. ಆ ಪಾದ್ರಿ ನನ್ನ ಎತ್ತಿಕೊಂಡು ಮುತ್ತುಕೊಟ್ಟು ಐದು ಪೈಸೆ ದುಡ್ಡು ಕೊಟ್ರು. ಮೊದಲೆ ನಂಗೆ ಆ ಪಾದ್ರಿ ನನ್ನ ಮುಟ್ಟಿದ್ರಲ್ಲ, ಮೇಲೆತ್ತಿದ್ರಲ್ಲ ಅಂತ ತುಂಬ ಖುಶಿ. ಅದರ ಜೊತೆಗೆ ಮುತ್ತು ಕೊಟ್ಟು ಐದು ಪೈಸನೂ ಕೊಟ್ಟಿದ್ದು ನನ್ನ ಹೃದಯ ತಕಧಿಮಿ ಕುಣಿಯೋಹಂಗೆ ಮಾಡಿಬಿಡ್ತು. ನಾಣ್ಯ ತಗಂಡು ನನ್ನ ಲಂಗದಲ್ಲಿ ಹುಶಾರಾಗಿ ಸಿಗಿಸಿ ಕಟ್ಕಂಡೆ. ಮನೇಲಿ ತೋರ್‍ಸಬೇಕಿತ್ತು, ಅದ್ಕೆ.

ಎರಡ್ನೆ ಕ್ಲಾಸಲ್ಲಿ ಇರುವಾಗ್ಲೆ ನನ್ನ ಮೊದಲ ಕ್ರೈಸ್ತ ಶಾಸ್ತ್ರ ಆಯ್ತು. ಮೂರನೆ ಕ್ಲಾಸಲ್ಲಿ ಇದ್ದಾಗ ಮದುರೆಯಿಂದ ಬಿಷಪ್ ಬಂದಿದ್ರು. ಆಗ ನನ್ನ ಧೃಢೀಕರಣ ಶಾಸ್ತ್ರ ಆಯ್ತು.

ನಾನು ಸಿಸ್ಟರುಗಳು ನಡೆಸೊ ಪ್ರೈಮರಿ ಶಾಲೆಗೆ ಹೋಗುವಾಗ ಅವರ ಪ್ಯಾರಿಷ್ ಚರ್ಚಿನ ಬೀಗ ತೆಗೆಯೋ ಮತ್ತು ಹಾಕೋ ಕೆಲಸನ ನಂಗೇ ಕೊಟ್ರು. ನಾನು ಶಾಲೆ ಶುರುವಾಗೊ ಹೊತ್ಗೆ ಅಲ್ಲಿಂದ ಹೂದಾನಿ ತಂದು ವರೆಸಿ ಅದನ್ನ ಸಿಸ್ಟರುಗಳು ಹೂವಿಟ್ಟು ಅಲಂಕಾರ ಮಾಡಿದ ಮೇಲೆ ಮತ್ತೆ ತಗಂಡು ಹೋಗಿ ಇಡೊ ಕೆಲಸ ಮಾಡ್ತಿದ್ದೆ. ನಾನು ಯಾವಾಗ್ಲು ನಂಜೊತೆ ಒಬ್ಬಳನ್ನ ಕರ್ಕಂಡು ಹೋಗ್ತಿದ್ದೆ ಯಾಕಂದ್ರೆ ನಂಗೆ ಒಬ್ಬೆ ಹೋಗಕ್ಕೆ ಭಯ ಆಗ್ತಿತ್ತು. ಜೊತೆಗೊಬ್ರು ಇದ್ರೆ ಏನೋ ಧೈರ್ಯ.

ನಾ ಏನಾದ್ರೂ ಒಬ್ಬೇ ಒಳಗೆ ಇರೋಹಂಗೆ ಆಯ್ತು ಅಂದ್ರೆ ನಂಗೆ ಒಳಗೊಳಗೇ ನಡುಕ. ಆಗ ಶಾಸ್ತ್ರದ ಪಾಠ ಮಾಡ್ತ ಸಿಸ್ಟರು ಹೇಳ್ತಿದ್ದ ಭೂತದ ಕತೆ ನೆನಪಿಗೆ ಬಂದುಬಿಡ್ತಿತ್ತು.

ನಮಗವರು ಹೇಳ್ತಿದ್ರು: ನಾವು ಪಾಪ ಮಾಡ್ತಾ ಹೋದರೆ ಭೂತಗಳು ನಮ್ಮ ಪಾಪದ ಪಟ್ಟಿನ ಒಂದು ಉದ್ದ ನೋಟ್ ಪುಸ್ತಕದಲ್ಲಿ ಬರಿತಾ ಹೋಗ್ತಾವೆ, ಆಮೇಲದನ್ನ

ದೇವರಿಗೆ ತೋರಿಸ್ತಾವೆ, ಆ ನೋಟ್ ಪುಸ್ತಕ ಖಾಲಿ ಆದ್ರೂ ನಾವು ಪಾಪ ಮಾಡ್ತನೇ ಹೋದ್ರೆ ಆಗ ನಮ್ಮ ಬೆನ್ನಿನ ಚರ್ಮ ಸುಲಿದು ಅಲ್ಲಿ ನಮ್ಮ ತಪ್ಪುಗಳ ಪಟ್ಟಿ ಬರೀತಾ ಹೋಗ್ತಾವೆ ಅಂತ. ನಂಗಂತೂ ಚರ್ಚಲ್ಲಿ ಒಬ್ಬೇ ಇದ್ದಾಗ ಭೂತ ಗಡಿಬಿಡಿಯಿಂದ ನನ್ನ ತಪ್ಪುಗಳನ್ನೆಲ್ಲ ನೋಟ್ ಪುಸ್ತಕದಲ್ಲಿ ಬರೀತಾ ಇರೋಹಾಗೆ, ಅದು ತುಂಬಿ ನನ್ನ ಬೆನ್ನು ಚರ್ಮ ಸುಲೀತಾ ಇರೋಹಾಗೆ ಅನಿಸ್ತಿತ್ತು. ನಂಗೆ ತುಂಬ ಸ್ಪಷ್ಟವಾಗಿ ಕಣ್ಣೆದುರೆ, ಚಿತ್ರಗಳಲ್ಲಿ ನೋಡೊ ಉದ್ದ ಬಾಲ, ತಲೆಮೇಲೆ ಕೊಂಬು, ಹರಿತವಾದ ಉಗುರು ಹಲ್ಲು ಇರೊ ಕರೀ ದೆವ್ವ, ನೋಟ್ ಪುಸ್ತಕಾನ ಹಿಡ್ಕೊಂಡು ಬಂದು 'ನೋಡು, ಇದು ತುಂಬೋಗಿದೆ' ಅಂತ ತೋರ್ಸದು ಕಾಣ್ತಿತ್ತು. ಹೆದರಿ ಸತ್ತೋಗೋ ಹಂಗೆ ಆಗೋದು. ಆದ್ರೆ ಚರ್ಚಿಂದ ಹೊರಗೆ ಬಂದಕೂಡ್ಲೆ ಇದೆಲ್ಲ ಮರ್ತೇ ಹೋಗ್ತಿತ್ತು.

ನನ್‌ಗಳು ಯಾವತ್ತೂ ನಮಗೆ ಖುಶಿಯ ಕತೆ ಹೇಳ್ತನೇ ಇರ್ಲಿಲ್ಲ. ಯಾವಾಗ್ಲು ಭೂತದ ಕತೆನೇ. ಅವರು ಭೂತ ಕೈಲೊಂದು ತಕಡಿ ಹಿಡ್ಕಂಡು ಓಡಾಡುತ್ತೆ ಅಂತ ಹೇಳ್ತಿದ್ರು. ನಾವು ಮಾಡಿರೊ ಪಾಪ ಒಂದು ಕಡೆ, ನಾವು ಮಾಡಿದ ಒಳ್ಳೇ ಕೆಲಸ ಇನ್ನೊಂದು ಕಡೆ. ಪ್ರತಿಸಲ ಚರ್ಚತ್ರ ಹೋದಾಗ಼್ೂ ಹೆದರಿ ಎಚ್ಚರ ತಪ್ಪಿದಂಗೆ ಆಗಿ ಭೂತ ತಕಡಿ ಹಿಡ್ಕಂಡು ನನ್ನ ತಲೆ ಹತ್ರ ಕೂಗ್ತ ಬರ್ತಿರೋ ಹಂಗೆ, ನನ್ನ ಪಾಪದ ತಟ್ಟೆ ಕೆಳಕೆಳಗೆ ಇಳೀತಿರೋ ಹಂಗೆ ಕಾಣಿಸ್ತಿತ್ತು.

ನನ್ನ ಪುಣ್ಯದ ತಟ್ಟೆ ಕೆಳಗೆ ಇಳಿದು ಬರೋಹಂಗೆ ಮಾಡಕ್ಕೆ ಸಿಸ್ಟರುಗಳು ಏನೇನು ಹೇಳ್ತಾರೋ ಅದನ್ನೆಲ್ಲ ಚಾಚೂ ತಪ್ಪದೆ ಮಾಡ್ತಿದ್ದೆ. ಅವರು ಹೇಳಿದ್ದನ್ನೆಲ್ಲ ಕೇಳ್ತಿದ್ದೆ. ಮತ್ತೆಮತ್ತೆ ಪ್ರಾರ್ಥನೆ ಹೇಳ್ತಿದ್ದೆ. ಆದ್ರೆ ಏನೇ ಮಾಡಿದ್ರೂ ನನ್ನ ಪಾಪದ ತಟ್ಟೆನೇ ಭಾರ ಇರ್ತಿತ್ತು. ಅವರು ಭೂತನ ನಿಮ್ಮ ಕಣ್ಣಿಂದ್ಲೆ ಕಾಣಬೋದು ಅಂತ ಬೇರೆ ಅಂತಿದ್ರು. ಅದು ನನ್ನನ್ನ ಇನ್ನಷ್ಟು ಹೆದರೋ ಹಂಗೆ ಮಾಡ್ತಿತ್ತು. ಭೂತ ಅಂದ್ರೆ ಸರಿಯಾಗಿ ಒನಿಡಾ ಟಿವಿ ಜಾಹೀರಾತಲ್ಲಿ ಬರುತ್ತಲ, ಹಂಗೇ ಇರುತ್ತೆ ಅಂತ ಮಾಡಿದ್ವಿ ನಾವು. ನಿಜವಾದ ಭೂತ ಅದಕ್ಕಿಂತ ಭಯಂಕರ ಭಯ ಹುಟ್ಟಿಸೊ ಹಂಗೆ, ರಾತ್ರಿಯಷ್ಟು ಕರ್‍ರಗೆ ಇರುತ್ತೆ ಅಂದ್ಕೋತಿದ್ವಿ. ಅದರ ಯೋಚನೆನೆ ಸಾಕು ನಂಗೆ ರಾತ್ರಿ ಹೊಟ್ಟೆಯೊಳಗಿಂದ ಚಳಿ ಹುಟ್ಟಿಸಿಬಿಡದು.

ಸಿಸ್ಟರುಗಳು ಹೇಳ್ತಿದ್ರು, ನಾವು ಹೆಚ್ಚೆಚ್ಚು ದೊಡ್ಡದೊಡ್ಡ ತಪ್ಪು ಮಾಡಿದ ಹಾಗೂ ಭೂತಕ್ಕೆ ತುಂಬ ಖುಶಿ ಆಗುತ್ತೆ ಹಾಗೂ ನಮ್ಮನ್ನ ಕಾಯೊ ದೇವತೆಗೆ ಕಷ್ಟವಾಗುತ್ತೆ ಅಂತ. ನಾಯೇನಾರ ಸಣ್ಣ ಸುಳ್ಳು ಹೇಳಿದ್ರೆ, ಯಾರದ್ದೊ ಪೆನ್ಸಿಲ್ ಕಡ್ಡಿ ಕದ್ರೆ, ಮನೇಲಿ ಅಪ್ಪ ಅಮ್ಮ ಹಿರೀರು ಹೇಳಿದ್ದು ಕೇಳ್ದೆ ಗೌರವ ಕೊಟ್ಟಿಲ್ಲ ಅಂದ್ರೆ, ಶಾಲೇಲಿ ಒಳ್ಳೆ ಮಾರ್ಕು ತೆಗೀಲಿಲ್ಲ ಅಂದ್ರೆ ಭೂತ ನನ್ನ ಕಣ್ಣೆದುರು ತಕಡಿ ಹಿಡ್ಕಂಡು ಅಡ್ಡಾಡದು ನಂಗೆ ಕಾಣಿಸ್ತಿತ್ತು. ಅದು ಗಹಗಹಿಸಿ ನಗ್ತಿದ್ದರೆ ನನ್ನ ಕಾಯೊ ದೇವತೆ ದುಃಖದಿಂದ ಬಸವಳಿದು ಅಳ್ತ ಇರ್ತಿತ್ತು.

ಆಗ ನಂಗೂ ಅಳು ಬಂದುಬಿಡದು. ಇದನ್ನ ಎಷ್ಟು ಮರಿಬೇಕು ಅಂದ್ಕೊಂಡ್ರೂ ಆಗ್ತಿರ್ಲಿಲ್ಲ. ಅದು ಇನ್ನೂಇನ್ನೂ ಸ್ಪಷ್ಟವಾಗಿ ನನ್ನ ಕಣ್ಣಮುಂದೆ ಬರದು.

ಮೊದಲ ಶಾಸ್ತ್ರ ಆಗಕ್ಕಿಂತ ಮುಂಚೆ ಹುಶಾರಾಗಿ ಪಾಪ ನಿವೇದನೆ ಮಾಡೋದು ಹೇಗೆ ಅಂತ ಅವರು ನಂಗೆ ಹೇಳಿಕೊಟ್ರು. ಎಷ್ಟೋ ದಿನ ಅವರು ನಂಗೆ ಏನು ಹೇಳಿಕೊಟ್ರೊ ಅದನ್ನೆ ಮತ್ತೆಮತ್ತೆ ಹೇಳ್ತಿದ್ದೆ: ಪ್ರತಿವಾರ ಪಾಪ ನಿವೇದನೆ ಚೌಕಿಗೆ ಹೋಗಿ ನಿಂತು ಮೊಣಕಾಲೂರಿ ನನಗೆ ಕಲಿಸಿದ್ದ ರೀಲನ್ನು ಬಿಚ್ಚತಾ ಇದ್ದೆ:

*'ಸರ್ವಾಂತರ್ಯಾಮಿ ದೇವನೆ, ನಮೋಸ್ತುತೆ.*

*ಆಶೀರ್ವದಿಸು ಸ್ವಾಮಿ, ನಾ ಪಾಪ ಎಸಗಿರುವೆ.*

*ಪಾಪ ನಿವೇದಿಸಿ ವಾರವಾಯಿತು ಆಗಲೇ.*

*ನಾನು ನಾಲ್ಕು ಸಲ ಸುಳ್ಳಾಡಿದೆ, ಐದು ಸಲ ಕದ್ದೆ,*

*ನನ್ನ ಹಿರಿಯರ ಮಾತು ಕೇಳದೆ ಹೋದೆ.*

*ಚರ್ಚಿನಲ್ಲಿ ಹಗಲುಗನಸು ಕಾಣುತ್ತಿದ್ದೆ.*

*ಈ ಪಾಪಗಳಿಗೆ ಹಾಗೂ ನಾ ಮರೆತ, ಎಸಗಿದ ಪಾಪಗಳಿಗೆ*

*ಪಶ್ಚಾತ್ತಾಪವಾಗಿದೆ ಸರ್ವೇಶ್ವರನೇ.'*

ಯಾವಾಗಲೂ ಇದನ್ನೇ ಹೇಳೋದು.

ಪಾಪಕ್ಕೆ ಶಿಕ್ಷೆಯಾಗಿ ಮೂರು ಸಲ ನಮೋ ಮರಿಯಾ ಪ್ರಸಾದ ಪೂರ್ಣೇ ಪ್ರಾರ್ಥನೆ ಹೇಳಲಿಕ್ಕೆ ಹೇಳ್ತಿದ್ರು. ಮತ್ತೆ ಗಟ್ಟಿಯಾಗಿ ನಂಗೆ ಆಶೀರ್ವಾದ ಮಾಡ್ತಿದ್ರು. ನಾವು ಮಂಡಿಯೂರಿ ಕೂತೋರು ಎದ್ದು ಚರ್ಚಿನೊಳಗೆ ಹೋಗಿ ನಮ್ಮ ನೇಮ ಕೂಡಲೇ ತೀರಿಸಿಬರಬೇಕು. ಪಾದ್ರಿಯ ಬಂಗಲೆ ಬಿಟ್ಟು ಚರ್ಚಿನ ಕತ್ತಲೊಳಗೆ ಹೋಗದು ಅಂದ್ರೆ ಯಾವಾಗಲೂ ಭಯ. ಪ್ರತಿ ಸಲ ನಾನು ಪಾಪ ನಿವೇದನೆ ಮಾಡಿದ ಮೇಲೂ ನಡುಗ್ತ ಚರ್ಚಿಗೆ ಹೋಗಿದಿನಿ. ಪಾದ್ರಿ ಹೇಳಿದ ಪ್ರಾರ್ಥನೆ ಬೇಗಬೇಗ ಹೇಳಿ, ಕೊನೆಗೆ ಪಶ್ಚಾತ್ತಾಪದ ವಿಧಿ ಪೂರೈಸಿ ಮನೆಗೆ ಓಡಿಬಂದಿದಿನಿ.

ಶಾಸ್ತ್ರ ಮಾಡ್ತ ಪರಮಪ್ರಸಾದನ ತಗೊಂಡಾಗ ಅದನ್ನು ನಮ್ಮ ಬೆರಳಿಂದಾಗಲೀ ಹಲ್ಲಿಂದಾಗಲೀ ಕಚ್ಚಬಾರದು, ಮುಟ್ಟಬಾರದು ಅಂತಿದ್ರು. ಸಿಸ್ಟರುಗಳಂತೂ ಅದು ನಮ್ಮ ಅಂಗುಲಕ್ಕೆ ತಾಗಿದ್ರೂ ಅದನ್ನು ಜಗೀದೆ ನಾಲಿಗೆಲ್ಲಿ ಆಚೀಚೆ ಮೆಲ್ಲಗೆ ಹೊರಳಿಸಿ ನುಂಗಿಬಿಡಬೇಕು ಅಂತಿದ್ರು. ಸಿಸ್ಟರುಗಳು 'ಪವಿತ್ರ ಪ್ರಸಾದದ ಒಳಗೆ ಜೆಜು (ಜೀಸಸ್) ಇರ್ತಾರೆ, ಜಗ್ದು ದೇವಸುತರನ್ನ ಗಾಯಗೊಳಿಸಬಾರ್ದು ಅತವಾ ನಮ್ಮ ಪಾಪದ

ಕೈಯಿಂದ ಅದ್ನ ಮುಟ್ಟಬಾರ್ದು' ಅಂತ ಹೇಳ್ತಿದ್ರು. ಎಷ್ಟೋ ದಿನ ಅವರು ಹೇಳಿದಂಗೇ ಮಾಡಿದೆ. ಆದ್ರೆ ಅದು ಬಾಯಲ್ಲಿ ಅಂಗುಲಕ್ಕೆ ಸಿಕ್ಕಿದಾಗ ತುಂಬ ಕಸಿವಿಸಿ ಆಗ್ತಿತ್ತು. ಅದನ್ನ ನಿಧಾನ ನಾಲ್ಗೆ ಮೇಲೆ ತಂದುಕೊಳ್ಳಕ್ಕೇ ಕಷ್ಟ ಆಗ್ತಿತ್ತು. ಹಂಗೆ ಮಾಡಕ್ಕೆ ತುಂಬ ಹೊತ್ತು ಬೇಕಾಗ್ತಿತ್ತು. ಪವಿತ್ರ ಪ್ರಸಾದ ತಗೊಂಡ್ಮೇಲೆ ಹೆಂಗಪ್ಪ ಪ್ರಾರ್ಥನೆ ಹೇಳೋದು ಅಂತ ಯಾವಾಗ್ಲೂ ಚಿಂತೆ ಆಗ್ತಿತ್ತು. ಅದನ್ನ ಹೆಂಗಾದ್ರೂ ಮಾಡಿ ನುಂಗಕ್ಕೆ ನೋಡ್ತಿದ್ದೆ.

ಅದೊಂತರ ತಮಾಷೆ ನಿಜವಾಗಿ. ನಾನು ನನ್ನ ಬಾಯಿನ ತಲೆಮೇಲಿನ ಬಟ್ಟೇಲಿ ಮುಚ್ಕಂಡು ತಲೆನ ಒಂದು ಬದಿಗೆ ತಿರುಗ್ಸಿ ಮುರುಗ್ಸಿ ಅಂಗುಲಕ್ಕೆ ಸಿಕ್ಕಿರೊ ಪ್ರಸಾದನ ನಾಲ್ಗೆ ಮೇಲೆ ತಂದ್ಕೋಬೇಕು. ನಾನು ಹಿಂಗೆ ಮಾಡುವಾಗ ಅಕಸ್ಮಾತ್ ಇದನ್ನ ಯಾರಾದ್ರೂ, ಅದ್ರಲ್ಲು ಸಿಸ್ಟರುಗಳು ನೋಡ್ತಾರಾ ಅಂತ ಕಡೆಗಣ್ಣಲ್ಲಿ ನೋಡ್ತ ಇರ್ಬೇಕಿತ್ತು.

ತುಂಬ ದಿನದ ತಂಕ ಪ್ರಸಾದನ ಕೈಬೆರಳಲ್ಲಿ ಮುಟ್ಬೇಕು ಅನ್ನೋ ವಿಚಿತ್ರ ಆಸೆ ಇತ್ತು ನಂಗೆ. ಅಂತೂ ಒಂದಿನ ನನ್ನ ತಲೆಮೇಲಿನ ಬಟ್ಟೇಲಿ ಮಕ ಹುದುಗಿಸ್ಕಂಡು ಯಾರ್ಗೂ ಕಾಣದಂಗೆ ಬೆರಳಲ್ಲಿ ಮುಟ್ಟೇಬಿಟ್ಟೆ. ಆದರೆ ನನ್‌ಗಳು ಏನು ಹೇಳಿದ್ರೋ ಹಾಗೆ ಏನೂ ಆಗಲಿಲ್ಲ. ನಾ ಏನಾದ್ರು ಹಂಗೆ ಮಾಡಿದ್ರೆ ನನ್ನ ಕೈಯಿಂದ ರಕ್ತ ಸುರಿದು ಹರಿಯುತ್ತೆ ಅಂದಿದ್ರು. ಬೆರಳು ತೆಗೆದು ನೋಡ್ತಿನಿ, ಏನಿಲ್ಲ! ನಂಗೆ ನಾನೆ ಅಂದ್ಕೊಂಡೆ, ಈ ಸಿಸ್ಟರುಗಳು ಹೇಳಿದ್ದು ಬರಿ ಸುಳ್ಳು. ಆದರೆ ಅದನ್ನ ಯಾರಿಗೂ ಹೇಳಕ್ಕಾಗಲಿಲ್ಲ. ಅನಿಸಿತ್ತು ಆದ್ರೆ ಹೆದರಿಕೆ, ಹೇಳಿದ್ರೆ ನಾನು ಪವಿತ್ರ ಪ್ರಸಾದನ ಕೈಲಿ ಮುಟ್ಟಿದೆ ಅಂತ ಒಪ್ಕೊಬೇಕಾಗತ್ತಲ ಅಂತ. ಅದಕ್ಕೇ ಯಾರ್ಗೂ ಏನೂ ಹೇಳಲಿಲ್ಲ.

ಯಾವ್ದೊ ಒಂದು ಹಳ್ಳೀಲಿ ಯಾರೊ ಹುಡುಗ ಪವಿತ್ರ ಪ್ರಸಾದನ ಕೈಯಿಂದ ಮುಟ್ಟಿಬಿಟ್ನಂತೆ. ಅವತ್ತು ಬೆಳಗಿಂದ ಆ ಕ್ಷಣದಿಂದ ಅವನ ಬಾಯಿಂದ ರಕ್ತ ಹರಿತನೇ ಇತ್ತಂತೆ. ಸಿಸ್ಟರುಗಳು ಇದನ್ನ ನಮಗೆ ಪದೆಪದೆ ಹೇಳೋರು. ಇದನ್ನೂ ಪರೀಕ್ಷೆ ಮಾಡಿ ನೋಡ್ಬೇಕು ಅನಿಸ್ತು. ಒಂದ್ಸಲ ನಾನು ತಲೆ ಮೇಲಿರೊ ಬಟ್ಟೆ ಮುಚ್ಕಂಡು ಪ್ರಸಾದನ ಕಚ್ಚಿ, ಜಗಿದು ನುಂಗಿದೆ. ನನ್ನ ಬಟ್ಟೇಲಿ ಒರೆಸ್ಕಂಡು ನೋಡ್ತಿನಿ, ರಕ್ತನೂ ಇಲ್ಲ, ಏನೂ ಇಲ್ಲ. ಆಗ ಇದೂ ಒಂದು ಸುಳ್ಳು ಕತೆ ಸಿಸ್ಟರು ನಮ್ಮನ್ನ ಹೆದರಿಸಕ್ಕೆ ಅಂತ ಹೇಳ್ತಿದ್ದಿದ್ದು ಅಂತ ಗೊತ್ತಾಯ್ತು. ಇದ್ರ ಬಗ್ಗೆನೂ ಯಾರತ್ರನೂ ಹೇಳಲಿಲ್ಲ. ಹೀಗೆ ನಂಬಿಕೆ ಮತ್ತು ಭಕ್ತಿ ಬೆಳೀತಾ ನಾನು ಬೆಳೆದಿದ್ದು.

ನಾನು ಮೂರನೇ ಕ್ಲಾಸಲ್ಲಿ ಇದ್ದಾಗ ಕ್ರೈಸ್ತ ಶಾಸ್ತ್ರ ಆಗಿ ಧೃಢೀಕರಣ ಆಯ್ತು. ಅವರು ನಂಗೆ ಏನು ಹೇಳಿದ್ರು ಅಂದ್ರೆ ಈ ಶಾಸ್ತ್ರ ಆದ್ಮೇಲೆ ಬಿಷಪ್ ನಮ್ಗೆ ಕಪಾಳಕ್ಕೆ ಹೊಡೀತಾರೆ ಅಂತ. ಆಗ್ಲೆ ನಮ್ಮ ದೇಹದೊಳಗೆ ಪವಿತ್ರಾತ್ಮ ಪ್ರವೇಶ ಮಾಡದು ಅಂತ್ಲೂ ಹೇಳಿದ್ರು. ಬಿಷಪ್ ನನ್ನತ್ರ ಬಂದಕೂಡ್ಲೆ ನಾನು ಇನ್ನೇನು ಈಗ ಕಪಾಳಕ್ ಬಾರಿಸ್ತಾರೆ ಅಂತ ನನ್ನ

ಕಣ್ಣನ್ನ ಮುಚ್ಚದು ತೆಗೆಯದು, ಮುಚ್ಚದು ತೆಗೆಯದು ಮಾಡ್ತ ಇದ್ದೆ. ಅವರು ನನ್ನ ಹಿಡ್ದು ಕಪಾಳಕ್ಕೆ ಹೊಡದ್ರೆ ನಂಗೆ ಒಳಗೇನೂ ಬಂದು ಸೇರಿದಂಗೆ ಆಗಲೇ ಇಲ್ಲ. ಆದ್ರೂ ಭಕ್ತಿಯಿಂದ ತಲೆ ತಗ್ಗಿಸೇ ನಿಂತಿದ್ದೆ. ಇದು ನೆನಪಾದ್ರೆ ಈಗ್ಲೂ ನಗು ಬರುತ್ತೆ.

ನಾನು ಕಾನ್ವೆಂಟ್ ಸ್ಕೂಲಿಗೆ ಹೋದಾಗ ಬಾಲರ ಸಭೆಗೆ ಸೇರಿದೆ. ಭಾನುವಾರ ಬಾಲರ ಸಭೆಗೆ ಹೋಗಕ್ಕಿಂತ ಮುಂಚೆ ಆ ಬ್ಯಾಡ್ಜ್‌ನ್ನ ನಮ್ಮ ಅಂಗಿಗೆ ಪಿನ್ ಮಾಡ್ಕಂಡು ಹೋಗ್ತಿದ್ವಿ. ನಮಗೆ ಅದ್ರ ಬಗ್ಗೆ ತುಂಬ ಹೆಮ್ಮೆ. ಪೂಜೆ ಆದ್ಮೇಲೆ ನಮಗೆ ಮತ್ತೊಂದು ಸರ್ವೀಸ್ ಇರ್ತಿತ್ತು. ಆಮೇಲೆ ಆವಾಗೀವಾಗ ಅದಕ್ಕೆ ಇದಕ್ಕೆ ಅಂತ ದುಡ್ಡನ್ನ ಎತ್ತ್‌ಬೇಕಾಗ್ತಿತ್ತು. ಅದೇ ನಂಗೆ ಜಾಸ್ತಿ ನೆನಪಲ್ಲಿರೋದು.

ಭಾನುವಾರ ಸಂಜೆನೂ ಧರ್ಮೋಪದೇಶ ಕ್ಲಾಸ್ ಇರದು. ಅದಾದ್ಮೇಲೆ ಚರ್ಚಲ್ಲಿ ಆಶೀರ್ವಾದ ಇರ್ತಿತ್ತು. ಇದು ಗಂಟೆಗಟ್ಲೆ ನಡಿತಿತ್ತು. ಪಾದ್ರಿ ಬಂದು, ಉಪದೇಶ ಕೊಟ್ಟು ಆಮೇಲೆ ಒಂದಾದ್ಮೇಲೆ ಒಂದು ಪ್ರಶ್ನೆ ಕೇಳ್ತ ಹೋಗೋರು. ನಮಗೆಷ್ಟು ನಿದ್ದೆ ಬರದು ಅಂದ್ರೆ ಕಣ್ಣು ಬಿಟ್ಟು ಕೂರದೆ ಒಂದು ಸಾಹಸ ಆಗ್ತಿತ್ತು. ಒಂಚೂರು ತೂಕಡಿಸಿದ್ರೂ ಸಾಕು, ನಂ ಪಕ್ಕ ಕೂತಿರೊ ಸಿಸ್ಟರು ಬೆನ್ನಮೇಲೇ ಬಾರ್ಸೋರು. ಹೊಡ್ತಕ್ಕೆ ಹೆದರಿ ಕಣ್ಣು ಅರಳಿಸಿಕೊಂಡು ಕೂತ್ರೂ ಸಾದ್ಯನೆ ಆಗ್ತಿರ್ಲಿಲ್ಲ. ಒಬ್ಬರಾದ ಮೇಲೆ ಒಬ್ಬರು ಕೆಳಗೆ ಬೀಳ್ತಿದ್ವಿ.

ಸ್ವಲ್ಪ ದೊಡ್ಡೋರಾದ್ಮೇಲೆ ಸಿಸ್ಟರು ನಮ್ಮನ್ನ ಹೊಡೆಯೋದು ನಿಲಿಸಿದ್ರು. ಆದರೆ ಚಿವುಟತಾ ಇದ್ರು. ಅದು ಇನ್ನೂ ನೋವಾಗದು. ಚಿವುಟಕ್ಕೆ ಅಂತನೇ ತಮ್ಮ ಉಗುರು ಬೆಳಸ್ತಿದ್ರು. ಕಷ್ಟ ಏನಪ್ಪ ಅಂದ್ರೆ ಒಂದ್ ಸಣ್ಣ ನಿದ್ದೆ ತೆಗೆದ್ರೂ ಆಮೇಲೆ ತೂಕಡಿಕೆ ಬಂದು ತಲೆ ತೂಗಕ್ಕೆ ಶುರುವಾಗೋದು. ಪಾದ್ರಿ ಅದ್ನ ನೋಡಿದ್ದೇ ಸಿಸ್ಟರಿಗೆ ನಮ್ಮ ಕಪಾಳಕ್ ಬಾರ್ಸಿ ಅಂತ ಹೇಳ್ತಿದ್ದ. ಯಾರಿಗೆ ಹೆದರೋದು? ನಮ್ಗೆ ನಿದ್ದೆನ ತಡೆಯಕ್ಕೇ ಆಗ್ತಿರಲಿಲ್ಲ. ಒಂದ್ಸಲ ಹಿಂಗೇ ನಾ ನಿದ್ದೆ ಮಾಡ್ತ, ಸಿಸ್ಟರ್ ಕಪಾಳಕ್ಕೆ ಬಾರಿಸಿಬಿಟ್ಟಾಗ ನಾನೆಷ್ಟು ಬೆಚ್ಚಿಬಿದ್ದೆ ಅಂದ್ರೆ ಉಚ್ಚೆ ಹೊಯ್ಕಂಡೆ. ಅದಕ್ಕೆ ಮತ್ತೆ ಬೇರೆ ಹೊಡ್ತ ಬಿತ್ತು. ನಾನೂ ಜೋರಾಗಿ ಕಿರುಚಕ್ಕೆ ಶುರುಮಾಡಿದೆ. ಕೊನೆಗೆ ನಮ್ಮಮ್ಮ ಬಂದ್ಲು. ಎಲ್ಲ ಚೊಕ್ಕ ಮಾಡಿ ಮನೆಗ್ ಕರ್ಕಂಡು ಹೋದ್ಲು.

ನಾನು ಜಪನ ಸರಿ ಹೇಳ್ತಿದ್ದರಿಂದ ಮದುವೆ ಆಗೋ ವಧುಗಳಿಗೆ ಅವರು ಹೇಳಬೇಕಾದ ಪ್ರಾರ್ಥನೆ ಕಲಿಸಲಿಕ್ಕೆ ಸಿಸ್ಟರುಗಳು ನನ್ನತ್ರನೇ ಹೇಳೋರು. ಹಂಗೇ ಮತ್ತೊಬ್ಬ ಉಪದೇಶಕರು ವರರಿಗೂ ಕ್ಲಾಸು ತಗೊಳ್ಳೋರು. ನಾನು ಎರಡು ಮೂರು ವಾರ ಹೇಳಿಕೊಟ್ಟಮೇಲೆ ಸಿಸ್ಟರುಗಳು ಬಂದು ಪರೀಕ್ಷೆ ಮಾಡೋರು. ವಧುಗಳು ಸರಿ ಹೇಳ್ಲಿಲ್ಲ ಅಂದ್ರೆ ನಾನು ಬೈಸಿಕೊಳ್ಬೇಕು.

ಒಂದ್ಸಲ ನಾನು ಪ್ರಾರ್ಥನೆ ಹೇಳ್ತಿರುವಾಗ ಒಬ್ಬ ಸಿಸ್ಟರು ಇದ್ದಕ್ಕಿದ್ದಂಗೆ ನನ್ನ ಕಡೆ

ತಿರುಗಿಬಿಟ್ರು. ನಂಗೆಷ್ಟು ಭಯ ಆಯ್ತು ಅಂದ್ರೆ ನಾನು ಗಟ್ಟಿ ಹೇಳ್ತಿದ್ದಿದ್ದನ್ನ ತಕ್ಷಣ ನಿಲ್ಸಿ ಏನೋ ತಪ್ಪಿಬಿಟ್ಟೆ. ತಕ್ಷಣ ಒಳಗೆ ಬಂದ ಸಿಸ್ಟರು ನನ್ನ ಹಣೆ ಮೇಲೆ ಜೋರಾಗಿ ಗುದ್ದಿದ್ರು. ನಂಗೆ ದೊಡ್ಡ ಹಣೆ. ನಾನಂತೂ ನೋವಲ್ಲಿ ಸತ್ತೆ ಅಂತನೇ ಅಂದ್ಕೊಂಡೆ. ಹಣೆ ಉಬ್ಬಿಕೊಳ್ತು. ಆದರೂ ನಾ ಅಳ್ತಾ ಇದ್ರೂ ಆ ಸಿಸ್ಟರು ಬಿಡ್ತನೇ ಇಲ್ಲ. ಮತ್ತೆಮತ್ತೆ ತಪ್ಪಿದ ಪ್ರಾರ್ಥನೇನ ಹೇಳಿಸ್ತಿದಾರೆ. ನಂಗಂತೂ ಎಷ್ಟು ಸಿಟ್ಟು ಬಂತೂಂದ್ರೆ ದೊಡ್ಡೋಳಾದ್ಮೇಲೆ ಆ ಸಿಸ್ಟರಿಗೆ ಕಲ್ಲು ತಗಂಡು ಹೊಡೀಬೇಕು ಅಂತ ಅನಿಸೋಯ್ತು. ಇನ್ನ್ಯಾವತ್ತು ಧರ್ಮೋಪದೇಶ ಕ್ಲಾಸಿಗಾಗಲೀ, ಚರ್ಚಿನ ಸರ್ವೀಸಿಗಾಗಲೀ ಹೋಗಲ್ಲ ಅಂದ್ಕೊಂಡೆ. ಹಾಗೆ ತೀರ್ಮಾನ ಮಾಡಿದ ಮೇಲೇ ನನ್ನ ಸಿಟ್ಟಿಳಿದಿದ್ದು. ಆದ್ರೆ ನಾನು ದೊಡ್ಡೋಳಾಗಕ್ಕೆ ಮೊದ್ಲೆ ಆ ಸಿಸ್ಟರಿಗೆ ವರ್ಗ ಆಗಿ ಬೇರೆ ಊರಿಗೆ ಹೋದ್ರು.

ಹೀಗೆ ದಿನಾ ಬೆಳಿಗ್ಗೆ ಪೂಜೆಗೆ ಹೋಗೋದು, ಸಂಜೆ ಧರ್ಮೋಪದೇಶ ಕ್ಲಾಸಿಗೆ ಹೋಗದು ಮಾಡ್ತಿದ್ವಿ. ಆಮೇಲೆ ಶಾಲೇಲಿ ಕ್ರೈಸ್ತ ಮಕ್ಕಳಿಗೆ ಧರ್ಮಶಾಸ್ತ್ರದ ಕ್ಲಾಸು ಮತ್ತು ಹಿಂದೂ ಹುಡುಗರಿಗೆ ನೀತಿಶಿಕ್ಷಣ ಕ್ಲಾಸು ಇರೋದು. ಯಾವಾಗ್ಲೂ ಧರ್ಮಶಾಸ್ತ್ರದ ಪರೀಕ್ಷೇಲಿ ನಂಗೆ ಒಳ್ಳೇ ಮಾರ್ಕು ಬರದು. ಬಹುಮಾನ ಕೂಡ ಬಂದಿತ್ತು.

ನಾವು ಚರ್ಚು, ಶಾಲೆಗೆ ಹೋಗಬೇಕಂದ್ರೆ ಸ್ವಲ್ಪ ದೂರ ನಡೀಬೇಕಿತ್ತು. ಸುಮಾರು ಬೀದಿಗಳ್ನ ಹಾದುಹೋಗ್ಬೇಕಿತ್ತು. ಚರ್ಚು, ಶಾಲೆ, ಕಾನ್ವೆಂಟ್ ಮತ್ತು ಪಾದ್ರಿ ಮನೆ ಎಲ್ಲ ಮೇಲ್ಜಾತಿಯೋರ ಕೇರಿ ಕಡೆನೇ ಇತ್ತು. ಆದ್ರೆ ಶಾಲೆಗೆ ಹೋಗೋ ಹೆಚ್ಚಿನ ಮಕ್ಕಳು ನಂ ಕೇರಿಯೋರು. ನಂ ಹುಡುಗ್ರೆಲ್ಲ ಓದ್ಬೇಕು ಅಂದ್ರೆ ಇಷ್ಟು ದೂರ ನಡದು ಹೋಗ್ಬೇಕು. ಮೇಲ್ಜಾತಿ ಕ್ರೈಸ್ತ ಮಕ್ಕಳು ಕೆಲವೇ ಕೆಲವರು ಇದ್ರು. ಅವರಿಗೆಲ್ಲ ಚರ್ಚು, ಶಾಲೆ, ಕಾನ್ವೆಂಟ್ ಮತ್ತು ಪಾದ್ರಿ ಮನೆ ಎಲ್ಲ ಹತ್ರ. ಅವರು ಎಷ್ಟು ದೂರನೂ ನಡೀಬೇಕಿರಲಿಲ್ಲ. ನಾವೇ ಬಿಸಿಲು ಅನ್ನದೆ, ಸುರಿಯೊ ಮಳೆ ಅನ್ನದೆ ನಡೀಬೇಕಿತ್ತು. ಅಷ್ಟೇ ಅಲ್ಲ ನಂ ಬೀದೀಲಿ ಕೆಲವು ಸಲ ಕರೆಂಟೆ ಇರ್ತಿರಲಿಲ್ಲ. ಅದರ ಬಗ್ಗೆ ಯಾರೂ ಗಮನನೇ ಕೊಡ್ತಿರಲಿಲ್ಲ. ಆ ಕತ್ತಲು ಮತ್ತು ಕೆಸರು ದಾರೀಲಿ ಹೋಗ್ತಾ ಬರ್ತಾ ಸಗಣಿ ಹೇಲು ಮೆಟ್ಟದಂಗೆ ನೋಡ್ತ ಬರಬೇಕಿತ್ತು. ಬಹುಶಃ ಇಂತ ಕೊಳಕು ಇದೆ ಅಂತನೇ ಅವರು ಬೇರೆಕಡೆ ಇರೊ ಮನಸು ಮಾಡಿದರೋ ಏನೋ, ನಂಗೊತ್ತಿಲ್ಲ.

ನಾನು ಆರರಿಂದ ಎಂಟನೆತ್ತೆವರೆಗೆ ಪಾದ್ರಿಗಳು ನಡೆಸೊ ಶಾಲೆಗೆ ಹೋಗ್ತಿದ್ದಾಗ ಹಳೇ ಚರ್ಚು ಕೆಡವಿ ಹೊಸ ಚರ್ಚು ಕಟ್ಟೊ ಕೆಲಸ ನಡೀತಿತ್ತು. ಹಳೇ ಚರ್ಚಿನ ಹಿಂದೆ ಪಾಯ ತೋಡ್ತ ಇದ್ರು ಹೊಸ ಚರ್ಚಿಗೆ ಅಂತ. ನಮಗೆ ಕೈಕೆಲಸದ ಪೀರಿಯಡ್ ಇದ್ದಾಗ ಕೆಲವರು ಅಲ್ಲಿಗೆ ಹೋಗ್ತಿದ್ವಿ – ಅಲ್ಲಿ ಅವರು ಅಗೆದು ಹಾಕಿರೋ ಮಣ್ಣನ್ನ ಎತ್ತಿ ಹಾಕ್ತಿದ್ವಿ. ಒಂದಿನ ಹಂಗೆ ಒಂದು ಗುಂಡಿಯಿಂದ ಮಣ್ಣೆತ್ತಿ ಹಾಕುವಾಗ ಅದರ ಒಂದು ಬದಿಗೆ

ಅಂಟ್ಕಂಡಿದ್ದ ಒಂದು ಅಸ್ಥಿಪಂಜರ ಕಂಡ್ತು. ನಾನಲ್ಲದೆ ಮತ್ತೂ ಎರಡು ಮೂರು ಜನ ಅದನ್ನ ನೋಡಿ ಸಿಕ್ಕಾಪಟ್ಟೆ ಹೆದರಿಬಿಟ್ರು. ಆಮೇಲೆ ಒಬ್ಳು ಬಂದು ಏನೇನೋ ಕತೆ ಹೇಳಿದ್ಲು. ಅದು ಇಲ್ಲಿದ್ದ ಒಬ್ಬ ಪಾದ್ರಿದಂತೆ; ಅವರನ್ನ ಸಂತ ಪಟ್ಟ ಕೊಟ್ಟು ಏರಿಸಿರೋದರಿಂದ ಅವರೀಗ ಸ್ವರ್ಗದಲ್ಲಿದಾರಂತೆ; ಇತ್ಯಾದಿ.

ಅಷ್ಟೇ ಅಲ್ಲ, ಅದು ಒಬ್ಬ ಪಾದ್ರಿದು ಆಗಿದ್ದರಿಂದ ನಾವು ಅದ್ನ ಪವಿತ್ರ ಅವಶೇಷದಂತೆ ನಮ್ಮತ್ರ ಇಟ್ಟುಕೊಂಡ್ರೆ ಅದು ನಮಗೆ ಚೆನ್ನಾಗಿ ಓದಲಿಕ್ಕೆ ಸಹಾಯ ಮಾಡುತ್ತೆ ಅಂದ್ಲು. ಅದು ನಾವೇನು ಕೇಳ್ಕತೀವೋ ಅದ್ನ ಕೊಡುತ್ತೆ ಅಂದ್ಲು. ಹಿಂಗೆ ಹೇಳೇಳ್ತ ಅವಳು ಅದರಿಂದ ಎರಡು ಮೂರು ಹಲ್ಲು ಕಿತ್ಕಂಡ್ಲು. ನಾವೂ ಉಳಿದೋರು ನಮಗೆ ಏನನ್ನ ತೆಕ್ಕಳಕ್ಕೆ ಸಾದ್ಯನೊ ಅದನ್ನ ತಗಂಡ್ವಿ. ಹಂಗಂತ ದೊಡ್ಡ ಮೂಳೆಗಳನ್ನ ಅಲ್ಲೆ ಬಿಟ್ವಿ. ಅವುನ್ನ ತಗಂಡು ಹೋಗಕ್ಕೂ ಆಗ್ತಿರಲಿಲ್ಲ. ಸಣ್ಣಸಣ್ಣ ಮೂಳೆಗಳು ಮತ್ತೆ ಹಲ್ಲನ್ನ ಜಾಮಿಟ್ರಿ ಬಾಕ್ಸಲ್ಲಿ ಹಾಕಿ ತಗಂಡೋದ್ವಿ. ಪ್ರತಿದಿನ ಹಲ್ಲನ್ನ ಕೇಳ್ಕೋತಿದ್ವಿ, ಇವತ್ತು ಟೀಚರ್ ನಮ್ಮನ್ನ ಹೊಡೀದೇ ಇರಲಿ; ನಾನು ಚೆನ್ನಾಗಿ ಓದೋ ಹಂಗೆ ಆಗಲಿ; ನಾನು ಜಾಣೆ ಆಗೋ ಹಂಗೆ ಆಗಲಿ. ಹಿಂಗೇ ಇಂಥ ಏನೇನೋ ಆಗ್ಲಿ ಅಂತ ಕೇಳ್ಕೋತಿದ್ವಿ.

ಒಂದಷ್ಟು ದಿನ ಆಯ್ತು. ಒಂದಿನ ಸಂಜೆ ನಮ್ಮನೆಯೋರೆಲ್ಲ ಹಿಂಗೇ ಎಲ್ಲ ಒಟ್ಟು ಕೂತಿದ್ರು, ನಾವು ಓದ್ತ ಬರಿತಾ ಇದ್ವಿ. ವಿಜ್ಞಾನದ ಟೀಚರ್ರು ನಮಗೆ ಎಂತದೋ ಚಿತ್ರ ಬರೆಯಕ್ಕೆ ಹೇಳಿದ್ರು. ನಾನದನ್ನ ಬರಿತಾ ಇರ್ಬೇಕಾದ್ರೆ ನಮ್ಮಕ್ಕ ಹಲ್ಲನ್ನ ಜಾಮಿಟ್ರಿ ಬಾಕ್ಸಲ್ಲಿ ನೋಡಿದ್ಲು. 'ಇಷ್ಟಪ ಹಲ್ಲು ಎಲ್ಲಿ ಸಿಕ್ತ್? ಎಲ್ಲಿಂದ ತಂದದ್ ಅವ್ನ?' ಅಂತ ಕೇಳಿದ್ಲು. ತಕ್ಷಣ ನಮ್ಮಣ್ಣ, ತಮ್ಮ, ತಂಗಿ, ಅಮ್ಮ, ಅಜ್ಜಿ ಎಲ್ಲ ಒಂದಾದ್ಮೇಲೊಂದು ಪ್ರಶ್ನೆ ಕೇಳಕ್ಕೆ ಶುರು ಮಾಡಿದ್ರು. ನಾನು ಅದ್ರ ಬಗ್ಗೆ ಎಲ್ಲ ಹೇಳ್ದೆ.

ಎಲ್ಲ ಸಿಕ್ಕಾಪಟ್ಟೆ ನಕ್ರು. ನಮ್ಮಮ್ಮ ಮತ್ತೆ ಅಜ್ಜಿ ಮತ್ತೆಮತ್ತೆ ಹೇಳಿದ್ರು: ಅವು ಪಾದ್ರಿ ಹಲ್ಲಲ್ಲ. ಪಾದ್ರಿಗಳನ್ನೆಲ್ಲ ಇಲ್ಲಿ ಹೂಳಲ್ಲ. ಒಂದಷ್ಟು ವರ್ಷದ ಕೆಳಗೆ ಪಾದ್ರಿಗಳಿಗೆ ಅಡಿಗೆ ಮಾಡೋನು ಸತ್ತಿದ್ದ, ಆಗ ಅವನ್ನ ಅಲ್ಲಿ ಹೂತಿದ್ರು, ಅವು ಬಹುಶಃ ಅವನ ಹಲ್ಲೆ ಇರ್ಬೇಕು ಅಂದ್ರು. ಅವುನ್ನ ಬಿಸಾಕು ಅಂದ್ರು. ನಂಗಂತೂ ಮನ್ಸೇ ಇಲ್ಲ. ನಾನು ಆ ಹಲ್ಲುಗಳ ಮೇಲೆ ತುಂಬ ಭಕ್ತಿ ಇಟ್ಟಿದ್ದೆ. ಅವುನ್ನ ಬಿಸಾಡಿದ್ರೆ ಪಾಪ ಬರುತ್ತೆ ಅಂತಲೂ ಅನುಮಾನ ಆಗೋದು. ನಾನು ಬಿಸಾಡ್ಲೇ ಇಲ್ಲ. ಕೊನೆಗೆ ನಮ್ಮಣ್ಣ ಅವುನ್ನ ತೆಗೆದು ತಿಪ್ಪೆಗೆ ಹಾಕ್ದ. ಮರುದಿನ ಶಾಲೆಗೆ ಹೋದ್ದೇ ಇದನ್ನ ಉಳಿದೋರಿಗೂ ಹೇಳ್ದೆ. ಅವರೂ ಹೆದರ್ಕಂಡು ತಮ್ಮತ್ರ ಇದ್ದ ಮೂಳೆಗಳನ್ನ ಬಿಸಾಡದು ಅಂದ್ಕೊಂಡ್ರು. ಅವುನ್ನ ಇಷ್ಟು ದಿನ ಇಟ್ಕೊಳ್ಳುವಾಗ ಯಾವ ಭಕ್ತಿ ಇತ್ತೋ ಸರೀ ಅದಕ್ಕೆ ವಿರುದ್ಧ ಭಾವನೆಯಿಂದ ಹೇವರಿಕೆಯಿಂದ ಬಿಸಾಡಿಬಿಟ್ವಿ. ಮತ್ತೆ ತಿರುಗಿ ನೋಡ್ದಂಗೆ ಮನೆಗೆ ಓಡ್ಬಂದ್ವಿ. ಹಿಂಗೇ

ನಾನು ಏನೇನೋ ಕುರುಡು ನಂಬಿಕೆಗಳಲ್ಲಿ ಮುಳುಗೋಗಿದ್ದೆ. ಸಾವಕಾಶ ಅದರಿಂದೆಲ್ಲ ಹೊರಗ್ಬಂದೆ.

ಆಗೆಲ್ಲ ದಿನಾ ಸಂಜೆ ಮನೇಲಿ ಪ್ರಾರ್ಥನೆ ಇರ್ತಿತ್ತು. ಸಂಜೆ ಚರ್ಚಿಂದ ಮನೆಗೆ ಬಂದ ಕೂಡ್ಲೆ ಮನೇಲಿ ಪ್ರಾರ್ಥನೆ ಇರದು. ಹೊಟ್ಟೆ ಹಸ್ದು ಸೀಳಿಬಿಟ್ಟಂಗೆ ಅನಿಸ್ತಿರದು. ಆದ್ರೆ ನಮ್ಮಮ್ಮ ಪ್ರಾರ್ಥನೆ ಮಾಡಿದ್ಮೇಲೇ ತಿನ್ನಕ್ಕೆ ಕೊಡದು ಅಂತ ಕಟ್ಟುನಿಟ್ಟಾಗಿ ಹೇಳೋಳು. ಊಟಕ್ಕೆ ಮೀನ್ನೋ, ಮಾವ್ಸನ್ನೋ ಇದ್ರೆ ಪ್ರಾರ್ಥನೆ ಮೇಲೆ ಗಮನ ಕೊಡಕ್ಕೇ ಆಗ್ತಿರಲಿಲ್ಲ. ಕೆಲವು ಸಲ ಮೊದ್ಲು ಊಟಕ್ಕೆ ಹಾಕು ಅಂತ ಹಠ ಹಿಡಿತಿದ್ವಿ. ಆದ್ರೆ ಊಟ ಆದ್ಮೇಲೆ ಪ್ರಾರ್ಥನೆ ಹೇಳಕ್ಕೆ ಹೋದ್ವಾ, ಎಲ್ಲ ನಿದ್ದೆ ಹೊಡೀತಿದ್ವಿ. ಅದಕ್ಕೇ ಯಾವಾಗ್ಲೂ ಪ್ರಾರ್ಥನೆ ಆದ್ಮೇಲೇ ಊಟ ಅನ್ನೋ ರೂಢಿ ಬಂದಿದ್ದು.

ಉಳಿದೋರೆಲ್ಲ ಏನೋ ಕಾಟಾಚಾರಕ್ಕೆ ಅತವಾ ಮಾಡ್ಬೇಕಲ ಅಂತ ಪ್ರಾರ್ಥನೆ ಮಾಡ್ತಿದ್ರೆ ಅಮ್ಮ ಮಾತ್ರ ಹಾಗಲ್ಲ, ತಲೆ ಮೇಲೆ ಪೂರ್ತಿ ಬಟ್ಟೆ ಎಳಕಂಡು ಭಯಭಕ್ತಿಯಿಂದ ಪ್ರಾರ್ಥನೆ ಮಾಡ್ತಿದ್ಲು. ಅಮ್ಮ ಅಂತ ಅಂದಕೂಡ್ಲೆ ಅವಳ ಈ ಚಿತ್ರನೇ ನನ್ನ ಕಣ್ಮುಂದೆ ಬರುತ್ತೆ. ಪ್ರಾರ್ಥನೆ ಆದ್ಮೇಲೆ ಭಜನೆ ಪುಸ್ತಕದಿಂದ ಯಾವ್ದಾದ್ರೂ ಭಜನೆ ಹಾಡ್ತಿದ್ವಿ. ಆದ್ರೆ ನಾವು ಯಾವ್ದು ಹೇಳಿದ್ರೋ, ಯಾವ್ದನ್ನ ಬಿಟ್ರೋ, ನಮ್ಮಮ್ಮ ಮಾತ್ರ,

'ಬಂದಿಹೆ ದೇವಾ ನಿನ್ನಯ ಸನ್ನಿಧಿಗೆ

ಎನ್ನಯ ಮನದ ಶಾಂತಿ ನೆಮ್ಮದಿಗೆ

ಹರಸು ನೀ ದೇವಾ ಎಮ್ಮಯ ಬಾಳನು

ಹರಿಸು ನೀ ದೇವಾ ವರಗಳ ಧಾರೆಯನು'

ಭಜನೆನ ಮಾತ್ರ ಮರೀತಾ ಇರ್ಲಿಲ್ಲ. ಭಜನೆ ಆದ್ಮೇಲೇ ನಾವು ಊಟ ಮಾಡ್ತಿದ್ದಿದ್ದು.

ನಾನು ಆರನೇ ಕ್ಲಾಸಲ್ಲಿರುವಾಗ ನಮ್ಮನೆಗೆ ಕರೆಂಟು ಬಂತು. ಅಲ್ಲೀವರೆಗೆ ಚಿಮಣೆಣ್ಣೆ ದೀಪನೇ ಉರಿಸ್ತಿದ್ವಿ. ಮೊದ್ಲು ಕರೆಂಟು ಬಂದಾಗ ನಮಗೆ ಸ್ವಿಚ್ ಹಾಕದು ಆರ್ಸದು ಅಂದ್ರೆ ತುಂಬ ಪ್ರೀತಿ. ನಮ್ಮಜ್ಜಿ ಸಹಾ ಸಣ್ಣ ಮಕ್ಳಂಗೆ ಲೈಟ್ ಹಾಕದು ಆರ್ಸದು ಮಾಡಿ ನಗ್ತಿದ್ಲು. ಅವಳಂತೂ ಸೋಜಿಗಬಟ್ಟು ಹೇಳೋಳು, 'ಕಾಣ್ ಇದೆಂತ ಮಾಯಮಾಟ ಈ ಕರೆಂಟು ಅಂತ? ಎಂತೆಂತದ್ನ ಕಂಡುಹಿಡಿದಿದಾವಲ? ಇದೆಂತದ ಸಿಚ್ ಅಂಬ್ರ್, ನಾ ಇದ್ನ ಕುಟ್ಟಿರ್ ಕೂಡ್ಲೆ ಲೈಟ್ ಹತ್ಕಣತ್!' ಅವಳಿಗೊಂದ್ ಕುಷಿ ಅಂದ್ರೆ ಕರೆಂಟು ಎಣ್ಣೆ ತರ ಖಾಲಿ ಆಗಿ ದೀಪ ಆರ್ತು ಅನ್ನೊ ತಲೆಬಿಸಿ ಇಲ್ಲ ಅನ್ನದು.

ನಮ್ಮಜ್ಜಿ ಮನೇಲಿ ಒಂದು ಬಾಲ ಏಸುವಿನ ತಲೆ ಇತ್ತು. ಒಂದ್ಸಲ ಚರ್ಚಲ್ಲಿ ಬಾಲ ಏಸು ಪ್ರತಿಮೆ ಬಿದ್ದು ಒಡ್ದು ಅದ್ರ ಚೂರನ್ನ ಅವರು ಬಿಸಾಕಿದ್ದಾಗ ನಮ್ಮಜ್ಜಿ ಅಲ್ಲಿಂದ ಅದ್ರ ತಲೆ ತಗಂಬಂದು ಹುಶಾರಾಗಿ ಮನೇಲಿಟ್ಟಿದ್ಲು. ನಾನು ಅವ್ರ ಮನೆಗೆ ಹೋದಾಗೆಲ್ಲ ಆ

ತಲೆನ ತೆಗ್ದು ನನ್ನ ತೊಡೆ ಮೇಲಿಟ್ಕಂಡು ಮುತ್ತು ಕೊಡ್ತಿದ್ದೆ. ಅದನ್ನ ಬೀದಿಗೆ ತಗಂಡೋಗಿ ಉಳಿದ ಮಕ್ಳಿಗೂ ತೋರ್ಸಿ ಅವರೂ ಅದಕ್ಕೆ ಮುತ್ತು ಕೊಡೋರು. ಅಜ್ಜಿಗೆ ನನ್ಮೇಲೆ ಸಿಟ್ಟು ಬರ್ತಿತ್ತು. ನೀ ಅದನ್ನ ಒಡದು ಹಾಕ್ತಿ ನೋಡು ಅಂತಿದ್ಲು. ತುಂಬ ವರ್ಷದ ನಂತ್ರ ನನ್ನ ತಮ್ಮ, ಅಜ್ಜಿ ಹಾಸ್ಗೆ ಹಿಡಿದಿದ್ದಾಗ ಆ ತಲೆಗೆ ತನಗಿಷ್ಟ ಬಂದ ಯಾವ್ಯಾವ್ದೊ ಬಣ್ಣದ ಪೇಂಟ್ ಹಚ್ಚಿ ಬೊಂಬೆ ತರ ಮಾಡಿಟ್ಟ. ಅವನಿಗೆ ನಾ ತೋರಿಸೊ ಭಕ್ತಿ, ಗೌರವದ ಭಾವನೆ ಇರ್ಲಿಲ್ಲ.

ನಮ್ಮನೇಲಿ ತುಂಬ ದೇವ್ರ ಫೋಟೋ, ಕ್ಯಾಲೆಂಡರು ಇದ್ವು. ಏಸು, ಅವರ್ ಲೇಡಿ, ಸಂತ ಜೋಸೆಫ್, ಸಂತ ಅಂತೋಣಿ, ಸಂತ ಸೆಬಾಸ್ಟಿಯನ್, ಸಂತ ಇಗ್ನೇಷಿಯಸ್, ಆರ್ಚ್ ಏಂಜೆಲ್ ಮೈಕೆಲ್, ಹೋಲಿ ಫ್ಯಾಮಿಲಿ, ಶಿಲುಬೆ ಫೋಟೋ ಹೀಗೇ. ಅವರ್ ಲೇಡಿ ಫೋಟೋ ಎಷ್ಟೊಂದು ಬೇರೆಬೇರೆ ರೂಪದಲ್ಲಿ, ಹೆಸರಲ್ಲಿ ಇತ್ತೂಂತ. ಅವರ್ ಲೇಡಿ ಆಫ್ ಪರ್‌ಪೆಚುವಲ್ ಸಕೂರ್, ಅವರ್ ಲೇಡಿ ಆಫ್ ಪೂಂಡಿ, ಅವರ್ ಲೇಡಿ ಆಫ್ ವೇಲಾಂಕಣಿ, ಅವರ್ ಲೇಡಿ ಆಫ್ ಸಾರೋಸ್ ಹೀಗೇ. ನಮ್ಮನೆಗೆ ಕರೆಂಟು ಬಂದ ಮೇಲೆ ಈ ಚಿತ್ರಗಳ ಪಕ್ಕನೆ ಒಂದು ಪ್ಲಗ್ ಇಟ್ಟಿದ್ರು. ಆಗ ನಂಗೆ ಕರೆಂಟು ಪ್ಲಗ್‌ಗಳ ಬಗ್ಗೆ ಏನೂ ಗೊತ್ತಿರ್ಲಿಲ್ಲ. ನಂಗೆ ಲೈಟು ಹಾಕದು, ಆರ್ಸದು ಮಾತ್ರ ಗೊತ್ತಿತ್ತು.

ಒಂದಿನ ಬೆಳಗಿನ ಪ್ರಾರ್ಥನೆ ಮುಗಿಸಿ ನಾ ವಾಪಸ್ ಬರ್ತಿರಬೇಕಾದ್ರೆ ನಂ ಟೀಚರ್ ಕಂಪೌಂಡಿಂದ ಒಂದೆರೆಡು ದಾಸವಾಳ ಕದ್ದೆ. ಅವ್ರ ಮನೆ ಚರ್ಚ್ ಪಕ್ಕನೇ. ನಾವು ಕೀಳ್ತ ಏನಾದ್ರೂ ಸಿಕ್ಕಿಬಿದ್ದಿದ್ರೆ ಅವ್ರು ನಮ್ಮನ್ನ ಸುಮ್ನೆ ಬಿಡ್ತಿರ್ಲಿಲ್ಲ. ಅದ್ಕೆ ನಾವು ಕಳ್ಳರಂಗೆ ಕಂಪೌಂಡ್ ಹತ್ತಿ ಹೂ ಕೀಳ್ತಾ ಇದ್ವಿ. ಕಂಪೌಂಡ್ ಗೋಡೆ ಮೇಲೆ ಹೂವು ಜಗ್ಗಿ ಸುರಿದಿತ್ತು. ನಂಗೆ ಅದ್ನ ತಂದು ಏಸು ಫೋಟಕ್ಕೆ ಹಾಕ್ಬೇಕು ಅಂತ. ಆದ್ರೆ ಅವನ್ನ ಸಿಗಿಸಕ್ಕೆ ಸರಿ ಜಾಗ ಇರ್ಲಿಲ್ಲ. ಆಗ ಅಲ್ಲೆ ಇದ್ದ ಪ್ಲಗ್ ಕಾಣ್ತು.

ಒಳ್ಳೇ ಚೆನ್ನಾಗಿ ಮೂರು ತೂತು ಇದಾವೆ. ಹೂವಿನ ದಂಟು ಹಿಡಿದು ಒಂದು ವಟ್ಟೆ ಒಳಕ್ಕೆ ತೂರ್ಸಕ್ಕೆ ಹೋದೆ. ನನ್ನ ಕೈಯಿಡೀ ಒಂತರ ಜುಂಜುಂ ಅಂದು ಎಳದಂಗೆ ಆಯ್ತು. ಅದೇನೂಂತ ನಂಗೆ ಗೊತ್ತಾಗ್ಲಿಲ್ಲ. ಎರಡ್ನೆ ಹೂವನ್ನೂ ಅದ್ರ ಪಕ್ಕದ ವಟ್ಟೆಗೆ ತೂರ್ಸಕ್ಕೆ ಹೋದೆ. ಆಗ್ಲೂ ನನ್ನ ಕೈ ಹಂಗೇ ಎಳ್ದಂಗೆ ಆಯ್ತು. ಎರಡ್ನೆ ಸಲ ಆದಾಗ ನನ್ನ ಕೈನ ಕರೆಂಟು ಎಳೀತಿದೆ ಅಂತ ಗೊತ್ತಾಯ್ತು. ಕೂಡ್ಲೆ ಹೆದರಿಕೆ ಆಗಿ ಆಯ್ತು ನನ್ನ ಕತೆ ಅಂದ್ಕಂಡೆ. ದೇವ್ರೇ ಆ ಹೂಗಳನ್ನ ನಾ ಕದ್ಕಂಡು ಬಂದು ಇಟ್ಟಿದ್ದಕ್ಕೆ ಕರೆಂಟು ಕೈ ಎಳಿಯೋ ಹಂಗೆ ಮಾಡಿದಾನೆ ಅಂದ್ಕೊಂಡೆ. ತಕ್ಷಣ ಒಂದು ಪ್ರಾರ್ಥನೆ ಹೇಳ್ದೆ. ಹೆದರಿ ಗಟ್ಟಿಯಾಗಿ ಇನ್ಮುಂದೆ ದಾಸವಾಳ ಹೂವನ್ನ ಹಿಂಗೆ ಕದ್ದು ತರಲ್ಲ ಅಂತ ಮತ್ತೆಮತ್ತೆ ಹೇಳ್ಕಂಡೆ. ಆಮೇಲೆ ಕೆಳಗಿಳಿದೆ. ಆಗ ನನ್ನ ನಂಬಿಕೆಗಳು ಹೀಗಿದ್ವು.

* * *

ನಂ ಹಳ್ಳಿ ಪಕ್ಕ ಒಂದು ಬೆಟ್ಟ ಇದೆ. ಬಾಳ ಮೊದ್ಲು ಅವರ್ ಲೇಡಿ ಅಲ್ಲಿ ಪ್ರತ್ಯಕ್ಷ ಆಗಿದ್ಲಂತೆ. ಒಂದ್ಸಲ ಒಬ್ಬ ಪಾದ್ರಿಗಳು ಪೂಜೆಗಂತ ಪಕ್ಕದ ಹಳ್ಳಿಗೆ ಹೋಗಕ್ಕೆ ಗಾಡಿ ಹತ್ತಿದ್ರು. ಆಗ ಬಸ್ಸಿರಲಿಲ್ವಲ್ಲ, ಎತ್ತಿನ ಗಾಡಿನೆ ಗತಿ. ಹಿಂಗೇ ಹೋಗ್ತ ಇರ್ಬೇಕಾದ್ರೆ ರಾತ್ರಿ ಆಯ್ತು. ಆಗ ಒಂದು ಕಾಡಲ್ಲಿ ಗಾಡಿ ಹೋಗ್ತಿತ್ತು. ಇನ್ನೇನು ಸ್ವಲ್ಪ ದೂರ ಮಾತ್ರ ಇತ್ತು. ಹಳ್ಳಿ ಬಂದ್ಬಿಡುತ್ತಲ್ಲ, ರಾತ್ರಿ ಆದ್ರೂ ಏನೀಗ ಗಾಡಿ ಬಿಡು ಅಂತ ಪಾದ್ರಿ ಗಾಡಿ ಹೊಡೆಯೋನಿಗೆ ಹೇಳಿದ್ರು.

ಒಂದ್ ಜಾಗ ಬಂತು. ಎಲ್ಲ ಹೇಳೋ ಪ್ರಕಾರ ಅಲ್ಲಿಂದ ಗಾಡಿ ಮುಂದೆ ಹೋಗದೆ, ಎತ್ತು ಹಾಗೇ ನಿಂತ್ಬಿಟ್ಟವಂತೆ. ಗಾಡಿ ಹೊಡೆಯೋನು ಏನೇನು ಮಾಡಿದ್ರು ಅವು ಮುಂದೆ ಹೋಗ್ತನೆ ಇಲ್ಲ. ಅವನ್ನ ಹೊಡದು, ನೂಕಿ, ಒತ್ತಿದ್ರು ಒಂದ್ ಹೆಜ್ಜೆ ಸೈತ ಮುಂದಿಡಲ್ಲ. ಕೊನೆಗೆ ಪಾದ್ರಿಗೆ ಈ ಪ್ರಾಣಿಗಳು ಎಂಥ ಹೊತ್ತಲ್ಲಿ ಕೈಕೊಡ್ತಾವಲ್ಲ ಅನಿಸಿ ಅಲ್ಲೇ ನಿಲ್ಸಕ್ಕೆ ಹೇಳಿದ್ರು. ಪಾದ್ರಿ ಗಾಡಿ ಒಳಗೇ ನಿದ್ದೆ ಮಾಡಿದ್ರು.

ಅದೊಂತರ ನಿರ್ಜನ ಪ್ರದೇಶ. ಮನುಶ್ರ ಸದ್ದೇ ಇಲ್ಲ. ದಟ್ಟ ಕಾಡು. ಆಗ ಅವ್ರಿಗೆ ಗುಂಯ್ ಅಂತ ಜೇನುಹುಳದ ಗುಂಜಾರ ಕೇಳ್ತು. ಈ ರಾತ್ರೀಲಿ ಇದೇನ್ ಸದ್ದು ಅಂತ ಇಬ್ರು ಹೆದರಿ ಕೊನೆಗೆ ಪಾದ್ರಿ ಪ್ರಾರ್ಥನೆ ಹೇಳ್ತ ಹಾಗೇ ನಿದ್ದೆ ಮಾಡಿದ್ರು.

ನಡುರಾತ್ರಿ. ಪಾದ್ರಿಗೆ ನಿದ್ದೇಲಿ ಕನಸು. ಅವರ ಕನಸಲ್ಲಿ ಬಂದ ದೇವಮಾತೆ ತನಗೊಂದು ದೇವಸ್ಥಾನ ಕಟ್ಬೇಕು ಅಂತ ಹೇಳಿದ್ಲು. ಆಗ ಪಾದ್ರಿಗೆ ಎಚ್ಚರಾಗಿ ಕೇಳಿದ್ರು, 'ಅಮ್ಮಾ ಮಾತೆ, ದೇವಾಲಯ ಎಲ್ಲಿ ಕಟ್ಟುವುದು?' ಸೌಂದರ್ಯ, ಘನತೆಯ ದೇವಮಾತೆ ಗಾಡಿಯಿಂದ ಅಷ್ಟು ದೂರ್ದಲ್ಲಿ ನಿಂತಿದ್ದು ನೋಡಿದ್ರು. ಅವಳ ಸುತ್ತ ಬೆಳಕಿನ ಪ್ರಭೆ ಹರಡಿಕೊಂಡಿತ್ತು. ಮರುಕ್ಷಣ ಆಕೆ ಮಾಯ ಆದ್ಲು.

ಆಮೇಲೆ ಪಾದ್ರಿಗೆ ನಿದ್ದೆನೇ ಬರ್ಲಿಲ್ಲ. ಬೆಳಗಾಗೋ ತಂಕ ಎಚ್ಚರಾಗಿ ಕೂತು ಜಪಮಣಿ ತಿರುಗಿಸ್ತ ಪ್ರಾರ್ಥನೆ ಹೇಳ್ತಾ ಇದ್ರು. ಬೆಳಗಾದ್ಮೇಲೆ ಗಾಡಿಯೋನ್ನ ಎಬ್ಸಿ ಹಳ್ಳಿಗೆ ನಡೆಯಪ್ಪ ಅಂದ್ರು.

ಬೆಳಿಗ್ಗೆ ಎತ್ತು ಮಾಮೂಲಿ ಯಾವತ್ತಿನಂಗೆ ಹೋದ್ವು. ಎತ್ತು ಈಗ ಸಲೀಸಾಗಿ ಹೋಗೋದು ನೋಡಿ ಗಾಡಿಯೋನಿಗೇ ಆಶ್ಚರ್ಯ ಆಗೋಯ್ತಂತೆ. ಆಗ ಪಾದ್ರಿ ಅವ್ನಿಗೆ ರಾತ್ರಿ ಏನಾಯ್ತು ಅಂತ ಹೇಳಿದ್ರು. ಅದೆ ಜಾಗ್ದಲ್ಲೇ ಒಂದು ಚರ್ಚ್ ಕಟ್ಟಕ್ಕೆ ಶುರು ಮಾಡಿದ್ರು. ನಮ್ಮಪ್ಪನೂ ಅದ್ರಲ್ಲಿ ಕೆಲಸ ಮಾಡಿದ್ರಂತೆ. ಹಳೇ ಜನ ಹೇಳೋ ಪ್ರಕಾರ ಹೀಗೆ ಅಲ್ಲಿ ಅವರ್ ಲೇಡಿ ಚರ್ಚ್ ಎದ್ದಿತು. ಆ ಬೆಟ್ಟನ ಚಿನ್ನಾಮಲ್ಲೈ ಅಂತ ಕರದ್ರು.

ಪ್ರತಿ ತಿಂಗಳು ಮೊದಲ ಶುಕ್ರವಾರ ಚಿನ್ನಾಮಲ್ಲೈನಲ್ಲಿ ಒಂದು ಪೂಜೆ ಇರುತ್ತೆ. ನಾವು ಶಾಲೆ ಮಕ್ಳು ಗುರುವಾರ ಸಂಜೆನೇ ಬುತ್ತಿ ಕಟ್ಕಂಡು ಹೊರಟು ಅಲ್ಲಿ ಮುಟ್ಟಿರ್ತಿದ್ವಿ, ನಮ್ಮ

ಹಳ್ಳಿಗೂ ಆ ಬೆಟ್ಟಕ್ಕೂ ಐದಾರು ಮೈಲಿ ದೂರ. ಹೊರಡಕ್ಮುಂಚೆ ಏನಾರೂ ತಗಳಕ್ಕೆ ಬೇಕೂಂತ ಕೇಳಿ ಮನೇಲಿ ದುಡ್ಡಿಸ್ಕಂಡಿರ್‍ತಿದ್ವಿ. ದಾರೀಲಿ ಚಕ್ಕಲಿ, ಐಸ್ ಕ್ಯಾಂಡಿ, ಕ್ಯಾಂಡಿ ಫ್ಲಾಸ್, ಜೆಲ್ಲಿ ಸ್ವೀಟ್, ಸೌತೆಕಾಯಿ, ಪೇರಲ ಹಣ್ಣು ಹಿಂಗೆ ಏನೇನೋ ತಗಂಡು ಹರಟೆ ಹೊಡೀತಾ ಹತ್ತತಿದ್ವಿ.

ಸಂಜೆ ಅಲ್ಲಿನ ಚರ್ಚಲ್ಲಿ ಪ್ರಾರ್ಥನೆ, ಭಜನೆ ಇರೋದು. ಅದಾದ್ಮೇಲೆ ಕೂತು ನಾವು ತಂದ ಬುತ್ತಿಯಿಂದ ಏನಾದ್ರೂ ಸ್ವಲ್ಪ ತಿಂತಿದ್ವಿ. ಉಳಿದಿದ್ದನ್ನ ಮರುದಿನಕ್ಕೆ ಇಡ್ತಿದ್ವಿ. ಆಮೇಲೆ ಚರ್ಚಿನ ನೆಲದ ಮೇಲೆ ನಂ ಬಟ್ಟೆ ಹರಡಿ ಅಲ್ಲೇ ಮಲಗ್ತಿದ್ವಿ. ಅದು ಹುಣಸೇಹಣ್ಣಿನ ಕಾಲ ಆದ್ರೆ ಬೋಟಿ ಕಿತ್ತು, ಮೇಣಬತ್ತೀಲಿ ಸುಟ್ಟು ತಿಂತಿದ್ವಿ. ಅತವಾ ಹುಣಸೆಕಾಯಿ ಕಿತ್ತು ಅದ್ರ ಪೇಸ್ಟನ್ನ ನೆಕ್ಕತಿದ್ವಿ. ನಾಲಿಗೆ ಮೇಲೆಲ್ಲ ಗುಳ್ಳೆ ಏಳದು. ಆದ್ರೂ ಬಿಡ್ತಿರ್ಲಿಲ್ಲ. ಅಲ್ಲೊಂದು ಆಲದ ಮರ ಇತ್ತು. ಅದ್ನ ಹತ್ತದು ಅಂದ್ರೆ ಬಾಳ ಮಜ. ಅದ್ರ ಬಿಳಲು ಹಿಡಿದು ಜಗ್ಗಿ ನೇತಾಡ್ತಿದ್ವಿ. ಅದೊಂತರ ಒಳ್ಳೇ ಜಾಗ. ಒಬ್ರಿಗೊಬ್ರು ಜೊತೆ ಮಾಡ್ಕಂಡು ಬಂಡೆ ಹತ್ತಿ ಇಳಿದು ಅಡಕ್ಕಂಡು ಆಡ್ತಿದ್ವಿ. ಸುತ್ತ ಬೆಟ್ಟ. ತುಂಬ ಚಂದದ ಜಾಗ ಅದು. ಅಲ್ಲಿ ಗಾಳಿನೂ ಅಷ್ಟೆ. ತಾಜಾ, ತಣ್ಣಗಾಗಿ ಬೀಸದು.

ಮರುದಿವ್ಸ ಬೆಳಗ್ಗೆ ಎದ್ದು ಕೆಮ್ಮಣ್ಣು ಪುಡಿಯಿಂದ ಹಲ್ಲು ತಿಕ್ಕಿ, ಮಕ ತೊಳದು ಪೂಜೆಗೆ ಹೋಗ್ತಿದ್ವಿ. ಪೂಜೆ ನಡಿತಿದ್ದಾಗಲೂ ಕೆಲವರು ಬೆಳಗಿನ ಬಸ್ಸಿಗೆ ಬಂದಿಳಿಯೋರು. ಪೂಜೆ ನಡೆಯೋವಾಗ ಹೊರಗೇ ನೋಡ್ತಾ ಯಾರು ಬಂದ್ರು ಯಾರಿಲ್ಲ ಅಂತ ಗಮನಿಸ್ತ ಇರ್‍ತಿದ್ವಿ. ಪೂಜೆ ಮುಗ್ದಿದ್ದೇ ಅಲ್ಲೇ ಹತ್ರಗವಿಲಿದ್ದ ಶಿಲುಬೆಗೇರಿದ ಕ್ರಿಸ್ತ ಮೂರ್ತಿಯ ಹತ್ರ ಹೋಗ್ತಿದ್ವಿ.

*'ಗಂಟೆ ನಾದ ಕೇಳಿ ನಿಂದೆ*

*ನಿಮ್ಮ ಗುಡಿಯ ಹುಡುಕಿ ಬಂದೆ*

*ನಿಮ್ಮ ಕಾಣಲೋಡಿ ಬಂದೆ*

*ನಿಮ್ಮ ವಾಕ್ಯ ಕೇಳಲು*

*ಜಗದಿ ನಿಮ್ಮ ಸಾರಲು..'*

ಅಂತ ಭಜನೆ ಹೇಳ್ಕೊಂಡು ಹೋಗ್ತಿದ್ವಿ. ಅಲ್ಲೋಗಿ ಪ್ರಾರ್ಥನೆ ಮಾಡ್ತಿದ್ವಿ. ಅಲ್ಲಿ ಹುಂಡಿಗೆ ನಮ್ಮತ್ರ ಇದ್ದಿದ್ದನ್ನ ಹಾಕಿದ್ಮೇಲೆ ನಾವು ತಂದಿದ್ರಲ್ಲಿ ಉಳ್ದ ಅನ್ನ ತಿಂತಿದ್ವಿ. ತಿಂದಾದ್ಮೇಲೆ ಅಲ್ಲಿದ್ದ ಬೇವು, ಹುಣಸೆ ಗಿಡದ ಎಲೆಗಳನ್ನ ಕಿತ್ತು ನಮ್ಮ ಡಬ್ಬೀಲಿ ಹಾಕ್ಕೋತಿದ್ವಿ. ಹೆಂಗಸ್ರು ಹಂಗೇ ಮಾಡ್ತಿದ್ರು. ನಾವೂ ಹಂಗೇ ಮಾಡ್ತಿದ್ವಿ. ಆ ಎಲೆಗಳು ಶುದ್ಧ, ಪವಿತ್ರ ಮತ್ತೆ ಅವಕ್ಕೆ ಔಸ್ತಿ ಗುಣ ಇದೆ ಅಂತ ಅವರು ಹೇಳ್ತಿದ್ರು. ಅವನ್ನು ಮನೇಲಿ ಇಟ್ಟರೆ ಕ್ರಿಮಿಕೀಟ ಕಚ್ತ ಇರ್ಲಿಲ್ಲ. ಅವನ್ನ ಮನೆ ಬಾಗ್ಲವಾಡಕ್ಕೆ ತೋರಣದಂಗೆ ಕಟ್ಟಿದ್ರೆ

ಯಾವುದೇ ಭೂತ ಪ್ರೇತ ಪಿಶಾಚಿನೂ ಮನೆ ಒಳಗೆ ಬರಲ್ಲ.

ಪೂಜೆ ಆದ್ಮೇಲೆ ನಡಕೋತ ಮನೆಗೆ ಹೋಗ್ತಿದ್ವಿ. ಅಷ್ಟೊತ್ತಿಗೆ ಸೂರ್ಯ ಕೆಂಡದಂಗೆ ಉರಿತಿದ್ದ. ನಾವು ಚಪ್ಲಿನ್ನೋ ಮತ್ತೊಂದನ್ನೋ ಹಾಕ್ಕಂಡಿರ್ತಿರ್ಲಿಲ್ಲ. ಧೂಳು ಕೂಡ ಸುಡ್ತಿತ್ತು. ನಾವು ಒಂದ್ಸಲ್ಪ ದೂರ ಓಡಿ, ಮತ್ತೆ ಸ್ವಲ್ಪ ನಡ್ದು, ನೆರಳಲ್ಲಿ ಸ್ವಲ್ಪೊತ್ತು ಕೂತು, ಕೊನೇಗೆ ಮನೆಗೆ ಬರ್ತಿದ್ವಿ. ಶಾಲೆಗೂ ಅವತ್ ರಜ ಕೊಟ್ಟಿರ್ತಿದ್ರು.

ಚಿನ್ನಾಮಲ್ಯೆಗೆ ಪ್ರತಿ ತಿಂಗಳೂ ಹೋಗೋದಲ್ದೆ ಪ್ರತಿ ಮೇ ತಿಂಗ್ಳಲ್ಲಿ ಅಲ್ಲಿ ಪೇಸ್ತು ಇರ್ತಿತ್ತು. ಸುತ್ತಮುತ್ಲ ಹಳ್ಳಿಯೋರೆಲ್ಲ ಬರ್ತಿದ್ರು. ಒಂಭತ್ ದಿನ ಮುಂಚೆನೇ ಬಾವುಟ ಹಾರಸ್ತಿದ್ರು. ಒಂಭತ್ನೇ ದಿನ ರಾತ್ರಿ ಮತ್ತೆ ಹತ್ತನೇ ದಿನ ಅಲ್ಲಿ ಪೂಜೆ ಇರದು.

ಒಂಭತ್ನೇ ದಿನ ಸಂಜೆ ಹೊತ್ಗೆ ಲೆಕ್ಕಿಲ್ಲದಷ್ಟು ಜನ ಎತ್ತಿನ ಗಾಡಿಲಿ, ಬಸ್ನಲ್ಲಿ ಅತವಾ ನಡಕಂತ ಬರ್ತಿದ್ರು. ತಂ ಜೊತೆ ಅಲ್ಲೇ ಕಡಿಯಕ್ಕೆ ಕೋಳಿನೋ, ಆಡನೋ, ಹಂದಿನೋ ತಂದಿರ್ತಿದ್ರು. ಆಮೇಲೆ ಸೌದೆ, ಮಸಾಲೆ, ಪಾತ್ರೆ, ಬಾಣ್ಲೆನೂ ಸಹಾ.

ಆಗ ಚಿನ್ನಾಮಲ್ಯೆ ಕಳಕಳೆಯಾಗಿ ಜನರ ಓಡಾಟ, ಗಿಜಿಗಿಜಿಯಿಂದ ತುಂಬಿಬಿಡೋದು. ಚರ್ಚಿನ ಸುತ್ತಲೂ ಚಪ್ರ ಹಾಕಿ ಅದ್ನ ಬಾಳೆಕಂಬದಿಂದ ಸಿಂಗಾರ ಮಾಡಿ ಟ್ಯೂಬ್ ಲೈಟಿಂದ ಅಲಂಕಾರ ಮಾಡಿರೋರು. ಅಂಗಡಿಯೋರಿಗೆ ಅದೆಂಗೆ ಇದ್ರ ಸುಳುವು ಸಿಗ್ತಿತ್ತೋ ಆ ದೇವನೇ ಬಲ್ಲ, ಸರೀ ಎರಡು ದಿನ ಮೊದ್ಲೆ ಬಂದು, ಅಲ್ಲೆಲ್ಲ ಜಾಗ ಸಮ ಮಾಡಿ ಅಂಗಡಿ ಹಾಕೇ ಬಿಡ್ತಿದ್ರು.

ಅಂಗ್ಡಿನ ಸಾಲುಸಾಲಾಗಿ ಹಾಕಿರೋರು: ಹೂವಿನಂಗಡಿ, ಬಳೆ ಅಂಗಡಿ, ಹಣ್ಣಿನಂಗಡಿ, ಮೂರ್ತಿಗಳು ಸಿಗೊ ಅಂಗಡಿ, ಇಡ್ಲಿ–ದೋಸೆ ತಿಂಡಿ ಅಂಗಡಿ ಹಿಂಗೇ. ಜೊತೆಗೆ ನೀರಾದು ಭರಾಟೆ ವ್ಯಾಪಾರ ನಡೆಯದು. ಅದ್ರ ಜೊತೆಗೇ ಸೀಯಾಳ, ತಾಳೆಬೊಂಡ, ವಡಾ, ಐಸ್ಕ್ರೀಮು, ಹಲ್ವ, ಕೇಸರಿಬಾತ್, ಪಾಯ್ಸ ಹಿಂಗೇ.

ಜನದಟ್ಟಣೆ ಅಂದ್ರೆ ತಡಕಳಕ್ಕಾಗ್ತಿರ್ಲಿಲ್ಲ. ಎಲ್ಲ ಎತ್ತು, ಗಾಡಿಗಳನ್ನ ಒಂದೇ ಕಡೆ ಕಟ್ಟಾಕಿರ್ತಿದ್ರು. ಪಶುಪಕ್ಷಿಗಳು ಇನ್ನೇನು ನಮ್ಮನ್ನ ಕಡಿತಾರೆ ಅನ್ನೋದು ಗೊತ್ತಿಲ್ದೆ ಏನೇನೋ ಗದ್ಲ ಮಾಡ್ತ, ತಿಂತಾ ಗೌಜಿ ಹಾಕೋವು. ಎಲ್ನೋಡು, ಜನ ಯಾರ್ನೋ ಕರಿತಾ ಅವರತ್ರಕ್ಕೆ ಹೋಗ್ತಿರೋರು. ಈಗ ಹಂಗಿಲ್ಲ. ಆಗ ಒಂದು ಎಳ್ಳುಕಾಳಷ್ಟೂ ಜಾಗ ಇರ್ತಿರಲಿಲ್ಲ, ಅಷ್ಟು ಜನ.

ಸಂಜೆ ಚರ್ಚಲ್ಲಿ ಜಪ ಮತ್ತೆ ಪ್ರಾರ್ಥನೆ ಇರದು. ಯಾರು ನುಸುಳ್ಕಂಡು ಚರ್ಚೊಳಗೆ ಹೋಗ್ತಾರೋ ಅವ್ರಿಗೆ ಅಲ್ಲಿ ಪ್ರಾರ್ಥನೆ ಮಾಡಕ್ಕಾಗ್ತಿತ್ತು. ಉಳದೋರು ಮಲಗಿ ನಿದ್ದೆ ಮಾಡ್ತಿದ್ರು. ಹುಡುಗ್ರು ಹೊಸಂಗಿ ಹಾಕ್ಕಂಡು, ಎಣ್ಣೆನ ಕೂದ್ಲಿಂದ ಇಳಿಸ್ತ ಸುಮ್ನೆ ಅಂಗ್ಡಿ

ಅಂಗ್ಡಿ ಅಲೆಯದು. ಹುಡುಗೀರೂ ಅಷ್ಟೆ, ಹೊಸಬಟ್ಟೆ ಹಾಕ್ಕಂಡಿರೋರು, ಹೂ ಮುಡ್ಕಂಡು ಹರಟೆ, ಸುದ್ದಿ, ಕಿಸಕಿಸ ಪಿಸಪಿಸ..

ಮುದುಕ್ರು ಇಡಿ ದಿನ ಕೂತಲ್ಲೆ ಕೂತಿರೋರು. ಅಡಕೆ ಜಪ್ಪತ, ಸಾಮಾನು ನೋಡ್ಕತ, ತಮ್ಮ ಜಾಗ ಯಾರೂ ಹಿಡಿದಂಗೆ ನೋಡ್ಕಳೋರು. ಆವಾಗೀವಾಗ ಚಪ್ಪರದ ತೊಲೆಗೆ, ಮರದ ಕೊಂಬೆಗೆ ಕಟ್ಟಿದ ಜೋಲೀಲಿ ಮಲಗಿದ್ದ ಮಕ್ಳು ಎದ್ದು ಹೊಯ್ಕಳೋವು. ಎಷ್ಟು ಗದ್ಲ ಇರ್ತಿತ್ತು ಅಂದ್ರೆ ಕೆಲವ್ರಿಗೆ ಮಕ್ಳು ಕೂಗಿದ್ದು ಕೇಳ್ತನೆ ಇರ್ಲಿಲ್ಲ. ಜೋಲಿ ಯಾಕೋ ಹಂದಾಡ್ತ ಕುಣದು ಹಾರ್‍ತಿದೆಯಲ್ಲ ಅಂತ ಹಳೆಯೋರು ನೋಡ್ದಾಗ್ಲೆ ಗೊತ್ತಾಗ್ತ ಇದ್ದಿದ್ದು. ಅವರು ತೂಗಿತೂಗಿ ಮಲಗ್ಸೋರು.

ಬೆಳಬೆಳಗ್ಗೆ ಪವಿತ್ರ ಮೂರ್ತಿಗಳ ಮೆರವಣಿಗೆ ಇರೋದು. ತಮಟೆ ಹೊಡೆಯೋರು ನಿದ್ದೆ ಮಾಡಿರ್ತಿದ್ರೋ ಇಲ್ವೊ, ಮೆರವಣಿಗೆ ಮುಂದೆ ನಿಂತು ಬಾರ್‍ಸೋರು. ಅವರ ಹಿಂದೆ ಪೆಟ್ರೊಮ್ಯಾಕ್ಸ್ ದೀಪ ಹಿಡ್ಕಂಡೋರು. ಆಮೇಲೆ ಮೂರ್ತಿಗಳ್ನ ಹಿಡ್ದಿರೋರು. ಮೆರವಣಿಗೆ ಸುತ್ತ ಹೋಗ್ತಿತ್ತು. ನಡುನಡುವೆ ಪಟಾಕಿ ಹಚ್ಚೋರು. ಕೆಲವು ಸಲ ದೊಡ್ಡದೊಡ್ಡ ಸಿಡಿಮದ್ದು ಸುಡೊ ಪ್ರದರ್ಶನ ಕೂಡ ಇರ್ತಿತ್ತು. ಕೆಲವು ಜನ ಮೆರವಣಿಗೇಲಿ ಹೋಗೋರು. ಆದ್ರೂ ನಾಕೈದು ಜನ ಪಾಪ ನಿವೇದನೆ ಪೆಟ್ಗೆ ಹತ್ರ ಕಾಯ್ತಿರೋರು. ಆದ್ರೆ ಅಷ್ಟು ಗದ್ಲ ಇರೋವಾಗ ಪಾಪ ನಿವೇದನೆ ಹೆಂಗೆ ಸಾಧ್ಯ? ನಾವೇನು ಹೇಳ್ತಿದ್ವಿ ಅಂತ ಪಾದ್ರಿಗೆ ಗೊತ್ತಾಗ್ತಿರ್ಲಿಲ್ಲ, ಪಾದ್ರಿ ಹೇಳದು ನಮ್ಗೆ ತಿಳಿತಿರ್ಲಿಲ್ಲ. ಏನೇ ಆಗ್ಲಿ ಅದು ನಂ ಕರ್ತವ್ಯ ಅಂತ ಅಂದ್ಕಂಡಿದ್ದೆ ನಾನು. ಉಳದೋರ ಜೊತೆ ಲೈನಲ್ಲಿ ನಿಂತು ನನ್ನ ಸರದಿ ಬಂದಾಗ ಹೋಗ್ತಿದ್ದೆ. ಇಲ್ಲಾಂದ್ರೆ ನಮ್ಮಮ್ಮನೂ, ಅಜ್ಜಿನೂ ಇಷ್ಟು ಪವಿತ್ರ ದಿನ ಪಾಪ ನಿವೇದನೆ ಮಾಡಕ್ಕೆ ಆಗಲ್ವ ಅಂತ ಬೈತಿದ್ರು. ಅದ್ಕೆ ಯಾವಾಗ್ಲೂ ಅವರ ಜೊತೆ ಹೋಗ್ತಿದ್ದೆ.

ಹಿಂದಿನ ದಿನ ಜನ ತಮ್ಜೊತೆ ಸ್ವಲ್ಪ ಬುತ್ತಿ ಕಟ್ಕಂಬಂದಿರೋರು, ಅದ್ರ ಜೊತೆ ವಡ ತಿಂದು ನಿದ್ದೆ ಮಾಡೋರು. ಬೆಳಗ್ಗೆ ಚರ್ಚಲ್ಲಿ ಪೂಜೆ ಇರದು. ಕೆಲವ್ರು ನಿದ್ದೆ ಆಗ್ದೆ ತೂಕಡಿಸ್ತ ಪೂಜೆಗೆ ಬಂದು ಹಂಗೇ ಪವಿತ್ರ ಪ್ರಸಾದ ತಗೋಳೋರು. ಆಗ ಅಲ್ಲ ಅಂದ್ರೆ ಮತ್ತೆ ಸಂಜೆ ಏಳು ಗಂಟೆ ಪೂಜೆ ಆದ್ಮೇಲೆ ಗವಿ ಹತ್ರನೇ ತಗೋಬೇಕಿತ್ತು. ಆದ್ರೆ ಏಳು ಗಂಟೆ ಪೂಜೆಗೆ ಹೋದ್ರೆ ಅದು ಮುಗ್ಸಿ ಬೆಳಗಿನ ಅಡಿಗೆ ಮಾಡಕ್ಕೆ ಏಳದು ಕಷ್ಟ ಆಗಿರದು. ಅದಕ್ಕೆ ಹೆಂಗಾರೂ ಕಷ್ಟಪಟ್ಟು ಬೆಳಗ್ಗೆನೇ ಪೂಜೆಗೆ ಹೋಗಿ ಮುಗಿಸ್ಕಂಡು ಬಿಡೋರು.

ಏಳು ಗಂಟೆಗೆ ಗವೀಲಿ ಪೂಜೆ. ಅದ್ನ ಗುಹಾ ಪೂಜೆ ಅಂತ ಕರೀತಿದ್ವಿ. ಪೂಜೆ ಮೇಲಮೇಲಕ್ಕೆ ಆಗ್ತ ಹೋಗ್ತಿತ್ತು. ಜನ ಬಣ್ಣಬಣ್ಣದ ಬಟ್ಟೆ ಹಾಕ್ಕಂಡು ಬೆಟ್ಟದ ಬುಡದಿಂದ ಮೇಲಿನತಂಕ ಮೆಟ್ಲ ಮೇಲೆ ಕೂತಿರೋರು. ನಂಗೆ ಅದು ನೋಡಕ್ಕೆ ಯಾವತ್ತೂ ಚಂದ

ಅನಸೋದು. ಗವಿಯಲ್ಲಿ, ತುತ್ತತುದೀಲಿ, ಎರಡು ಮೂರು ಪಾದ್ರಿಗಳು ಪೂಜೆ ಮಾಡ್ತಿರೋರು. ಅಲ್ಲಿ ಮೇಲೆ ಹತ್ತಿ ಪ್ರಸಾದ ತಗಳಕ್ಕೆ ಸಿಕ್ಕಾಪಟ್ಟೆ ಹುಶಾರಿ ಆಗಿರ್ಬೇಕು, ಇಲ್ದಿದ್ರೆ ಸಾಧ್ಯನೇ ಇಲ್ಲ. ಅದು ಕಡಿದಾಗಿತ್ತು, ಜಾರ್ತಿತ್ತು. ಆದ್ರೂ ಹೆಂಗೆಂಗೊ ಪ್ರಸಾದ ತಗತಿದ್ವಿ.

ಗುಹಾಪೂಜೆ ಶುರುವಾದ್ದೇ ಅಲ್ಲಿಲ್ಲಿ ಬಿದ್ದ ಕಲ್ಲು ಒಟ್ಟುಮಾಡಿ ಅಡಿಗೆ ಶುರು ಮಾಡ್ತಿದ್ರು. ಎಲ್ಲ ಕಡೆ ಹೊಗೆ ಮೋಡ. ಕೋಳಿಆಡುಗಳ ಕಡಿಯುವಾಗ ಅವು ಅರಚೊ ಶಬ್ದಕ್ಕೆ ಅಯ್ಯೋ ಪಾಪ ಅನಸದು. ಅದ್ರಲ್ಲು ಕೋಳಿ ಕೂಗಿ ಅರಚಿದರೆ ಸಾಕು, ಸುತ್ತಮುತ್ತಿನ ಊರೋರೆಲ್ಲ ಎಚ್ಚರಾಗಿ ಬಂದುಬಿಡಬೇಕು. ಅಷ್ಟು ಗದ್ಲ. ಹಂದಿ, ದನ ಕಡದೋರು ಉಳದೋರ ಜೊತೆ ಮಾಂಸ ಹಂಚ್ಕತಿದ್ರು. ಸೌದೆ ತರದೆ ಇದ್ದೋರು ಸುತ್ತಮುತ್ತ ಬಿದ್ದಿರೊ ಮುಳ್ಳುಕಂಟಿ ಪುರುಲೆ ಒಟ್ಟು ಮಾಡ್ತಿದ್ರು. ಕೆಲ ಗಣಸ್ರು ಮರ ಹತ್ತಿ ಒಣಗಿದ ಹರೆ ಹೊಡೆಯೋರು. ಅನ್ನ ಆಗಿ ಬಾಡಿನೆಸರು ಕುದಿಯೋದ್ರಲ್ಲಿ ಎಲ್ಲರಿಗು ಯಮ ಹಸಿವು. ಸ್ವಲ್ಪ ಹುಲ್ಲು ಹರಡಿ ಅದ್ರ ಮೇಲೆ ಒದ್ದೆ ಬಟ್ಟೆ ಹಾಸಿ ಬಾಗಿದ ಅನ್ನನ ತಣಿಲಿ ಅಂತ ಹರಡೋರು. ಕೆಲವು ಸಣ್ಣಪಿಳ್ಳೆಗಳಂತೂ ಹಸ್ತು ಬರೀ ಅನ್ನನೇ ಎತ್ಕಂಡು ತಿಂದುಬಿಡೋವು.

ಹತ್ತು ಹನ್ನೊಂದು ಗಂಟೆ ಹೊತ್ಗೆ ಎಲ್ಲ ಸಾಲಿಗೆ ಕೂತು ತಿನ್ನೋರು, ಉದುರಿ ಬೀಳೋವಷ್ಟು. ಎಲ್ಲ ತಿಂದು ಮುಗ್ಸದ್ರಲ್ಲಿ ಬೇಡೋರು, ನರಿ ಕುರವ ಅಲೆಮಾರಿಗಳು ಬಂದು ಬಾಯಲ್ಲಿ ತುತ್ತಿಡಕ್ಕೆ ಬಿಡದಂಗೆ ಪೀಡಿಸೋರು. ಊಟ ಮುಗ್ದಿದ್ದೆ ಉಳದ ಅನ್ನ, ಬಾಡಿನೆಸರು, ಗಸಿನೆಲ್ಲ ಪಾಲು ಮಾಡಿ ಅವ್ರಿಗೆ ಹಂಚೋರು. ಮದ್ಯಾನದ ಹೊತ್ಗೆ ಏರುಬಿಸ್ಲಲ್ಲಿ ಎತ್ತಿನ ಕೊರಳ್ಗೆ ನೊಗ ಕಟ್ಟಿ ಗಾಡಿ ಹೊರಡಸ್ತಿದ್ರು. ಸಂಜೆ ಸೂರ್ಯ ಮುಳುಗೋ ಹೊತ್ಗೆ ಮನೆ ಸೇರಿರ್ತಿದ್ವಿ.

ವರ್ಷೊರ್ಷನೂ ಇದು ನಡಿತಿದೆ. ಆದ್ರೂ ಅವರ್ ಲೇಡಿಗೆ ನಾವು ತೋರ್ಸೊ ಭಕ್ತಿ ಹಾಕ್ಕಳೊ ಹೊಸ ಬಟ್ಟೇಲಿ, ಆಗಷ್ಟೆ ಕಡಿದು ಅಟ್ಟುಣ್ಣುವ ಕೋಳಿ, ಆಡು, ದನದ ಬಾಡೂಟದಲ್ಲಿ ಮಾತ್ರ ಎದ್ದು ಕಾಣ್ತ ಇದೆ. ಹಿಂಗೇ ಮುಂದುವರಿತಾ ಇದೆ. ಇತ್ತೀಚ್ಗೆ ಚಿನ್ನಾಮಲೈ ಚರ್ಚಿನ ಆಚೀಚೆ ಕಳ್ಳು, ಸೇಂದಿ, ಸಾರಾಯಿನು ಭಟ್ಟಿ ಇಳಿಸ್ತಾರೆ ಅಂತ ಕೇಳ್ದೆ. ಜನ ಬರುವಾಗ್ಲೆ ಕುಡದು ಬರ್ತಾರೆ. ಅಲ್ಲಿ ಜಗಳ ಶುರುವಾಗಿ ಅಸಹ್ಯ ಗದ್ಲದಲ್ಲಿ ಕೊನೆಯಾಗುತ್ತೆ.

ಕಾನ್ವೆಂಟ್ ಸೇರೊ ತಂಕ ನಾನೂ ಚಿನ್ನಾಮಲೈಗೆ ಪ್ರತಿ ಪೇಸ್ತಿಗೆ ಹೋಗಿ ಪೂಜೆ ಮಾಡ್ತಿದ್ದೆ. ಸಣ್ಣೋಳಿದ್ದಾಗ ನನ್ನ ಧರ್ಮಶ್ರದ್ಧೆ ಹೊಸ ಬಟ್ಟೆ ತೊಟ್ಟು, ಗಾಡಿ ಹತ್ತಿ, ತಿಂಡಿ ತಿಂದು, ಊಟ ಮಾಡಿ, ಬಳೆ–ಬೊಂಬೆ–ಮೂರ್ತಿಗಳನ್ನ ತಗೊಳೋದ್ರಲ್ಲಿ ಇತ್ತು. ಸ್ವಲ್ಪ

ದೊಡ್ಡೋಳಾದ್ಮೇಲೆ ಕೂಡ ಹೊಸ ಬಟ್ಟೆ ಹಾಕ್ಕಂಡು ಗೆಳತೀರ ಭೇಟಿ ಆಗಿ ಎಲ್ಲ ಒಟ್ ಸೇರಿ ತಿರುಗಾಡೋದ್ರಲ್ಲೇ ಆನಂದ ಇತ್ತು. ಆದರೆ ನಂಗೆ ಸ್ವಲ್ಪ ಜ್ಞಾನ ಬಂದ್ಮೇಲೆ, ಬುದ್ಧಿ ಬಂದ್ಮೇಲೆ ಪೇಸ್ತಿನ ಹೆಸರಲ್ಲಿ ಜನರ ಮಧ್ಯ ನೂಕುನುಗ್ಗಾಟಕ್ಕೆ ಹೋಗಕ್ಕಿಂತ ನಾನು ಮನೇಲೇ ಕೂತು ಪೂಜೆ ಮಾಡ್ಬೋದು ಅನಿಸ್ತು. ಕಾನ್ವೆಂಟ್ ಸೇರಿದ ಮೇಲೆ ಮತ್ತೆ ಈ ಪೇಸ್ತಿಗೆ ಹೋಗೊ ಅವಕಾಶ ಸಿಕ್ಕಲಿಲ್ಲ. ನಾನದ್ರ ಬಗ್ಗೆ ಯೋಚ್ನೆನೂ ಮಾಡಲಿಲ್ಲ, ಅದ್ರ ಬಗ್ಗೆ ಬೇಜಾರೂ ಇಲ್ಲ.

ನಂ ಹಳ್ಳೀಲಿ ಈಸ್ಟರ್ ಹಬ್ಬನ ಭಾಳ ಜೋರಾಗಿ ಮಾಡ್ತಿದ್ರು. ಮನೆಮನೆಗೆ ತಿರುಗಿ ವರ್ಗಿಣಿ ಎತ್ತಿ ಆ ದುಡ್ಡಿಂದ ಮೆರವಣಿಗೆ, ಡ್ರಂ ತರಸೋದು ಅಂತ ಮಾಡ್ತಿದ್ರು. ಆದ್ರೆ ಅದಕ್ಕೆ ಯಾವಾಗ್ಲೂ ನಾವು, ಅಂದ್ರೆ ದಲಿತ ಕ್ರೈಸ್ತರು ಮಾತ್ರ ದುಡ್ಡು ಹಾಕ್ತಿದ್ದಿದ್ದು. ನಾಡಾರ್‌ಗಳು ದುಡ್ಡೂ ಹಾಕ್ತಿರಲಿಲ್ಲ, ಮೆರವಣಿಗೇಲೂ ಬರ್‍ತಿರಲಿಲ್ಲ. ಈಸ್ಟರಿಗಿಂತ ಮೊದ್ಲು, ಗುಡ್ ಫ್ರೈಡೆ ದಿನ ಇಡೀ ದಿನ ಪ್ರಾರ್ಥನೆ ಇರ್‍ತಿತ್ತು. ನಾನು ನವ್ ಹಳ್ಳಿ ಪ್ರೈಮರಿ ಶಾಲೆಗೆ ಹೋಗುವಾಗ ಮತ್ತೆ ಕಾನ್ವೆಂಟ್ ಹೈಸ್ಕೂಲಿಗೆ ಹೋಗುವಾಗ ಗುಡ್ ಫ್ರೈಡೆ ಸರ್ವೀಸ್‌ಗೆ ಹೋಗ್ಲೇಬೇಕಿತ್ತು. ಯಾರಾದ್ರೂ ಒಬ್ರು ಟೀಚರ‍್ರು ಒಂದ್ ಪುಸ್ತಕ ತೆಗೆದು ಅದರಿಂದ ಪ್ರಾರ್ಥನೆ ಹೇಳ್ತಿದ್ರು, ಕೊನೆಗದು ಎಳದೂ ಎಳದೂ ಸ್ತೋತ್ರದಂಗೆ ಹೇಳ್ಬೇಕಾಗಿತ್ತು. ಕೆಲವು ಸಲ ಅದು ಒಂದೇ ರಾಗದಂಗೆ ಕೇಳದು. ಎಲ್ರಿಗು ನಿದ್ದೆ ಬಂದ್ಬಿಡದು ನಿಜವಾಗಿ. ಆದ್ರೆ ಯಾರಾದ್ರು ಶಾಂತಿಯಿಂದ ನಿದ್ದೆ ಮಾಡಕ್ಕಾಗುತ್ತಾ? ಸಿಸ್ಟರ್‌ಗಳು ಹಂಗೆ ಕಾಯ್ತಿದ್ರು. ಕೆಲವು ಸಲ ಸಿಸ್ಟರುಗಳೇ ತೂಕಡಿಸೋರು. ಆದ್ರೆ ನಾವು ಹೋಗಿ ಅವ್ರನ್ನ ಹೊಡೆಯೋಕಾಗ್ಲಿ ಚೂಟೋದಕ್ಕಾಗ್ಲಿ ಸಾಧ್ಯನಾ? ನಾವು ಈಸ್ಟರ್ ದಿನ ಮಧ್ಯರಾತ್ರಿ ಪ್ರಾರ್ಥನೆಗೆ ಹೋಗ್ತ ಒಳ್ಳೆ ಬಟ್ಟೆ ಹಾಕ್ಕಂಡು, ಹೂ ಮುಡ್ಕಂಡು ಹೋಗ್ತಿದ್ವಿ. ಆಗ ಚರ್ಚಿನ ಹೊರಗೆ ಪೂಜೆ ನಡಿತಿತ್ತು. ಎಲ್ಲ ಕೆಳಗೆ ಮಲಗಿ ನಿದ್ದೆ ಮಾಡಿಬಿಡ್ತಿದ್ರು. ಬೇವಿನ ಗಿಡದ ಮೇಲಿಂದ ತಣ್ಣನೆ ಶುದ್ಧ ಗಾಳಿ ಬೀಸ್ತಿತ್ತು. ನಡುರಾತ್ರಿ ಜೀಸಸ್ ಮರುಹುಟ್ಟು ಪಡೆದ ಗಳಿಗೆ ಸಿಸ್ಟರುಗಳು ಎಲ್ರನ್ನು ಅವರವರು ಕೂತ ಚಾಪೆಯಿಂದನೇ ಹೊಡೆದು ಎಬ್ಬಿಸ್ತಿದ್ರು. ಇದ್ದಕ್ಕಿದ್ದಂತೆ ಎಲ್ಲ ಗಂಟೆಗಳೂ ಒಂದೇ ಸಲ ಹೊಡ್ಕಳೋವು – ಚರ್ಚಿನ ದೊಡ್ಡ ಗಂಟೆ, ಪೂಜೆ ಹೊತ್ಗೆ ಬಾರ್‍ಸಕ್ಕೆ ಅಂತಿದ್ದ ಸಣ್ಣಸಣ್ಣ ಗಂಟೆಗಳು. ಇಲ್ಲೀವರೆಗೂ ಮತ್ತೆಹುಟ್ಟಿ ಬಂದ ಕ್ರಿಸ್ತ ಮೂರ್ತಿಯನ್ನು ಮುಚ್ಚಿದ್ದ ಬಿಳೀಬಟ್ಟೆನ ಒಬ್ರು ಟೀಚರ್ ಓಡೋಗಿ ಎಳೆದು ಸರಿಸೋರು. ಆಗ ನಮ್ಮೆದುರು ಜೀಸಸ್ ನಿಂತಿರ್‍ತಿದ್ರು, ಸಾವಿನಿಂದ ಮತ್ತೆ ಎದ್ದು ಬಂದು. ನಾವೆಲ್ಲ ನಮಸ್ಕಾರ ಮಾಡಿ ಅವನನ್ನ ಪೂಜೆ ಮಾಡ್ತಿದ್ವಿ. ಎಲ್ಲ ಗಂಟೆಗಳ್ನೂ ಒಂದೇ ಸಲ ಬಾರಿಸಿ, ಮತ್ತೆ ಹುಟ್ಟಿ ಕ್ರಿಸ್ತ ನಮ್ಮೆದುರು ನಿಂತಾಗ ನಂಗೆ ಏನೋ ಒಂದು ಮೈಯೊಳಗೆಲ್ಲ ಸುಳಿದಾಡಿದಂಗಾಗಿ ರೋಮಾಂಚನ ಆಗ್ತಿತ್ತು. ನಂಗೆ ದೇವ್ರು ನಿಜವಾಗ್ಲೂ ಸ್ವರ್ಗದಿಂದ ಇಳಿದು ಬಂದನೇನೋ ಅನಿಸ್ತಿತ್ತು.

ಪೂಜೆ ಮಾಡುವಾಗ ತುಂಬ ಸಲ ಮೋಂಬತ್ತಿ ಹಚ್ಚಕ್ಕೆ, ಆರ್ಸಕ್ಕೆ ಹೇಳ್ತಿದ್ರು. ನಂಗೆ ನಂದು ಉರೀತಾನೇ ಇರ್ಬೇಕು ಅನ್ನೋ ಆಸೆ. ಆದ್ರೆ ಸಿಸ್ಟರು ಬಿಡ್ತಿರ್ಲಿಲ್ಲ. ನಮ್ಮ ಮೋಂಬತ್ತಿ ನಾವು ಉರುಬಿ ಆರಿಸ್ಬೇಕಿತ್ತು. ಒಂದು ಸಣ್ಣ ಮಣ್ಣುಗುಡ್ಡೆ ಮಾಡಿ, ಅದ್ರ ಮೇಲೆ ಮೋಂಬತ್ತಿ ಇಟ್ಟು ಅದ್ರ ಉರಿ ಜೊತೆ ಆಟ ಆಡದಂದ್ರೆ ಒಂಥರಾ ಗಮ್ಮತ್. ಪೂಜೆ ತನ್ನಂತೆ ತಾನು ಮುಂದುವರೀತಾ ಇರ್ತಿತ್ತು. ಪಾದ್ರಿ ತಮ್ಮ ದೊಡ್ಡ ಈಸ್ಟರ್ ಮೋಂಬತ್ತಿ ಇಟ್ಕಂಡಿರೋರು. ಪೂಜೆ ಮುಗ್ದಿದ್ದೇ ತಡ ಎಲ್ಲ ತಮ್ಮ ಚಮಚ ಪಾತ್ರೆ ಹಿಡ್ಕಂಡು ಓಡೋರು. ಅಂತೂ ಕೊನೆಗೆ ಎಲ್ಲ ಜಗಳದಲ್ಲಿ ಕೊನೆಯಾಗೋದೇ. ಹೊಸ ಬೆಂಕಿನ, ಮತ್ತೆ ಪವಿತ್ರ ನೀರನ್ನ ನಮಗೆ ಎಷ್ಟಾಗುತ್ತೊ ಅಷ್ಟು ಬಾಚಿ ತಗಂಡು ಮನೆಗೆ ಹೋಗದು.

ಮನೆಗೆ ಹೋದ್ದೇ ಸ್ವಲ್ಪ ಪವಿತ್ರ ನೀರನ್ನು ತುಂಬ ಭಕ್ತಿಯಿಂದ ಕುಡೀಬೇಕು. ಉಳ್ದಿದ್ದನ್ನ ಮನೆಯಿಡಿ ಅಲ್ಲಿಲ್ಲಿ ಚಿಮುಕ್ಸಬೇಕು. ಹೊಸ ಬೆಂಕಿನ ಒಲೇಲಿ ಹಾಕ್ತಿದ್ವಿ. ಬೆಳಿಗ್ಗೆ ಎದ್ದು ಇಡ್ಲಿ ಮಾಡ್ದಾಗ ಅದೇ ಬೆಂಕಿಯಿಂದ್ಲೆ ಅಡಿಗೆ ಒಲೆ ಹೊತ್ತಿಸ್ತ ಇದ್ದಿದ್ದು. ಇಡೀ ದಿನ ಒಳ್ಳೊಳ್ಳೆ ಅಡಿಗೆ ತಿಂಡಿ ಮಾಡಿ ತಿಂತಿದ್ವಿ.

ಸಂಜೆ ಮನೆಯಿಂದ ಚಪ್ಪಾಳೆ ತಟ್ತ, ತಮಟೆ ಬಾರಿಸ್ತ ಚರ್ಚಿಗೆ ಹೋಗ್ತಿದ್ವಿ. ಅಲ್ಲಿ ಆಶೀರ್ವಾದ ಇರದು. ಅದಾದ ಕೂಡ್ಲೆ ಹೆಂಗಸ್ರು ರೌಂಡಾಗಿ ನಿಂತು ಕುಮ್ಮಿ ಹಾಡಿಗೆ ಕುಣೀತಿದ್ರು.

*'ಹಸಿರಿನ ಬನದಲಿ ಹೂವರಳಿ*

*ಸುಂದರ ಪರಿಮಳ ಸೂಸುತಿದೆ*

*ಅರಳಿದ ಹೂಗಳು ಗುಡಿ ಸೇರಿ*

*ಸೃಷ್ಟಿಯ ಒಡೆಯನ ಸೇರುತಿವೆ*

*ಬನ್ನಿರಿ ಹೋಗುವ ಆಲಯಕೆ*

*ಹೋಗುವ ಕ್ರಿಸ್ತನ ಸನ್ನಿಧಿಗೆ'*

ಅಂತ ಶುರುವಾಗೊ ಹಾಡು. ನಾವೆಲ್ಲ ಸುತ್ತ ನಿಂತು ಅದ್ನ ನೋಡ್ತ ಇದ್ವಿ. ಗಂಡಸ್ರು ಚಡುಗುಡು ಆಡ್ತಿದ್ರು. ಸಂಜೆ ಮತ್ತೆ ಹುಟ್ಟಿಬಂದ ಕ್ರಿಸ್ತನ ಮೂರ್ತಿನ ರಥದಲ್ಲಿಟ್ಟು, ಅಲಂಕಾರ ಮಾಡಿ, ಪಾದ್ರಿ ಆಶೀರ್ವಾದ ಮಾಡಿದ ಮೇಲೆ ಊರಲ್ಲೆಲ್ಲ ಮೆರವಣಿಗೇಲಿ ತಗೊಂಡು ಹೋಗ್ತಿದ್ವಿ.

ಯಾಕೋ ಏನೋ, ಇದ್ಯಾವುದ್ರಲ್ಲು ನಾಡಾರ್ ಜನ ಸೇರ್ತ ಇರ್ಲಿಲ್ಲ. ಇದಕ್ಕೆ ಯಾವತ್ತೂ ಕಿಲುಬು ಕಾಸೂ ಕೊಟ್ಟೋರಲ್ಲ. ಅವರು ಯಾವತ್ತೂ ರಥನ ಚೆಂದ

ಮಾಡಕ್ಕೆ ಬರ್ತಿರಲಿಲ್ಲ ಅತವಾ ಅದ್ನ ಎಳಿತಾ ಇರ್ಲಿಲ್ಲ. ಈ ಮೆರವಣಿಗೆ ಅವ್ರ ಬೀದೀಲಿ ಹೋಗುವಾಗ ಅವ್ರು ಮನೆ ಒಳಗಿಂದ ಹಣಕಿ ನೋಡೋರು, ಹಿಂದೂಗಳ ತರ, ಅಷ್ಟೇ ಹೊರ್ತು ಇದ್ರಲ್ಲಿ ಬಾಗವಹಿಸ್ತಿರ್ಲಿಲ್ಲ. ಅವ್ರು ದಲಿತರ ಆಚರಣೆಗಳಲ್ಲಿ ಯಾವ್ದಕ್ಕೂ ಬರ್ತಿರಲಿಲ್ಲ. ಮೆರವಣಿಗೆ ಊರಿನ ಬೇರೆಬೇರೆ ಜಾತಿಯೋರ, ಜನಾಂಗದೋರ ಬೀದಿಗಳಲ್ಲಿ ಹೋಗ್ತಿತ್ತು. ದಾರಿಯುದ್ದಕ್ಕೂ ಕ್ರೈಸ್ತ ಭಜನೆ, ಶ್ಲೋಕ ಹೇಳ್ತ ಪ್ರಾರ್ಥನೆ ಮಾಡ್ತ ಹೋಗ್ತಿದ್ವಿ. ಎಷ್ಟು ದೂರ ಅಂದ್ರೆ ಬಜಾರಿನ ತಂಕನೂ ಕೆಲವೊಂದ್ಸಲ ಹೋಗ್ತಿದ್ವಿ, ಆಮೇಲೇ ಮನೆ. ಅಲ್ಲಿಗೆ ಈಸ್ಟರ್ ಮುಗಿದಂಗೆ. ಆದ್ರೆ ನಮಗೆ ಈಸ್ಟರ್ ಎಂಥ ಮುಖ್ಯ ಹಬ್ಬ ಅಂತ ನಾನು ಮನೆ ಬಿಟ್ಟು ಹೊರಗೋದ್ಮೇಲೇ ನಂಗೆ ಅರ್ಥ ಆಗಿದ್ದು. ಆಗ್ಲೇ ನಂಗೆ ಅದರ ಉಪಯೋಗ ಏನು ಅಂತ ಹೊಳೆದಿದ್ದು.

ಕ್ರಿಸ್ಮಸ್ ಅಂದ್ರೆ ನಡುರಾತ್ರಿ ಪೂಜೆಗೆ ಮುಗ್ದು ಬಿಡದು. ನಂಗಂತೂ ಕ್ರಿಸ್ಮಸ್ ಮತ್ತೆ ಈಸ್ಟರ್‌ಗೆ ನಡುರಾತ್ರಿ ಏಳದು ಅಂದ್ರೆ ಸಂಕಟ. ಕೆಲವು ಸಲ ರಾತ್ರಿ ಏಳೋ ಕಷ್ಟ ನೆನುಸ್ಕಂಡು ಈ ಜೀಸಸ್ ಯಾಕೆ ನಡುರಾತ್ರಿ ಹುಟ್ದ ಹಾಗೂ ಯಾಕೆ ಸತ್ತೋನು ಮತ್ತೆ ನಡುರಾತ್ರಿ ಎದ್ದು ಬಂದ ಅಂತ ಕೇಳ್ಕೊಂಡಿದೀನಿ. ಸಣ್ಣೋಳಿದ್ದಾಗ ನಂಗೆ ಈಸ್ಟರ್‌ಗಿಂತ ಕ್ರಿಸ್ಮಸ್ ಹಬ್ಬನೆ ಇಷ್ಟ ಆಗದು. ಯಾಕಂದ್ರೆ ಕ್ರಿಸ್ಮಸ್‌ಗೆ ಹೊಸಬಟ್ಟೆ ತರ್ತಿದ್ರು. ಈಸ್ಟರಿಗಿಲ್ಲ. ಕ್ರಿಸ್ಮಸ್‌ನ ಕೊನೆಗೆ ಮಾಮೂಲಿ ದನದ ಬಾಡಿನ ಸಾರು ಮಾಡ್ತಿದ್ರು. ಈಸ್ಟರಿಗಿಲ್ಲ.

ಹೊಸವರ್ಷದ ದಿನನೂ ಹಂಗೇ. ಇತ್ತೀಚೆಗೆ ಇಂಥ ಹಬ್ಬಗಳ ಸಂಭ್ರಮಾಚರಣೆ ಬದಲಾಗ್ತಿದೆ. ಆದ್ರೆ ಯಾರೂ ನಾವು ಇದ್ನ ಯಾಕೆ ಮಾಡ್ತಿದೀವಿ ಅನ್ನೋದನ್ನ ತಿಳಿದಿರೊ ಹಂಗೆ ಕಾಣಲ್ಲ. ಸಿಸ್ಟರುಗಳು ಮತ್ತು ಪಾದ್ರಿ ಸಹ ಏನು ಹೇಳ್ಬೇಕಿತ್ತೊ ಅದ್ನ ಹೇಳಲ್ಲ. ಅರ್ಥ ಇಲ್ದಿದ್ದ, ಅಬದ್ಧವಾದ, ಅಸ್ಪಷ್ಟವಾದ, ಮುಸುಕುಮುಸುಕು ಪದಗಳನ್ನೇ ಮಾತಾಡ್ತಾರೆ. ಅದಕ್ಕೆ ನಂಗೆ ಈ ಆಚರಣೆಗಳಲ್ಲಿ ಏನೂ ಉಪಯೋಗ ಕಾಣ್ತಾ ಇಲ್ಲ. ಇವತ್ತು ಭಕ್ತಿ ಅಂದ್ರೆ ಜವಾಬ್ದಾರಿ, ಕರ್ತವ್ಯದ ತರ ಮಾಡ್ತ ಹೋಗೋ ರೂಢಿ ಆಗ್ಬಿಟ್ಟಿದೆ.

* * *

ನಮ್ಮೂರ ಶಾಲೆ ಮುಗ್ಸಿ ಒಂಭತ್ನೆ ಕ್ಲಾಸಿಗೆ ಕಾನ್ವೆಂಟ್ ಬೋರ್ಡಿಂಗ್ ಸ್ಕೂಲಿಗೆ ಸೇರ್ದೆ. ಆಗ ದೇವರ ಭಯ ಮಾಯವಾಗಿ ನಿಧಾನಕ್ಕೆ ಪ್ರೀತಿ ತುಂಬ್ಕಳಕ್ಕೆ ಶುರುವಾಯ್ತು. ನಂಗೆ ಸಾಧ್ಯವಾದಷ್ಟು ಯಾವಾಗ್ಲೂ ಪ್ರಾರ್ಥನೆ ಮಾಡಕ್ಕೆ ನೋಡ್ತಿದ್ದೆ. ಏಸುವಿನ ಹತ್ರ ಹೋಗಿ, ಅವನನ್ನೇ ದಿಟ್ಟಿಸಿ ನೋಡಿ, ಅವನ ಜೊತೆ ಮಾತಾಡದು; ಅವನಿಗೆ ನೋವಾಗೋ ತರ ನಡಕೊಳ್ದೆ ಇರೋದು; ಪಾಪದ ಕೆಲಸ ಮಾಡ್ದೆ ಇರೋದು; ಒಳ್ಳೇಯೋಳಾಗಿರೋಕೆ ಪ್ರಯತ್ನ ಪಡ್ತಿದ್ದೆ. ಪ್ರತಿ ವರ್ಷ ಮೂರು ದಿನದ ಏಕಾಂತವಾಸ ಇರ್ತಿತ್ತು; ನಂಗದು ತುಂಬ ಇಷ್ಟ ಆಗ್ತಿತ್ತು. ಆಗಲೇ ನಾನು ದಿನಾ ಪೂಜೆಗೆ ಹೋಗದು, ಪವಿತ್ರ ಪ್ರಸಾದ ತಗಳದು,

ವಾರವಾರನೂ ಶಾಂತ ಹಾಗೂ ಪ್ರೀತಿ ತುಂಬಿದ ಮನಸ್ಸಲ್ಲಿ ಪಾಪ ನಿವೇದನೆ ಹೇಳ್ಕಳದು ಮಾಡ್ತಿದ್ದೆ. ಅಲ್ಲಿನ ಸಿಸ್ಟರುಗಳು ಅಂದ್ರೆ ನಂಗೆ ತುಂಬ ಇಷ್ಟ ಆಗಿತ್ತು. ಒಳಗೊಳಗೆ ನಾನೂ ಅವರ ತರ ನನ್ ಆಗಿ ಸಮಾಜ ಸೇವೆ ಮಾಡ್ಬೇಕು ಅನಿಸ್ತಿತ್ತು. ಹತ್ತನೇ ಕ್ಲಾಸು ಮುಗ್ಸಿ ನನ್ನ ಪರೀಕ್ಷೆ ಮುಗ್ಸಿದ ಮೇಲೆ ಒಬ್ರು ಸಿಸ್ಟರಿಗೆ ನನ್ನಾಸೆ ಹೇಳ್ದೆ. ಆದ್ರೆ ಅವರು ನನ್ನ ಕಾಲೇಜು ಓದು ಮುಗ್ಸಿದ ಮೇಲಷ್ಟೆ ಅದರ ಬಗ್ಗೆ ಯೋಚ್ನೆ ಮಾಡು ಅಂತ ಹೇಳಿದ್ರು.

ಕಷ್ಟಪಟ್ಟು ಕಾಲೇಜು ಸೇರ್ದೆ. ಆದರೆ ಅಲ್ಲಿ ಓದ್ತ ಇರೋವಾಗ್ಲೆ ನಿಧಾನ ದೇವ್ರ ಮೇಲಿದ್ದ ಪ್ರೀತಿ ಮತ್ತು ಭಕ್ತಿ ಎರಡೂ ಕಮ್ಮಿಯಾದ್ವು. ಹಂಗಂತ ಏನಾದ್ರು ಕಷ್ಟ ಬಂದಾಗ ಮನ್ಸಲ್ಲೆ ದೇವ್ರೆ, ಕಾಪಾಡಪ್ಪ ಅಂತ ಕೇಳಿಕೊಳ್ತಿದ್ದೆ. ಆದ್ರೆ ಅಷ್ಟೆ. ಎಲ್ಲ ಮಾಮೂಲಿ ಜೀತದಂಗೆ ಅನಸೋದು. ಎಲ್ಲ ತರದ ಪ್ರಶ್ನೆಗಳು ಮನಸಲ್ಲಿ ಸುಳಿಯೋವು, 'ನಾ ದಿನಾ ಯಾಕ್ ಪೂಜೆಗ್ ಹೋಯ್ಕ್? ಪವಿತ್ರ ಪ್ರಸಾದನ ಯಾಕ್ ತಗಣ್ಕ್?' ನಂಗೆ ಪಾದ್ರಿಗಳು ಮತ್ತು ನನ್‌ಗಳು ತುಂಬ ಮೋಸ ಮಾಡಿದಾರೆ ಅನಿಸ್ತಿತ್ತು. ಅಲ್ಲೀತಂಕ ದೇವ್ರು ಅವ್ರ ಮೂಲಕನೆ ನನ್ನತ್ರ ಬರ್ತಾನೆ ಅಂದ್ಕಂಡಿದ್ದೆ; ಈಗ ಅದು ಎಷ್ಟು ಬದಲಾಯ್ತು ಅಂದ್ರೆ ಅವರತ್ರ ದೇವ್ರು ಇರಕ್ಕೇ ಸಾದ್ಯ ಇಲ್ಲ ಅನ್ನೋಷ್ಟು ಬಲವಾದ ನಂಬಿಕೆ ಬೆಳೀತು. ಅವರು ಮಾಡಿದ ಯಾವುದೂ ಇಷ್ಟ ಆಗದೆ ಹೋಯ್ತು. ಅವ್ರನ್ನ ಪ್ರಶ್ನೆ ಕೇಳಕ್ಕೆ ಶುರು ಮಾಡ್ದೆ. ವಾದ ಮಾಡ್ದೆ, ಜಗಳ ಕಾದೆ. ನನ್ನೊಳಗೇ ನಾನು ಅಸಹ್ಯ ಪಟ್ಕಂಡು ಅಂದ್ಕಂತಿದ್ದೆ, ಚಿ, ಇವ್ರೆಲ್ಲ ಮೋಸಗಾರ್ರು. ಇವ್ರಿಗೆ ಒಳಗೊಂದು ಹೊರಗೊಂದು ಅಂತ.

ನಂಗೆ ಒಳಗೊಳಗೇ ನಾನು ನೇರವಾಗಿ ಅವ್ರ ಮದ್ಯಸ್ತಿಕೆ ಇಲ್ದೆ ದೇವರ ಹತ್ರ ಹೋಗಬಲ್ಲೆ ಅಂತನಿಸಕ್ಕೆ ಶುರುವಾಯ್ತು. ನಂಗೆ ದೇವ್ರನ್ನ ಬಾಯ್ಪಾಟ ಮಾಡಿ ಹೇಳೊ ಪ್ರಾರ್ಥನೆ, ಧಾರ್ಮಿಕ ಆಚರಣೆ, ಜಪಮಣಿ ಹಿಡ್ದು ತಿರುಗಿಸೋದರಿಂದ ತಲುಪಬೋದು ಅಂತ ಅನಿಸ್ಲೆ ಇಲ್ಲ. ನಂಗೆ ದೇವ್ರನ್ನ ಮನಸ್ಸಿನ ಕಣ್ಣಿಂದ ನೋಡ್ಬಹುದು, ಪ್ರಕೃತಿಯಲ್ಲಿ ದಿನದಿನ ಸಂಭವಿಸೊ ಸಣ್ಣಪುಟ್ಟ ಸಂಗತಿಗಳಲ್ಲಿ ನೋಡ್ಬೋದು ಅನಿಸ್ತು. ಅದ್ಕೆ ಇಲ್ಲೀತಂಕ ಯಾವ್ಯಾವದನ್ನ ನಾನು ಭಕ್ತಿಯಿಂದ ಮಾಡ್ತ ಬಂದಿದ್ನೊ ಆ ಆಚರಣೆಗಳೆಲ್ಲ ಅರ್ಥ ಇಲ್ದವು, ಬರೀ ನಾಟ್ಕ ಅನಿಸಿಬಿಡ್ತು. ಆಗ ನನ್ ಆಗ್ಬೇಕು ಅನ್ನೋ ಆಸೆ ನನ್ನಿಂದ ತುಂಬ ದೂರ ಹೋಗಿಬಿಡ್ತು.

ನನ್ನ ಓದು ಮುಗ್ಸಿ ಕೆಲಸಕ್ಕೆ ಸೇರ್ದೆ. ಅದೆಂಗೋ ನನ್‌ಗಳು ನಡೆಸೊ ಒಂದು ಸ್ಕೂಲಲ್ಲೆ ಸೇರ್ದೆ. ಮೊದಲಿಗೆ ಅವ್ರನ್ನ ಭೇಟಿ ಆದಾಗ ಅವ್ರು ಒಂತರ ಬೇರೆ ಅನಿಸಿತ್ತು. ಆದ್ರೆ ಕಾಲ ಕಳದಂಗೆ ಜೀಸಸ್ ಹೇಳಿರೊ ತರ, ಬಿಳಿ ಗೋರಿಗಳ ತರ ಅವರು ಕಂಡ್ರು. ಇದು ಅರ್ಥ ಆಗೊ ತಂಕ ಅವರ ಪಂಥಕ್ಕೆ ಸೇರಿ ಅವರ ತರನೆ ಆಗ್ಬಿಡ್ಲ ಅಂತನೂ ಅನಿಸಿತ್ತು. ಸದ್ಯ ಹಾಗೆ ಮಾಡ್ಲಿಲ್ಲ.

ಅಲ್ಲಿ ಐದು ವರ್ಷ ಕೆಲಸ ಮಾಡ್ದೆ. ಅಲ್ಲಿಗೆ ಬರೋರೆಲ್ಲ ಬಡಮಕ್ಳೆ ಆಗಿದ್ರು. ಮುಕ್ಕಾಲು ಬಾಗ ದಲಿತರೆ ಆಗಿದ್ರು. ಅವ್ರಿಗೆ ಪಾಠ ಮಾಡ್ಲಿಕ್ಕೆ ಖುಶಿ ಅನಸೋದು. ನನ್ನ ರೀತಿ ಬಗ್ಗೆ ನಂಗೆ ಖುಶಿ ಇತ್ತು. ಆದ್ರೆ ನಡಿತಿದ್ದ ಕೆಲವು ಮೋಸ ನೋಡದಾಗ ಒಳಗೊಳಗೆ ಕುದ್ದು ಹೋಗ್ತಿದ್ದೆ. ಆ ಮಕ್ಳಿಗಾಗಿ ಅವರು ಎಷ್ಟೊಂದು ಮಾಡ್ಬೋದಿತ್ತು. ಆದ್ರೆ ಆರಾಮಾಗಿ ತಿಂದುಂಡು, ಜಗಳ ಕಾಯ್ತಾ ಬಡವ್ರನ್ನೆ ಮರ್ತು ಬಿಟ್ಟಿದ್ರು.

ಅನಾಥ ಮಕ್ಳಿಗೆ ಅಂತ ಒಂದು ಹಾಸ್ಟೆಲು ನಡೆಸೋರು. ಆದ್ರೆ ಅದು ಹೆಸರಿಗಷ್ಟೆ. ಆ ಮಕ್ಳತ್ರ ಎಲ್ಲ ಸಣ್ಣಪುಟ್ಟ ಕೆಲ್ಸ, ಯಾರೂ ಮಾಡ್ದಿದ್ದ ಕೆಲಸಗಳನ್ನ ಮಾಡ್ಸೋರು. ತಾವೇ ರಾಣೀರು ಅನ್ನೋ ಹಂಗೆ, ಉಳದೋರು ಅಲ್ಲಿರದೇ ತಂ ಚಾಕ್ರಿ ಮಾಡಕ್ಕೆ ಅನ್ನೋಹಂಗೆ ನಡ್ಕಳೋರು. ಸ್ವಲ್ಪ ಮಾನವೀಯತೆ ಇದ್ದ ನನ್‌ಗಳಿಗೆ ಕಷ್ಟ ಇತ್ತು. ಅವರವರಲ್ಲೆ ಜಾತಿ ಭೇದ, ಬಡವ ಶ್ರೀಮಂತ ಭೇದ, ಅವರಾಡೊ ಬಾಷೆ ಮೇಲೆ ಭೇದ ಎಲ್ಲ ಇತ್ತು.

ಮಾಮೂಲಿ ಪಾಠ ಅಲ್ದೆ ದಲಿತ ಮಕ್ಳನ್ನ ಇನ್ನೂ ಎಷ್ಟೋ ವಿಷಯಕ್ಕೆ ಸಂಬಂಧಪಟ್ಟಂತೆ ತಯಾರಿ ಮಾಡಿ ತಮ್ಮ ಸುತ್ತಮುತ್ತ ಏನು ನಡಿತಿದೆ ಅಂತ ಅವ್ರಿಗೆ ತಿಳಿಸೊ ಪ್ರಯತ್ನ ಮಾಡ್ಬೋದಿತ್ತು. ಆದ್ರೆ ಅವರು ಮಾಡೊ ಎಲ್ಲವೂ, ಅವ್ರು ಆ ಮಕ್ಳಿಗೆ ಹೇಳಿದ್ದ ರೀತಿನೂ, ಅವ್ರನ್ನ ಹೀಗೆಹೀಗೆ ಮಾಡಿ ಅಂತ ನಡಸ್ತಿದ್ದ ದಾರಿನೂ, ಹೆಂಗಿತ್ತು ಅಂದ್ರೆ ದಲಿತರಿಗೆ ದಲಿತರಾಗಿರೋದೇ ದಾರಿ ಅನ್ನೋ ತರ ಇರ್ತಿತ್ತು. ಬದಲಾವಣೆಗೆ ದಾರಿನೇ ಇಲ್ಲ ಅನ್ನೋ ತರ ಇತ್ತು. ಅದಕ್ಕೇ ಆ ಮಕ್ಳು ಇದೇ ನಂ ಹಣೆಬರ ಅಂತ ಒಪ್ಕೊಂಡಿದ್ವು. ಬೆಳಗಿಂದ ಸಂಜೆ ತಂಕ ಕಾನ್ವೆಂಟಲ್ಲಿ ಕೆಲಸ ಮಾಡೋವು. ಇದನ್ನೆಲ್ಲ ನೋಡ್ತಿದ್ದಂಗೆ ನಂಗೆ ತೀರ ಕಸಿವಿಸಿ ಆಗಕ್ ಶುರು ಆಯ್ತು. ಸಿಕ್ಕಾಪಟ್ಟೆ ಸಿಟ್ಟೂ ಬಂತು, ಇವರೆಂತ ನನ್‌ಗಳು ಇವರು, ಬಡವ್ರಿಗೆ ಸಹಾಯ ಮಾಡ್ತಿವಿ ಅಂತ ಕೊಚ್ಕೊತಾರೆ, ಆದ್ರೆ ತಾವು ನೋಡಿದ್ರೆ ಹಿಂಗಿದಾರೆ ಅನಸದು. ನಾನು ಎಷ್ಟೋ ಸಲ ಅವ್ರನ್ನ ಎದುರು ಹಾಕ್ಕಂಡು ಗುದ್ದಾಡಿದೀನಿ.

ಆದ್ರು, ಈ ನನ್‌ಗಳು ಮತ್ತೆ ಅವರ ಕೆಲಸದ ತರ ನೋಡಿ ಸಿಟ್ಟಾದ್ರೂ, ಯಾವ್ದಾರೂ ಒಂದು ಪಂಥ ಸೇರಿ ನನ್ ಆಗ್ಬೇಕು, ಉಳದೋರಿಗಿಂತ ತುಂಬ ಬೇರೆ ತರ ಬದುಕ್ಬೇಕು ಅನ್ನೊ ಆಸೆ ಮಾತ್ರ ಎದ್ದೆದ್ದು ಬರೋದು. ಈ ಮಕ್ಳನ್ನ ಉಳದ ಮಕ್ಳನ್ನ ಹೆಂಗೆ ನಡಸ್ಕತಿವೋ ಹಂಗೇ ನಡಸ್ಕೋಬೇಕು ಅಂತ ಒಳಗೊಳಗೇ ತುಂಬ ಅನಿಸ್ತಿತ್ತು. ಅವ್ರನ್ನ ಹೆದರಿಸಿ ಹಿಂಸೆ ಮಾಡೊ ಬದ್ಲು ಪ್ರೀತಿಯಿಂದ ನೋಡ್ಕಬೇಕು ಅಂತ್ಲು ಅನಸೋದು. ಅದೇ ಹೊತ್ಗೆ ಯಾವತ್ತೂ ಕಾನ್ವೆಂಟ್ ಸೇರ್ಬಾರ್ದು ಅಂತ ಒಳಗೊಳಗೇ ಅಂದ್ಕೋತಿದ್ದೆ. ಒಳಗೆ ಒಂತರ ಏಸು ಮತ್ತೆ ಅವರ್ ಲೇಡಿ ಬಗ್ಗೆ ಭಕ್ತಿ, ಪ್ರೀತಿ ಇತ್ತು. ಆದ್ರೆ ಅದೇ ಹೊತ್ಗೆ ಈ ನನ್‌ಗಳು ಮತ್ತೆ ಪಾದ್ರಿ ಹೇಳದು ಏನೂ ಸರಿಕಾಣ್ತ ಇರಲಿಲ್ಲ. ಯಾವಾಗ್ಲಾದ್ರೂ ಬೇರೆ

ಎಲ್ಲಿಂದಲಾದ್ರೂ ಯಾರಾದ್ರೂ ಪಾದ್ರಿ ಬಂದು ನಂ ಸಮಾಜ, ನಂ ಜನರಿಗೆ ಬೇಕಾಗಿದ್ದು ಏನು ಅಂತ ಮಾತಾಡುವಾಗ ಏನೋ ಕುತೂಹಲ ಹುಟ್ಟದು. ಆವಾಗ್ಲೆ ಇದ್ದಕ್ಕಿದ್ದಂತೆ ಬೈಬಲ್ಲನ್ನ ಪೂರ್ತಿ ಒಂದ್ಸಲ ಓದಬೇಕು ಅಂತ ಬಲವಾಗಿ ಅನಿಸ್ತು. ಬೆಳಗ್ಗೆ ರಾತ್ರಿ ಅನ್ನದೆ ಬೈಬಲಿನ ಹಳೆ ಒಡಂಬಡಿಕೆ, ಹೊಸ ಒಡಂಬಡಿಕೆನ ಓದಿದೆ.

ದೇವ್ರು ಯಾವತ್ತೂ ಅತಿ ಹೆಚ್ಚು ಕರುಣೆ ತೋರ್ಸದು ತುಳಿಸ್ಕಂಡವರಿಗೇ ಅನ್ನೋದು ಗೊತ್ತಾಯ್ತು. ಏಸು ಕೂಡಾ ಯಾವಾಗ್ಲೂ ತನ್ನನ್ನ ಬಡವರ ಜೊತೆನೇ ಇಟ್ಕಂಡಿದ್ದ. ಆದ್ರೆ ಈ ವಿಷಯದ ಬಗ್ಗೆ ಒತ್ತು ಹಾಕಿ ಯಾರೂ ಹೇಳ್ತನೇ ಇರ್ಲಿಲ್ಲ. ನಮಗೆ ಕಲಿಸಿದವರೆಲ್ಲ ದೇವರು ಮೃದು ಸ್ವಭಾವದವನು, ಕರುಣೆ ಪ್ರೀತಿ ಇರೋನು ಅಂತ್ಲೆ ಕಲಿಸಿದ್ರು. ಪಾಪಿಗಳನ್ನ, ರೋಗಿಗಳನ್ನ, ಅಸಹಾಯಕರನ್ನ, ದೀನರನ್ನ, ವಿಧೇಯರನ್ನ ಅವನು ಕ್ಷಮಿಸ್ತಾನೆ ಅಂತ ಹೇಳೋರು. ಯಾರೂ ದೇವ್ರು ನ್ಯಾಯಪರ, ನೀತಿವಂತ, ಅನ್ಯಾಯಕ್ಕೆ ಸಿಟ್ಟಿಗೇಳೋನು, ತಪ್ಪನ್ನ ವಿರೋಧಿಸೋನು, ಅಸಮಾನತೆ ಸಹಿಸದಿರೋನು ಅಂತ ಯಾವತ್ತೂ ಹೇಳ್ತಿರಲಿಲ್ಲ. ಬೈಬಲಿನ ಏಸುವಿಗೂ ದಿನ ನಿತ್ಯದ ಆಚರಣೆಗಳಲ್ಲಿರೊ ಏಸುವಿಗು ಸಿಕ್ಕಾಪಟ್ಟೆ ವ್ಯತ್ಯಾಸ ಇದೆ. ಯಾರು ತುಳಸ್ಕಂಡಿದಾರೋ ಅವ್ರಿಗೆ ಇದನ್ನ ಹೇಳಲ್ಲ, ಅದರ ಬದ್ಲು ಅರ್ಥವಿಲ್ಲದ ವಿನಯ, ವಿಧೇಯತೆ, ತಾಳ್ಮೆ, ಸಹನೆ ಅಂತ ಪೊಳ್ಳು ಮಾತುಗಳನ್ನೆ ಹೇಳಿಕೊಡ್ತಾರೆ.

ನನ್‌ಗಳನ್ನ ಇಷ್ಟು ಟೀಕೆ ಮಾಡ್ತಿದ್ರೂ ನಿಜವಾಗಿ ನಂಗೇನು ಆಯ್ತು ಅಂತನೇ ಗೊತ್ತಾಗ್ಲಿಲ್ಲ. ನಂಗೆ ಬಲವಾಗಿ ನಾನೂ ಒಬ್ಬ ನನ್ ಆಗ್ಬೇಕು, ಬಡವ್ರಿಗೆ ಅವರನ್ನ ಪ್ರೀತಿ ಮಾಡೊ, ತನ್ನ ಎದೆ ಕಾಳಜೀನೆಲ್ಲ ಅವರ ಮೇಲೆ ಇಟ್ಟಿರೊ, ಅವ್ರನ್ನ ಮುಂದೆ ಒಯ್ಯೊ ಒಬ್ಬ ಏಸು ಇದಾನೆ ಅಂತ ಹೇಳ್ಬೇಕು ಅನಸದು. ಅದೇ ಹೊತ್ಗೆ ನಾನೇನಾದ್ರು ನನ್ ಆದರೂ ಸಹಾ ಹಿಂಗೆಲ್ಲ ಹೇಳಕ್ಕೆ ಇವರು ಖಂಡಿತ ಬಿಡಲ್ಲ ಅಂತಲೂ ಅನ್ಸದು. ಹೆಂಗೋ ಆ ಯೋಚ್ನೆನ ಅತ್ತ ಸರಿಸಿದಷ್ಟೂ ಅದು ಇನ್ನಷ್ಟು ಬಲವಾಗ್ತಾ ಹೋಯ್ತು. ಇಷ್ಟು ವರ್ಷ ನನ್‌ಗಳನ್ನ ಟೀಕೆ ಮಾಡ್ತ, ಅವರ ಜೊತೆ ವಾದ ಮಾಡ್ತ ಆದ್ರೂ ಈ ಆಸೆ ಇಟ್ಕಂಡಿದಿನಲ್ಲ ಅಂತ ಕಸಿವಿಸಿನೂ ಆಗ್ತಿತ್ತು.

ನಾನು ಮನೆಯೋರಿಗೆ ಮತ್ತು ಹತ್ರದ ಬಳಗಕ್ಕೆ ನನ್ನ ಯೋಚನೆ ತಿಳಿಸಿದಾಗ ಒಬ್ರೇ ಒಬ್ರೂ ಬೆಂಬಲ ಕೊಡ್ಲಿಲ್ಲ. ಎಲ್ರು ನಾನೇನು ಗಂಭೀರವಾಗಿ ಹೇಳ್ತಿಲ್ಲ, ಸುಮ್ನೆ ತಮಾಷೆ ಮಾಡ್ತಿದಿನಿ ಅಂತನೇ ತಿಳ್ಕಂಡ್ರು. ಆ ಯೋಚನೆ ನನ್ನ ತಲೆಯಿಂದ ಹೊರಗೆ ಹೋದ್ರೆ ಹೋಗ್ಲಿ ಅಂತ ನಾನೂ ಅಂದ್ಕತಿದ್ದೆ. ಆದ್ರೆ ನಾನು ಬೇಡಬೇಡ ಅಂದ್ಕಂಡ ಹಾಗೂ ಯಾವ್ದಾದ್ರೂ ಒಂದು ಪಂಥಕ್ಕೆ ಸೇರೋ ಯೋಚ್ನೆ ಮತ್ತಷ್ಟು ಬಲವಾಗ್ತ ಹೋಯ್ತು. ಅದ್ಕೆ ಊಳದೋರೆಲ್ಲ ಬೇಡಬೇಡ ಅಂತಿದ್ರೂ, ಕೆಲವ್ರಂತೂ ಹೋಗ್ಲೇಬಾರ್ದು ಅಂತ

ಕಟ್ಟು ಮಾಡಿದ್ರೂ ನನ್ನ ಕೆಲ್ಸಕ್ಕೆ ರಾಜೀನಾಮೆ ಕೊಟ್ಟು ಒಂದು ಪಂಥ ಸೇರ್ರೋ ತಯಾರಿ ಮಾಡ್ಕೊಂಡೆ. ಇವತ್ತು ನಾನು ಎಂಥ ಅತಿ ಮೂರ್ಖತನದ ಕೆಲ್ಸ ಮಾಡಿದೆ ಅಂತ ಗೊತ್ತಾಗಿದೆ. ಆದ್ರೆ ಅವತ್ತು ನಾ ಏನು ಮಾಡಕ್ಕೆ ಹೊರಟೆ ಅನ್ನೋದರ ಬಗ್ಗೆ ರವಷ್ಟೂ ಯೋಚ್ನೆ ಮಾಡ್ಲಿಲ್ಲ. ಅದೊಂತರ ಕಣ್ಕಟ್ಟಿ ಬಾವಿಗೆ ಬಿದ್ದಂಗೆ ಆಗೋಯ್ತು.

ಕೊನೆಗೆ ನಾ ಯಾವ ಪಂಥ ಸೇರಿದ್ನೋ ಅಲ್ಲಿ ತುಂಬ ನಿರಾಸೆ ಆಯ್ತು. ಆದ್ರೆ ಮೊದಲ ಮೂರು ವರ್ಷ ಹಂಗಿರಲಿಲ್ಲ. ಕೊನೆಪಕ್ಷ ಜನರ ಕಷ್ಟನಷ್ಟ ನೋವುಗಳ ಬಗ್ಗೆ ಓದಾದ್ರೂ ತಿಳ್ಕತ ಇದ್ವಿ. ಆಮೇಲೆ ಏಸುವಿನ ಮಾನವೀಯ ಗುಣಗಳ ಬಗ್ಗೆನೂ ಓದ್ತಿದ್ವಿ. ಅದ್ನೇ ಚರ್ಚೆ ಮಾಡ್ತಿದ್ವಿ. ನಾವು ತಕ್ಷಣಕ್ಕೆ ಏನು ಮಾಡ್ಬೇಕು, ಹೆಂಗೆ ಅಂತ ಯೋಚ್ನೆ ಮಾಡ್ತಿದ್ವಿ. ಕಾಲ ಕಳದಂಗೆ ನಾನು ನನ್ ಆಗಿ ಏನು ಮಾಡ್ಬೋದು? ಹೇಗೆ ಸಾಧಿಸೋದು ಅನ್ನೋ ಬಗ್ಗೆ ಫಳಫಳ ಹೊಳೆಯೋ ಐಡಿಯಾಗಳಿದ್ವು. ನಮ್ಮ ಪಂಥ ಶುರು ಮಾಡಿದ ಮಹಿಳೆ ಬಗ್ಗೆ ಓದಿ ತಿಳಿದ್ವಿ. ಆಕೆಗೆ ಬಡವರ ಮೇಲೆ ಪ್ರೀತಿ, ಕಾಳಜಿ. ಬಡವರಿಗಾಗೇ ದುಡಿದು ತೀರಿಕೊಂಡ ಹೆಣ್ಣುಮಗಳು ಅವಳು. ಅವಳ ತರನೇ ಆಗ್ಬೇಕು ಅನ್ನೋ ಒಂದು ಅಚಲ ಗುರಿ ಒಳಗೆ ಬೆಳಿತಾ ಹೋಯ್ತು. ಮುಂದೂ ಸಹ ಬಡವರಿಗಾಗಿ ನಾವು ಕಷ್ಟ ಸಹಿಸ್ಬೇಕು ಅನಿಸ್ತು.

ಆಗ ನನ್ನೆಲ್ಲ ಪ್ರಾರ್ಥನೆ, ಧ್ಯಾನ, ಯೋಚನೆಗಳೂ ಸಹಾ ಶೋಷಣೆಗೆ ಒಳಗಾದವರ, ವಂಚಿತರ ಬಗ್ಗೆನೇ ಇತ್ತು. ಆಮೇಲೆ ಇಂಥ ಅನ್ಯಾಯಗಳ ವಿರುದ್ಧ ನ್ಯಾಯಕ್ಕಾಗಿ ಹೋರಾಡಿದ ಏಸು ಬಗ್ಗೆ ಇತ್ತು. ನಂಗಂತೂ ಚಂದದ ಅಲಂಕಾರಿಕ ಭಾಷೇಲಿ ಮತ್ತೆಮತ್ತೆ ಪ್ರಾರ್ಥನೆ ಮಾಡದಿಕ್ಕೆ ಅರ್ಥನೇ ಇಲ್ಲ ಅನಿಸಿತ್ತು. ಜೊತೆಗೆ ಪ್ರಾರ್ಥನೆ, ಪೂಜೆ, ಬದುಕಿನ ಮಧ್ಯ ಸಂಬಂಧನೇ ಇಲ್ದಂಗೆ ಇರೋದು ಸರಿ ಅಲ್ಲ ಅನಿಸ್ತು. ನನ್ನ ಅನಿಸಿಕೇನ ಅಲ್ಲಿರೋರಿಗೆ ತಿಳಿಸ್ತಿದ್ದೆ. ಈ ತರ ಸಂಬಂಧವೇ ಇಲ್ದೆ ಬದುಕೋದು ನನ್ನ ಗಮನಕ್ಕೆ ಬಂದು ಯಾಕೆ ಅಂತ ಅಲ್ಲಿ ಪ್ರಶ್ನೆ ಮಾಡ್ತಿದ್ದೆ. ನಾವು ನಂಬೋದೊಂದು ಮಾಡೋದೊಂದು ಆಗ್ಬಾರ್ದಲ್ವ? ನಾವೇನು ನಂಬ್ತಿವೋ ಅದ್ನೆ ಹೇಳ್ಬೇಕು, ಹಂಗೇ ಬದುಕಬೇಕು. ನನಗೆ ನಾನು ಸತ್ಯವಾಗಿ ನಡ್ಕಳೋದು ಅಂದ್ರೆ ಇದೇ. ಬಾಕಿ ಎಲ್ಲ ನಾಟ್ಕ. ಇಂತ ನಾಟಕ ಮಾಡ್ತ ಬದುಕದು ನಂಗೆ ಯಾವತ್ತೂ ಬೇಕಾಗಿಲ್ಲ.

ನನ್ನ ಮೊದಲ ಪ್ರತಿಜ್ಞೆ ಸ್ವೀಕರಿಸೋವಾಗ ಎದೆ ತುಂಬ ಭರವಸೆ, ಯೋಚನೆ ತುಂಬ್ಕಂಡಿದ್ದೆ. ನನ್ನ ಇಡೀ ಬದುಕನ್ನ ಬಡವರು, ರೋಗಿಗಳ ಜೊತೆ ಹಂಚ್ಕಂಡು ಅವರಿಗಾಗೇ ಬದುಕಿ ಸಾಯ್ಬೇಕು ಅಂದ್ಕೊಂಡಿದ್ದೆ. ಆದ್ರೆ ನನ್ನ ಒಂದು ಪ್ರತಿಷ್ಠಿತ ಶಾಲೆಗೆ ಕಳಿಸಿದ್ರು. ಅಲ್ಲಿ ಪಾಠ ಮಾಡಕ್ಕೆ ಹೇಳಿದ್ರು. ಅಲ್ಲಿ ಹೋದ್ಮೇಲೇ ನಂಗೆ ಎಲ್ಲ ಸ್ಪಷ್ಟವಾಗಿ ಗೊತ್ತಾಗಿದ್ದು. ಅಲ್ಲಿನ ಎಲ್ಲ ಮಕ್ಳೂ ಶ್ರೀಮಂತ ಕುಟುಂಬದೋರು. ಅಲ್ಲಿನ ಕಾನ್ವೆಂಟ್

ಕೂಡ ಒಳ್ಳೆ ದಾನದತ್ತಿ ಪಡೆದಿತ್ತು. ಅಲ್ಲಿ ಅವ್ರು ಪೂಜೆ ಮಾಡ್ತಿದ್ದ ಏಸು ಶ್ರೀಮಂತ ಏಸು. ಅಲ್ಲಿನ ದೇವ್ರಿಗೂ ದೀನದಲಿತರಿಗೂ ಮಧ್ಯ ಯಾವ ಸಂಬಂಧನೂ ಇದ್ದಂಗಿರ್ಲಿಲ್ಲ. ಬೆಳಗ್ಗೆ ರಾತ್ರಿ ಹೇಳೋ ಪ್ರಾರ್ಥನೆ ಆಗ್ಲಿ, ಪ್ರತಿದಿನದ ಪೂಜೆಯಾಗ್ಲಿ, ಇಂಥ ಸಂಬಂಧ ಇರೊ ಯಾವ ಪುರಾವೆನೂ ತೋರಿಸ್ಲಿಲ್ಲ. ನಂಗಂತೂ ಕಾಣಿಸ್ಲಿಲ್ಲ. ದೇವ್ರನ್ನ ಅಲ್ಲಿ ಕಷ್ಟಪಟ್ಟು ಹುಡುಕ್ಬೇಕು ಅಂತ ಗೊತ್ತಾಯ್ತು.

ದೇವ್ರು ಪ್ರೇಮಮಯಿ ಅಂತ ಹೇಳೋ ಆ ಜನಗಳ ಹತ್ರ ಯಾವ ಪ್ರೇಮವೂ ಕಾಣಲಿಲ್ಲ. ದೀನ ದಲಿತರ ಬಗ್ಗೆನೂ ಪ್ರೇಮ ಇಲ್ಲ. ದೇವರ ಪ್ರೀತಿ ಅಮಿತ, ಷರತ್ತು ರಹಿತ ಅಂತ ಹೇಳ್ತಿದ್ರು. ಆದರೆ ಕಾನ್ವೆಂಟಿನ ಒಳಗೆ ಅವರ ಪ್ರೀತಿ ಗಳಿಸಿಕೊಳ್ಳಲು ನೀನು ಹೇಗಿರಬೇಕು ಹಾಗೂ ಯಾರಾಗಿರಬೇಕು ಎನ್ನೊ ಬಗ್ಗೆ ಅಸಂಖ್ಯ ಷರತ್ತುಗಳಿದ್ದವು. ಹೊರಗಿನ ಶಿಕ್ಷಿತ, ಸಿರಿವಂತರು ಬಂದಾಗ ತೋರಿಸೊ ಪ್ರೀತಿಯ ರೀತಿನೇ ಬೇರೆ; ಅದ್ಯಾವುದು ಇಲ್ಲದವರನ್ನು ನೋಡಿಕೊಳ್ಳೊ ರೀತಿನೇ ಪೂರ್ತಿ ಬೇರೆ. ಇಲ್ಲದೋರ ಮೇಲಂತೂ ಯಾವ ಪ್ರೀತಿಯಾದರೂ ಇತ್ತೋ ಎಂಬ ಬಗ್ಗೆ ನಂಗೆ ಅನುಮಾನ. ದೇವರು ನ್ಯಾಯಪರ ಅಂತ ಗಟ್ಟಿದನಿಲಿ ಕೂಗ್ತಾರೆ, ಭಜನೆಗಳಲ್ಲಿ ಹಾಡತಾರೆ. ಆದರೆ ಕಾನ್ವೆಂಟುಗಳಲ್ಲೋ ಅನ್ಯಾಯ ದೆವ್ವದ ಥರ ನರ್ತನ ಮಾಡುತ್ತೆ. ಅಲ್ಲಷ್ಟೆ ಅಲ್ಲ, ಆ ಜನ ನಡೆಸೊ ಎಲ್ಲ ಸಂಸ್ಥೆಗಳಲ್ಲೂ ಅಷ್ಟೇ. ಕರಗುವ ಹೃದಯದ ನಮ್ಮ ದೇವರು ಕ್ಷಮಿಸುವ ದೇವರೆಂದು ಹೇಳಿಕೊತಾರೆ. ಆದರೆ ಒಳಗೆ ನೋಡಿದರೆ ತಾವು ಯಾವಾಗಲೂ ಯಾರಿದು? ಏನಿದು? ಯಾವಾಗ? ಅವರಿಗೆ ಹೊಡಿ, ಶಿಕ್ಷೆ ಕೊಡು ಎಂದೇ ಹೇಳತಿರತಾರೆ. ಅವರ ಮಾತೇ ಹರಿತ, ಬಾಣದಂಗೆ. ದಾರಿಗಡ್ಡ ಬಂದ ಯಾರನ್ನೂ ಸುಲಭಕ್ಕೆ ಅವರು ಬಿಟ್ಟುಬಿಡಲ್ಲ.

ಇಂಥ ಭಕ್ತಿಯ ಉತ್ತುಂಗಾವಸ್ಥೇಲಿ ದೇವಸುತ ಬಡ ಕುಟುಂಬದಲ್ಲಿ ಹುಟ್ಟಿದ, ಬಡವರ ನಡುವೆ ಬದುಕಿದ, ಬಡವನಾಗಿ ತೀರಿಕೊಂಡ ಅಂತಾರೆ. ಆದರೆ ಅಕಸ್ಮಾತ್ ಬಡವನೊಬ್ಬ ಕಾನ್ವೆಂಟ್ ಅಥವಾ ಶಾಲೆಯ ಆವರಣದೊಳಗೆ ಬಂದ್ರೆ ಸಾಕು, ಹುಚ್ಚುನಾಯಿ ತರ ಅವನ ಮೇಲೆ ಹಾರಿ ಬೀಳ್ತಾರೆ. ಆಗೆಲ್ಲ ನಂಗೆ ನೆನಪಾಗ್ತಿದ್ದ ಸಾಲು, 'ವ್ಯಕ್ತಿಯ ಬಾಹ್ಯ ಲಕ್ಷಣಗಳನ್ನು ನೋಡಿ ಅದರಂತೆ ನಡೆಸಿಕೊಳ್ಳುವುದು ಪಾಪ.' ಆದ್ರೆ ಇದೇ ಸಾಲನ್ನ ಅವರು ತಮ್ಮ ತಾಸುಗಟ್ಟಲೆ ವಿಶೇಷ ಧ್ಯಾನದ ಹೊತ್ತಲ್ಲಿ ಎಷ್ಟು ಬೇಕೋ ಅಷ್ಟು ಸಲ ಹೇಳಿಕೊತಾರೆ.

ಅದೇ ರೀತಿ ಏಸು ಹೇಳಿದ ಪದಗಳ ಬಗ್ಗೆ ಅದ್ಭುತ ವ್ಯಾಖ್ಯಾನ ಕೊಡ್ತಾರೆ. ನಾವೇನು ತಿಂದೆವೋ, ಕುಡಿದೆವೋ ಅದರ ಬಗ್ಗೆ ಗಮನ ಕೊಡಬಾರದು ಅಂತಾರೆ. ಆದರೆ ಚರ್ಚಿನೊಳಗೆ ಮತ್ತು ಚರ್ಚಿನ ಮೀಟಿಂಗುಗಳಲ್ಲಿರೋದು ಇದೇ. ನಾವು ಇವತ್ತು ಏನು

ತಿನ್ನದು, ನಾಳೆಗೇನು ತಿನ್ನದು, ಏನನ್ನು ಹಾಕಿಕೊಳ್ಳೋದು ಎಂಬ ಬಗ್ಗೆ ತಾಸುಗಟ್ಟಲೆ ಚರ್ಚೆ ಮಾಡ್ತಾರೆ. ಇದೆಲ್ಲರ ಮಧ್ಯೆ ನಂಬಿಕೆ ಮತ್ತು ಭಕ್ತಿ ಎಲ್ಲಿದೆಯಪ್ಪ ಅಂತ ಸಿಕ್ಕಾಪಟ್ಟೆ ಗೊಂದಲ ನಂಗೆ. ಚರ್ಚೊಳಗೆ ಒಬ್ಬ ದೇವ್ರು, ಹೊರಗೆ ಇನ್ನೊಬ್ಬ ಇರೋ ಥರ ಕಾಣ್ತಿತ್ತು. ದೇವರ ಈ ವಿಭಿನ್ನ ರೂಪಗಳಿಂದ ಗೊಂದಲ ಹೆಚ್ಚಾಗ್ತ ಹೋಯ್ತು. ಆದ್ರೆ ಅವರಿಗೆ ಈ ಭಿನ್ನ ರೂಪಗಳನ್ನ ಸೃಷ್ಟಿ ಮಾಡೋದ್ರಲ್ಲಿ, ಅಥವಾ ಅದರ ಮಧ್ಯ ನುಸುಳ್ತ ಓಡಾಡೋದ್ರಲ್ಲಿ ಏನೂ ಸಮಸ್ಯೆ ಇದ್ದಂಗೆ ಇರಲಿಲ್ಲ. ಅದನ್ನೆ ಒಪ್ಪದು, ಅದೂ ಒಂಥರ ಕಲೆ.

ಒಂದೋ ಅವರು ಹೊರಗೆ ಬಂದು ಹೇಳ್ಬೇಕು, ಹೌದು ನಂ ದೇವ್ರು ಶ್ರೀಮಂತರ ದೇವ್ರು, ನಾವು ಅವನನ್ನೆ ಹಿಂಬಾಲಿಸ್ತೀವಿ, ಪೂಜೆ ಮಾಡ್ತೀವಿ ಮತ್ತೆ ಅವನಂಗೆ ಹೊರಗೆ ಬದುಕ್ತಿವಿ ಅಂತ. ಅಥವಾ ಅವ್ರು ನಂ ದೇವ್ರು ಬಡವರ ದೇವ್ರು, ಅವನು ಕೊಟ್ಗೇಲಿ ಹುಟ್ಟಕ್ಕೆ ಇಷ್ಟಪಟ್ಟ, ನಾವೂ ಅವನಂತೇ, ಹಂಗೇ ಬದುಕಕ್ಕೆ ಇಷ್ಟಪಡ್ತಿವಿ ಅಂತ ಹೇಳ್ಬೇಕು. ಆದ್ರೆ ಒಂದು ತರ ಹೇಳ್ತ, ಇನ್ನೊಂತರ ಮಾಡೋದು ಏನು ಸರಿಯಿಲ್ಲ. ಈ ತರ ಎಷ್ಟು ದಿನಾಂತ ಯಾರಾದ್ರೂ ನಾಟ್ಕ ಮಾಡ್ಬೋದು? ನಂಗಂತೂ ಸಾಧ್ಯನೇ ಇಲ್ಲ. ನಾನು ಈ ಪಂಥ ಬಿಟ್ಟು ಬೇಕಾದ್ರೆ ವಾಪಸ್ ಹೋಗಬಲ್ಲೆ. ಅಥವ ಅವ್ರು ಈ ನಾಟಕಕ್ಕೆ ಎಷ್ಟು ರೂಢಿಯಾಗ್ಬಿಟ್ಟಿದಾರೆ ಅಂದ್ರೆ ತಮ್ಮ ನಿಜವಾದ ರೂಪ, ಧರಿಸಿದ ಪಾತ್ರ ಯಾವ್ಯಾವ್ದು ಅಂತ ಗುರುತಿಸಕ್ಕೆ ಅವರಿಗೇ ಆಗುತ್ತೋ ಇಲ್ವೋ ನಂಗೊತ್ತಿಲ್ಲ.

ಇತ್ತೀಚೆಗೆ, ನಾನು ಪಂಥನ ಬಿಟ್ಟಿರೋದ್ರಿಂದ, ಪಾದ್ರಿಗಳು ಮತ್ತು ನನ್‌ಗಳನ್ನ ನೋಡಿದ್ರೆ ಸಿಟ್ಟು ಬರುತ್ತೆ. ಕಾನ್ವೆಂಟ್ ಒಳಗೆ ಹೋಗೋ ತಂಕ ಅವರ ಒಳಸುಳಿ ನಂಗೆ ಗೊತ್ತಿರ್ಲಿಲ್ಲ, ಅಥವಾ ಅವರ ಕ್ರಮ ಏನಂತನೂ ಗೊತ್ತಿರ್ಲಿಲ್ಲ. ಅವರ ಜೊತೆ ಒಂದಷ್ಟು ದೂರ ನಡೆದ್ಮೇಲೆನೇ ಅವರ ಭಕ್ತೀಲಿ ಮಾನವೀಯತೆ ಅನ್ನೋದು ಇಲ್ಲ ಅಂತ ಗೊತ್ತಾದ್ದು. ಭಕ್ತಿ, ಪರಿತ್ಯಾಗ, ಪವಿತ್ರಾತ್ಮ, ದೇವರ ಕೆಲಸ, ಬಡತನ, ಶೀಲ, ವಿಧೇಯತೆ ಅಂತ ಬರೀ ಖಾಲಿ ಮಾತಾಡ್ತಾರೆ. ಬದುಕೋದು ಮಾತ್ರ ಬೈಬಲ್ಲಲ್ಲಿ ಹೇಳಿರೋ ಫರೀಸಿ, ಸಾದುಸೀ, ಹೈ ಪ್ರೀಸ್ಟ್‌ಗಳ ತರಹ. ಇವತ್ತೇನಾದ್ರೂ ಜೀಸಸ್ ಇದ್ದಿದ್ರೆ ಮೊದಲಿಗಿಂತ ಕಟುವಾಗಿ, ಹರಿತವಾಗಿ ಅವರನ್ನ ಪ್ರಶ್ನೆ ಮಾಡ್ತ ಇದ್ದ. ಆದರೆ ಅವನು ಹಂಗೆ ಮಾಡಿದ್ರು ಇವರು ಅದನ್ನ ಅರ್ಥ ಮಾಡ್ಕೊತಿದ್ರೊ ಇಲ್ವೊ ಹೇಳಕ್ಕಾಗಲ್ಲ.

ಇವತ್ತು ಚರ್ಚನ್ನ ನೋಡಿದ್ರೆ ಅದು ಪಾದ್ರಿಗಳು, ನನ್‌ಗಳು ಮತ್ತೆ ಅವರ ನೆಂಟರಿಷ್ಟರಿಂದ ತುಂಬ್ಹೋಗಿದೆ. ಅವರ್‍ಯಾರು ಅಂತ ನೋಡಿದ್ರೆ ಎಲ್ಲ ಮೇಲ್ಜಾತಿಯೋರೇ. ಅವರೇ ಅಧಿಕಾರದ ಸ್ಥಾನಗಳಲ್ಲಿ ಇರೋದು. ಆದರೆ ಇಡಿ ಕ್ರೈಸ್ತ ಸಮುದಾಯನ ನೋಡಿದ್ರೆ ಅದ್ರಲ್ಲಿ ಬಹಳಷ್ಟು ಜನ ಕೆಳವರ್ಗದೋರು ಮತ್ತೆ ದಲಿತರು ಇದಾರೆ. ಮೇಲ್ಜಾತಿ ಜನ ಕೆಲವರೇ ಇದ್ರು ಅಧಿಕಾರ ಹಿಡಿದು, ಏನೂ ಇಲ್ದಿರೋರು,


ಬಡವ್ರನ್ನ ನಿಯಂತ್ರಣದಲ್ಲಿಟ್ಕೊಂಡು, ಅವರ ಮೇಲೆ ಭಕ್ತಿ ಮೂಢನಂಬಿಕೆಗಳನ್ನ ಹೇರಿ, ದೇವರ ಗುಲಾಮರಾಗಿ ಮಾಡಿ ತಾವು ಮಾತ್ರ ಸುಖಜೀವನ ನಡೆಸ್ತಾರೆ.

ಬದುಕಿಗೇ ಕಷ್ಟಪಡೊ ಬಡವ್ರನ್ನ ದೇವ್ರ ಹೆಸರಲ್ಲಿ ಸುಲೀತಾರೆ. ಪ್ರಾರ್ಥನೆ ಮಾಡ್ತ ಕಣ್ಮುಚ್ಚಿ ಅಂತಾರೆ. ಅವ್ರು ಉದ್ದೇಶಪೂರ್ವಕವಾಗಿ ಕಣ್ಣುಬಿಟ್ಟು ನೋಡದೆ ಇರ್ಲಿ ಅಂತನೇ ಹಾಗೆ ಹೇಳದು. ಪ್ರಾರ್ಥನೆ ಮಾಡ್ತ ಎರಡೂ ಕೈ ಮುಗ್ದು ಉದ್ದಕ್ಕೆ ನೆಲಕ್ಕೆ ಅಡ್ಡಬೀಳಬೇಕು, ಅವರು ಎತ್ತರ ನೇರ ನಿಲಬಾರ್ದು ಅಂತ. ಇದೆಂಥ ಧರ್ಮಾಚರಣೆ, ಭಕ್ತಿ? ಬೇರೆಯೋರನ್ನ ಮೋಸಮಾಡಬೋದು ಅಂತ ತಮ್ಮನ್ನೆ ತಾವು ದೇವ್ರು ಅಂದ್ಕಂಡುಬಿಟ್ಟಿದಾರೆ. ಹಾಗಾದ್ರೆ ದೇವ್ರು ಎಲ್ಹೋದ ಅಂತ ಆಶ್ಚರ್ಯ ಆಗುತ್ತೆ. ಇಲ್ಲಿ ನಡೆದಾಡೊ ದೇವರಂದ್ರೆ ಪಾದ್ರಿಗಳು, ನನ್‌ಗಳು ಮತ್ತೆ ಅವರ ನೆಂಟರು ಅಷ್ಟೆ. ಬೇರೆ ಯಾರೂ ಅಲ್ಲ.

ನಾವು ಸಣ್ಣ ಮಕ್ಳೆನೋ ಅನ್ನೋ ಹಾಗೆ ಪೂಜೆ, ಪ್ರಸಾದದ ನೆಪದಲ್ಲಿ ಜಪತಪದ ಹೆಸರಲ್ಲಿ ಎಷ್ಟು ದಿನಾಂತ ನಮ್ಗೆ ಮೋಸ ಮಾಡ್ತಾರೆ ಅವರು? ಮಕ್ಕಳು ಸಹ ಬೆಳೆದ ಮೇಲೆ ಅವಕ್ಕೆ ಹೇಳಿದ್ದನ್ನೆಲ್ಲ ಕೇಳಿ, ಬಾಯಿ ಕಳಕಂಡು ತಲೆ ಅಲ್ಲಾಡಿಸಿಬಿಡಲ್ಲ. ದಲಿತರಿಗೆ ನಿಜ ಏನೂಂತ ಗೊತ್ತಾಗ್ತ ಇದೆ; ಉಳಿದೋರು ಮೇಲೆ ಹತ್ತಕ್ಕೆ ತಮ್ಮನ್ನ ಕಲ್ಲು ಮೆಟ್ಲು ಮಾಡ್ಕಂಡಿದಾರೆ ಅಂತ ಗೊತ್ತಾಗಿದೆ; ದೇವರು, ಪೂಜೆ, ಚರ್ಚ್ ಹೆಸರಲ್ಲಿ ತಮ್ಮನ್ನ ಗುಲಾಮರಾಗಿ ಮಾಡಿದಾರೆ ಅಂತ ಗೊತ್ತಾಗಿದೆ. ಅವರಿಗೆ ಅನುಭವ ಆಗಿದೆ, ಬಡವರ ಸೇವೆ ಹೆಸರಲ್ಲಿ ಉಳಿದೋರು ಮೇಲೆ ಹೋದರೂ ಅಂಥೋರು ನಿಜವಾಗಿ ತುಳಿದೇ ಮೇಲೆ ಹೋಗಿದಾರೆ ಅಂತ. ಧರ್ಮನ ತಮ್ಮ ಲಾಭಕ್ಕೆ ತಕ್ಕಂಗೆ ತಿರುಚಿ, ತಪ್ಪನ್ನು ಮುಚ್ಚಿಟ್ಕಂಡಿರೊ ಉಳದೋರು ಯಾವತ್ತೂ ತಮಗೆ ಮನುಷ್ರು ಅಂತ ಗೌರವ ಕೊಟ್ಟಿಲ್ಲ ಅನ್ನದು ದಲಿತರಿಗೆ ಗೊತ್ತಾಗಿದೆ.

ಅಷ್ಟೇ ಅಲ್ಲ, ದಲಿತರಿಗೆ ಇದೂ ಗೊತ್ತಾಗಿದೆ, ದೇವ್ರು ಹಿಂಗಿಲ್ಲ, ಹೀಗೆ ಮಾತಾಡಿಲ್ಲ ಅಂತ. ತಾವೂ ಸಹ ದೇವರ ತರನೇ ಹುಟ್ಟಿದೋರು ಅಂತ ಅವರಿಗೆ ಅರಿವಾಗಿದೆ. ಇದುವರೆಗೆ ದೇವರ ಜೊತೆ ಅವರಿಗಿದ್ದ ಈ ಹೋಲಿಕೆ, ಸಾಮ್ಯತೇನ ತುಳಿದು ಹಾಳುಮಾಡಿ ನಾಶಮಾಡಿದ್ದು ಗೊತ್ತಾಗಿ ಅವರು ಈಗ ಮತ್ತೆ ಕೇಳ್ತಿದಾರೆ, ಒಳಗೆ ಹೊಸ ಶಕ್ತಿ ತುಂಬಿದೆ. ಮತ್ತೆ ಗೌರವದಿಂದ, ಆತ್ಮಗೌರವದಿಂದ, ಎಲ್ಲ ಮನುಷ್ರನ್ನ ಪ್ರೇಮದಿಂದ ನೋಡ್ತ ಬದುಕ್ತಿದಾರೆ. ನನ್ನ ಪ್ರಕಾರ ನಿಜವಾದ ಭಕ್ತಿ ಅಂದರೆ ಇದೇ.

❒



# ಎಂಟು

ಒಂದು ಸಣ್ಣ ಹಳ್ಳೀಲಿ ದಲಿತ ಹುಡುಗಿಯಾಗಿ ಹುಟ್ಟಿದೆ, ಬೆಳೆದೆ, ಓದಿದೆ, ಐದು ವರ್ಷ ಕೆಲಸ ಮಾಡಿದೆ, ಆಮೇಲೆ ಈಗಾಗ್ಲೆ ಹೇಳಿದಂಗೆ ಕಾನ್ವೆಂಟ್ ಸೇರಿದೆ. ಅಲ್ಲಿ ಹೋಗಿ ಸೇರಕ್ಕೆ ಮುಂಚೆ ಆ ಪಂಥ ಶುರು ಮಾಡಿದ ಮಹಿಳೆ ಬಗ್ಗೆ ತಿಳಕೊಂಡೆ. ಆಕೆ ಬಡವರಿಗೆ, ಕೆಳವರ್ಗದ ಜನರಿಗೆ ಹೇಗೆ ಕಾಳಜಿ, ಪ್ರೀತಿ ತೋರ್ಸಿದ್ರು; ಬಡವರ ಮಕ್ಳಿಗೆ ಶಿಕ್ಷಣ ಕೊಟ್ಟು ಮುಂದೆ ಬರ್ಲಿಕ್ಕೆ ಹೇಗೆ ಸಹಾಯ ಮಾಡಿದ್ರು ಅಂತೆಲ್ಲ ಗೊತ್ತಾದ ಮೇಲೆ ಅವರ ಕಡೆ ಸೆಳೆತ ಶುರುವಾಯ್ತು. ಕಾನ್ವೆಂಟಿಗೆ ನಾ ಸೇರಿದಾಗ ನಾನೂ ನನ್ನ ಬದುಕನ್ನ ಉಪಯುಕ್ತವಾಗಿ, ಅರ್ಥಪೂರ್ಣವಾಗಿ ಆಗೋ ಹಾಗೆ ಏನು ಸಾದ್ಯನೊ ಅದೆಲ್ಲ ಮಾಡಬೇಕು ಅನ್ನೊ ಆಸೆ ಇಟ್ಕಂಡಿದ್ದೆ. ಅಲ್ಲಿ ಸೇರಿದ್ಮೇಲೇ ಅಲ್ಲಿನ ನಿಜ ಪರಿಸ್ಥಿತಿ ಏನಂತ ನಂಗೆ ನಿಧನಿಧಾನ ಚೂರುಚೂರೇ ಅರ್ಥ ಆಗಿದ್ದು.

ನಮ್ಮನೆಯೋರು, ಫ್ರೆಂಡ್ಸ್ ಅಲ್ಲಿ ಹೋಗದ ಹಾಗೆ ನನ್ನ ತಡೆಯಕ್ಕೆ ಏನೇನು ಮಾಡ್ಬೇಕೋ ಅದೆಲ್ಲ ಮಾಡಿದ್ರು, ಎಲ್ಲನೂ ಹೇಳಿದ್ರು. ಒಳಗೆ ಹೋದಮೇಲೆ ಎಲ್ಲ ನಾವಂದುಕೊಂಡಿದ್ದಕ್ಕಿಂತ ಬೇರೆನೇ ಆಗಿರುತ್ತೆ ಅಂತ ನಿಂಗೆ ಗೊತ್ತಾಗುತ್ತೆ ನೋಡು ಅಂದ್ರು. ನಾನೇ ಹೋದೆ ಏನೋ ಮಹಾಸಾಧನೆ ಮಾಡಿಬಿಡ್ತೀನಿ ಅನ್ನೊ ಕನಸು ಇಟ್ಕಂಡು. ಕಾನ್ವೆಂಟ್ ಒಳಗೆ ಹೋದ್ಮೇಲೇ ಅವರು ಎಚ್ಚರಿಸಿದ್ದೆಲ್ಲ ಎಷ್ಟು ನಿಜಾಂತ ನಂಗೆ ಅರ್ಥ ಆಗಿದ್ದು. ಆದ್ರೂ ಅಲ್ಲೇ ನಿಂತೆ, ನೋಡೇ ಬಿಡಣ, ನನ್ನ ಕೈಲಿ ಎಷ್ಟು ಸಾದ್ಯನೊ ಅದನ್ನೆಲ್ಲ ಒಂದು ಕೈ ಪ್ರಯತ್ನ ಮಾಡೇ ಬಿಡಣ ಅಂತ.

ಕಾನ್ವೆಂಟ್ ಅನ್ನೋದೇ ಒಂದು ಲೋಕ. ಅಲ್ಲಿ ನಾವು ತುಂಬ ಮಾತಾಡ್ತಿದ್ವಿ. ದೇವರು, ಏಸು, ಅವರ್ ಲೇಡಿ, ನಮ್ಮ ಪಂಥದ ನಿಯಮಗಳು ಇತ್ಯಾದಿಗಳ ಬಗ್ಗೆ. ಸಮಯಕ್ಕೆ ಸರಿಯಾಗಿ ಒಳ್ಳೆ ಊಟ ಮಾಡ್ತಿದ್ವಿ. ನಮ್ಮ ನಿಯಮಗಳಿಗೆ ಸರಿಯಾಗಿ ಪ್ರಾರ್ಥನೆ ಮಾಡ್ತಿದ್ವಿ. ಈ ಪವಿತ್ರ ದಿನ; ಆ ಪವಿತ್ರ ದಿನದ ಆಚರಣೆ; ಅವತ್ತೆಲ್ಲ ಇಡೀ ದಿನ ಭೂರಿ ಭೋಜನ. ಅವತ್ತಿನ ದಿನ ತಿನ್ನಲು ಎಷ್ಟು ತರದ ತಿಂಡಿ ಇರ್ತಿತ್ತು ಅಂದ್ರೆ ಯಾವುದನ್ನ

ತಿನ್ನೋದು ಯಾವುದನ್ನ ಬಿಡೋದು ಅಂತ ನಿರ್ಧಾರ ಮಾಡದೇ ಕಷ್ಟ. ನಂಗಂತೂ ಎಷ್ಟೋ ಸಲ ಆ ಖಾದ್ಯಗಳ ಹೆಸ್ರೇ ಗೊತ್ತಿರಲಿಲ್ಲ. ಗೊತ್ತಿದ್ದರೂ ಅವುಗಳ ಹೆಸರು ಹೇಳಕ್ಕೂ ಬರ್ತಿರಲಿಲ್ಲ. ಅಲ್ಲಿನ ಸುಖ ಸವಲತ್ತು ಅಂದ್ರೆ ಹಾಗಿರದು.

ಆಹಾರ ಹೀಗಿದ್ದರೆ ಕಟ್ಟಡ ಇನ್ನೂ ಜೋರಾಗಿತ್ತು. ನಂ ಹಳ್ಳಿಯ, ನಂ ಜಾತಿಯ ಅಷ್ಟೂ ಜನ ಅಲ್ಲಿದ್ದು ಬಿಡಬೋದು ಅಷ್ಟು ದೊಡ್ಡ ಕಾನ್ವೆಂಟ್ ಕಟ್ಟಡ, ದೊಡ್ಡ ಶಾಲೆ. ನಂಗಂತೂ ಅದೊಂತರ ವಿಚಿತ್ರ ಅನಸದು. ಒಂತರಾ ನಾಚಿಕೆನೂ ಆಗದು. ಯಾರೋ ಒಬ್ರು ದೊಡ್ಡ ನಾಯ್ಕರ್ ಮನೇಲಿದೀನೆನೋ ಅನಿಸೋದು. ನಂಗೆ ಮುಕ್ತವಾಗಿ ಮಾತಾಡಲಿಕ್ಕೆ, ತಿನ್ನಲಿಕ್ಕೆ, ನಡಕಳಲಿಕ್ಕೇ ಆಗ್ತಿರಲಿಲ್ಲ. ಹಂಗನಿಸೋದು.

ಆದರೆ ನೀನು ತಿಂದುಂಡು ಮಲಗಿ ನಿನ್ನಷ್ಟಕ್ಕೆ ನೀನು ಆರಾಮ ಇದ್ದುಬಿಡಕ್ಕೆ ಆಗ್ತಿತ್ತಾ? ಊಂಹ್ಞೂಂ, ಸಾದ್ಯನೇ ಇಲ್ಲ. ಒಳಗೊಳಗೇ ವಾದ, ಅತೃಪ್ತಿ, ಭಿನ್ನಮತ ಹೊಗೆಯಾಡ್ತ ಇರ್ತಿತ್ತು. ಎಂತ ಹೊಟ್ಟೆಕಿಚ್ಚು, ಸ್ಪರ್ಧೆ, ಅಹಂಕಾರ ಇರ್ತಿತ್ತು ಅಂದ್ರೆ ಬದುಕುಳಿಬೇಕು ಅಂದರೆ ಸಂಚು, ಮೋಸ, ವೇಷ ಎಲ್ಲ ಮಾಡಬೇಕಾಗಿತ್ತು. ನೀವು ಯೋಚ್ನೆನೇ ಮಾಡಿರಲ್ಲ, ಆದರೆ ಅದೇ ನಿಂ ಯೋಚನೆ ಅಂತ ಆರೋಪ ಹೊರಿಸೋರು; ನೀವು ಆಡದೇ ಇದ್ದ ಮಾತನ್ನ ಆಡೇಬಿಟ್ಟಿದಿರ ಅಂತ ಸಾಧಿಸಿ ತೋರಿಸೋರು. ಇಂಥೋರೇ ಅಲ್ಲಿ ತುಂಬಿದಾರೆ. ಕೊನೇ ಪ್ರತಿಜ್ಞೆ ಸ್ವೀಕರಿಸೊ ತಂಕ ಸಣ್ಣ ಮಕ್ಕಳ ತರ ಅವರ ಹಿಂದೆ ಮುಂದೆ ಓಡಬೇಕು, ಅವರ ತಾಳಕ್ಕೆ ತಕ್ಕಂಗೆ ಕುಣಿಯಬೇಕು, ಅವರು ಕಾಲಬೆರಳಲ್ಲಿ ತೋರಿಸಿದ್ದನ್ನ ತಲೆ ಮೇಲೆ ಹೊತ್ತು ಕುಣೀಬೇಕು. ನಂಗಂತೂ ಸಾಕಾಗಿ ಹೋಯ್ತು. ನನ್ನೇ ನಾನು ಕೇಳ್ಕೊಂಡೆ, ಇದಕ್ಕಾ ನಾನಿಲ್ಲಿಗೆ ಬಂದಿದ್ದು ಅಂತ. ನನಗೂ ನನ್ನದೇ ಗುರಿ ಇದೆ, ಯೋಚನೆಗಳಿವೆ, ನನ್ನ ಜನಕ್ಕೋಸ್ಕರ ನಾನಿಲ್ಲಿ ಬಂದಿದೀನಿ, ಇವರು ಇವರಿಗಿಷ್ಟ ಬಂದಂಗೆ ಮಾಡ್ಕೊಂಡು ಹೋಗ್ಲಿ ಅಂದುಕೊಂಡೆ.

ಆದರೆ ವಾಸ್ತವವಾಗಿ ಹಾಗಾಗಲಿಕ್ಕೆ ಸಾಧ್ಯ ಇರಲಿಲ್ಲ. ಯಾವಾಗ್ಲೂ ನಮ್ಮ ಚರ್ಚೆ ಏನನ್ನು ತಯಾರು ಮಾಡೋದು, ಏನನ್ನು ತಿನ್ನೋದು, ಏನನ್ನ ಆಚರಿಸೋದು, ಹೇಗೆ ಎಂಜಾಯ್ ಮಾಡೋದು, ಏನನ್ನ ಕಟ್ಟೋದು, ಏನನ್ನ ಒಡೆಯೋದು, ಏನನ್ನ ಕೊಳ್ಳೋದು, ಎಲ್ಲಿ ಮಾರೋದು ಎಂಬಿತ್ಯಾದಿ ವಿಷಯಗಳ ಬಗ್ಗೆನೆ ಇರ್ತಿತ್ತು. ಅಷ್ಟೆ. ಜನ ಯಾವತ್ತು ಯಾಕೆ ಕಷ್ಟ ಅನುಭವಿಸ್ತ ಇದಾರೆ, ಜನರಿಗೆ ಏಸುವು ಏನು ಮಾಡಿದ, ನಾನ್ಯಾಕೆ ನನ್ ಆದೆ, ಈ ಅನ್ಯಾಯಗಳ ಸರಿಪಡಿಸೋದು ಹೇಗೆ – ಈ ಪ್ರಶ್ನೆಗಳು ಅವರ ಬಾಯಿಂದ ಯಾವತ್ತೂ ಹೊರಬರ್ತಿರಲಿಲ್ಲ.

ಕಾನ್ವೆಂಟಿಗೆ ದಾನದತ್ತಿ ಬೇಕಾಷ್ಟು ಬರ್ತಿದ್ರೂ, ಪ್ರತಿಸಲ ಮನೆಗೆ ಹೋಗಿ ಬರುವಾಗ್ಲು ಏನಾರ ಉಡುಗೊರೆ ತರಬೇಕು ಅನ್ನೋ ನಿರೀಕ್ಷೆ ಇರ್ತಿತ್ತು. ಇವರ ಮಟ್ಟಕ್ಕೆ, ಪರಿಸ್ಥಿತಿಗೆ ಸರಿ ಹೊಂದುವಂಥ ಏನನ್ನಾದ್ರೂ ನಾನು ತರಕ್ಕೆ ಸಾಧ್ಯ ಇತ್ತಾ? ನಮ್ಮತ್ರ ಅಷ್ಟು ಆಸ್ತಿ,

ಸಂಪತ್ತಾದರೂ ಇದೆಯಾ? ಏನಾದ್ರೂ ಕಾಣಿಕೆ ತಂದ್ರೂ ಸೈತ ಕಾನ್ವೆಂಟಿಗೆ ಬೇಕಾದ್ದನ್ನ ತಂದೋರನ್ನ ಹೊತ್ತು ಮೆರೆಸೋರು. ಉಳದೋರು ಲೆಕ್ಕಕ್ಕೆ ಇಲ್ಲ, ನೀ ಯಾರು ಏನು ಎತ್ತ ಅನ್ನೋದನ್ನ ತಿಳಕಳಲಿಕ್ಕೆ ಯಾರಿಗೂ ಎಳ್ಳುಕಾಳಷ್ಟೂ ಆಸಕ್ತಿಯಿಲ್ಲ. ಮೇಲ್ಜಾತಿಯ ಶ್ರೀಮಂತ ಪ್ರಭಾವಿ ಮನುಷ್ರ ಒಡನಾಟ ಇರೋ ಶ್ರೀಮಂತ ಮನೆತನದ ನನ್‌ಗಳಿಗೆ ವಿಶೇಷ ಬೆಲೆ. ಇಲ್ಲದಿದ್ರೆ ನಿಮ್ಮತ್ರ ಬರ್ಬೇಕನ್ನೊ ವಿಚಾರನೂ ಯಾರಿಗೂ ಸುಳಿಯಲ್ಲ.

ಯೋಚ್ನೆ ಮಾಡ್ತ ಹೋದ್ರೆ, ಕಾನ್ವೆಂಟ್ ಅಂತೂ ಹೀಗಿತ್ತು, ಶಾಲೆನಾದ್ರೂ ಸರಿ ಇತ್ತಾ? ಅಂದ್ರೆ ಅದೂ ಇಲ್ಲ. ಅದು ಇದಕ್ಕಿಂತ ಅತ್ತತ್ತ. ಪ್ರತಿ ಕ್ಲಾಸೂ ಶ್ರೀಮಂತ ಮಕ್ಕಳಿಂದ ತುಂಬಿ ತುಳುಕ್ತಿತ್ತು. ಮೆದುವಾದ, ಮೈಕೈ ತುಂಬಿಕೊಂಡ ಮಕ್ಕಳು ಸಾಲಾಗಿ ಕೂತಿರೋರು. ನೀವು ಗಮನ ಸೆಳೀಬೇಕು ಅಂದ್ರೆ ನೀವು ಬೆಳ್ಳಗಿರಬೇಕು ಮತ್ತು ಕಾರಲ್ಲಿ ಬರಬೇಕು. ಸಣ್ಣಮಕ್ಕಳು ಸಹಾ ತಮ್ಮ ಊಟನ ಆಳುಗಳಿಂದ ತರಿಸಿಕೊಂಡು ಮಾಡ್ತಿದ್ವು. ಆಳುಗಳನ್ನ ಬೈಕಂಡು ತಿರುಗೋವು. ಹೆಸರಿಗೆ ನಾಕೋ ಐದೋ ಬಡ ಹುಡುಗ್ರನ್ನ ಸೇರಿಸಿಕೊಳ್ತಿದ್ರು. ಆದರೆ ಆ ನಿರ್ಭಾಗ್ಯ ಹುಡುಗರು ಶ್ರೀಮಂತ ಮಕ್ಕಳ ಗೊಡವೆಗೇ ಹೋಗದೆ ಇರೋವು, ಮೂಲೇಲಿ ಅಡಕ್ಕಂಡು ನಡುಗ್ತ. ಯಾವಾಗ ನೋಡಿದ್ರೂ ಬಡ ಮಕ್ಕಳ ಮೇಲೆ ದೂರು. 'ನಾವು ಅವರ ಜೊತೆ ಕೂರಲ್ಲ, ಅವರು ಕಗ್ರಗಿದಾರೆ, ಅವರು ಬಡವರು, ನೋಡಕ್ಕೆ ಕೆಟ್ಟದಾಗಿದಾರೆ, ಒಳ್ಳೇ ಬಟ್ಟೆ ಹಾಕಳಲ್ಲ' ಹಿಂಗೇ ಏನೇನೋ ಕ್ಯಾತೆ. ಆಟ, ನಾಟಕದ ಸಮಯದಲ್ಲೂ ಕೂಡ ಆ ಹುಡುಗ್ರು ಬಡವರ ವೇಷ ಹಾಕ್ಕಳಕ್ಕೆ ಇಷ್ಟಪಡ್ತಿರಲಿಲ್ಲ. ಆ ಶ್ರೀಮಂತ ಮಕ್ಕಳಿಗೆ ಪಾಠ ಹೇಳೋದು ದಂಡ ಅನಿಸ್ತಿತ್ತು. ಹಾಗಂತ ಬೇರೆಯೋರಿಗೆ ಹೇಳಕ್ಕಾಗ್ತ ಇರ್ಲಿಲ್ಲ, ಹೇಳಿದ್ರೂ ಅವರು ಕೇಳ್ತಿರಲಿಲ್ಲ.

ಬೆಳಿಗ್ಗೆ ಎದ್ದ ಕೂಡ್ಲೆ ಪ್ರಾರ್ಥನೆ, ಪೂಜೆ; ಮದ್ಯಾಹ್ನ, ಸಂಜೆ, ರಾತ್ರಿ ಮತ್ತೆ ಪ್ರಾರ್ಥನೆ; ಇಡೀ ದಿನ ಪ್ರಾರ್ಥನೆ. ಆದರೆ ಈ ಪ್ರಾರ್ಥನೆಗೂ, ಬದುಕಿಗೂ, ಕೆಲಸಕ್ಕೂ ಸಂಬಂಧನೇ ಇರಲಿಲ್ಲ. ಒಂದ್ಕಡೆ ಪ್ರಾರ್ಥನೆ ಮಾಡೋದು ನಂ ಕರ್ತವ್ಯ ಅಂದುಕೊಂಡಿರತಿದ್ರು, ಆದರೆ ಮತ್ತೊಂದು ಕಡೆ ಆ ಅಧಿಕಾರ ಮತ್ತು ಸ್ಥಾನ ನಿಜವಾಗಬೇಕಾದ್ರೆ ನಿಜದ ಕ್ರೈಸ್ತ ಬದುಕನ್ನ ಬದುಕೋದೂ ಸಾಧ್ಯವಿಲ್ಲ ಅಂದ್ಕಂಡಿದ್ರು.

ನನ್‌ಗಳು ಮೂರು ಪ್ರತಿಜ್ಞೆಗಳನ್ನು ಸ್ವೀಕರಿಸಬೇಕು: ಬಡತನ, ಪರಿಶುದ್ಧತೆ, ವಿಧೇಯತೆ. ಇವು ನಮ್ಮನ್ನು ಬಿಡುಗಡೆಗೊಳಿಸಿ ಜನ ಸಾಮಾನ್ಯರಿಗಾಗಿ ಬದುಕೋ ಹಂಗೆ ಮಾಡ್ತಾವೆ ಅಂತ ಹೇಳ್ತಿದ್ರು. ಆದರೆ ನಿಜದಲ್ಲಿ ಈ ಪ್ರಮಾಣಗಳು ಜನರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಕ್ಕೆ ಮತ್ತು ಗುಲಾಮರಾಗಿಸಲಿಕ್ಕೆ ಬಳಕೆ ಆಗ್ತಿದ್ದವು.

ನಾನು ಕಾನ್ವೆಂಟಿಂದ ಹೊರಗಿದ್ದಾಗ ಬಡತನದ ಅನುಭವವಿತ್ತು. ಬಡವರ ಮಧ್ಯನೇ ಬದುಕಿದ್ದೆ. ಆದರೆ ಕಾನ್ವೆಂಟ್ ಒಳಗೆ ಬಡತನದ ಲವಲೇಶವೂ ಇರಲಿಲ್ಲ. ವೈಭವೋಪೇತ ಪಂಜರದ ಸುಖದಲ್ಲಿ ಸಿಕ್ಕಿಬಿದ್ದು ಅಲ್ಲೇ ಸುತ್ತಿಸುತ್ತಿ ಸುತ್ತುತಾ ಇದ್ವಿ.

ನಾವು ದೇವ್ರ ಮಕ್ಕಳು, ಅದಕ್ಕೇ ನಾವು ಎಲ್ರನ್ನೂ ಪ್ರೀತಿ ಮಾಡಬೇಕು ಅಂತ ನಿರ್ಗಳವಾಗಿ ಹೇಳೋರು. ಆದ್ರೆ ಅವರು ಮಾತಾಡ್ತಿದ್ದ ಜನ, ಶಾಲೆಗೆ ಸೇರಿಸಿಕೊಳ್ತಿದ್ದ ಮಕ್ಕಳು, ತಮ್ಮ ಬಂಧುಗಳು ಅಂತ ಅವರು ಹೇಳ್ಕತ ಇದ್ದೋರು ಎಲ್ಲ ಶ್ರೀಮಂತರೇ. ನಾವೇನಾದ್ರೂ ಅದನ್ನ ಪ್ರಶ್ನೆ ಮಾಡಿದ್ರೆ ದೇವರು ಕೇವಲ ಬಡವರಿಗಷ್ಟೆ ಅಲ್ಲ, ದುಡ್ಡಿರೋರೂ ದೇವರ ಮಕ್ಕಳೇ ಅಂತಿದ್ರು. 'ಬಡವರು ನಿನ್ನ ಜೊತೆ ಯಾವಾಗಲೂ ಇರುತ್ತಾರೆ' ಅಂತ ದೇವರು ಹೇಳಿದಾನೇಂತ ಹೇಳ್ತಿದ್ರು. ನಗದೋ ಅಳದೋ ಗೊತ್ತಾಗ್ತ ಇರಲಿಲ್ಲ.

ವಿಧೇಯತೆ ಎನ್ನುವ ಪ್ರತಿಜ್ಞೆ ಬಗ್ಗೆ ಮತ್ತೆಮತ್ತೆ ನೆನಪು ಮಾಡಿಕೊಡುತ್ತ ಬಲವಂತವಾಗಿ ಶರಣಾಗುವ ಹಂಗೆ ಮಾಡ್ತಿದ್ರು. ನಾವು ತಲೆನೇ ಎತ್ತೋ ಹಾಗಿಲ್ಲ. ನಮ್ಮ ಕಾಲಕ್ಕೆ ತಕ್ಕಂತೆ ಯೋಚನೆ ಮಾಡಕ್ಕೂ ನಮಗೆ ಅವಕಾಶ ಇರಲಿಲ್ಲ. ನಮ್ಮ ಬದಲಾಗಿ ತಾವೇ ನಮ್ಮ ಯೋಚನೆ ಮಾಡೋರು. ಸಣ್ಣ ಮಕ್ಕಳಿಗೆ ಇರೋವಷ್ಟು ಹಕ್ಕು, ಸ್ವಾತಂತ್ರ್ಯನೂ ನಮಗಿಲ್ಲ. ಅವರ ಜೊತೆ ನನ್ನ ಕಾಲ ಮುಗೀತ ಬಂದಾಗ ಅಂದ್ಕೊಂಡೆ, ಹೋಗ್ಲಿ, ಇದೆಲ್ಲ ಹಾಳಾಗ್ಲಿ, ಕೊನೇಪಕ್ಷ ನನ್ನನ್ನ ಒಂದು ಹಳ್ಳಿಗೋ ಅಥವ ಬಡ ಮಕ್ಕಳಿರೋ ಶಾಲೆಗಾದ್ರೂ ಹಾಕ್ಲಿ ಅಂತ. ಆದ್ರೆ ಅಲ್ಲೂ ವಿಧೇಯತೆ, ನಿಷ್ಠೆ ಹೆಸರು ಹೇಳಿ ನನ್ನ ಬಾಯಿ ಮುಚ್ಚಿಸಿದ್ರು. ನನ್ನನ್ನ ಎಲ್ಲಿ ಕಳಿಸ್ತಾರೋ ಅಲ್ಲಿಗೇ ನಾನು ಹೋಗ್ಬೇಕು, ಅವರು ಹೆಂಗೆ ಹೇಳ್ತಾರೆ ಅದನ್ನೆ ಮಾಡ್ಬೇಕು ಅಂದ್ರು. ಎಲ್ಲವನ್ನು ನಿಷ್ಠೆಯ ದೃಷ್ಟಿಯಿಂದ ನೋಡು ಅಂತ ಉಪದೇಶ ಮಾಡಿದ್ರು. ಅವರ ಅಧಿಕಾರ ಬಾವುಟದಂಗೆ ಮೇಲೆ ಹಾರೋದನ್ನ ನೋಡ್ತ ಕೂರಬೇಕಾಯ್ತು. ಅದನ್ನ ಮುಂದುವರೆಸಿಕೊಂಡು ಹೋಗಕ್ಕೆ ನಮ್ಮಂಥೋರು ಬಲಿಪಶುಗಳಾಗಬೇಕು. ಇವನ್ನೆಲ್ಲ ನಂಬಿಕೆಯ ದೃಷ್ಟೀಲಿ ಹೇಗೆ ನೋಡೋದು ಅಂತ ನಂಗೆ ಗೊತ್ತಾಗ್ಲಿಲ್ಲ.

ಅವರ ಮೂರೂ ಪ್ರತಿಜ್ಞೆಗಳು ವಾಸ್ತವವಾಗಿ ಸಾಮಾನ್ಯ ಜನರಿಂದ, ಜನಬದುಕಿಂದ ಅವರನ್ನ ಬೇರೆ ಮಾಡುವಂಥವೇ ಆಗಿವೆ. ಅವರು ತಾವು ಬೇರೆ ಯಾವ್ದೋ ಲೋಕಕ್ಕೆ ಸೇರಿರೋರು ಅಂತ ಅಂದ್ಕಳೋ ಹಾಗೆ ಮಾಡಿವೆ.

ಒಬ್ರು ನನ್ ಆಗಕ್ಕೆ ಮುಂಚೆ ಮತ್ತೆ ಕಾನ್ವೆಂಟ್ ಸೇರಕ್ಕೆ ಮುಂಚೆ ದೀರ್ಘವಾದ ತರಬೇತಿ ಮತ್ತು ತಯಾರಿ ಇರುತ್ತೆ. ಆಗ ಅವರು ನಮಗೇನು ಕಲಿಸಿದ್ರೊ ಅದು ಮೆಚ್ಚಬೇಕಾದಂಥದು. ಅವರು ನಮಗೆ ನಾವು ಪ್ರತಿಯೊಬ್ಬರು ವಿಭಿನ್ನ, ವಿಶಿಷ್ಟ, ಜಗತ್ತಲ್ಲೆ ನಮ್ಮಂತೆ ಇರೋರು ಮತ್ತಾರೂ ಇಲ್ಲ ಅಂತ ತಿಳಿಸಿದ್ರು. ದೇವರು ನಮ್ಮೆಲ್ಲರನ್ನೂ ವಿಶೇಷವಾಗಿ, ನಮದೇ ಆದ ರೀತಿಯಾಗಿ ಸೃಷ್ಟಿಸಿದ ಅಂದ್ರೆ ಕೇಳಕ್ಕೆ ಖುಶಿಯಾಗದು.

ಆದರೆ ನಿಜವಾದ ಆಚರಣೆಗೆ ಬಂದ್ರೆ ಅಲ್ಲಿ ಆ ಭಾವನೇನೆ ಇರಲಿಲ್ಲ. ನಾವೆಲ್ಲ ಒಂದೇ ಅಚ್ಚಿನಿಂದ ಎರಕ ಹೊಯ್ದು ತಯಾರಾಗಿರುವರೇನೋ ಅನ್ನೋ ತರ ಹಾಗೇ

ನಡಕೋಬೇಕು ಅಂತಿದ್ರು. ಯಾರೂ ಭಿನ್ನವಾಗಿ ಯೋಚಿಸಲಿಕ್ಕಾಗಲೀ, ಮಾತಾಡಲಿಕ್ಕಾಗಲೀ ಬಿಡ್ತಿರಲಿಲ್ಲ. ಸುಪೀರಿಯರ್ ಹೇಳಿದ್ದನ್ನ ಸುಮ್ನೆ ಒಪ್ಕೋಬೇಕು, ಅದೇನು ದೈವಸಂದೇಶವೋ ಅನ್ನೋ ಹಾಗೆ. ನೀವು ಅದನ್ನ ಒಪ್ಪಲಿಲ್ಲ ಅಥವಾ ಬೇರೆ ತರ ಮಾತಾಡಿದ್ರಿ ಅಂದ್ರೆ ಅಲ್ಲಿಗೆ ಮುಗಿತು. ನಿನ್ನ ಬಾಲ್ಯದಲ್ಲೇ ಏನೋ ಐಬು ಇದೆ, ನಿನ್ನ ಬೆಳೆಸಿದ್ರಲ್ಲೇ ಏನೋ ಭಯಂಕರ ತಪ್ಪು ಆಗಿದೆ ಅಂತ ಹೇಳಕ್ಕೆ ಶುರು ಮಾಡೋರು. ನಂ ಕುಟುಂಬದಲ್ಲೇ ಏನೋ ಮಾರಣಾಂತಿಕ ಲೋಪವಿದೆ ಅಂತ ನಮ್ಮ ಜಾತಕ ತಿಳಕಂಡೋರಂಗೆ ಹೇಳೋರು.

ಕೊನೆಗೂ ಏನು ತೀರ್ಮಾನಕ್ಕೆ ಅವರು ಬಂದರು ಅಂದ್ರೆ 'ವಿಧೇಯತೆ' ಮತ್ತು 'ವಿನಯ' ನನಗೆ ಅನ್ವಯಿಸುವುದೇ ಇಲ್ಲ ಏಕೆಂದರೆ ಅಸಲಿಗೆ ದೇವರು ನನ್ನನ್ನ ತನ್ನ ಸೇವೆಗಂತ ಕರೆದೇ ಇಲ್ಲ! ಒಟ್ಟಾರೆ ತಾವು ಯೂರೋಪು, ಅಮೆರಿಕಗಳಲ್ಲಿ ಕಲಿತು ಬಂದ ಏನೇನೋ ಸಿದ್ಧಾಂತಕ್ಕೆ ತಕ್ಕಂತೆ ಹೊಂದಿಸಿ ಕೂರಿಸಕ್ಕೆ ನಮ್ಮನ್ನು ಬದಲಾಯಿಸಕ್ಕೆ ಹೊರಡ್ತಾರೆ ಅನಿಸುತ್ತೆ. ಅವರು ತಯಾರು ಮಾಡಿದ ಚೌಕಟ್ಟಲ್ಲಿ ಸರಿಯಾಗಿ ನಾವು ಕೂತಿಲ್ಲ ಅಂದ್ರೆ ನಮಗೆ ಅಲ್ಲಿ ನಿಜವಾಗಿ ಕೆಲಸ ಇದೆಯೋ ಇಲ್ವೋ ಅಂತ ಅನುಮಾನ ಪಡಕ್ಕೆ ಶುರು ಮಾಡ್ತಾರೆ. ನಾವು ಬದಲಾಗ್ಲೇಬೇಕು. ಕೊನೆಯ ಪರೀಕ್ಷೆ, ವಿಶ್ಲೇಷಣೆ ಹೊತ್ತಿಗೆ ನಾವು ನಾವಾಗಿರಕ್ಕೆ ಸಾಧ್ಯವಿಲ್ಲ. ನಮ್ಮನ್ನ ನಾವೇ ನಾಶ ಮಾಡ್ಕಂಡು ಪೂರ್ತಿ ಬೇರೆಯೇ ಆಗಿ ತಯಾರು ಮಾಡ್ಕೊಬೇಕು ಅಂತ ಅಂತಾರೆ. ಇಂಥ ಹುಚ್ಚತನಾನ ಮತ್ತೆಲ್ಲಾದ್ರೂ ನೋಡಕ್ಕಾಗುತ್ತಾ?

ಕಾನ್ವೆಂಟಲ್ಲಿ ಎಷ್ಟೋ ಜನರಿಗೆ ದಲಿತ ಅಂದ್ರೆ ಏನು ಅಂತನೇ ಗೊತ್ತಿರಲಿಲ್ಲ. ಗೊತ್ತಿದ್ದ ಕೆಲವರಿಗೆ ಅವ್ರ ಬಗ್ಗೆ ಕೆಟ್ಟ ಅಭಿಪ್ರಾಯನೇ ಇತ್ತು, ಹಂಗೇ ಕೆಟ್ಟದಾಗೇ ಮಾತಾಡ್ತಿದ್ರು. ದಲಿತರ ಬಗ್ಗೆ ಹಾಗೆ ಮಾತಾಡಿದಾಗೆಲ್ಲ ಒಳಗೇ ಕುಗ್ಗಿ ಹೋಗ್ತಿದ್ದೆ. ಅವರಿಗೆ ಆಗ ನಾನು ದಲಿತ ಅಂತ ಗೊತ್ತಿರಲಿಲ್ಲ, ನಂಗೂ ಹಾಗಂತ ಹೇಳಿಕೊಳ್ಳೋ ಧೈರ್ಯ ಇರಲಿಲ್ಲ. ಹೇಳಿಬಿಟ್ರೆ ಅವರು ನಂಜೊತೆ ಹೇಗೆ ಮಾತಾಡ್ಬೋದು, ನಡಕೋಬೋದು ಅಂತ ಹೆದರ್ತ ಇದ್ದೆ. ದಮನಿತರ, ದಲಿತರ ಬಗ್ಗೆ ಅವರು ಮಾತಾಡೋದನ್ನ ಕೇಳಿದಾಗ ಇಂಥೋರು ಹೇಗೆ ಮೇಲುಕೀಳಿಲ್ಲದ ದೇವರ ರಾಜ್ಯವನ್ನು ತರಲು ಸಾಧ್ಯ ಅಂತ ಆಶ್ಚರ್ಯ ಆಗೋದು.

ದಲಿತರ ಬಗ್ಗೆ ಅವ್ರು ಆಡ್ತಿದ್ದ ಕೆಲವು ಮಾತು ಹೀಗಿದ್ವು:

'ಅವರನ್ನೆಲ್ಲ ನಮ್ಮನೆಗಳ ಒಳಗೆ ನಾವು ಹೇಗೆ ಬಿಡಕ್ಕೆ ಸಾಧ್ಯ? ಕೊನೆಗೆ ನಾವೇ ಬಿಟ್ಕೊಬೇಕು ಅಂತ ಬನ್ನಿ ಅಂತ ಕರೆದ್ರೂ, ಅವರೇ ನಮ್ಮನೆ ಒಳಗೆ ಬರಲ್ಲ. ಅವರಿಗೇ ತಮ್ಮ ಜಾಗ ಯಾವ್ದು ಅಂತ ಗೊತ್ತಿದೆ.'

‘ಆ ಪ್ರಾಣಿಗಳಿಗೆ ನಾವು ಹೆಚ್ಚೇನೂ ಮಾಡಕ್ಕಾಗಲ್ಲ. ಅವರಿಗೇನೂ ಮಾಡಲೂಬಾರದು. ಮಾಡಿದರೂ ಅದು ನಾಗರಹಾವಿಗೆ ಸಹಾಯ ಮಾಡಿದ ಹಾಗೇ.’

‘ನೀನು ಅವರಿಗಾಗಿ ಏನೇ ಮಾಡಿದ್ರೂ ಕೂಡ ಅವು ಯಾವತ್ತಿಗೂ ಉದ್ಧಾರ ಆಗೋಲ್ಲ. ಅವರ ಸ್ವಭಾವನೇ ಅಷ್ಟು.’

‘ಇತ್ತೀಚೆಗೆ ಅವರೂ ಒಳ್ಳೆ ಉಟ್ಟುತೊಟ್ಟು ಮಾಡ್ತಿದಾರೆ. ಒಂದೊಂದ್ಸಲ ಅವರು ಯಾರಂತನೂ ಗುರುತು ಹಿಡಿಯಕ್ಕಾಗಲ್ಲ ಗೊತ್ತಾ?’

‘ಸರ್ಕಾರ ಅಂತೂ ಹೋಗೋಗಿ ಈ ಜನಕ್ಕೆ ಏನೇನೋ ಸವಲತ್ತು, ಸೌಕರ್ಯ ಕೊಡುತ್ತೆ. ಅಕ್ಷರದ ಗಂಧನೇ ಇಲ್ದಿದ್ದ ಅನಕ್ಷರಸ್ಥರಿಗೆ ಎಂತಕ್ಕೆ ಅಷ್ಟೆಲ್ಲ ಸವಲತ್ತು?’

ಅವರೇನಾದ್ರೂ ಕೆಟ್ಟದು ಅಥವಾ ಅಸಹ್ಯವಾದದ್ದರ ಬಗ್ಗೆ ಮಾತಾಡ್ಬೇಕಿದ್ರೆ ಅದನ್ನ ಹರಿಜನ ಅಂತ ಪಟ್ಟಿಗೆ ಸೇರಿಸ್ತಿದ್ರು. ಇಂಥ ಕಳಂಕಿತ ಮನಸ್ಸುಗಳು ಏನು ತಾನೇ ಸೇವೆ ಮಾಡಿಯಾವು? ಅವರು ಹಾಗೆ ಮಾತಾಡೋವಾಗೆಲ್ಲ ನಂಗೆ ಮನಸಿಗೆ ಒಳಗೊಳಗೇ ನೋವಾಗದು, ಅವರು ಹೀಗೆ ಆಡಿ, ಮಾಡುವುದನ್ನು ನೋಡಿಯೂ ಅನುಭವಿಸಿಯೂ ಒಳ್ಳೇ ಮೇಲ್ಜಾತಿಯೋರ ತರ ಸುಖದ ಬದುಕನ್ನ ಬದುಕ್ತಿದೀನಲ್ಲ ಅನಿಸದು.


ಮೂರು ವರ್ಷ ಆದ್ಮೇಲೆ ಬೇರೆ ಜಾಗಕ್ಕೆ ವರ್ಗ ಮಾಡಿದ್ರು. ಆಮೇಲೆ ಒಂದೇ ತಿಂಗಳಲ್ಲಿ ಐದು ಕಡೆ ಕಳಿಸಿದ್ರು. ಅವರಿಗೆ ಪವಿತ್ರಾತ್ಮನೇ ಈ ಸೂಚನೆ ಕೊಡ್ತಿದಾನೆ ಅಂತ ನಂಗೆ ಭರವಸೆ ಕೊಟ್ರು. ಆದರೆ ನಂಗೆ ಪವಿತ್ರಾತ್ಮ ಏಕೆ ಒಂದು ನಿರ್ಧಾರಕ್ಕೆ ಬರದೆ ಇಷ್ಟು ಅನಿಶ್ಚಿತವಾಗಿದಾನೆ ಅಂತ ಆಶ್ಚರ್ಯ ಆಗೋದು.

ಆಗಲಿ, ಇಷ್ಟೆಲ್ಲ ಆದ್ಮೇಲೂ ನನ್ನನ್ನ ಒಂದು ಹಳ್ಳಿಯ ಸಣ್ಣ ಶಾಲೆಗೆ ಎಲ್ಲಾದ್ರೂ ಖಂಡಿತ ಹಾಕಿಯಾರು ಅಂತ ಭರವಸೆ ಇತ್ತು. ಆದರೆ ಕೊನೆಗೆ ಅವರು ನನ್ನ ಇನ್ನೊಂದು ದೊಡ್ಡ ಊರಿನ ದೊಡ್ಡ ಶ್ರೀಮಂತರ ಮಕ್ಕಳ ಶಾಲೇಲ್ಲಿ ಪಾಠ ಮಾಡು ಅಂತ ಕಳಿಸಿದ್ರು. ನಂಗೆ ಆಶಾಭಂಗವಾಯ್ತು. ಈ ಶ್ರೀಮಂತ ಮಕ್ಕಳಿಗೆ ವಿದ್ಯೆ ಹೇಳಿಕೊಟ್ಟು ಅವರು ಮುಂದೆ ಹೋಗೋ ಹಂಗೆ ಮಾಡುವ ಅರ್ಥಹೀನ ಕೆಲಸಕ್ಕೆ ದೇವರು ನನ್ನನ್ನ ಕರೆಸಿಕೊಂಡನೇ ಅಂತ ಆಶ್ಚರ್ಯ ಆಯ್ತು. ಮತ್ತೆಮತ್ತೆ ಇದಕ್ಕಿಂತ ಹೊರಜಗತ್ತಿನ ಯಾವ್ದಾದ್ರೂ ಹಳ್ಳಿಯ ಸಣ್ಣ ಶಾಲೇಲಿ ಕೆಲಸ ಮಾಡೋದು ಉತ್ತಮ ಅನಿಸ್ತು. ಆ ಶಾಲೇಲಿ ಆ ಸಿರಿವಂತ ಮಕ್ಕಳ ಬೇಡಿಕೆಗಳಿಗೆ ತಕ್ಕಂತೆ ನಾನು ನಡೆದುಕೊಳ್ಳಬೇಕಿತ್ತು. ಹಾಗೆ ನೋಡಿದ್ರೆ ಇಡೀ ಶಾಲೆನ ಅವರ ಬೇಡಿಕೆಗಳೇ ಆಳೋವು. ಅದನ್ನ ಪ್ರಶ್ನೆ ಮಾಡಿದ್ರೆ ಕಾನ್ವೆಂಟಿನ ಬಹುಪಾಲು ಆದಾಯ ಆ ಸಿರಿವಂತ ಕುಟುಂಬಗಳಿಂದಲೇ ಬರ್ತಿದೆ ಅನ್ನೋರು. ಅಂದ್ರೆ ಸುಮ್ನೆ ಕಣ್ಮುಚ್ಚಿಕೊಂಡು ಎಳ್ಕಂಡು ಹೋಗ್ತ ಇರಬೇಕು ಅಂತಾಯ್ತು.

ಒಂದು ಶಾಲೆನ ಕೇವಲ ಲಾಭಕ್ಕಾಗಿ ನಡೆಸಬಹುದೆ ಹಾಗಾದರೆ? ಅವರು ಹೇಳೋ ಪ್ರಕಾರ ಇಲ್ಲಿ ಗಳಿಸಿದ ಹಣದಿಂದ ಬೇರೆಕಡೆ ನಿಜವಾದ 'ಸೇವೆ' ಮಾಡಬಹುದು ಅಂತ. ಅದಕ್ಕೆ ನಾನು ಆಯ್ತು, ನೀವು ಲಾಭ ಮಾಡ್ತ ಇರಿ, ಆದ್ರೆ ನನ್ನನ್ನು ಮಾತ್ರ ನಿಜವಾದ 'ಜನ' ಇರೋ ಕಡೆ ಕಳಿಸಿ ಅಂದೆ. ಮತ್ತೆ ವಿಧೇಯತೆ, ನಿಷ್ಠೆಯ ಹೆಸರು ಹೇಳಿ ಬಾಯ್ಮುಚ್ಚಿಸಿದರು.

ಐದು ತಿಂಗಳು ಆ ಶಾಲೇಲಿ ಹಲ್ಲುಮಟ್ಟೆ ಕಚ್ಚಿ ಕೆಲಸ ಮಾಡಿ ಅಲ್ಲೂ ಒಂದು ಕೈ ನೋಡಣ ಅಂತ ಪ್ರಯತ್ನಪಟ್ಟೆ. ಆದರೆ ಎಲ್ಲೀತಂಕ ನೀನು ಮಾರುವೇಷದಲ್ಲಿರಬೋದು? ಎಷ್ಟು ದಿನದ ತಂಕ ಎಣ್ಣೆ ನೀರು ಸೇರಿ ಒಟ್ಟೊಟ್ಟು ಬದುಕಬಲ್ಲವು? ಆರನೇ ತಿಂಗಳು ನಂಗಿನ್ನು ಈ ಹಿಂಸೆ ಸಹಿಸಕ್ಕೆ ಸಾಧ್ಯನೇ ಇಲ್ಲ ಅಂತನಿಸಿ ನನ್ನ ಸಾಮಾನು ಪ್ಯಾಕ್ ಮಾಡಿ ಕಾನ್ವೆಂಟಿಂದ ಹೊರಬಂದೆ. ಅಷ್ಟು ಮಾಡಕ್ಕೆ ಮುಂಚೆ ನಾನೇನೇನು ಅನುಭವಿಸಿದೆ ಅನ್ನೋದು ದೇವ್ರಿಗೆ ಮಾತ್ರ ಗೊತ್ತು. ಅವರು ನನ್ನನ್ನ ಹೋಗಕ್ಕೆ ಅಷ್ಟು ಸುಲಭದಲ್ಲಿ ಬಿಡ್ತನೂ ಇರ್ಲಿಲ್ಲ. ಏನೇನೋ ಹೋರಾಟ ನಡೆಸಿ ಅಂತೂ ಕೊನೆಗೆ ಮನೆಗೆ ಬಂದೆ. ವಾಪಾಸು ಬಂದಮೇಲಿನ ನನ್ನ ಕಷ್ಟನಷ್ಟಗಳೂ ಏನು ಸಾಮಾನ್ಯದವಾಗಿರಲಿಲ್ಲ.

❐



# ಒಂಭತ್ತು

ಕೊನೆಗೂ ಕಾನ್ವೆಂಟ್ ಬಿಡಕ್ಕೆ ಧೈರ್ಯ ಮಾಡಿದಾಗ ಅದೊಂತರ ಯಾರೂ ಗುರ್ತು ಪರಿಚಯ ಇಲ್ದಂತ ಜಗತ್ತಿಗೆ ಬಂದಂಗೆ ಆಗಿಬಿಡ್ತು. ಕಾನ್ವೆಂಟಿನ ಆವರಣದೊಳಗೆ ಸುರಕ್ಷಿತವಾಗಿ ಬದುಕಿ, ಹೊತ್ತೊತ್ತಿಗೆ ತಿಂದುಂಡು, ಸುಖಜೀವನ ನಡೆಸ್ತ ಇದ್ದೋಳು ಈಗ ಹೊರಜಗತ್ತಿನ ಎಲ್ಲ ಕಷ್ಟಗಳನ್ನು ಒಬ್ಬಳೇ ಎದುರಿಸಬೇಕಾಗಿ ಬಂತು. ನಂಗೋಸ್ಕರ ಕೆಲಸ, ಅನ್ನ, ನೀರು ನಾನೇ ಹುಡುಕ್ಕೋಬೇಕಾಯ್ತು.

ಎಲ್ಲರ ಬಗ್ಗೆ, ಎಲ್ಲದರ ಬಗ್ಗೆ ಹೆದರಿಕೆ ಆಗ್ತಿತ್ತು. ಎಲ್ಲಿಗೆ ಹೋಗೋದು ಅಂದ್ರೂ ವಿಚಿತ್ರವಾಗಿ, ಅಪರಿಚಿತವಾಗಿ ಅನಿಸೋದು. ಉದ್ಯೋಗ ಹುಡುಕೋ ಕೆಲಸ ಅಂತೂ ದೊಡ್ಡ ಬೇತಾಳ ಎದುರು ನಿಂತಷ್ಟು ಕಷ್ಟ ಕೊಡ್ತು. ಪೇಪರಲ್ಲಿ ನೋಡಿ ಕೆಲಸಕ್ಕೆ ಅರ್ಜಿ ಹಾಕಿಯೇ ನನ್ನ ಪ್ರಯತ್ನ ಮಾಡ್ಬೇಕಿತ್ತು. ಕೆಲಸ ಸಿಗಕ್ಕೆ ಲಂಚ ಕೊಡಕ್ಕೆ ನಂಗೆ ಸಾಧ್ಯವಿತ್ತೆ? ಅಥವಾ ನನಗಾಗಿ ತಮ್ಮ ಪ್ರಭಾವ ಬಳಸೋರಾದ್ರೂ ಇದ್ರಾ ಯಾರಾದ್ರೂ?

ಪೇಪರಲ್ಲಿ ನೋಡಿ ಹಾಕಿದ ಒಂದು ಕಡೆ ಇಂಟರ್‌ವ್ಯೂಗೆ ಕರೆ ಬಂತು. ಹೋದೆ. ನೂರಾಒಂದು ಪ್ರಶ್ನೆ ಕೇಳಿ ಹೇಳಿ ಎಲ್ಲ ಆದ್ಮೇಲೆ, ರಿಟನ್ ಟೆಸ್ಟ್ ಕೂಡಾ ಬರೆದ್ಮೇಲೆ, ತಿಂಗಳಿಗೆ ನಾನೂರು ರೂಪಾಯಿ ಸಂಬಳ ಅಂದ್ರು. ಇವತ್ತಿನ ಬೆಲೆಗಳಲ್ಲಿ ಪ್ರಪಂಚದ ಯಾವ ಮೂಲೇಲಾದ್ರೂ ಬರೀ ನಾನೂರಕ್ಕೆ ಬದುಕಕ್ಕಾಗುತ್ತಾ? ಕೊನೆಗೂ ನಂಗೆ ಕೆಲಸ ಸಿಗಲಿಲ್ಲ. ಏಕೆ? ನಾನು ದಲಿತಳು. ಆ ಶಾಲೆಯ ಆಡಳಿತದ ಸ್ಥಾನದಲ್ಲಿರೋರು ಹಾಗೂ ನಡೆಸೋರು ಒಬ್ಬ ನಾಡಾರ್. ಅವರು ನಾಡಾರ್ ಹೆಣ್ಣುಮಕ್ಕಳನ್ನಷ್ಟೆ ತಗೊಳೋದಂತೆ. ಹಾಗಾದ್ರೆ ಯಾರು ಬೇಕಾದ್ರೂ ಅಪ್ಲೈ ಮಾಡಬೋದಂತ ಹೇಳಿ ಇಂಟರ್‌ವ್ಯೂ ಮಾಡೋದಾದ್ರೂ ಯಾಕೆ? ಅವರೇನಾದ್ರೂ ಪೇಪರಿನಲ್ಲೇ ನಾಡಾರ್ ಮಹಿಳೆಗೆ ಮಾತ್ರ ಅಂತ ಹಾಕಿದ್ದರೆ ನಾನಾದ್ರೂ ಯಾಕಲ್ಲಿ ಹೋಗ್ತಿದ್ದೆ?

ಅಂದ್ರೆ ನಾಡಾರ್ ಶಾಲೆಗಳು ನಾಡಾರರನ್ನೇ, ನಾಯ್ಕರ್ ಶಾಲೆಗಳು ನಾಯ್ಕರರನ್ನೇ ಸೇರಿಸಿಕೊಳ್ಳುತ್ತವೆ. ಆಮೇಲೆ ಅಯ್ಯರ್ ಶಾಲೆಗಳು ಅಯ್ಯರ್ ಮಕ್ಕಳಿಗಷ್ಟೆ ಕಲಿಸುತ್ತವೆ.

ಎಲ್ಲ ಹೀಗೇ ಆದ್ರೆ ಎಲ್ಲ ದಲಿತ ಮಕ್ಕಳು ಎಲ್ಲಿ ಹೋಗಿ ತಲೆ ಚಚ್ಚಿಕೊಳ್ಳೋದೋ, ದೇವರಿಗೇ ಗೊತ್ತು. ದಲಿತ ಶಾಲೆ ಅಂತ ಒಂದಿದೆಯಾ ಅಂತ ನಂಗೆ ಗೊತ್ತಿಲ್ಲ.

ದಲಿತರೇನಾದ್ರೂ ಯಾರೂ ತಮ್ಮನ್ನ ಗಮನಿಸಲ್ಲ ಅಂತ ಕ್ಯಾಥೊಲಿಕ್ ನನ್‌ಗಳು, ಪಾದ್ರಿಗಳು ನಡೆಸೊ ಶಾಲೆಗೆ ಹೋಗಿ ಸೇರ್ಕಂಡ್ರೆ ಸ್ಕೂಲಿನ ಸ್ಟಾಂಡರ್ಡ್ ಕುಸಿಯುತ್ತೆ ಅಂತಾರೆ. ಎಲ್ಲ ದಲಿತರನ್ನೂ ಏನೂ ಉಪಯೋಗಿಲ್ಲದೋರು ಎಂಬ ಪಟ್ಟ ಕಟ್ಟಿ ಅತ್ತತ್ತ ಅಂಚಿಗೆ ಸರಿಸಿಟ್ಟುಬಿಡ್ತಾರೆ. ಹೀಗಿರ್ತ ನಾನು ಎಲ್ಲಿ ಕೆಲಸ ಹುಡುಕಲಿ, ಎಲ್ಲಿ ಸಿಕ್ಕೀತು ಅನ್ನೋದೂ ಅನಿಶ್ಚಿತವೇ.

ನನಗೆ ವಯಸ್ಸಾಗ್ತನೇ ಇದೆ. ಯಾರಾದ್ರೂ ಮನೇಲಿ ಕೂತು ಕೆಲಸವಿಲ್ಲದೆ ಅನ್ನ ತಿನ್ನಕ್ಕಾಗುತ್ತಾ? ಅಪ್ಪ ಅಮ್ಮ ಬದುಕಿರೊ ತಂಕ ಅದು ಕೆಲವ್ರಿಗೆ ಸಾಧ್ಯ ಆಗ್ಬಹುದು. ಅವರ ನಂತರ ಯಾರು? ನಮ್ಮ ಒಡಹುಟ್ಟಿದೋರಿಗೆ ಅವರವರದ್ದೇ ಸಂಸಾರವಿರುತ್ತೆ. ಹತ್ರದ ಗೆಳೆಯರ ಬಳಗನೂ ಎಷ್ಟು ಕಾಲ ಸಹಾಯ ಮಾಡೀತು?

ಬದುಕಿಗೆ ಒಂದು ದಾರಿಯಾಗಿ ಕೆಲಸ ಹುಡುಕೋದು ಇಷ್ಟು ಕಷ್ಟ ಇದ್ರೆ ಮತ್ತೂ ಒಂದು ದೊಡ್ಡ ಕಷ್ಟನ ನಾನು ಎದುರಿಸಬೇಕಾಯ್ತು – ಅದು ಒಂಟಿಯಾಗಿ ಹೊರಜಗತ್ತಿನಲ್ಲಿ ಓಡಾಡೋದು. ಒಂದು ಹೆಣ್ಣು ಒಬ್ಬಳೇ ತನ್ನ ಕಾಲ ಮೇಲೆ ನಿಂತಿದಾಳೆ ಅಂತ ಗೊತ್ತಾದ್ರೆ ಎಲ್ಲ ತರದ ಗಂಡಸರು ತಮ್ಮ ಹಲ್ಲು ಗಿಂಜಿಕೊಂಡು ಅವರ ಸುತ್ತಮುತ್ತ ಸುಳೀತಾರೆ. ನಿಂಗೆಷ್ಟು ಸಿಟ್ಟು ಬಂದ್ರೂ, ಅವರ ಹಾವಭಾವ, ನಗುವಿನ ಬಗ್ಗೆ ವಾಕರಿಕೆ ಬರೋವಷ್ಟು ಅಸಹ್ಯ ಅನಿಸಿದ್ರೂ, ಏನು ಮಾಡಕ್ಕಾಗುತ್ತೆ ನೀನು? ಏನೇನೋ ಯೋಚನೆ ಮಾಡ್ತಿವಿ. ಏನೇನೋ ಆಸೆ, ಗುರಿ ಇಟ್ಕೋತೀವಿ. ಏನೇನನ್ನೋ ಓದ್ತೀವಿ. ಆದರೆ ನಿಜ ಜೀವನದಲ್ಲಿ ಎಲ್ಲ ಉಲ್ಟಾಪಲ್ಟಾ ಆಗುತ್ತೆ. ಸುರಕ್ಷೆ ಇಲ್ದೆ ಅಲೆಮಾರಿ ತರ ಹೆದರಿ ಅಲೆಯುವ ಅನಿವಾರ್ಯ ಪರಿಸ್ಥಿತಿ ಬರುತ್ತೆ.

ನಿಜಜೀವನದಿಂದ ಏಳೆಂಟು ವರ್ಷ ದೂರ ಇದ್ದು ಮತ್ತೆ ಈ ಸಮಾಜ ಬದುಕಿಗೆ ವಾಪಸಾಗಬೇಕು ಅಂದ್ರೆ ತುಂಬ ಕಷ್ಟ. ಕಾನ್ವೆಂಟಿನ ಒಳಗೆ ಕುರ್ಚಿ ಮೇಲೆ ಕೂತು ಕಷ್ಟ ಅನುಭವಿಸೊ ಜನಸಮುದಾಯದ ಬಗ್ಗೆ, ನ್ಯಾಯ ಕಾನೂನಿನ ಬಗ್ಗೆ ಎಷ್ಟು ಬೇಕಾದ್ರೂ ಮಾತಾಡ್ಬೋದು. ಈ ಗುಂಪಿಗೆ ಒಳ್ಳೇದಾಗ್ಲಿ, ಆ ಪಂಥಕ್ಕೆ ಒಳ್ಳೇದಾಗ್ಲಿ ಅಂತ ಎಷ್ಟು ಬೇಕಾದ್ರೂ ಪ್ರಾರ್ಥನೆ ಮಾಡ್ತ ನೀನು ಆರಾಮದ ಬದುಕು ಬದುಕ್ಬೋದು. ಆದ್ರೆ ಅಲ್ಲಿ ಬೇರೆಯವರ ನೋವು ಅನುಭವವಾಗ್ಲಿಕ್ಕೆ ಸಾದ್ಯನೇ ಇಲ್ಲ.

ಆದರೆ ಇಲ್ಲಿ ನಂಗೆ ಎಲ್ಲ ಅನುಭವಕ್ಕೆ ಸಿಗ್ತ ಇದೆ. ಇವತ್ತು ನಂಗೆ ಹಸಿವೆ ಅಂದ್ರೇನು, ಯಾರೂ ಇಲ್ಲದೆ ಒಂಟಿಯಾಗಿ ಕಾಯಿಲೆಯಿಂದ ನರಳೋದು ಅಂದ್ರೇನು, ಕೈಯಲ್ಲಿ ಒಂದು ಪೈಸೆ ಇಲ್ದೆ ನಿಂತು ನೋಡದು ಅಂದ್ರೇನು, ಬೀದೀಲಿ ರಕ್ಷಣೆ ಇಲ್ದೆ ನಡೆಯೋದು,

ಸರಿಯಾದ ಬಟ್ಟೆ ಇಲ್ಲದಿರೋದಕ್ಕೆ ಕಸಿವಿಸಿ ಅನುಭವಿಸೋದು, ಅನಾಥವಾಗಿ ತೀರ ಒಬ್ಬಂಟಿಯಾಗೋದು ಅಂದ್ರೇನು, ಕೈಲಿ ಅಧಿಕಾರ ಬಲ ಹಣ ಸ್ಥಾನ ಯಾವ್ದೂ ಇಲ್ದೆ ಪ್ರವಾಹದ ವಿರುದ್ಧ ಈಜೋದು ಅಂದ್ರೇನು ಅಂತ ಚೆನ್ನಾಗಿ ಗೊತ್ತಾಗಿದೆ. ಆದ್ರೆ ನಂಗೆ ಒಂದ್ಸಲ ಕೂಡ ಅಷ್ಟೊಂದು ಸುಖ, ಸವಲತ್ತಿದ್ದ ಕಾನ್ವೆಂಟ್ ಬಿಟ್ಟ ಬಗ್ಗೆ ಪಶ್ಚಾತ್ತಾಪ ಇಲ್ಲ. ಅದು ನಂಗೆ ನಕಲಿ ಬದುಕಿನ ತರವೇ ಆಗಿತ್ತು. ಯಾವಾಗ್ಲೂ, ಎಷ್ಟೊತ್ತಿಗೂ ಬೇರೆಯವರ ಎದುರು ಸುಳ್ಳು ವೇಷದಲ್ಲಿ ನಿಲ್ಬೇಕಾಗಿತ್ತು. ಇಪ್ಪತ್ನಾಲ್ಕು ಗಂಟೆನೂ ವೇಷ ಹಾಕ್ಕಂಡಿರೋದು ಯಾರಿಗಾದ್ರೂ ಎಲ್ಲಿ ಸಾಧ್ಯ ಆಗುತ್ತೆ?

ಕಾನ್ವೆಂಟಲ್ಲಿ ಇದ್ದಾಗ ನಂಗೆ ಯಾವಾಗ್ಲೂ ನಾವು ಜನ ಸಾಮಾನ್ಯರಿಂದ ದೂರ ಆಗಿದೀವಿ, ನಮಗವರು ಅನ್ಯರಾಗಿದಾರೆ ಅನಸದು. ಹಾಗಿರೋದಕ್ಕೇ ನಮಗೆ ಕೆಲ 'ಉಚ್ಚ' ಸ್ಥಾನ, ಹಣ, ಸುಖಜೀವನ ಬಂದು ಜನಸಾಮಾನ್ಯರು ಯಾವತ್ತೂ ನಮ್ಮತ್ರ ಬರದಂತೆ ಮಾಡಿದಾರಾ ಅಂತನೂ ಅನಿಸಿತ್ತು. ಆದರೆ ಈಗ ನನ್ನತ್ರ ನಂದು ಅಂತ ಏನೂ ಇಲ್ಲ. ಈಗ ನಾನೂ ಅವರ ತರನೇ ಇರೋದ್ರಿಂದ ಜನ ಮುಕ್ತವಾಗಿ ನನ್ನತ್ರ ಹೇಳಿಕೊಳ್ಳಕ್ಕೆ ಸಾಧ್ಯ ಆಗಿದೆ. ನಾನೂ ಸಹಜವಾಗಿ ವರ್ತಿಸಕ್ಕೆ ಸಾಧ್ಯವಾಗಿದೆ.

ಕಾನ್ವೆಂಟಲ್ಲಿ ನಮ್ಮ ಮೇಲೆ ಯಾವ ಮಾಟಮಂತ್ರ ಮಾಡಿಬಿಡ್ತಾರೋ ಗೊತ್ತಿಲ್ಲ, ಆದ್ರೆ ಈ ಏಳೆಂಟು ವರ್ಷಗಳಲ್ಲಿ ನನ್ನ ಬುದ್ಧಿ ಮಬ್ಬಾಗಿದೆ ಮತ್ತು ಗೊಂದಲಗೊಂಡಿದೆ. ಕೆಲವು ರೀತಿಯಿಂದ ಅವರು ನಿಮ್ಮನ್ನ ಪೂರ ಬದಲಾಯಿಸಿಬಿಡ್ತಾರೆ. ಆ ಬದಲಾವಣೇನೇ ಮತ್ತೆ ಬದುಕು ಕಟ್ಟಿಕೊಳ್ಳಕ್ಕೆ ನಂಗೆ ತೊಂದರೆ ಕೊಟ್ಟಿದ್ದು ಅನಿಸುತ್ತೆ. ಎಷ್ಟೊತ್ತಿಗೂ ಇದನ್ನ ಬಿಡಿ, ಅದನ್ನ ನಿಗ್ರಹಿಸಿ, ಹೀಗೆ ಮಾಡಿ, ಹಾಗೆ ಇರಿ ಅಂತ ಹೇಳಿಹೇಳಿ ನಮಗೆ ನಾವೇ ಅಪರಿಚಿತರಾದಂಗೆ ಅನಿಸಿಬಿಡುತ್ತೆ. ಆ ವಿಶೇಷ ಜಗತ್ತಿನ ಪಂಜರದೊಳಗೆ ಬಂಧಿಯಾಗಿದ್ದೆ ಅಂತಲೇ ಈಗ ಹೊರಗೆ ಬಂದ್ಮೇಲೆ ವಾಸ್ತವ ಜಗತ್ತಿನ ಶಕ್ತಿಗಳ ಜೊತೆ ಗುದ್ದಾಡದು ಕಷ್ಟ ಆಗ್ತಿದೆ. ನಮ್ಮ ಗುರುತು, ಕುರುಹುಗಳನ್ನ ಸಂಪೂರ್ಣ ಅಳಿಸಿಬಿಡೋದೇ ಕಾನ್ವೆಂಟಿನ ತಂತ್ರ.

ಕಾನ್ವೆಂಟ್ ಒಳಗೆ ಹೋದಾಗ ದೇಹ ಮತ್ತು ಮನಸು ಎರಡರಲ್ಲು ನಾನೊಂಥರ ಸಾಗವಾನಿ ಕಟ್ಟಿಗೆ ಹಂಗೆ ಗಟ್ಟಿ ಇದ್ದೆ. ಧೃಢವಾಗಿದ್ದೆ. ಆದ್ರೆ ಹೊರಗೆ ಬರೋ ಹೊತ್ಗೆ ನನ್ನೆಲ್ಲ ಶಕ್ತಿನೂ ಕಳಕಂಡಂಗೆ ಅನಿಸ್ತು. ಗಾಳಿ ಬಂದ್ರೆ ಉದುರೋಗೋ ನುಗ್ಗೇ ಗಿಡದಂಗೆ ಆಗ್ಬಿಟ್ಟೆ. ಅಲ್ಲಿ ಹೋದ್ಮೇಲೆ ಎಲ್ಲ ಕಾಯಿಲೆ, ನೋವುಗಳೂ ನನ್ನ ಮುತ್ತಿದ್ವು. ನನ್ನ ಮನಸೂ ಅಷ್ಟೆ ನಾನು ಅರೆಬದುಕು ಅತವಾ ಕಾಲುವಾಸಿ ಬದುಕು ಬದುಕೋ ಹಂಗೆ ಹೊಡತ ತಿಂದು ಕೆಡವಿದಂಗೆ ಕೆಳಕ್ಕೆ ಬಿತ್ತು. ಹಾಗಿದ್ದಾಗ ಇನ್ನು ಸೇವೆ ಮಾಡೋದು ಎಲ್ಲಿಂದ ಬಂತು?

ಆದರೆ ಯಾರ ದಯೆಯೊ, ಕರುಣೆಯೊ ನಾನು ಎಚ್ಚರವಾದೆ. ಹೊರಗೆ ಬಂದೆ. ಬದುಕಿನ ದಾರಿ ಕಷ್ಟನೇ ಆಗಿರಬೋದು, ಆದ್ರೂ ಪ್ರಾಮಾಣಿಕವಾಗಿ ಮನಃಪೂರ್ತಿ

ಬದುಕ್ತ ಇರೋದಕ್ಕೆ ನಂಗೆ ಸಮಾಧಾನ ಇದೆ. ಜನಸಾಮಾನ್ಯರ ಜೊತೆಗೆ ಸಾಮಾನ್ಯ ಬದುಕು ನಡೆಸ್ತ ಇರೊ ಬಗ್ಗೆ ನಂಗೆ ಒಂದು ರೀತಿಯ ತೃಪ್ತಿ ಇದೆ. ನಾನು ಉಸಿರಾಡಬಲ್ಲೆ, ಮುಕ್ತವಾಗಿ ಸರಳವಾಗಿ, ನೀರಿಂದ ಹೊರಬಿದ್ದ ಮೀನು ಅಂತೂ ಕೊನೆಗೆ ನೀರೊಳಗೆ ಬಂದು ಸೇರಿದ ಹಾಗೆ. ಕಾನ್ವೆಂಟಿನ ಒಳಗಿನ ಬಡವರ ಸೇವೆ ಅನ್ನೊ ಮಾತುಗಳ ಬಗ್ಗೆ ಸಂಪೂರ್ಣ ನಂಬಿಕೆ ಕಳಕೊಂಡುಬಿಟ್ಟಿದೀನಿ. ಹಣ, ಅಧಿಕಾರ, ಶಿಕ್ಷಣ, ಸ್ಥಾನ ಇಟ್ಟುಕೊಂಡು ಐಷಾರಾಮಿ ಬದುಕು ಬದುಕ್ತ ಬಡವರ ಸೇವೆ ಮಾಡ್ತಿದಿನಿ ಅನ್ನಬೋದು. ಆದರೆ ಮನುಷ್ಯತ್ವನೇ ಇಲ್ಲದಿದ್ದ ಮೇಲೆ ಅದೆಂತಹ ಸೇವೆ ಆದೀತು?

ಈಗ ಏನೇನೋ ಯೋಚನೆಗಳು ಬಂದು ನನ್ನ ಮುತ್ತುತ್ತಿದಾವೆ. ನಾನೀಗ ರೆಕ್ಕೆ ಮುರಿದ ಹಕ್ಕಿ ತರ. ರೆಕ್ಕೆ ಮುರಿದ ಮೇಲೆ ಅದು ಪಂಜರದಲ್ಲಿದ್ದರಷ್ಟೆ ಸುರಕ್ಷಿತ. ಹೊರಗೆ ಬಂದ್ರೆ ರೆಕ್ಕೆನ ಪಟಪಟ ಬಡೀಬೋದು, ಆದರೆ ವ್ಯರ್ಥ, ಯಾಕಂದ್ರೆ ಹಾರಕ್ಕಾಗಲ್ಲ. ನಾನೀಗ ಅದೇ ಪರಿಸ್ಥಿತೀಲಿ ಇದೀನಿ.

ಅವರ ನೀತಿ, ನಿಯಮ, ಕಾನೂನುಗಳಿಂದ ಕಾನ್ವೆಂಟಲ್ಲಿ ನನ್ನ ಕತ್ತರಿಸಿ ಹಾಕಿದ್ರು, ಕೆತ್ತಿದ್ರು, ಹಾಳು ಮಾಡಿದ್ರು. ಅದಕ್ಕೇ ಇವತ್ತು ಹೊರಜಗತ್ತಿನಲ್ಲಿ ಎಡವುತ್ತ ಮುಗ್ಗರಿಸುತ್ತ ಇದೀನಿ. ನನ್ನ ವಯಸ್ಸಲ್ಲಿ ಹೀಗೆ ಇರಬೇಕಿತ್ತ ಅನ್ನೋದೇ ನನ್ನನ್ನ ತುಂಬ ಗಾಸಿಗೊಳಿಸುತ್ತೆ.

ನನ್ನ ರೆಕ್ಕೆಗಳ ಗಾಯ ಯಾವತ್ತು ಮಾಯ್ದು, ಮತ್ತೆ ಹಾರೋ ಅಷ್ಟು ಬಲ ಯಾವತ್ತು ಬರುತ್ತೆ ಅಂತ ಗೊತ್ತಿಲ್ಲ. ಹೇಗೆ ಜನ ರೆಕ್ಕೆಯಿಲ್ಲದ ಹಕ್ಕಿನ ಕೋಲು, ಕಲ್ಲಿಂದ ಹೊಡದು ಇನ್ನಷ್ಟು ಗಾಯ ಮಾಡ್ತಾರೋ ಹಾಗೆ ನನ್ನನ್ನೂ ಎಷ್ಟೋ ಜನ ಮಾತು, ಕ್ರಿಯೆಗಳಿಂದ ಗಾಯಗೊಳಿಸಿದಾರೆ. ಆದ್ರೂ ನಾನು ಮುಂದೆ ಹೋಗ್ತಿದೀನಿ ಅಂತ ಗೊತ್ತು, ಹೆಜ್ಜೆ ಮೇಲೆ ಹೆಜ್ಜೆ ಇಟ್ಟು, ನಿಧನಿಧಾನವಾಗಿ.

ನನ್ನ ಒಳ್ಳೇ ದಿನಗಳಲ್ಲಿ ಜೊತೆ ಇದ್ದೋರೆಲ್ಲ ಈಗ ಸಂಬಂಧ ಕಡಕೊಂಡಿದಾರೆ. ಮತ್ತೆ ಕೆಲವ್ರು ನನ್ನ ಕಷ್ಟ ತಿಳಕೊಂಡು ಸಮಾಧಾನ ಮಾಡ್ತೀವಿ, ನಿನ್ನ ಗಾಯಕ್ಕೆ ಮುಲಾಮು ಹಚ್ತೀವಿ ಅಂತ ಬಂದು ಇನ್ನಷ್ಟು ಗಾಯಗೊಳಿಸಿ ನೋವು ಮಾಡಿ ಕೊನೆಗೆ ಅವರೂ ಹೋಗಿದಾರೆ. ಈ ಎಲ್ಲ ನೋವುಗಳ ಜೊತೆಗೇ ನನ್ನ ಆಳದಲ್ಲಿ ಎಲ್ಲೋ ಒಂದು ಖುಷಿನೂ ಇದೆ. ಈಗಲೂ ಧೈರ್ಯ ಇದೆ, ಹೆಮ್ಮೆ ಇದೆ, ಬದುಕುವ ಹಂಬಲ ಇದೆ, ಬದುಕಬಲ್ಲೆ ಎಂಬ ವಿಶ್ವಾಸ ಇದೆ.

ಸದ್ಯಕ್ಕೆ ನಂಗೆ ಮುಂದಿನದು ಅಷ್ಟು ಸರಿಯಾಗಿ ಕಾಣಿಸ್ತಿಲ್ಲ. ಆದ್ರೂ ಕೆಲವರಿಗಾದ್ರೂ ಉಪಯೋಗ ಆಗುವಂಥ ಅರ್ಥಪೂರ್ಣ ಬದುಕನ್ನು ಬದುಕಬೋದು ಅನಿಸಿದೆ. ಸುಳ್ಳುನಗು ನಗ್ತ ಮೋಸದ ಬದುಕು ಬದುಕೊ ಬದಲು ನಿಜವಾದ ಕಣ್ಣೀರು ಸುರಿಸಿ ಬದುಕುವುದೇ ಮೇಲು ಅಂತ ನಂಗೆ ನಾನೇ ಸಮಾಧಾನ ಮಾಡಿಕೊಂಡಿದೀನಿ. ❒

## ಕೊನೆಗೂ..

ನನ್ ಆದ್ಮೇಲೆ ಮೂರು ವರ್ಷ ಮದ್ರಾಸಿನ ಒಂದು ಕಾನ್ವೆಂಟಲ್ಲಿ ಗಣಿತ ಪಾಠ ಹೇಳ್ತ ಕೆಲಸ ಮಾಡಿದೆ. ಮೂರನೇ ವರ್ಷದ ಕೊನೆಗೆ ಬೇರೆ ಕಡೆ ವರ್ಗ ಮಾಡಿದಾರೆ ಅಂತ ಗೊತ್ತಾಯ್ತು. ಯಾವ್ದಾದ್ರೂ ಹಳ್ಳಿಯ, ಸಣ್ಣ ಶಾಲೆಗೆ ಕಳಿಸಿದ್ರೆ ಒಳ್ಳೇದು ಅನಸಿತ್ತು. ಆದರೆ ಆ ಕಾನ್ವೆಂಟಲ್ಲಿ ಕೆಲಸ ಮಾಡ್ತಿದ್ದ ಸಿಸ್ಟರ್ ಲಿಲ್ಲಿ ನಾನು ಇಷ್ಟಪಟ್ಟಲ್ಲಿ ನನ್ನನ್ನ ಕಳಿಸಲ್ಲ, ಎಲ್ಲಿ ನನ್ನ ಅಗತ್ಯ ಇದೆಯೊ ಅಲ್ಲಿಗೆ ಕಳಿಸ್ತಾರೆ ಅಂದ್ರು. ಮೊದಲಿನಂತೇ ಪಾಠ ಹೇಳ್ಕಂಡು ಇರಕ್ಕೆ ನಂಗೇನೂ ಅಭ್ಯಂತರ ಇರ್ಲಿಲ್ಲ. ಆದರೆ ನಾನೇನು ಮಾಡೋದು? ಒಂದು ಹಳ್ಳಿಗೆ ಕಳಿಸಿದ್ರೆ ಒಳ್ಳೇದು ಅನಿಸಿತ್ತು. ಇರಲಿ, ಕಾದು ನೋಡೋಣ, ಎಲ್ಲಿಗೆ ವರ್ಗ ಮಾಡ್ತಾರೆ ಅಂತ ಅಂದ್ಕೊಂಡೆ.

ಏಪ್ರಿಲ್ ಕೊನೆಗೆ ಪರೀಕ್ಷೆ ಮುಗದು ರಜ ಬಂತು. ಮೇ ಮೊದಲ ವಾರದಲ್ಲಿ ಪ್ರಾವಿನ್ಷಿಯಲ್ ಫೋನ್ ಮಾಡಿ ಮದುರೈ ಹತ್ರ ಸಣ್ಣ ಹಳ್ಳಿ ಶಾಲೆಗೆ ಹೆಡ್ ಮಿಸ್ ಆಗಿ ನಿನ್ನ ಹಾಕಿದೀವಿ ಅಂದ್ರು. ನಂಗೆ ಖುಷಿಯಾದ್ರೂ ಹೆಡ್ ಮಿಸ್ ಆಗಿದ್ದು ಆಶ್ಚರ್ಯ ಅನಿಸಿತ್ತು. ಅದು ದೊಡ್ಡ ಶಾಲೆ. ಎಷ್ಟೋ ಟೀಚರುಗಳು ನಂಗಿಂತ ಹಿರಿಯರಿರ್ತಾರೆ. ಅವರಿಗೆ ನಾನು ಮುಖ್ಯಸ್ಥೆ ಆಗೋದು ಹೇಗೆ? ನನ್ನ ಸಾದಾ ಟೀಚರ್ ಆಗಿ ಮಾಡಿದ್ರೆ ಒಳ್ಳೇದಿತ್ತು. ನಾನು ತುಂಬ ಕಿರಿಯ ಸಿಸ್ಟರ್ ಮಾತ್ರ ಆಗಿದ್ದೆ. ನನ್ನ ಹೆಡ್‌ಮಿಸ್ ಮಾಡಿದ್ದು ತುಂಬ ಆಶ್ಚರ್ಯ ಆಯ್ತು. ಒಬ್ರು ಸೀನಿಯರ್ ಸಿಸ್ಟರಾಗಿದ್ರೆ ಚೆನ್ನಾಗಿತ್ತು ಅಂತ ಮತ್ತೆಮತ್ತೆ ಅನಿಸಿತು. ಗೊಂದಲದಲ್ಲಿ ಬಿದ್ದೆ.

ನಾನು ಹೀಗೆ ದ್ವಂದ್ವದಲ್ಲಿರುವಾಗ ಇನ್ನೊಂದು ಫೋನ್ ಕರೆ ಅವರಿಂದನೇ ಬಂತು. ಅವರು ಮೊದಲು ಹೇಳಿದ ಶಾಲೆಗೆ ನಾನು ಹೋಗ್ಬೇಕಿಲ್ಲ, ಮದ್ರಾಸಿನಲ್ಲೇ ಇನ್ನೊಂದು ಶಾಲೆಗೆ ಗಣಿತ ಹೇಳಕ್ಕೆ ಹೋಗ್ಬೇಕು ಅಂದ್ರು. ಅದಕ್ಕೂ ಆಯ್ತು ಅಂದೆ. ಆದ್ರೆ ನಂಗೆ ಗೊತ್ತಿತ್ತು, ಮದ್ರಾಸಿನ ಇನ್ನೊಂದು ಶಾಲೆ ಅಂದ್ರೆ ಮೊದಲಿನದರ ಹಾಗೇ ಶ್ರೀಮಂತ ಮಕ್ಕಳ ಶಾಲೆ ಅಂತ. ಇನ್ನೊಬ್ರು ಸಿಸ್ಟರ್ ಹತ್ರ ಈ ವರ್ಗಾವಣೆ

ಬಗ್ಗೆ ಹೇಳ್ದೆ. ನನ್ನನ್ನ ಒಂದು ಹಳ್ಳಿ ಶಾಲೆಗೆ ಹಾಕಿದ್ರೆ ಒಳ್ಳೇದಿತ್ತು ಅಂದೆ. 'ಅಲ್ಲಿಗೇ ಹಾಕಿದ್ರಂತೆ. ಆದ್ರೆ ನಮ್ಮ ಕೌನ್ಸಿಲರ್ ಸಿಸ್ಟರ್ ಮರಿಯನ್ ಅದ್ರ ವಿರುದ್ಧ ಬಿಸಿಬಿಸಿ ವಾದ ಮಾಡಿ ನಿನ್ನ ಅಲ್ಲಿಗೆ ಹಾಕಿದ್ರಂತೆ' ಅಂದರು.

'ಯಾಕಂತೆ?'

'ಜೂನಿಯರ್ ಸಿಸ್ಟರನ್ನ ಹೆಡ್‌ಮಿಸ್ ಅಂತ ಹೇಗೆ ಆರ್ಸಿದೀರಿ ಅಂತ ಕೇಳಿದ್ರಂತೆ. ಸಾದ್ಯನೇ ಇಲ್ಲ ಅಂತ ಪಟ್ಟು ಹಿಡಿದ್ರಂತೆ. ಇದುವರೆಗೆ ಈ ಪಂಥದಲ್ಲಿ ಜೂನಿಯರ್ ಸಿಸ್ಟರಿಗೆ ಆ ಸ್ಥಾನ ಕೊಟ್ಟಿದ್ದೇ ಇಲ್ವಂತೆ. ಅಷ್ಟೊತ್ತಿಗೆ ಇಲ್ಲೂ ಗಣಿತ ಪೋಸ್ಟ್ ಖಾಲಿ ಇತ್ತೂಂತ ಗೊತ್ತಾಗಿ ಇಲ್ಲಿ ಹಾಕಿದ್ರಂತೆ.'

'ಆದ್ರೆ ಹಳ್ಳಿ ಶಾಲೇಲಿ ಸಾದಾ ಗಣಿತ ಟೀಚರಾಗಿ ಕಳಿಸಬೋದಿತ್ತಲ?'

'ನಿಂಗೆ ಹತ್ತು ವರ್ಷ ಅನುಭವ ಇದೆ ಅಲ್ವ? ಅದಕ್ಕೆ ಅವರು ನಿನ್ನ ಹೆಡ್‌ಮಿಸ್ ಮಾಡ್ಬೇಕು ಅಂದ್ಕೊಂಡ್ರು. ಆದ್ರೆ ಇವರಿದಾರಲ್ಲ, ಇವರೇ ಅದ್ನ ಬೇಡ ಅಂದಿದ್ದು. ಅವರಿಗೆ ತಮಿಳು ನನ್‌ಗಳಂದ್ರೆ ಇಷ್ಟ ಇಲ್ಲ. ಅವ್ರ ಜಾತಿಯೋರು ಯಾರಾದ್ರೂ ಆಗಿದ್ರೆ ಹ್ಞೂಂ ಅಂತಿದ್ರು. ನೋಡು ನಿನ್ನ ಜೊತೆ ಬಂದೋರಲ್ಲಿ ಕೇವಲ ಸಿಸ್ಟರ್ ರೀಟಾನ್ನ ಮೆಡಿಸಿನ್ ಓದಿ ಡಾಕ್ಟರ್ ಆಗಲಿಕ್ಕೆ ಕಳಿಸಿದಾರೆ. ಯಾಕಂದ್ರೆ ರೀಟಾ ಮರಿಯನ್ ಅವ್ರ ಸಂಬಂಧಿ. ಸಿಸ್ಟರ್ ಎಡ್ನಾಗೆ ರೀಟಾಗಿಂತ ಹೆಚ್ಚು ಮಾರ್ಕ್ಸ್ ಬಂದಿದೆ. ಆದ್ರೂ ಕಳಿಸಿಲ್ಲ. ಎಡ್ನಾಗೆ ತುಂಬ ಬೇಜಾರಾಗಿದೆ. ಅವಳೇ ನಂಗಿದನ್ನ ಹೇಳಿದ್ದು. ಅವರು ಕಳಿಸಿದಲ್ಲೆ ನಾವು ಹೋಗ್ಬೇಕು. ಏನೂ ಮಾಡಕ್ಕಾಗಲ್ಲ.'

ನಾನೇನೂ ಹೇಳಲಿಲ್ಲ. ನನ್ನೆದೆ ಭಾರವಾಗಿತ್ತು. ಮೇ ಕೊನೆಗೆ ನನ್ನ ಹೊಸ ಸ್ಥಾನದಲ್ಲಿರಬೇಕು ಅಂತ ಹೇಳಿದರು. ಎಲ್ಲವನ್ನು ಸಿದ್ಧ ಮಾಡಿ ಇಟ್ಟುಕೊಂಡಿದ್ದೆ. ಅಷ್ಟೊತ್ಗೆ ಮತ್ತೆ ಅವರಿಂದ ಫೋನ್ ಬಂತು: ಆಕೆ ಹೇಳಿದ್ರು, 'ನೀನು ಮದ್ರಾಸಿಗೆ ಹೋಗೋದು ಬೇಡ, ಅದರ ಬದಲು ಟೀಚರ್ಸ್ ಟ್ರೈನಿಂಗ್ ಸ್ಕೂಲಿಗೆ ಹೋಗು. ಅಲ್ಲಿ ನಿನ್ನ ಅಗತ್ಯ ಇದೆ.'

ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ಅವರ ನಿರ್ಧಾರನ ದಿನದಿಂದ ದಿನಕ್ಕೆ ಹೀಗೆ ಬದಲಾಯಿಸ್ತ ಇರೋದು ನಂಗೆ ಕಿರಿಕಿರಿ ಆಗಲಿಕ್ಕೆ ಶುರುವಾಯ್ತು. ಹೊಸ ಜಾಗ, ಕೆಲಸಕ್ಕೆ ಅಂತ ಎಷ್ಟು ಸಲ ನಾನು ಸಿದ್ಧ ಆಗ್ಬೇಕು? ಇನ್ನುಮುಂದೆ ಯಾವ ನಿರೀಕ್ಷೆಗಳನ್ನೂ ಇಟ್ಕೋಬಾರ್ದು ಮತ್ತೆ ಮುಂದಾಲೋಚನೆಯ ಯಾವ ಪ್ಲಾನನ್ನೂ ಮಾಡ್ಕೋಬಾರ್ದು ಅಂತ ನಿರ್ಧರಿಸಿದೆ. ಇದರ ಬಗ್ಗೆ ಯಾರತ್ರ ಮಾತಾಡಬೇಕು ಅಂತನೂ ಅನಿಸ್ಲಿಲ್ಲ. ಇದರ ಮಧ್ಯ ನಾನು ಕೆಲಸ ಮಾಡ್ತಿದ್ದ ಶಾಲೆಯ ಪ್ರಿನ್ಸಿಪಾಲ್ ಮಹಿಳೆ ಫೋನ್ ಮಾಡಿದ್ರು. 'ಮದ್ರಾಸಲ್ಲೆ ಇನ್ನೊಂದು

ಶಾಲೆಗೆ ಕಳಿಸೋದಕ್ಕಿಂತ ನಿನ್ನ ಇಲ್ಲೇ ಯಾಕೆ ಕೆಲಸ ಮಾಡಕ್ಕೆ ಬಿಡಬಾರದಿತ್ತು ಅವರು? ಸುಮ್‌ಸುಮ್ನೆ ಯಾಕೆ ಟ್ರಾನ್ಸಫರ್ ಮಾಡ್ಬೇಕು? ನಾನು ನಿನ್ನನ್ನ ಬಿಟ್ಟುಕೊಡಲ್ಲ, ಇಲ್ಲೇ ಇರು ನೀನು. ಅವರು ಯಾರನ್ನ ಬೇಕಾದ್ರೂ ಅಲ್ಲಿ ಕಳಿಸಲಿ' ಅಂದರು.

'ಇಲ್ಲ ಸಿಸ್ಟರ್, ಅವರ ನಿರ್ಧಾರನ ಮತ್ತೆ ಬದಲಾಯ್ಸಿದಾರೆ. ನನ್ನನ್ನ ಟೀಚರ್ಸ್ ಟ್ರೈನಿಂಗ್ ಸ್ಕೂಲಿಗೆ ಹೋಗ್ಲಿಕ್ಕೆ ಹೇಳಿದಾರೆ.'

ಸಿಟ್ಟಿಂದ ಆಕೆ ಕೂಗಿದರು: 'ಅಯ್ಯೋ ದೇವರೇ, ಅವರ್‍ಯಾಕೆ ಹೀಗೆ ನಿನ್ನ ಹಿಂಸೆ ಮಾಡ್ತಿದಾರೆ? ನೀನು ನಾ ಎಲ್ಲೂ ಹೋಗಲ್ಲ ಅಂತ ಹೇಳು. ಇಲ್ಲೇ ಇರು.'

ನಾನೇನೂ ಹೇಳಲಿಲ್ಲ. ಮರುದಿನನೇ ಮತ್ತೊಂದು ಫೋನು ಪ್ರಾವಿನ್ಷಿಯಲ್ ಸಿಸ್ಟರ್ ಕಡೆಯಿಂದ ಬಂತು. ಅವರು ಹೇಳಿದರು: 'ನಿನ್ನನ್ನ ಜಮ್ಮುಗೆ ವರ್ಗ ಮಾಡಿದಿವಿ, ಜಮ್ಮು ಕಾಶ್ಮೀರ ರಾಜ್ಯಕ್ಕೆ. ನಿಮ್ಮ ಸುಪೀರಿಯರ್‌ಗೆ ಆಗಲೇ ತಿಳಿಸಿದಿವಿ. ಜೂನ್ ಮೊದಲ ವಾರದಲ್ಲಿ ಬಿಡಬೇಕು, ಸಿದ್ಧವಾಗಿರು.'

ಇಂಥ ಆತಂಕಗಳ ಮಧ್ಯೆ ನನ್ನ ಮನಸ್ಸು ಹೊಯ್ದಾಡಲಿಕ್ಕೆ ಶುರುವಾಯ್ತು: ಹೋಗಲೋ ಬೇಡವೋ, ಒಪ್ಪಲೋ ಬೇಡವೋ ಅಂತ. ಅಥವಾ ಎಲ್ಲ ಬಿಟ್ಟು ಮನೆಗೆ ಹೋಗಿಬಿಡಲಾ? ಅದೇ ಹೊತ್ತಿಗೆ ಇನ್ನೊಂದು ಮನಸ್ಸು ಜಮ್ಮುಗೆ ಒಂದ್ಸಲ ಹೋಗಿ ಏನು ಅಂತ ನೋಡಿಬಂದುಬಿಡುವ ಅಂತನೂ ಹೇಳ್ತಿತ್ತು. ನನ್ನ ಪ್ರಯಾಣ ದೆಹಲಿ ಮೂಲಕ ಇರುತ್ತೆ. ಅಲ್ಲಿದ್ದಾಗ ಪ್ರಾವಿನ್ಷಿಯಲ್‌ನ ನೇರವಾಗಿ ಭೇಟಿಯಾಗಿ ನನಗೆ ಏನನಿಸ್ತು ಅಂತ ಹೇಳಿಬಿಡಬೇಕು. ಹೀಗಂದುಕೊಂಡು ಹೊರಟೆ. ಆದರೆ ಜಮ್ಮುನ ಮುಟ್ಟಿದ ಮೇಲೆ ಅಲ್ಲಿರಲಿಕ್ಕೆ ಸಾಧ್ಯವೇ ಇಲ್ಲ ಅಂತ ಗೊತ್ತಾಯ್ತು. ಪ್ರತಿ ದಿನವೂ ಅಲ್ಲಿ ಬೆಂಕಿ ಮಧ್ಯ ನಿಂತೋರಂಗೆ ಬದುಕಿದೆ. ಅಲ್ಲಿನ ಸಿಸ್ಟರುಗಳು ನನ್ನತ್ರ ಮಾತು ಕೂಡ ಆಡ್ತಿರಲಿಲ್ಲ. ತಾವುತಾವೇ ಮಾತಾಡ್ಕಳೋರು. ನಾನಲ್ಲಿ ಬಂದೆ, ಇದೀನಿ ಅನ್ನೋದನ್ನೂ ಗಮನಿಸಲಿಲ್ಲ. ಮದರ್ ಸುಪೀರಿಯರ್ ನನ್ನ ಕೆಲಸ ಏನು ಅಂತ ಹೇಳೋರು, ಅಷ್ಟೆ. ಬೇರೇನೂ ಮಾತು ಇಲ್ಲ. ಅಲ್ಲಿ ನನ್ನ ಬದುಕನ್ನು ವ್ಯರ್ಥವಾಗಿ ಕಳೆಯಲು ಇನ್ನು ಸಾಧ್ಯನೇ ಇಲ್ಲ ಅನಿಸ್ತು. ಏನು ಬೇಕಾದ್ರೂ ಆಗ್ಲಿ, ಬಿಟ್ಟು ಬರಬೇಕು ಅನಿಸ್ತು. ಅಲ್ಲಿಂದ ಹೊರಬಂದ್ರೆ ಮಾತ್ರ ಶಾಂತಿ ಅನಿಸಿಹೋಯ್ತು. ಹೀಗೇ ಎಷ್ಟೋ ದಿನಗಳ ಹಿಂಜರಿಕೆ, ಅಸ್ಪಷ್ಟತೆ ಮಧ್ಯೆ ಕೊನೆಗೆ ಅಂತೂ ಈ ಕಾನ್ವೆಂಟ್ ಬಿಟ್ಟು ಹೊರಜಗತ್ತಿಗೆ ಹೋಗ್ಲೇಬೇಕು ಅಂತ ನಿರ್ಧಾರ ಮಾಡ್ಕೊಂಡೆ.

ನಾನು ಈ ನಿರ್ಧಾರಕ್ಕೆ ಬಂದ್ಮೇಲೆ ಅದನ್ನು ಮದರ್ ಸುಪೀರಿಯರ್‌ಗೆ ಹೇಳ್ದೆ. ನನಗಿಷ್ಟ ಬಂದಕೂಡ್ಲೆ ಹಾಗೆಲ್ಲ ಬಿಡಕ್ಕಾಗಲ್ಲ, ಅದಕ್ಕೆ ಕೆಲ ಪ್ರೊಸೀಜರ್ಸ್ ಆಗಬೇಕು,

ಎಲ್ಲಕ್ಕಿಂತ ಮೊದ್ಲು ನಮ್ಮ ಪಂಥದ ಭಾರತೀಯ ಮುಖ್ಯಸ್ಥರು ಯಾರೋ ಅವ್ರಿಗೆ ತಿಳಿಸ್ಬೇಕು, ಅದರ ಪ್ರೊಸೀಜರುಗಳನ್ನ ಅವರೂ ಶುರು ಮಾಡ್ಬೇಕು ಅಂತೆಲ್ಲ ಅಂದ್ರು. ಹಾಗಾದ್ರೆ ಪ್ರಾವಿನ್ಷಿಯಲ್‌ಗೆ ಇದನ್ನ ತಿಳಿಸ್ತೀರಾ ಅಂದೆ. ಅದಕ್ಕೆ ಅವರು ಈಗ ಭಾರತದಲ್ಲಿಲ್ಲ, ಮೀಟಿಂಗಿಗೆ ಅಂತ ಬೇರೆ ಯಾವ್ದೊ ಕಡೆ ಹೋಗಿದಾರೆ; ಒಂದು ವಾರದಲ್ಲಿ ಬರಬೋದು. ಅವರು ಬಂದ್ಮೇಲೆ ಇದನ್ನೆಲ್ಲ ಹೇಳ್ತೀವಿ ಅಂದ್ರು.

ಆದರೆ ಅಲ್ಲಿನ ಒಬ್ಬರು ಸಿಸ್ಟರು, 'ನೀವು ತಿಳಕಂಡಷ್ಟು ಸುಲಭಕ್ಕೆ ಹೋಗ್ಲಿಕ್ಕೆ ಬಿಡ್ತಾರೆ ಎಂತ ಎಣಿಸಿದೀರಾ ಸಿಸ್ಟರ್? ಎಲ್ಲಾದ್ರು ಉಂಟಾ? ನೀವು ಹೋಗಬೇಕೂಂತ ಮಾಡಿದರೆ ಸ್ವಪ್ರಯತ್ನದಿಂದ್ಲೆ ಹೋಗ್ಬೇಕಾಗ್ತದೆ. ಅವರು ಖುಷಿಯಿಂದ ಕಳಿಸ್ತಾರೆಂದು ಭಾವಿಸ್ಬೇಡಿ. ಅದು ಹಾಗೆ ಆಗುದಿಲ್ಲ' ಅಂದ್ರು.

'ನನಗಿಲ್ಲಿ ಸರಿಯಾಗ್ತಿಲ್ಲ. ನಾನು ಹೋಗ್ಬೇಕು. ಅವ್ರು ನನ್ನ ಹೆಂಗೆ ತಡೀತಾರೆ?'

'ನಿಮಗೆ ಎಲ್ಲ ವಿಷಯ ತಿಳಿದ ಹಾಗಿಲ್ಲ. ನೀವು ಒಬ್ಬ ಟೀಚರ್ ಅಲ್ವ? ಅದೂ ಎಕ್ಸ್‌ಪೀರಿಯನ್ಸ್ ಇರೋ ಟೀಚರ್. ಅವರ ಶಾಲೆ ನಡೆಸೋಕೆ ನಿಮ್ಮಂತವರ ಅವಶ್ಯಕತೆ ಎಷ್ಟು ಉಂಟು ಎಂತ ನೋಡ್ತಾರೆ. ಅದಕ್ಕೇ ಹೇಳಿದ್ದು, ನಿಮ್ಮ ಸರಳವಾಗಿ ಕಳಿಸುದಿಲ್ಲ ಎಂತ. ಅಷ್ಟರಮೇಲೆ ನೀವು ಎಲ್ಲ ಓದನ್ನ ನೀವೇ ಮುಗಿಸಿರೋದು ಅಲ್ವ? ಮತ್ತೆ ಈ ಪಂಥ ಸೇರು ಮುಂಚೆನೇ ಅನುಭವಿ ಟೀಚರ್ ಆಗಿದ್ದವರು ಅಲ್ವ? ಅವ್ರಿಗೆ ಇದೆಲ್ಲ ಬಾಳ ಉಪಯುಕ್ತ ವಿಷಯಗಳು. ನಾನು ಹೀಗೇ ನಿಮ್ಮತ್ರ ಹೇಳತಿರೋದು ಅಷ್ಟೆ.'

ಆಕೆ ಹೇಳಿದ್ದು ಸರಿ ಅನಿಸ್ತು. ನನ್ನ ಫ್ರೆಂಡ್‌ಗೆ ಕಾಗ್ದ ಬರದು ಕೂಡ್ಲೆ ಐನೂರು ರೂಪಾಯಿ ಕಳಿಸುವಂತೆ ಹೇಳಿದೆ. ಒಂದು ವಾರದಲ್ಲಿ ದುಡ್ಡು ಬಂತು. ಆದರೆ ಅದನ್ನ ಪೋಸ್ಟ್‌ಮ್ಯಾನ್ ಹತ್ರ ತಗೊಳೋದು ದೊಡ್ಡ ಕಷ್ಟ ಆಯ್ತು. ಯಾರಿಗೂ ಗೊತ್ತಾಗಬಾರದು ಅಂತ ಅವನಿಗೆ ಹೇಳಬೇಕು, ಅವನು ಬರುವ ಸಮಯ ಲೆಕ್ಕ ಹಾಕಿ ಕಾಯಬೇಕು, ಓಡಿಹೋಗಿ ಗಾರ್ಡನ್ನಲ್ಲಿ ದುಡ್ಡು ಇಸಕೊಬೇಕು, ಅವನತ್ರ ತಗಂಡು ಮುಚ್ಚಿಟ್ಕೋಬೇಕು – ಅಯ್ಯೋ, ಇದೆಲ್ಲ ಆಗೋದ್ರಲ್ಲಿ ನಂಗೆ ಸುಸ್ತಾಗಿ ಹೋಯ್ತು. ನನಗೆ ಇವನ್ನೆಲ್ಲ ಹೇಳಿದ ಸಿಸ್ಟರನ್ನು ನಂಜೊತೆ ಬನ್ನಿ ಅಂತ ಕರೆದೆ. ಅಂಗಡಿಗೆ ಹೋಗಬೇಕು ಅಂತ ಹೇಳಿ ಪಟ್ಟಣಕ್ಕೆ ಹೋಗಿ ರೈಲ್ವೆ ಸ್ಟೇಷನ್ ಹೊಕ್ವಿ. ಅಲ್ಲಿ ವಿಚಾರಿಸಿದಾಗ ತಿರುಚ್ಚಿಗೆ ಡೈರೆಕ್ಟ್ ರೈಲು ಇದೆ ಅಂತ ಗೊತ್ತಾಯ್ತು. ಅದರ ಟಿಕೆಟ್ ತಗಂಡ್ವಿ. ಆ ರೈಲು ವಾರಕ್ಕೊಮ್ಮೆ ಮಾತ್ರ ಇತ್ತು. ಶುಕ್ರವಾರ ರಾತ್ರಿ ಜಮ್ಮು ಬಿಟ್ರೆ ಸೋಮವಾರ ರಾತ್ರಿ ತಿರುಚ್ಚಿ ತಲುಪೋದು. ತುಂಬ ಬೇಡಿಕೆ ಇದ್ದಿದ್ರಿಂದ ಟಿಕೆಟ್ ಸಿಗೋದು ಸ್ವಲ್ಪ ಕಷ್ಟ ಆಯ್ತು. ನಂಗೇನೋ ಬೇಗ ಹೋಗ್ಬೇಕಿತ್ತು, ಆದ್ರೆ

ಟಿಕೆಟ್ಟಿಗೆ ಕಾಯ್ಬೇಕಿತ್ತು. ನಾನು ಸ್ಟೇಷನ್ನಿಗೆ ಹೋಗಿದ್ದು ಅಕ್ಟೋಬರ್ ಮೊದಲ ವಾರದಲ್ಲಿ, ನವೆಂಬರ್ ಎಂಟಕ್ಕೆ ಟಿಕೆಟ್ ಸಿಕ್ಕಿತು. ಟಿಕೆಟ್ ತಂದಮೇಲಂತೂ ಆ ದಿನಕ್ಕಾಗಿ ಹತಾಶಳಾಗಿ ಕಾದೂ ಕಾದೂ ಇಟ್ಟೆ.

ಅಷ್ಟೊತ್ತಿಗೆ ಪ್ರಾವಿನ್ಷಿಯಲ್ ಭಾರತಕ್ಕೆ ಬಂದ್ರು ಅಂತ ಗೊತ್ತಾಯ್ತು. ಮತ್ತೆ ಮದರ್ ಸುಪೀರಿಯರ್ ಹತ್ರ ಹೋದೆ. ಅವರು ನಂಗೆ ಹತ್ತು ಹನ್ನೆರೆಡು ಕ್ಯಾಸೆಟ್ ಕೊಟ್ಟು 'ನಿನ್ನ ಸಮಸ್ಯೆನ ಅವರ ಜೊತೆ ಮಾತ್ನಾಡಿದೇನೆ. ಯಾವುದೇ ನಿರ್ಧಾರಕ್ಕೆ ಬರೋ ಮೊದಲು ತುಂಬ ಗಂಭೀರವಾಗಿ ಯೋಚನೆ ಮಾಡಲು ಹೇಳು ಎಂತ ಅವರು ರಿಕ್ವೆಸ್ಟ್ ಮಾಡಿದಾರೆ. ಈ ಕ್ಯಾಸೆಟ್ ತಗೊ. ಸೂಕ್ಷ್ಮವಾಗಿ ಕೇಳು. ಮತ್ತೆ ನಿನ್ನೊಳಗೇ ನೀನು ವಿಚಾರ ಮಾಡು. ಧ್ಯಾನ ಮಾಡು. ಆಮೇಲೆ ನಿರ್ಧಾರ ಮಾಡು' ಅಂದ್ರು.

'ನಾನು ಈ ನಿರ್ಧಾರಕ್ಕೆ ಬರೋ ಮುಂಚೆ ತುಂಬ ಸಲ ಯೋಚ್ನೆ ಮಾಡಿದಿನಿ. ಈಗ ನಾನು ಟಿಕೆಟ್ನೂ ತಂದಾಯ್ತು. ನಾನು ನವೆಂಬರ್ ಎಂಟಕ್ಕೆ ಹೋಗ್ತಿನಿ ಅಷ್ಟೆ. ನಂಗೆ ಯೋಚ್ನೆ ಮಾಡ್ಲಿಕ್ಕೆ ಮತ್ತೇನೂ ಇಲ್ಲ' ಅಂದೋಳೇ ಸೀದ ಬಂದ್ಬಿಟ್ಟೆ.

ಮರುದಿನ ಮದರ್ ಸುಪೀರಿಯರ್ ಕರೆದು ಶಾಂತವಾಗಿ, ಪ್ರೀತಿ ತುಂಬಿದ ಧ್ವನೀಲಿ ಹೇಳಿದ್ರು: 'ನಿನ್ನತ್ರ ಮಾತ್ನಾಡಿದ ಮೇಲೆ ಅವತ್ತೇ ಸಂಜೆ ಪ್ರಾವಿನ್ಷಿಯಲ್ ಹತ್ರ ಮಾತ್ನಾಡಿದೆ. ನೀನು ಇಲ್ಲಿಂದ ಹೊರಡೋಕೆ ಮುಂಚೆ ಅವರು ನೇರ ನಿನ್ನ ಜೊತೆ ಮಾತಾಡಬೇಕು ಅಂತ ಇಷ್ಟಪಡ್ತಾರೆ. ಅದಕ್ಕೇ ನಿನ್ನ ಮನೆಗೆ ಹೋಗೋ ರೈಲ್ವೆ ಟಿಕೆಟ್ಟನ್ನ ಇಲ್ಲಿ ಕೊಡು. ಇವತ್ತು ರಾತ್ರಿನೇ ಡೆಲ್ಲಿಗೆ ಹೋಗು. ಅವರ ಹತ್ರ ಮಾತಾಡಿದ ಮೇಲೂ ನಿಂಗೆ ಬಿಡಬೇಕು ಅನಿಸಿದ್ರೆ ಬಿಡಬಹುದು.'

ಅವರು ಹೇಳಿದ್ದನ್ನ ಒಂದೂ ಪದ ಬಿಡದೆ ನನ್ನ ಸಹಾಯಕ್ಕೆ ಬಂದಿದ್ದ ಆ ಸಿಸ್ಟರತ್ರ ಹೇಳ್ದೆ. ಅವರು ಹೇಳಿದ್ದು ಕೇಳಿ ಹೆದ್ರಿಕೆ ಆಗೋಯ್ತು. 'ಸಿಸ್ಟರ್, ದಯವಿಟ್ಟು ಯಾವತ್ತೂ ಯಾವ ಕಾರಣಕ್ಕೂ ನಿಮ್ಮ ಟಿಕೆಟ್ಟನ್ನ ಅವರಿಗೆ ಕೊಡಲೇಬೇಡಿ. ಕೊಟ್ರಿ ಅಂದ್ರೆ ಮುಗಿಸಿಬಿಡ್ತಾರೆ ನಿಮ್ಮ ಕತೆ. ನಿಮಗ್ಯಾವತ್ತೂ ಮನೆಗೆ ಹೋಗಲಿಕ್ಕೆ ಆಗುದಿಲ್ಲ. ನಮ್ಮ ಕೈಯಿಂದ ಟಿಕೆಟ್ ಕಿತ್ತುಕೊಂಡ್ರು ಅಂದರೆ ಅದನ್ನ ಮತ್ತೆ ಯಾವತ್ತೂ ವಾಪಸ್ ಕೊಡುದಿಲ್ಲ. ಆಮೇಲೆ ಆ ಪ್ರಾವಿನ್ಷಿಯಲ್ ನೋಡಕ್ಕೆ ಮಾತ್ರ ಹೋಗ್ಬೇಡಿ ಹುಶಾರು, ನೀವು ಯಾವತ್ತೂ ವಾಪಸ್ ಬರುದಿಲ್ಲ.'

'ಯಾಕೆ? ಅವರೇನ್ಮಾಡ್ತಾರೆ ಸಿಸ್ಟರ್? ನೀವು ನನ್ನ ಹೆದರಿಸ್ತಿಲ್ಲ ತಾನೇ?'

'ನಿಮ್ಮನ್ನ ಹೆದರಿಸಬೇಕಂತ ಇಲ್ಲ ನನಗೆ, ಸತ್ಯ ಮತ್ತು ವಾಸ್ತವ ಏನಂತ ಹೇಳ್ತಿದೀನಿ ಅಷ್ಟೆ. ನಿಮಗೆ ಸಿಸ್ಟರ್ ಸಂಗೀತಾ ಗೊತ್ತುಂಟ? ಅವರನ್ನೂ ಹೀಗೇ

ಕರೆಸಿದರು. ಹೆಚ್ಚು ಕಮ್ಮಿ ಗೃಹಬಂಧನದಲ್ಲಿಟ್ಟರು. ಹೊರಗಿನ ಯಾರ ಜೊತೆಗೂ ಅವರು ಸಂಪರ್ಕ ಮಾಡದಂಗೆ ಕಣ್ಗಾವಲು ಇಟ್ಟರು. ಅವರಿಗಾದ್ರೂ ಸ್ವಲ್ಪ ಧೈರ್ಯ ಇತ್ತು, ಗಟ್ಟಿ ಅವರು. ನಿಮ್ಮಂತಹವರು ಹೋದರೆ ಅಲ್ಲೇ ಇರಬೇಕಾಗುತ್ತೆ. ಅದಕ್ಕೇ ಹೇಳ್ತಿರುದು, ಯಾವಾಗ್ಲೂ ಟಿಕೆಟ್ಟನ್ನ ನಿಮ್ಜೊತೆನೇ ಇಟ್ಕೊಳಿ. ಅದನ್ನ ನಿಮ್ಮಿಂದ ಕಸಿಯಲಿಕ್ಕೆ ಏನೇನು ಸಾಧ್ಯನೋ ಅದನ್ನೆಲ್ಲ ಅವರು ಮಾಡ್ತಾರೆ. ಹೋಗೋ ತಂಕ ಎಚ್ಚರವಾಗಿರಿ.'

ಇದಾದ್ಮೇಲೆ ಎಲ್ಲಿ ಹೋದ್ರೂ ಟಿಕೆಟ್ಟನ್ನ ನನ್ಜೊತೆನೇ ತಗಂಡು ಹೋದೆ. ಮದರ್ ಸುಪೀರಿಯರ್‌ಗೆ ನಾನು ಡೆಲ್ಲಿಗೆ ಹೋಗಿ ಪ್ರಾವಿನ್ಷಿಯಲ್ ಅನ್ನು ನೋಡಲ್ಲ ಅಂತ ಹೇಳಿದಾಗ ಮೊದಲು ಸಿಟ್ಟಿಗೆದ್ದು ಪ್ರತಿಕ್ರಿಯಿಸಿದರು, ಆಮೇಲೆ ತಮ್ಮನ್ನೇ ಸಂಭಾಳಿಸಿಕೊಂಡು ತಾಳ್ಮೆಯಿಂದ ಹೇಳಿದ್ರು: 'ಯಾಕೆ ಹೋಗಲ್ಲ ಅನ್ನೋದು ನೀನು? ನಿನಗೆ ಒಬ್ಬಳಿಗೇ ಹೋಗಲಿಕ್ಕೆ ಭಯವಾ? ಒಳ್ಳೇದು. ತಡಿ ಹಾಗಾದ್ರೆ, ನಾವಿಬ್ರೂ ಹೋಗುವ. ಇವತ್ತು ರಾತ್ರಿ ಹೋಗುವ, ನಾಳೆ ವಾಪಸ್ ಬರುವ. ಆಗಬಹುದಾ?'

ನಾನು ಆಗಲ್ಲ ಅಂತ ತಲೆಯಾಡಿಸಿದೆ. ಅವರ ಸಿಟ್ಟು ಏರ್ತ ಹೋಯ್ತು. ಕಿರುಚಿದ್ರು: 'ನೀನು ನನ್ಜೊತೆ ಯಾಕೆ ಬರಲ್ಲ ಅಂತೀ? ಸುಪೀರಿಯರ್ ಕರೆದ್ರೆ ಜೂನಿಯರ್ ಆ ಮಾತನ್ನ ಗೌರವಿಸಿ ಕೇಳಲೇಬೇಕು. ಅದ್ರಲ್ಲೂ ಮದರ್ ಸುಪೀರಿಯರ್ ಕರೆಯುವಾಗ ಆಗಲ್ಲ ಎಂತ ತಲೆ ಕುಣಿಸ್ತೀಯಲ್ಲ, ನಿನಗೆಷ್ಟು ಧೈರ್ಯ?'

ಅವರೆಷ್ಟೇ ಕೂಗಲಿ, ನಾನು ಹೋಗಲಿಲ್ಲ. ಎರಡು ದಿನ ಬಿಟ್ಟು ಹೇಳಿ ಕಳಿಸಿದರು. ಮದರ್ ಜನರಲ್‌ಗೆ ಒಂದು ಪತ್ರ ಬರೆಯಕ್ಕೆ ಹೇಳಿದ್ರು. ನಂಗೇನು ಬರೀಬೇಕಂತನೇ ಗೊತ್ತಿರಲಿಲ್ಲ. ಕೊನೆಗೆ ಬೇರೆ ಕಾನ್ವೆಂಟಿಂದ ವರ್ಗ ಆಗಿ ಬಂದಿದ್ದ ಹಿರಿಯ ಸಿಸ್ಟರೊಬ್ಬರು ಏನು ಬರಿಬೇಕಂತ ಹೇಳಿದ್ರು. ನನ್ ಆದಾಗ ಸ್ವೀಕರಿಸಿದ ಬಡತನ, ಪರಿಶುದ್ಧತೆ ಮತ್ತು ವಿಧೇಯತೆ ಎಂಬ ಮೂರು ಪ್ರತಿಜ್ಞೆಗಳಿಂದ ನನ್ನನ್ನ ಮುಕ್ತಗೊಳಿಸುವಂತೆ, ಮನೆಗೆ ಕಳಿಸಿ ಅಂತ ಕೇಳಿಕೊಂಡು ಬರಿ ಅಂದ್ರು. ಅವರು ಹೇಳಿದಂಗೆ ಬರೆದು ಕೊಟ್ಟೆ. ಆಗ ಮದರ್ ಜನರಲ್ ಯಾವ್ದೋ ವಿದೇಶದಲ್ಲಿ ಇದ್ರು. ನನ್ನ ಬಿಡುಗಡೆಗೊಳಿಸಿ ಅಂತ ಅವರು ಪತ್ರ ಬರೆದ ಹೊರತು ನಾನು ಬಿಟ್ಟು ಹೋಗಕ್ಕಾಗಲ್ಲ ಅಂತ ಅಂದ್ರು. ಆದರೆ ಒಳಗಿಂದ ಒಳಗೆ ನಾನು ದಿನ ಲೆಕ್ಕ ಮಾಡ್ತ ಇದ್ದೆ. ಆ ದಿನ ಪತ್ರ ಬರಲಿ ಬಿಡಲಿ ಇಲ್ಲಿಂದ ಓಡಿಹೋಗ್ಬೇಕು ಅಂದ್ಕೊಂಡಿದ್ದೆ.

ನಂಗೆ ಹಣ ಕಳಿಸಿದ ಸ್ನೇಹಿತನಿಗೆ ನವೆಂಬರ್ ಹನ್ನೊಂದರ ರಾತ್ರಿ ತಿರುಚ್ಚಿಯಲ್ಲಿ

ಇಳೀತಿನಿ ಅಂತ ಪತ್ರ ಹಾಕಿದೆ. ಯಾವುದಾದ್ರು ಒಂದು ಶಾಲೇಲಿ ಟೀಚರ್ ಕೆಲಸ ಹುಡುಕು ಅಂತನೂ ಹೇಳಿದ್ದೆ. ಅವನು ಯಾರೋ ನನ್‌ಗೆ ಮಾತಾಡಿದಿನಿ, ಅದರ ವ್ಯವಸ್ಥೆ ಮಾಡ್ತಿದಿನಿ ಅಂತ ಹೇಳಿದ. ಮೊದಲು ಹೇಗಾದ್ರೂ ಮಾಡಿ ಕೆಲಸ ಹುಡುಕ್ಕಬೇಕು ಅಂದ್ಕೊಂಡೆ. ಕೆಲಸ ಸಿಕ್ರೆ ಆಮೇಲೆ ಯಾರನ್ನೂ ಅವಲಂಬಿಸಬೇಕಾಗಿಲ್ಲ.

ದಿನ ಕಳದಂಗೆ ಹೆದ್ರಿಕೆನು ಆಗ್ತಿತ್ತು. ಇಲ್ಲಿಂದ ಹೊರಗೋದ್ಮೇಲೆ ನಂಗೆ ಎಲ್ಲಿ ಹೋಗ್ಬೇಕು, ಏನು ಮಾಡ್ಬೇಕು ಅಂತ ಗೊತ್ತಿರಲಿಲ್ಲ. ನಂಗೆ ಒಟ್ಟು ಬಿಟ್ಟು ಹೋಗಬೇಕಿತ್ತು ಅಷ್ಟೆ. ಅದಾದ್ಮೇಲೆ ನನ್ನ ಬದುಕು ಏನಾಗಲಿದೆ ಎಂಬ ಬಗ್ಗೆ ಯೋಚ್ನೆ ಮಾಡೋ ಅಷ್ಟು ಮನಸು ಸರಿಯಿರಲಿಲ್ಲ. ಮೊದಲು ಕಾನ್ವೆಂಟ್ ಸೇರಿ ನನ್ ಆಗ್ಬೇಕು ಅಂತ ತಲೇಲಿ ಬಂದಾಗ ಹೇಗಾಯಿತೋ ಹಾಗೇ ಈಗ್ಲೂ ಬಿಟ್ಟುಹೋಗ್ಬೇಕು ಅನ್ನೋ ಒಂದೇ ವಿಷಯ ತಲೆಯಲ್ಲಿ ತುಂಬಿ ಹೋರಾಟ ಶುರುವಾಯ್ತು. ನನ್ ಆಗೋದು ಬೇಡ ಅಂತ ನೆಂಟರಿಷ್ಟರು ಹೇಳಿದ್ರೂ ಅವರ ಮಾತಿನ ವಿರುದ್ಧ ಹಠಮಾರಿಯಂತೆ ಹೇಗೆ ಮನಸು ಮಾಡಿದ್ನೋ ಈಗ್ಲೂ ಅಷ್ಟೇ ಹಠಮಾರಿತನದಿಂದ ಬಿಟ್ಟು ಹೋಗ್ಬೇಕಂತ ಪ್ರಯತ್ನ ಮಾಡ್ದೆ. ಅದು ಬಿಟ್ಟು ನಂಗೆ ಬೇರೇನೂ ಅರ್ಥನೇ ಆಗ್ತಿರಲಿಲ್ಲ. ಒಂದ್ಕಡೆ ಇಲ್ಲಿಂದ ಹೊರಬಿದ್ರೆ ಸಾಕು ಅನಿಸ್ತಿತ್ತು. ಇನ್ನೊಂದು ಕಡೆ ಹೀಗೆ ಹೋದ್ರೆ ಎಲ್ಲ ನನ್ನ ತಿರಸ್ಕಾರದಿಂದ ನೋಡಲ್ವೆ ಎಂಬ ಆಲೋಚನೆಯೂ ಸುಳೀತಿತ್ತು.

'ಆಯ್ತು, ಹೋಗಲಿ, ನಾನು ನೇರ ಮನೆಗೆ ಹೋಗ್ಬಾರ್ದು. ಮದುರೈನಲ್ಲಿ ಏನಾದ್ರೂ ಕೆಲಸ ಹುಡುಕ್ಕಂಡೇ ಹೋಗ್ಬೇಕು. ಇದ್ದ ಕೆಲಸ ಬಿಟ್ಟು ಖಾಲಿ ಕೈಲಿ ಹೋದ್ರೆ ಎಲ್ಲ ಕೆಟ್ಟ ಮಾತನ್ನೇ ಆಡ್ತಾರೆ. ನನ್ನನ್ನಷ್ಟೆ ಅಲ್ಲ, ನನ್ನ ಅಪ್ಪ ಅಮ್ಮನ್ನೂ ಕೆಟ್ಟ ದೃಷ್ಟಿಯಲ್ಲಿ ನೋಡಿ ಅವಮಾನ ಮಾಡ್ತಾರೆ. ಏನಾದ್ರೂ ಆಗಲಿ ಸೋತ ಭಾವನೆ, ಆತಂಕ ತುಂಬಿಕೊಂಡು ಹೋಗ್ಬಾರ್ದು. ನಾನು ಯಾವ ಬದುಕನ್ನ ಬಿಟ್ಟು ಬಂದಿದ್ನೋ ಅಲ್ಲಿಗೆ ಸಾಧ್ಯವಾದಷ್ಟು ಮರಳಬೇಕು. ಆದ್ರೆ ಮೊದಲಿಗಿಂತ ಚೆನ್ನಾಗಿ ಬದುಕಬಲ್ಲೆ ಅಂತ ತೋರಿಸ್ಕೋಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಅಮ್ಮನಿಗೆ ನಾನು ಖುಷಿಯಾಗಿ ಬದುಕಿದೀನಿ ಅಂತ ತೋರಿಸ್ಬೇಕು. ಇಲ್ದಿದ್ರೆ ಅವಳಿಗೆ ತುಂಬ ತಲೆಬಿಸಿ ಆಗುತ್ತೆ. ಮೊದ್ಲೇ ಆರೋಗ್ಯ ಸರಿಯಿಲ್ಲ. ನನ್ನನ್ನು ನೋಡೇ ದುಃಖ ಆಗೋಹಾಗೆ ಆಗ್ಬಾರ್ದು. ಆ ಮನೇಲಿ ನನ್ನ ನಿಜವಾಗಿ ಪ್ರೀತಿಸೊ ಜೀವ ಅಂದ್ರೆ ಅದೇ.' ಅಮ್ಮನ್ನ ನೆನಪಿಸಿಕೊಂಡ್ರೆ ಸಾಕು, ಕೆನ್ನೆ ಮೇಲೆ ಕಣ್ಣೀರು ಇಳಿಯದು. ಒರಸ್ಕಂಡು ನನ್ನ ಯೋಚನೆಗಳನ್ನ ಹರಿಯಬಿಡ್ತಿದ್ದೆ.

'ಕೆಲಸ ಸಿಗದಿದ್ರೆ ಏನ್ಮಾಡದು? ಆದ್ರೆ ಹೆಂಗಾದ್ರೂ ಮಾಡಿ ಒಂದಲ್ಲ ಒಂದು ಕೆಲಸ ಹುಡುಕ್ಲೇಬೇಕು. ಏನನ್ನೂ ಮಾಡ್ದೆ ಮನೇಲಿ ಕೂತ್ರೆ ಮುಗೀತು, ಅದು ನನ್ನ ಕೊನೆ. ಅವರ ಕೊನೆಗಾಲದಲ್ಲಿ ಹೋಗಿ ನಾನು ಅಮ್ಮ ಅಪ್ಪನಿಗೆ ಹೊರೆ ಆಗ್ಬಾರ್ದು. ಅಪ್ಪ ಅಂತೂ ಕೋಪದಲ್ಲಿ ಏನಾದ್ರೂ ಚುಚ್ಚೋಹಂಗೆ ಹೇಳ್ತಾರೆ. ಮದುವೆ ಮಾಡ್ಕ ಅಂತ ಹೇಳಿದಾಗ ಕೇಳಿದ್ದಿದ್ರೆ ಈ ಗತಿ ಬರ್ತಿತ್ತ ಅಂತನೂ ಹೇಳ್ತಾರೆ. ಏನೂ ಮಾಡ್ದೆ ಮನೇಲಿ ಕೂತ್ರೆ ಮತ್ತೆ ಮದುವೆ ಮಾತು ಎತ್ತತಾರೆ. ಆಗ ನಾನು ಗಟ್ಟಿ ಇದ್ದೆ, ಅವರು ಹೇಳಿದ್ದನ್ನ ಗಟ್ಟಿ ನಿಂತು ವಿರೋಧಿಸಿದೆ. ಈಗ ಆಗಲ್ಲ. ಈಗವರು ನನ್ನ ಅಪರಾಧಿ ತರನೇ ನಡಸ್ಕತಾರೆ. ಅಮ್ಮನತ್ರ ಮಾತಾಡ್ಬೋದು, ಆದ್ರೆ ಅಪ್ಪ ಅಮ್ಮನ ಮಾತನ್ನ ಕೇಳಲ್ಲ. ಮನೆಯಿಂದ ದೂರ ಇರೋದೊಂದೇ ದಾರಿ. ಏನಾದ್ರೂ ಕೆಲಸ ಸಿಗೋತಂಕ ಅವರ ಹತ್ರ ಹೋಗ್ಬಾರ್ದು. ಆಗ ಕೊನೇಪಕ್ಷ ನಾನು ನನ್ನಷ್ಟಕ್ಕೆ ಬದುಕಬಲ್ಲೆ, ನಂದು ನಾನು ದುಡಿಯಬಲ್ಲೆ ಅನ್ನೋ ಧೈರ್ಯನಾದ್ರೂ ಇರುತ್ತೆ. ಅದೇನೋ ಸರಿ, ಆದ್ರೆ ನಂದು ನಾನು ದುಡಕಂಡ್ರೂ ಇಡೀ ಜೀವಮಾನ ನಾನೊಬ್ಬೇ ಒಂಟಿಯಾಗಿ ಇರಕ್ಕೆ ಸಾಧ್ಯನಾ? ಇರಲೇಬೇಕು. ಒಬ್ಬೇ ಇರಕ್ಕಾಗಲ್ಲ ಅಂತ ಮದುವೆ ಆಗ್ಬಿಟ್ರೆ ಮತ್ತಷ್ಟು ಕಷ್ಟದಲ್ಲಿ ಸಿಕ್ಕಿಹಾಕ್ಕಂತೀನಿ. ಆದ್ರೆ ಮದ್ವೆ ಆದ್ರೆ ಎಷ್ಟೇ ಕಷ್ಟ ಬಂದರೂ ಒಬ್ಬರು ಜೊತೆಗಾದ್ರೂ ಇರ್ತಾರೆ. ಹೌದು, ಆದ್ರೆ ಅದು ಎಂತ ಜೊತೆ ಆಗಿರುತ್ತೆ? ನಾನೇನಾದ್ರೂ ಮದ್ವೆ ಆದ್ರೆ ನನ್ನ ಉಳಿದ ಇಡೀ ಜೀವನನ ಸಾಯೋತಂಕ ಒಬ್ಬ ಮನುಷ್ಯನಿಗೋಸ್ಕರ ಕಳೀಬೇಕು. ಹಾಗಾದ್ರೆ ನಾನು ಸಮಾಜಕ್ಕೆ ಏನು ಉಪಯೋಗಕ್ಕೆ ಬಂದ ಹಾಗಾಯ್ತು? ನಾನು ಕಾನ್ವೆಂಟ್ ಸೇರಿದ್ದು ಎಷ್ಟೇ ಸಣ್ಣ ಪ್ರಮಾಣದಲ್ಲೇ ಆದ್ರೂ ಬೇರೆಯೋರಿಗೆ ಉಪಯೋಗ ಆಗೋಹಾಗೆ ಬದುಕಲಿಕ್ಕೆ ಅಂತ ಅಲ್ವೆ? ಈಗ್ಲೂ ಹಾಗೇ. ಕಾನ್ವೆಂಟ್ ಬಿಟ್ಟು ಹೊರಗೆ ಹೋದ್ರೂ ಜನರಿಗೆ ಉಪಯೋಗ ಆಗೋಹಾಗೆ ಬದುಕಿ ತೋರಿಸಬೇಕು.'

ನವೆಂಬರ್ ಶುರುವಾಗೋ ಹೊತ್ತಿಗೆ ನನ್ನ ಸಾಮಾನನ್ನೆಲ್ಲ ಪ್ಯಾಕ್ ಮಾಡ್ಕಂಡುಬಿಟ್ಟಿದ್ದೆ. ನನ್ನತ್ರ ತಗೊಂಡು ಹೋಗೋವಷ್ಟು ಸಾಮಾನಿತ್ತು ಅಂತಲ್ಲ. ನನ್ ಆಗಿ ಉಡ್ತಿದ್ದ ಸೀರೆನೆಲ್ಲ ವಾಪಸ್ ಕೊಡಬೇಕಂತ ಹೇಳಿದ್ರು. ಅದನ್ನ ಇಟ್ಟುಕೊಂಡ್ರೂ ಅದೇನೂ ಉಪಯೋಗಕ್ಕೆ ಬರ್ತಿರಲಿಲ್ಲ. ನಂಗೆ ಸಹಾಯ ಮಾಡಿದ ಸಿಸ್ಟರು ಕಾನ್ವೆಂಟಿನ ಫೈನಾನ್ಸ್ ನೋಡ್ಕೊಳ್ತ ಇದ್ರು. ಅವರು ನಂಗೆ ಅಂಗಡಿಯಿಂದ ನಾಲ್ಕು ಬಣ್ಣದ ಸೀರೆ ತಂದ್ಕೊಟ್ರು. ಅವನ್ನ ನನ್ನ ಪೆಟ್ಟಿಗೇಲಿ ಹಾಕ್ಕೊಂಡೆ. ಅವರೇ ನವೆಂಬರ್ ಎಂಟಕ್ಕೆ ನನ್ನ ರೈಲ್ವೇ ಸ್ಟೇಷನ್ನಿಗೆ ಬಿಟ್ರು. ಹೊರಡುವ ಮುಂಚೆ ಮದರ್ ಸುಪೀರಿಯರ್ ಮತ್ತು ಕಾನ್ವೆಂಟಿನ ಇತರ ನನ್‌ಗಳಿಗೆ ಹೇಳಿಬಂದೆ. ನಂಗೆ ಯಾವ ಭಾವನೆಗಳೂ ಉಕ್ಕಲಿಲ್ಲ. ನನ್ನ ಹೃದಯ ನಿರ್ಲಿಪ್ತವಾಗಿತ್ತು. ಯಾವ

ತಳಮಳವೂ ಇರಲಿಲ್ಲ. ಆದರೆ ಭಾರವಾಗಿತ್ತು. ನನ್ನ ಬೋಗಿ ಹತ್ತಿದ ಮೇಲೆ ಸ್ವಲ್ಪ ಶಾಂತಿ.

ಕಾನ್ವೆಂಟ್ ಬಿಡಕ್ಕೆ ಮುಂಚೆ ಮದರ್ ಸುಪೀರಿಯರ್ ಕಿಟಕಿಯಿಂದ ಹೊರಗೆ ನೋಡ್ತ, 'ಡೆಲ್ಲಿ ಸ್ಟೇಷನ್ನಲ್ಲಿ ಕೆಲವು ಸಿಸ್ಟರ್ಸ್ ಬಂದು ನಿನ್ನ ಭೇಟಿ ಆಗ್ತಾರೆ. ನಿನ್ನ ಟ್ರೈನ್ ಡಿಟೇಲ್ಸ್ ಮತ್ತು ಕೋಚ್ ನಂಬರ್ ಕೊಟ್ಟಿದೇನೆ' ಅಂತ ಹೇಳಿದ್ರು.

ಅವರ ಮಾತು ನನ್ನ ಕಿವಿ ಮೇಲೆ ಬಿದ್ರೂ ಯಾಕಂತ ಕೇಳಲಿಲ್ಲ. ಅಥವಾ ಯಾಕೆ ಬರ್ತಾರಂತ ಕೇಳಲಿಲ್ಲ. ಕೇಳಬೇಕಂತ ಹೊಳೀಲೇ ಇಲ್ಲ ನಂಗೆ. ಸುಮ್ನೆ ಕೂತೆ, ರೈಲು ಹೊರಡ್ತು. ನನ್ನ ಸುತ್ತ ಇದ್ದೋರನ್ನ ಒಂದ್ಸಲ ನೋಡ್ದೆ. ನನ್ನ ಪಕ್ಕ ಕೂತಿರೋರ ಬಗ್ಗೆ ಇವರ್‍ಯಾರಿರಬಹುದು? ಅವರ ಬದುಕಿನ ಕಷ್ಟನಷ್ಟಗಳೇನಿರಬೋದು? ಅಂತ ಯೋಚ್ನೆ ಮಾಡ್ತ ಕೂತೆ. ಅವರೆಲ್ಲ ತುಂಬ ಲವಲವಿಕೆಯಿಂದ ಇದ್ರು. ಅವರ ಮಾತಿಂದ ಅವರೆಲ್ಲ ಸೈನ್ಯದಲ್ಲಿದ್ದೋರು, ಈಗ ರಜೆಗೆ ಮನೆಗೆ ಹೋಗ್ತಿದಾರೆ ಅಂತ ಗೊತ್ತಾಯ್ತು. ಅವರ ಮುಖಗಳಲ್ಲಿ ಎಷ್ಟು ಖುಷಿ? ನಾನೂ ಮನೆಗೆ ಹೊರಟಿದ್ದೆ.. ಆದರೆ ನನ್ನ ಹೃದಯದಲ್ಲಿ?

ಒಂಚೂರು ಜ್ವರ ಬಂದ ಹಾಗಾಯ್ತು. ತಲೆ ನೋಯ್ತಿತ್ತು. ಅಳಕ್ಕೂ ಆಗಲಿಲ್ಲ. ಅಲ್ಲಿದ್ದ ಎಲ್ಲರೂ ತಮಿಳು ಮಾತಾಡೋರೇ ಆಗಿದ್ರೂ ಸಹಾ ಉಳಿದೋರ ಜೊತೆ ಸಹಜವಾಗಿ ಮಾತಾಡಕ್ಕೂ ಆಗಲಿಲ್ಲ. ಅವರು ತಮಿಳಲ್ಲಿ ಮಾತಾಡಿದ್ದು ಕೇಳಿದ ಕೂಡ್ಲೆ ಸ್ವಲ್ಪ ನಿರಾಳ ಆಯ್ತು. ಅವರು ನನ್ನ ಬಗ್ಗೆ ಕೇಳಿದ್ರು, ಸ್ವಲ್ಪ ಹೇಳಿದೆ. ನಾ ಎಲ್ಲಿ ಹೊರಟಿದಿನಿ ಅಂತ ನಂಗೇ ಗೊತ್ತಿಲ್ಲ, ಇನ್ನು ಏನು ಹೇಳದು? ತಿರುಚ್ಚಿ ಅಂದೆ ಅಷ್ಟೆ. ಪುಣ್ಯಕ್ಕೆ ಅವರೆಲ್ಲ ನಂಗಿಂತ ಮುಂಚೆ ಇಳಿಯೋರಾಗಿದ್ರು ಅಂತ ಖುಷಿಯಾಯ್ತು. ನಾನು ಇಳಿಯೋದೇ ಇಲ್ದೆ ಪ್ರಯಾಣ ಮಾಡ್ತ ಇರೋದಾದ್ರೆ ಎಷ್ಟು ಚೆನ್ನಾಗಿರ್ತಿತ್ತು ಅಂತ ಅನಿಸ್ತಿತ್ತು.

ಅವರು ರಾತ್ರಿ ಊಟ ಮಾಡ್ತ ನನ್ನೂ ಕರೆದ್ರು. ಜ್ವರ ಅಂದು ಬೇಡ ಅಂದೆ. ಅವರು ಪ್ರತಿಯೊಬ್ರೂ ಒಂದೊಂದು ಬುಟ್ಟಿ ಸೇಬು ತಂದಿದ್ರು. ನಂಗೂ ಒಂದೆರೆಡು ಕೊಟ್ರು. ಬೇಡ ಅಂದ್ರೆ ಬೇಜಾರಾದಾರು ಅಂತ ತಗಂಡೆ. ನನ್ನ ಹತ್ರ ಇದ್ದ ಸ್ಯಾಂಡ್‌ವಿಚ್ ಕೊಟ್ಟೆ. ಅವ್ರು ಅದನ್ನು ತಿಂದ್ರು. ಅವರ ಖುಷಿ ನನ್ನೆದೆಯನ್ನೂ ಕೊಂಚ ಬೆಚ್ಚಗೆ ಮಾಡ್ತು. ರಾತ್ರಿ ಎಷ್ಟೋತ್ತಾದ್ರೂ ಮಾತಾಡ್ತಿದ್ರು, ಕೊನೆಗೆ ಇಸ್ಪೀಟು ಆಡಿದ್ರು. ಅಂತೂ ನಿದ್ದೆ ಮಾಡಿದ್ರು. ಅಲ್ಲಿ ನಿದ್ದೆ ಮಾಡ್ದೆ ಇದ್ದೋಳು ನಾನು ಮಾತ್ರ. ಮತ್ತೆ ಮನೆ ನೆನಪಾಯ್ತು. ಏನೇನೋ ಯೋಚ್ನೆ ಮಾಡ್ತ ಮಲಗಿದೆ.

'ನಾನು ತಿರುಚ್ಚಿಯಲ್ಲಿಳಿದು ಸೀದ ಮದುರೈಗೆ ಹೋಗ್ಬೇಕು. ಆ ಸ್ನೇಹಿತ ನಂಗೇನಾದ್ರೂ ಕೆಲಸ ಹುಡುಕಿದ್ನ ಅಂತ ಮೊದಲು ವಿಚಾರಿಸಬೇಕು. ಮದುರೈ

ಅಥವಾ ತಿರುಚ್ಚೀಲೇ ಕೆಲಸ ಸಿಕ್ರೆ ಒಳ್ಳೇದಿತ್ತು. ಸ್ವಲ್ಪ ದಿನದವರೆಗೆ ಮನೆ ಹತ್ರ ಹೋಗ್ಬಾರ್ದು. ಕೆಲಸ ಸಿಕ್ಕ ಕೂಡ್ಲೆ ಮನೆಗೆ ಹೋಗಿ ಅಮ್ಮನ್ನ ನೋಡಿ ಬರಬೇಕು. ಅವಳನ್ನ ನಂಗೆ ನಿಜವಾಗಿ ನೋಡ್ಬೇಕನಿಸುತ್ತೆ. ಅವಳು ನಾನೀಗ ಇದ್ದ ಪರಿಸ್ಥಿತೀಲೇ ಸೀದ ಹೋದ್ರೂ ಖುಷಿ ಆಗ್ತಾಳೆ, ಅದು ಬೇರೆ. ಆದ್ರೆ ಇದೇನಿದು? ತನ್ನ ಇಡೀ ಬದುಕನ್ನೇ ಕಳಕೊಂಡುಬಿಟ್ಟಲ, ಇನ್ನೇನು ಉಳೀತು ಅಂತ ಚಿಂತೆ ಮಾಡ್ತಾಳೆ..'

ನಂಗೆ ಕೂಗಬೇಕು ಅನಿಸ್ತು, 'ಅಮ್ಮ ನಾ ನನ್ನ ಬದುಕನ್ನ ಕಳಕಂಡು ಬಂದದ್ದಲ್ಲ. ಅದ್ನ ಪಾರು ಮಾಡ್ಕ ಬಂದಿದಿನಿ. ನಾ ಅದ್ನ ನಾಶಮಾಡಿ ಎಸೆದಿರ್ತಿದ್ದೆ, ಆದ್ರೆ ಕಾಣ್ ಮತ್ತೆ ಮನೆಗೇ ವಾಪಸ್ ಬಂದೆ. ನಾ ಇನ್ನು ಹೊಸಾ ಬದುಕು ಬದ್ಕಬೇಕ್ ಅಮ್ಮ, ಬದುಕ್ಲೆಬೇಕ್..'

ಅಪ್ಪನ ನೆನಪಾದಾಗ ಒಂಥರಾ ಸ್ವಲ್ಪ ಕಸಿವಿಸಿ. ಅವರು ಹೇಳೇ ಹೇಳ್ತಾರೆ: 'ಕಾನ್ವೆಂಟಿಗೆ ಹೋಪುದು ಬ್ಯಾಡ ಅಂದೆಳಿ ಎಷ್ಟ್ ಸಲ ಬಡ್ಕಂಡೆ. ಕೇಂಡ್ಯ ನನ್ ಮಾತ? ಈಗ ಕಾಣ್, ಗಟ್ಟಿ ಕೆಲ್ಸ ಹೋಯ್ತ್. ವಯಸ್ ಆಯ್ತ್. ಈಗ ಕೆಲ್ಸ ಸಿಗುದಂದ್ರೆ ಸುಲಬ ಅಂದೆಣಿಸಿದ್ಯ ನೀನು? ಎಂತ ಮಾಡ್ತೆ ಈಗ?' ಅವರಿಗೆ ಉತ್ತರ ಕೊಡ್ಲೇಬಾರ್ದು ಅಂತ ಅಂದುಕೊಂಡೆ. ಅಮ್ಮ ನನ್ನ ಪರವಾಗಿ, 'ಅವ್ಳ್ ಈಗಷ್ಟೆ ಬಂದಿಳು. ಅವ್ಳೇನ್ ಓದ್ದೋಳಲ್ವ? ಎಂತದೊ ಒಂದ್ ಕೆಲ್ಸ ಕಂಡ್ಕಂತ್ಲು. ನೀವ್ ಸುಮ್ನಾಯ್ಕಣಿ' ಅಂತಾಳೆ. ನಿಜ ಅಮ್ಮಾ, ನಾ ಬದುಕ್ತಿನಿ. ಹೌದಾ ಅಮ್ಮ? ನಾ ಬದುಕ್ತಿನಾ? ಈ ಪ್ರಶ್ನೆ ಎದ್ದ ಕೂಡ್ಲೆ ಕಣ್ಣಲ್ಲಿ ನೀರು ಎದ್ದುಬಂತು. ಗಟ್ಟಿ ಅಳಬೇಕನಿಸ್ತು. ಆದ್ರೆ ಅವ್ರನ್ನ ಎಬ್ಬಿಸಿಬಿಡ್ತೀನೇನೋ ಅನ್ನೋ ಹೆದರಿಕೆಗೆ ಸದ್ದಾಗದಂಗೆ ಅತ್ತೆ. ನನ್ನ ತಲೆ ಜೋರುಜೋರು ಸಿಡಿಯಕ್ಕೆ ಶುರುವಾಯ್ತು. ಕಣ್ಣೀರು ಕೆನ್ನೆ ಮೇಲಿಂದ ಇಳ್ದು ಕಿವಿ ಒಳಗೂ ಹೋಯ್ತು. ಎದ್ದು ಕೂತು ಒರೆಸಿಕೊಂಡೆ. ಬೋಗೀಲಿದ್ದ ಎಲ್ಲರೂ ಗೊರಕೆ ಹೊಡೀತಿದ್ರು. ಉಳದೋರಂಗೆ ನಿದ್ದೆ ಮಾಡ್ಬೇಕು ಅಂತ ಮತ್ತೆ ಮಲಗ್ದೆ.

ನನ್ನ ಯೋಚ್ನೆಗಳು ಎತ್ತೆತ್ತಲಾಗೋ ಹಾರಾಡ್ತಿದ್ವು. ಸಿಕ್ಕಾಪಟ್ಟೆ ಚಳಿ ಆಯ್ತು. ಒಂದು ಬೆಡ್‌ಶೀಟ್ ಎಳ್ಕಂಡು ಹೊದ್ದೆ. ಒಂದು ಕಂಬಳಿ ಇದ್ದಿದ್ರೆ ಒಳ್ಳೇದಾಗ್ತಿತ್ತು. ಕಾನ್ವೆಂಟಿನ ಸುಖ ಸವಲತ್ತಿನ ಬದುಕಿನ ನೆನಪಾಗಿ ಮುಖದ ಮೇಲೆ ಒಂದು ಸಣ್ಣ ಕಿರುನಗೆ ಸುಳೀತು. ಅಲ್ಲಿ ನಾನು ಹಾಸಿಗೇಲಿ ಮುರುಟಿ ಎರಡೆರಡು ಕಂಬಳಿ ಹೊದ್ದು ಪಕ್ಕ ಬಿಸಿನೀರಿನ ಬಾಟಲಿ ಇಟ್ಟುಕೊಳ್ತಿದ್ದಿದ್ದು ನೆನಪಾಯ್ತು. ಎಷ್ಟೋ ತರಾವರಿ ತಿನಿಸು, ತರತರದ ತರಕಾರಿ, ಹಣ್ಣು! ಇನ್ನುಮೇಲೆ ಜನಸಾಮಾನ್ಯರ ಬದುಕೇ ನನ್ನದೂ ಸಹಾ. ಅದೇ ಕೊನೇತನಕ ಇರುವಂಥದು, ಅದೇ ವಾಸ್ತವ.

ಸಂಜೆ ಹೊತ್ತಿಗೆ ರೈಲು ಡೆಲ್ಲಿ ಸ್ಟೇಷನ್ ಮುಟ್ಟಿತು. ಒಂಚೂರೂ ಕುತೂಹಲವಿಲ್ಲದೆ ಜನರಿಂದ ಗಿಜಿಗಿಜಿ ಅಂತಿದ್ದ ಸ್ಟೇಷನ್ ಕಡೆ ನೋಡಿದೆ. ಇದ್ದಕ್ಕಿದ್ದಂತೆ ಇಬ್ಬರು ನನ್‌ಗಳು ನನ್ನ ಬೋಗಿ ಹತ್ತಿದರು. ಉಳಿದ ಪ್ರಯಾಣಿಕರು ಕುತೂಹಲದಿಂದ ಏನು ನಡೀತಿದೆ ಅಂತ ನೋಡ್ತಿದ್ದರು. ನಾನು ಅವರ ಕಡೆ ಶಾಕ್‌ನಿಂದೆಂಬಂತೆ ನೋಡಿದೆ. ನನ್ನ ದೇಹ ಮತ್ತು ಮನಸಿನ ಶಕ್ತಿಯೆಲ್ಲ ಸೋರಿ ಹೋದಂಗನಿಸ್ತಿತ್ತು. ಆ ಇಬ್ಬರು ಹೊಸಬರು ನನಗೆ ದಾಖಲೆ ಪತ್ರ ತೋರಿಸಿ ಎಲ್ಲೆಲ್ಲೊ ಸಹಿ ಮಾಡೂಂತ ಹೇಳಿದರು. ನಿರ್ಭಾವುಕಳಾಗಿ, ಯಾಂತ್ರಿಕವಾಗಿ ಅವರು ತೋರಿಸಿದ ಕಡೆಯೆಲ್ಲ ಸಹಿ ಮಾಡ್ದೆ. ಈಗಷ್ಟೇ ಜೈಲಿಂದ ತಪ್ಪಿಸಿಕೊಂಡು ಬಂದಿರೊ ಅಪರಾಧಿ ನಾನು ಅನಿಸ್ತು. ನನ್ನ ಸಹಿ ಪಡೆದಿದ್ದೇ ಅವರು ಅದರಲ್ಲಿ ಕೆಲವನ್ನು ನಂಗೇ ಕೊಟ್ಟು ಸರಸರ ಇಳಿದು ಹೋಗೇಬಿಟ್ರು.

ಅವರು ಹೋದಮೇಲೆ ಅವರು ಕೊಟ್ಟ, ನಾನು ಸಹಿ ಮಾಡಿದ ದಾಖಲೆಗಳ ಕಡೆ ನೋಡಿದೆ. ಅವರು ನನಗಿನ್ನು ಆ ಪಂಥದ ಜೊತೆ ಯಾವುದೇ ಸಂಬಂಧ, ವ್ಯವಹಾರ ಇಲ್ಲ ಅಂತ ಹೇಳಿದ್ರು. ಅಲ್ಲಿ ಮಾಡಿದ ಕೆಲಸಕ್ಕೆ ಯಾವುದೇ ಹಣಪಾವತಿಯನ್ನು ಕೇಳಬಾರದೆಂದು ತಿಳಿಸಿದ್ರು. ನಾನು ಮಾಡಿದ ಮೂರು ಪ್ರತಿಜ್ಞೆಗಳಿಂದ ಮದರ್ ಜನರಲ್ ನನ್ನನ್ನು ಮುಕ್ತಗೊಳಿಸಿದ್ರು. ಒಂದು ಕಹಿ ನಗೆ ಸುಳಿದೋಯ್ತು. ಏನಾಯ್ತು ಅಂತ ಉಳದೋರು ಕೇಳಕ್ಕೆ ಶುರು ಮಾಡಿದ್ರು. ಏನೋ ಒಂದು ಹೇಳ್ದೆ. ಅವ್ರ ಪ್ರಶ್ನೆಗೆ ಹಾರಿಕೆ ಉತ್ತರ ಕೊಡ್ತಿದೀನಿ ಅಂತ ಅವರಿಗೂ ಗೊತ್ತಾಯ್ತು. ಅದಕ್ಕೇ ಮತ್ತೆಮತ್ತೆ ಕೇಳ್ದೆ ಸುಮ್ಮನಾದ್ರು. ಸದ್ಯ. ತಿರುಚ್ಚಿ ಬರೋವರ್ಗು ನನ್ನ ಹೆಚ್ಚಿನ ಸಮಯನ ಮೇಲಿನ ಬರ್ತ್‌ನಲ್ಲಿ ಮಲಗೇ ಕಳೆದೆ. ಬೇಗ ಇಳೀಬೇಕು ಅನಿಸ್ತಿತ್ತು. ಅದೇ ಹೊತ್ಗೆ ನಿರಂತರ ಪ್ರಯಾಣ ಮಾಡ್ತ ರೈಲಲ್ಲೇ ಇರ್ಬೇಕು ಅಂತ್ಲೂ ಅನಿಸೋದು.

ಬಹುಶಃ ಇದೇ ನನ್ನ ಕೊನೆಯ ದೀರ್ಘ ರೈಲು ಪ್ರಯಾಣ ಇರ್ಬೇಕು ಅನಿಸ್ತು. ಇನ್ಯಾವಾಗ ನಾನು ಡೆಲ್ಲಿಗೆ ಹೋಗ್ತಿನಿ? ಅವತ್ತು ಜಮ್ಮು ಕಾನ್ವೆಂಟಿಗೆ ಹೋಗುವ ಪ್ರಯಾಣವೂ ತ್ರಾಸು ಕೊಟ್ಟಿತ್ತು. ಡೆಲ್ಲಿ ಸಿಸ್ಟರ್‌ಗಳು ರಿಸರ್ವೇಷನ್ ಇಲ್ಲದ ಟಿಕೆಟ್ ತಂದು ರಿಸರ್ವ್ ಆದ ಬೋಗೀಲಿ ಕೂರ್ಸಿದ್ರು. ಅವರಿಗೆ ಗೊತ್ತಿರೊ ಯಾರೋ ರೈಲ್ವೆ ಮನುಷ್ಯ ರಿಸರ್ವೇಷನ್ ಸ್ಲಿಪ್ ತರ್ತಾನೆ ಅಂತ ಹೇಳಿದ್ರು, ಏನೂ ಇಲ್ಲ. ಟಿಸಿ ಬಂದು ನನ್ನ ಟಿಕೆಟ್ ನೋಡಿ ಹಿಂದೀಲಿ ಕಿರುಚಕ್ಕೆ ಶುರು ಮಾಡ್ದ. ನಾನು ಇಂಗ್ಲೀಷಲ್ಲಿ ಎಷ್ಟು ವಿವರಿಸಿದ್ರೂ ಅವನಿಗೆ ತಿಳೀತನೇ ಇಲ್ಲ. ಅವನಿಗೆ ಇಂಗ್ಲಿಷ್ ಬರಲ್ಲ, ನಂಗೆ ಹಿಂದಿ ಬರಲ್ಲ. ತನ್ನ ಬೂಟಿಂದ ನನ್ನ ಸೂಟ್‌ಕೇಸನ್ನ ಜಾಡ್ಸಿ ಒದ್ದು ದೂಡ್ತ ಹೋದ. ಅದು ಟಾಯ್ಲೆಟ್ ತಂಕ ಹೋಗಿ ಉರುಳುರುಳಿ ಅಲ್ಲಿ ಬಿತ್ತು.

ನನ್ನನ್ನೂ ಅಲ್ಲೀವರೆಗೂ ಎಳಕಂಡು ಹೋದ, ಹೆಚ್ಚುವರಿ ದುಡ್ಡು ಕೊಡು ಅಂದ. ನನ್ನ ಪಕ್ಕ ಕೂತೋರು ಮೇಲುವಸಿ ದುಡ್ಡು ಕೊಟ್ರೆ ಇಲ್ಲೆ ಇರ್‍ಬೋದು, ಇಲ್ದಿದ್ರೆ ಮುಂದಿನ ಸ್ಟೇಷನ್ನಲ್ಲಿಳಿದು ರಿಸರ್ವ್ ಆಗದಿದ್ದ ಬೋಗಿಗೆ ಹತ್ಬೇಕಾಗುತ್ತೆ ಅಂದ್ರು. ನಡುರಾತ್ರೀಲಿ ಇನ್ನೊಂದು ಸ್ಟೇಷನ್ನಲ್ಲಿಳಿದು ನನ್ನ ಲಗೇಜಿನ ಜೊತೆ ಮತ್ತೊಂದು ಬೋಗಿ ಹುಡುಕ್ಕಂಡು ಹೋಗದು ಅಂತ ನೆನೆಸ್ಕಂಡೇ ನಂಗೆ ಹೆದ್ರಿಕೆ ಆಯ್ತು. ಹಾಗಾಗಿ ಅವರು ಹೇಳ್ದಷ್ಟು ದುಡ್ಡು ಕೊಟ್ಟು ಟಾಯ್ಲೆಟ್ ಪಕ್ಕ ನನ್ನ ಬ್ಯಾಗ್ ಜೊತೆ ನಿಂತೆ. ಜಮ್ಮು ಕಾನ್ವೆಂಟ್ ಮುಟ್ಟಿದ್ದು ನೆನೆಸ್ಕೊಂಡ್ರೆ ಎದೇಲಿ ದುಃಖ ತುಂಬಿ ಈಗ್ಲೂ ಕಣ್ಣೀರು ಹರಿಯುತ್ತೆ.

ಈ ವಾಪಸ್ ಪ್ರಯಾಣದಲ್ಲಿ ಒಳಗೆಲ್ಲ ಮರಗಟ್ಟಿದ ಅನುಭವ. ಮೊದಲಿನ ದುಃಖ ಈಗಿರಲಿಲ್ಲ. ಈಗ ದಟ್ಟ ಕಾಡಿನ ಮಧ್ಯ ದಾರಿ ತಪ್ಪೋಗಿ ನಿಂತಂಗೆ ಅನಿಸ್ತಿತ್ತು. ಶುಕ್ರವಾರ ರಾತ್ರಿ ರೈಲು ಹತ್ತಿದೋಳು ಮಧ್ಯ ಒಂದ್ಸಲನೂ ಕೆಳಗಿಳೀಲಿಲ್ಲ. ನನ್ನ ದೇಹ ಸಂಪೂರ್ಣ ದಣಿದು ಹೋಗಿತ್ತು. ಎಲ್ಲದರಿಂದ ದೂರ ಹೋಗ್ಬೇಕು ಅನಿಸ್ತಿತ್ತು. ಆದರೆ ಗೊತ್ತಿಲ್ಲದ, ಗೊತ್ತಿರೋರು ಇಲ್ಲದ ಜಾಗ ಮುಟ್ಟೋವರೆಗೂ ನನ್ನ ಮನಸು ನಿಲ್ಲು, ತಡಿ ಅಂತಿತ್ತು. ಶನಿವಾರ, ಭಾನುವಾರ, ಸೋಮವಾರ ಹೀಗೆ ಮೂರು ಇಡೀ ದಿನ ರೈಲಲ್ಲೇ ಇದ್ದೆ. ಅಂತೂ ಸೋಮವಾರ ಸಂಜೆ ತಿರುಚ್ಚಿ ಮುಟ್ಟಿತು.

ತಿರುಚ್ಚೀಲಿ ಇಳಿಯೋ ಮನಸ್ಸೇ ಇಲ್ಲ. ಆ ಗಳಿಗೆ ನನ್ನ ಎಲ್ಲ ದುಃಖ, ಕಷ್ಟ ನನ್ನ ಮುತ್ಕಂಡ ಹಾಗನಿಸ್ತು. ನನ್ನ ಬೋಗಿಯಿಂದ ದುಃಖದಲ್ಲೇ ಇಳ್ದು ಬ್ಯಾಗ್ ಹಿಡಿದು ಸುಮ್ಮನೆ ನಿಂತೆ. ಒಬ್ಬ ಪೋರ್ಟರ್ ಬಂದು ಒಯ್ಯಲಾ ಅಂತ ಕೇಳ್ದ. ಬೇಡ ಅಂತ ತಲೆಯಾಡ್ಸಿ ಉಳಿದೋರು ಹೇಗೆ ಹೋಗ್ತಿದಾರೆ ಅಂತ ನೋಡಿ ಆ ದಿಕ್ಕಲ್ಲಿ ಹೊರಗೆ ಹೋದೆ. ಬರೀ ಹೊರಜಗತ್ತಷ್ಟೆ ಅಲ್ಲ, ನನ್ನ ಇಡೀ ಬದುಕೂ ಕಣ್ಣೆದುರು ಹರಡಿಕೊಂಡಿತ್ತು. ನನ್ನದಲ್ಲದ ಪರದೇಶಿ ನೆಲಕ್ಕೆ ಬಂದಿಳಿದ ಹಾಗಾಯ್ತು. ತುಂಬ ಪ್ರಖರ ಬೆಳಕು ಕಂಡ್ರೆ ಕಣ್ಣಿಗಾಗುತ್ತಲ್ಲ ಹಾಗೆ ನನ್ನ ಬುದ್ಧಿ ಮಬ್ಬಾಗಿ, ದಿಗ್ಭ್ರಮೆಗೊಂಡು, ಆಘಾತಗೊಂಡಿತು. ಇದೇ ಮನಸ್ಥಿತೀಲೇ ಮದುರೈ ಬಸ್ ಹತ್ತಿದೆ.

ಬಸ್ ಹತ್ತಿ ಟಿಕೆಟ್ಟೇನೋ ತಗಂಡೆ, ಆದರೆ ಮದುರೈಗೆ ಹೋಗಲು ಖುಷಿಯಿರಲಿಲ್ಲ. ಅಲ್ಲಿ ಹೋಗಿ ಮಾಡೋದೇನು? ಅಲ್ಲಲ್ಲದಿದ್ರೆ ಇನ್ನೆಲ್ಲಿ ಹೋಗದು? ಯಾವ್ದೂ ಗೊತ್ತಿಲ್ಲ. ಇಲ್ಲಿಗೆ ಬಂದಿದ್ದೇ ಸರಿಯಾದ ನಿರ್ಧಾರ ಅಂತ ಅನಿಸ್ತು. ನನ್ನ ಹೃದಯ ಸರಿ ಅಂತಿತ್ತು. ಆದರೆ ಮುಂದಿನ ಬದುಕುವ ದಾರಿ ಸ್ಪಷ್ಟವಾಗಿರಲಿಲ್ಲ. ಅಲ್ಲಿ ಬಿಟ್ಟು ಇಲ್ಲಿ ಬರಲಿಕ್ಕೆ ಧೈರ್ಯ ಸಾಕಷ್ಟಿತ್ತು. ಈಗ್ಲೂ ಹೊರಜಗತ್ತಲ್ಲಿ ನನ್ನ ಬದುಕು ಕಟ್ಕೋಬೇಕು. ಆಗಲಿ, ಮದುರೈಗೆ ಹೋಗಿ ಈ ಸ್ನೇಹಿತನ್ನ ಭೇಟಿಯಾಗ್ತೇನೆ

ಅಂದ್ಕೊಂಡೆ. ಹೇಗೂ ಅವನಿಗೆ ಹೇಳಿದ್ದೆ, ಇಷ್ಟೊತ್ಗೆ ಯಾವ್ದಾದ್ರೂ ಕೆಲ್ಸ ಹುಡುಕಿದ್ರೂ ಹುಡುಕಿರಬೋದು.

ಅಮ್ಮ ಯಾವಾಗ್ಲೂ ಹೇಳೋಳು, ಹುಟ್ಸಿದ್ದೋನು ಹುಲ್ಲು ಮೇಯಿಸಲ್ವ ಅಂತ. ಹಂಗೆ ದೇವ್ರೇ ನಂಗೆ ದಾರಿ ತೋರುಸ್ತಾನೆ. ನಿಜ, ಕೆಲ್ಸ ಸಿಕ್ಕ ಮೇಲೆ ಒಬ್ಬೇ ಆಗ್ತಿನಿ. ಆದರೆ ಅದು ಹಾಗೆ ಆಗಬೇಕಾದ್ದೇ ಆಗಿದೆ. ಇನ್ಮುಂದೆ ನಿಜವಾಗಿ ಒಂಟಿಯಾಗಿರೋ ರೂಢಿ ಮಾಡ್ಕೋಬೇಕು. ಮೊದ್ಲು ಕಷ್ಟ ಆಗುತ್ತೆ, ಆಮೇಲೆ ಅಭ್ಯಾಸ ಆಗುತ್ತೆ. ಎಷ್ಟೋ ಕಷ್ಟಗಳ ಮಧ್ಯ ಬದುಕೋದು ರೂಢಿಯಾಗಿದೆ. ಇನ್ನು ನೋಡ್ಬೇಕು.. ಹೀಗೇ ನನ್ನ ಯೋಚ್ನೆ ಅಡ್ಡಾದಿಡ್ಡಿ ಹರಿತಿತ್ತು. ಮದುರೈ ಬಂದಿದ್ದೂ ಗೊತ್ತಾಗ್ಲಿಲ್ಲ. ಬಸ್ನಲ್ಲಿ ಕೂತೋರು ಎಲ್ಲ ಇಳಿಯೋದು ನೋಡಿ ನಾನೂ ಸರಸರ ಇಳಿದೆ. ರಾತ್ರಿ ಹತ್ತೂವರೆ. ಆಗ ಬಸ್ಟಾಂಡಲ್ಲಿ ಮರಗಟ್ಟಿ ಹೋದವಳಂಗೆ ನಿಂತೆ. ಕೊನೆಗೆ ಎಚ್ಚರಗೊಂಡೆ, ನಡುರಾತ್ರಿ ಇಲ್ಲಿ ಹುಚ್ಚಿ ತರ ಒಬ್ಬೇ ನಿಲ್ಬಾರ್ದು. ಕೂಡ್ಲೆ ನನ್ನ ಸೂಟ್‌ಕೇಸ್ ಹಿಡ್ಕಂಡು ನನ್ನ ಸ್ನೇಹಿತನ ಮನೆಗೆ ಹೋಗೋ ಬಸ್ ಹತ್ತಿದೆ. ಅಯ್ಯೋ, ಮತ್ತೆ ಇಳಿಯೋದೇ ಬೇಡ, ಹಾಗೇ ಈ ಬಸ್ನಲ್ಲಿ ಹೋಗ್ತನೇ ಇರ್ಬೇಕು ಅನಿಸ್ತು. ಕೊನೆಗೆ ಹನ್ನೊಂದೂವರೆಗೆ ಮುಟ್ಟಿದೆ.

ನಾನು ಮುಂಚೆನೇ ಹೇಳಿದ್ರಿಂದ ಸ್ನೇಹಿತ ಕಾಯ್ತಿದ್ದ. ಅವನ ಜೊತೆ ಇನ್ನೂ ಕೆಲವ್ರು ಬಂದಿದ್ರು. ನನ್ನ ಮನಸು ಅಷ್ಟೊತ್ಗೆ ಖಾಲಿಖಾಲಿ.

❐

## ಇಂಗ್ಲಿಷ್ ಅನುವಾದಕ್ಕೆ ಮುನ್ನ

ಕರುಕ್ಕು ಬರೆದು ಏಳು ವರ್ಷದ ನಂತರ ಈಗ ಅದರ ಇಂಗ್ಲಿಷ್ ಅನುವಾದ ಓದುವ ನೆಪದಲ್ಲಿ ಮತ್ತೆ ಓದಿದೆ. ಅದನ್ನು ಬರೆಯುವಾಗ ಯಾವ ಭಾವನೆಗಳೆದ್ದಿದ್ದವೋ ಅವು ಪ್ರವಾಹದಂತೆ ಉಕ್ಕಿ ಮತ್ತೆ ಮೇಲೆ ಬಂದವು. ಆನಂತರ ಆದ ಕೆಲ ಸಂಗತಿಗಳ ನೆನಪಿಸಿಕೊಳ್ಳದೇ ಇರಲಾಗಲಿಲ್ಲ. ಈ ಏಳು ವರ್ಷಗಳಲ್ಲಿ ನನ್ನ ಬದುಕು ತೆಗೆದುಕೊಂಡ ತಿರುವುಗಳು, ಕೆಲ ದಂಗುಬಡಿಸುವ ಘಟನೆಗಳು, ದುಃಖ, ಸಾಧನೆ, ನನ್ನ ಬದುಕು ಮತ್ತು ಸಮಾಜದ ಬಗ್ಗೆ ನನ್ನ ದೃಷ್ಟಿಕೋನ ಎಲ್ಲ ನೆನಪಾಯ್ತು.

1995ರಲ್ಲಿ ನನ್ನ ಪ್ರೀತಿಯ ತಂಗಿ ದಾರುಣವಾಗಿ ಸತ್ತಳು. ಒಂದೇ ವರ್ಷದಲ್ಲಿ ಅಪ್ಪ, ಅಮ್ಮ ಕೂಡ ತೀರಿಕೊಂಡರು. ಈ ಸಮಾಜದಲ್ಲಿ ನಾನೊಬ್ಬಳೇ ಬದುಕುವುದರಿಂದ, ಗಂಡ–ಮಕ್ಕಳು–ಕುಟುಂಬದ ಬೆಂಬಲ ಇಲ್ಲದಿರುವುದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇನೆ. ದಲಿತ ಮಹಿಳೆ ಒಬ್ಬಂಟಿಯಾಗಿ ಬದುಕಬೇಕಾದಾಗ ಎದುರಿಸಬೇಕಾದ ಸಾವಿರದೊಂದು ಸಮಸ್ಯೆಗಳೇನೇ ಇರಲಿ, ನಿಜ ಹೇಳಬೇಕೆಂದರೆ ನಾನು ಒಬ್ಬಳೇ ಬದುಕುವುದರಿಂದ ಬದುಕನ್ನು ಉಪಯುಕ್ತವಾಗಿ, ಅದರಲ್ಲೂ ದಲಿತ ಸಮುದಾಯದ ಏಳ್ಗೆಗಾಗಿ ಮುಡಿಪಾಗಿಡಲು ಸಾಧ್ಯವಾಗಿದೆ. ಈ ಅಂಶ ನನಗೆ ಸಮಾಧಾನಕರ ಮತ್ತು ಸ್ಫೂರ್ತಿದಾಯಕ ಎರಡೂ ಹೌದು. ಅದಕ್ಕೇ ದಿನದಿಂದ ದಿನಕ್ಕೆ ನನ್ನೆದೆಯಲ್ಲಿ ಮೌನವಾಗಿ ಒಂದಾದ ಮೇಲೊಂದರಂತೆ ಬಂದ ಎಲ್ಲ ದುಃಖಗಳ ನುಂಗಿಕೊಳ್ಳಬೇಕು ಹಾಗೂ ಅರ್ಥಪೂರ್ಣ ಬದ್ಧತೆಯ ಬದುಕನ್ನು ಬದುಕಬೇಕು ಎಂಬ ಒತ್ತಡ ಹುಟ್ಟುತ್ತಿದೆ.

ಹುಟ್ಟುವ ಪ್ರತಿದಿನ ಹೊಸಗಾಯವನ್ನು ಹೊತ್ತು ತರುತ್ತದೆ. ಜೊತೆಗೇ ಹೊಸ ಅರಿವನ್ನೂ, ಹೊಸ ಅನುಭವ ಕಲಿಸುವ ಪಾಠವನ್ನೂ, ಸೋಲಿನಂಚಿನಿಂದ ಎದ್ದು ಬರುವ ಮನೋಬಲವನ್ನೂ ಕೊಡುತ್ತದೆ. ಈ ಸಮಾಜದ ಕ್ರೂರ, ಕುರೂಪಿ,

ಹುಚ್ಚು ಮುಖವನ್ನೂ ನೋಡಿ ಅದರಿಂದ ಆಕ್ರೋಶಗೊಂಡಿದ್ದೇನೆ. ಅದೇ ವೇಳೆಗೆ ಪ್ರಕೃತಿಗೆ ಹತ್ತಿರವಿದ್ದು ಬದುಕುವ ಬದುಕಿನ ಸರಳತೆಗೆ, ಸೌಂದರ್ಯಕ್ಕೆ ಮಾರು ಹೋಗಿಯೂ ಇದ್ದೇನೆ. ಆತಂಕದ ಜೊತೆಜೊತೆಗೇ ನಡೆದಿದ್ದರೂ ನನ್ನೊಳಗೇ ಒಂದು ಶಕ್ತಿ ಮತ್ತು ಅಭಿರುಚಿ ಕಾಡು ತೊರೆಯಂತೆ ಹರಿಯುತ್ತ ಪ್ರಫುಲ್ಲಗೊಳಿಸಿದೆ. ಇದು ನನ್ನ ಗಮನಕ್ಕೆ ಬಂದಿದೆ. ಹೀಗೆ ನನ್ನ ಬದುಕಿನಲ್ಲಿ ಹಲವು ಆರೋಗ್ಯಕರ ವೈರುಧ್ಯಗಳು ತುಂಬಿಕೊಂಡಿವೆ.

ದಲಿತ ಸಮುದಾಯದ ಏಳ್ಗೆಗಾಗಿ ಒಂದೇ ಗುರಿಯಿಂದ ಹೋರಾಡುವ ಬದ್ಧತೆಯ ಹಲವರನ್ನು ನಾನು ಭೇಟಿಯಾಗಿದ್ದೇನೆ. ದಲಿತರು ಆತ್ಮಗೌರವದಿಂದ ತಲೆಯೆತ್ತಿ ಗಟ್ಟಿಯಾಗಿ 'ನಾನು ದಲಿತ ಎಂದು ಹೇಳಿ/ತಲೆಯೆತ್ತಿ ಎತ್ತರಕ್ಕೆ ನಿಲ್ಲಿ' ಎಂದು ಹೇಳುವುದು ಕೇಳಿ ತುಂಬ ಸಂತೋಷವಾಗಿದೆ. ಅವರು ರಾಜಕೀಯ, ಆರ್ಥಿಕ, ಸಾಸ್ಕೃತಿಕ ಶಕ್ತಿಯಾಗಿ ಬೆಳೆಯಲು ಸಂಘಟಿತರಾಗುತ್ತಿರುವುದನ್ನು ನೋಡಲು; ಸಾವಿರಾರು ವರ್ಷಗಳಿಂದ ತುಳಿಸಿಕೊಂಡು ರೂಢಿಯಾದವರು ಹೋರಾಟದ ಮನೋಭಾವ ರೂಪಿಸಿಕೊಳ್ಳುತ್ತಿರುವುದನ್ನು ನೋಡಲು ನೆಮ್ಮದಿಯಾಗುತ್ತದೆ. ಅದೇ ವೇಳೆಗೆ ಇತ್ತೀಚೆಗೆ ದಲಿತರ ಮೇಲೆ ಹೆಚ್ಚುತ್ತಿರುವ ಹಿಂಸೆ, ಕ್ರೌರ್ಯ, ದಮನಗಳಿಂದ ಮನಸು ಗಾಸಿಗೊಳ್ಳುತ್ತದೆ. ಇದೆಲ್ಲದರ ಹೊರತಾಗಿಯೂ ಸಮಾನತೆಯ ಹಾಗೂ ನ್ಯಾಯಯುತ ಸಮಾಜವನ್ನು ವಿರೋಧಿಸುವ ಶಕ್ತಿಗಳನ್ನು ಪ್ರತಿರೋಧಿಸಲು, ತಮ್ಮ ಗುರಿ ತಲುಪಲು ಅವರಲ್ಲಿ ಅಚಲ ಆತ್ಮವಿಶ್ವಾಸ ಬೆಳೆಯುತ್ತಿದೆ.

ನನ್ನ ಬದುಕಿನ ಪಯಣದಲ್ಲಿ ಹಲವು ಸ್ನೇಹಿತರನ್ನು ಭೇಟಿಯಾಗಿರುವೆ. ಅವರು ನನ್ನ ದುಃಖ ಹಂಚಿಕೊಂಡು ಎಲ್ಲಕ್ಕೂ ಸಹಾಯವಾಗಿ ನಿಂತಿದ್ದಾರೆ. ಅವರು ನನ್ನ ಕೆಲಸದಲ್ಲಿ ತನ್ಮಯವಾಗಿ ತೊಡಗಿಕೊಳ್ಳಲು, ನನ್ನ ಜವಾಬ್ದಾರಿ ಅರಿಯಲು, ಸಮುದಾಯದ ಅಗತ್ಯ ಅರಿಯಲು ಸಹಾಯ ಮಾಡಿದ್ದಾರೆ. ಅವರು ನನಗೆ ನನ್ನ ಸಾಮರ್ಥ್ಯ ಗುರುತಿಸಿ ಬಳಸಿಕೊಳ್ಳುವಂತೆ ಮಾಡಿದ್ದಾರೆ. ಕೂಲಿ ಕೆಲಸವೇ ಜೀವನಾಧಾರವಾಗಿರುವ, ಆತಂಕ ದಣಿವಿನಿಂದ ಬಸವಳಿದರೂ ಕಂಗೆಡದ ಹಲವು ದಲಿತ ಮಹಿಳೆಯರು ಸ್ಫೂರ್ತಿ ಹಾಗೂ ನೆರವು ಒದಗಿಸಿದ್ದಾರೆ. ಇವರೆಲ್ಲರ ಪ್ರೀತಿ, ಸ್ನೇಹ, ಬೆಂಬಲ, ಸಲಹೆಗಳು ನನ್ನ ಬದುಕಿಸಿವೆ ಹಾಗೂ ಧೈರ್ಯ ಮತ್ತು ನಿರ್ಧಾರದ ಬದುಕು ಸಾಗಿಸಲು ಸಹಾಯ ಮಾಡಿವೆ.

ಮ್ಯಾಕ್‌ಮಿಲನ್‌ನಲ್ಲಿರುವ, ಈ ಸರಣಿಯ ಸಂಪಾದಕಿಯಾಗಿರುವ, ಈ ಇಂಗ್ಲಿಷ್ ಅನುವಾದ ಪ್ರಕಟವಾಗಲು ಎಲ್ಲ ರೀತಿಯಿಂದ ಕಾರಣಕರ್ತರಾಗಿರುವ ಮಿನಿ

ಕೃಷ್ಣನ್ ಅವರಿಗೆ; ಅದರ ಮೂಲಬನಿಯನ್ನು ಎಲ್ಲೆಲ್ಲೂ ಕಳೆದುಹೋಗದಂತೆ ಕರುಕ್ಕುವನ್ನು ತಮಿಳಿನಿಂದ ಇಂಗ್ಲಿಷಿಗೆ ಅನುವಾದಿಸಿದ ಲಕ್ಷ್ಮೀ ಹೋಲ್‌ಸ್ಟ್ರಾಮ್ ಅವರಿಗೆ ಪ್ರೀತಿಪೂರ್ವಕ ಧನ್ಯವಾದಗಳು.

2000 –ಬಾಮಾ

❒